# ಶಿಕ್ಷಣ ಮತ್ತು ಇಸ್ಲಾಮ್

ಮುಸ್ಲಿಮ್ ಲೇಖಕರ ಸಂಘ

# ಶಿಕ್ಷಣ ಮತ್ತು ಮುಸ್ಲಿಮರು

ಬರಹ ಸಂಕಲನ

ಸಂಪಾದಕರು
ಮುಹಮ್ಮದ್ ಕುಳಾಯಿ
ಬಿ.ಎಸ್. ಶರ್ಫುದ್ದೀನ್
ಅಕ್ಬರ್ ಅಲಿ

ಮುಸ್ಲಿಮ್ ಲೇಖಕರ ಸಂಘ
ಹಿದಾಯತ್ ಸೆಂಟರ್
ಬೀಬಿ ಅಲಾಬಿ ರಸ್ತೆ,
ಮಂಗಳೂರು - 575 001

# SHIKSHANA MATHU MUSLIMARU

(EDS) MUHAMMED KULAI, B. S. SHARFUDDIN
AND
AKBAR ALI

PUBLISHED BY THE MUSLIM LEKHAKARA SANGA
HIDAYATH CENTRE, BEEBI ALABI ROAD,
MANGALORE-575 001

© Copy Right Reserved

**FIRST EDITION:** 2000/ SEPT 1991

**COVER DESIGN:** **ABDUL RAZAK KOTEKAR**

**TYPESETTING:** **BHARATH LASER TECH**
JEPPU MARKET ROAD
MANGALORE

**PRINTING:** **JAYALAXMI PRINTERS**
JEPPU, MANGALORE.

**PRICE:** 25.00

**DISTRIBUTION:** **ISLAMI PUSTAKALAYA**
HIDAYATH CENTRE
BEEBI ALABI ROAD,
MANGALORE.

ರಾಸಾಯನಿಕ ವಸ್ತುಗಳನ್ನು ದೊಡ್ಡ ಪ್ರಮಾಣದಲ್ಲಿ ಮೊಟ್ಟಮೊದಲ ಬಾರಿಗೆ ತಯಾರಿಸಿದ 'ಅಲ್ ರಾಝಿ' ಮುಂತಾದ ರಸಾಯನ ವಿಜ್ಞಾನಿಗಳ ಸಾಧನೆ ಅಗಣ್ಯವೇನಲ್ಲ. ವೈದ್ಯ ವಿಜ್ಞಾನದಲ್ಲಿ 'ಇಬ್ನ್ ಸೀನಾ' (Avicenna) ಮೊತ್ತ ಮೊದಲ ಬಾರಿಗೆ ರಚಿಸಿದ 'ಕಾನೂನ್ ಫಿಲ್ ತಿಬ್' ಎಂಬ ವೈದ್ಯ ಸಿದ್ಧಾಂತ ಗ್ರಂಥ ಹಾಗೂ ಕಿತಾಬುಲ್ ಷಿಫಾ ಎಂಬ ಔಷಧ-ಸೂಚಿ-ಗ್ರಂಥಗಳ ಮಹತ್ವವು ಜಗತ್ತಿಗೆ ಗೊತ್ತಿಲ್ಲದೆ ಇಲ್ಲ. 'ಇಬ್ನ್ ಝೋಹರ್' ಮತ್ತು 'ಅವೆರೊ' ಎಂಬ ಆ ಕಾಲದ ಮುಸ್ಲಿಮ್ ವೈದ್ಯರು ಮೂಳೆಗಳನ್ನು ಜೋಡಿಸುವುದರಲ್ಲಿಯೂ ವಿಷಪ್ರಾಶನಕ್ಕೆ ಚಿಕಿತ್ಸೆ ನೀಡುವುದರ ಲ್ಲಿಯೂ ಬಹು ದೊಡ್ಡ ಹೆಸರು ಗಳಿಸಿದ್ದರು. 'ಕುಲ್ಲಿಯತ್' ಎಂಬ ಇಬ್ನ್ ಝೋಹರ್‌ರ ಕೃತಿಯು ಮಧ್ಯಯುಗದ ವೈದ್ಯ ವಿಜ್ಞಾನದ ಆಧಾರಗ್ರಂಥಗಳಲ್ಲಿ ಒಂದೆನಿಸಿದ್ದಲ್ಲದೆ 1490ರಲ್ಲಿ ವೆನಿಸ್ ನಗರದಲ್ಲಿ ಪ್ರಕಟಗೊಂಡು ಅನೇಕ ಭಾಷೆಗಳಿಗೆ ಅನುವಾದಗೊಂಡಿದ್ದಿತು. ಅಲಿ ಇಬ್ನ್ ಈಸಾ ಎಂಬ ಶ್ರೇಷ್ಠ ನೇತ್ರಶಾಸ್ತ್ರಜ್ಞ ಮತ್ತು ಅಲ್ ಮುಹ್‌ಸಿನ್ ಎಂಬ ನೇತ್ರಶಸ್ತ್ರ ಚಿಕಿತ್ಸಕರ ಖ್ಯಾತಿಯನ್ನು ಹಾಗೂ ಸಾಧನೆಗಳನ್ನು ಎಷ್ಟು ವಿವರಿಸಿದರೂ ಕಡಿಮೆಯೆ. ವಿಲಿಯಂ ಹಾರ್ವೆಗಿಂತ ಅನೇಕ ದಶಕಗಳ ಪೂರ್ವದಲ್ಲಿಯೇ 'ಇಬ್ನ್ ನಫೀಸ್' ಎಂಬ ವೈದ್ಯ ವಿಜ್ಞಾನಿಯು ದೇಹದಲ್ಲಿ ರಕ್ತ ಪ್ರಸರಣ ಕ್ರಿಯೆಯ ಬಗ್ಗೆ ವ್ಯಾಪಕ ವಿವರಗಳನ್ನು ನೀಡಿದ್ದ. ತತ್ವಶಾಸ್ತ್ರಜ್ಞರಲ್ಲಂತೂ ಮುಸ್ಲಿಮ್ ಬುದ್ಧಿಜೀವಿಗಳು ಉಳಿದೆಲ್ಲ ಜನಾಂಗಗಳಿಗಿಂತ ಹೆಚ್ಚಿನ ಸಾಧನೆ ಮಾಡಿದ್ದರು ಎಂಬ ಮಾತಿಗೆ ಇಬ್ನ್ ಬಜ್ಜಾ, ಇಬ್ನ್ ತೊಫೈಲ್ ಎಂಬ ಅರಬ್ ತತ್ವಜ್ಞಾನಿಗಳ ತತ್ವಾರ್ಥಗಳೇ ಸಾಕ್ಷಿ. ತತ್ವಶಾಸ್ತ್ರವನ್ನು ಕುರಿತಂತೆ ಇಬ್ನ್ ಅವಿಸೆನ್ನಾ ರಚಿಸಿದ 'ಅಲ್ ಹಿದಾಯತ್ ಫಿಲ್ ಹಿಕ್‌ಮತ್' ಎಂಬ ಕೃತಿಯು ವಿಶ್ವಕೋಶಕ್ಕೆ ಸಮಾನವೆನಿಸಿದೆ.

ಸಾಹಿತ್ಯದ ಮೂಲಕ ಸೂಫೀ ಸಂತರು ಮಾನವನ ಜ್ಞಾನ ವಿಕಾಸಕ್ಕೆ ನೀಡಿದ ಕಾಣಿಕೆಯಂತೂ ಅತ್ಯಮೂಲ್ಯವಾದದು. ಹ.ಮೊಯಿನುದ್ದೀನ್ ಚಿಷ್ತಿ, ಹ. ನಿಜಾಮುದ್ದೀನ್, ಅಮೀರ್ ಖುಸ್ರೊ, ದಾರಾ ಷುಕೊ ಮುಂತಾದವರ ಬೌದ್ಧಿಕ ಹಾಗೂ ತತ್ವ ಶಾಸ್ತ್ರಾಧಾರಿತ ವಿಚಾರಗಳು ಮಾನವನ ಅಂತರಾಳವನ್ನೇ ಕಲಕಿವೆ. ಆದರೆ ಈ ಗತ ಇತಿಹಾಸ, ಗತ ವೈಭವವನ್ನೇ ಮೆಲಕು ಹಾಕುತ್ತಾ ಮುಸ್ಲಿಮರು ಕುಳಿತುಕೊಳ್ಳುವುದರಲ್ಲಿ ಅರ್ಥವಿಲ್ಲ. ಶಿಕ್ಷಣ ರಂಗದಲ್ಲಿ, ವೈಜ್ಞಾನಿಕ ಕ್ಷೇತ್ರದಲ್ಲಿ, ಸಾಹಿತ್ಯ ಮತ್ತು ಅಧ್ಯಾತ್ಮಿಕತೆಗಳ ಅಭಿವೃದ್ಧಿಯಲ್ಲಿ ಹಿಂದೆ ಹೆಚ್ಚಿನ ಸಾಧನೆ ಮಾಡಿದ ಮುಸ್ಲಿಮರು ಆ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಲಾರದಾದರು. ಹಾಗಾಗಿ ಶೈಕ್ಷಣಿಕ ಪ್ರಗತಿಗೆ ಎರವಾದರು. ಮುಸ್ಲಿಮರು ಶಿಕ್ಷಣ ಪ್ರಾಪ್ತಿ, ಜ್ಞಾನಾರ್ಜನೆ, ಅನುಭವ ವಿತರಣೆಗಳನ್ನು ಕುರಿತಂತೆ ತಮ್ಮ ಆಸಕ್ತಿ ಹಾಗೂ ಸಾಧನೆಗಳನ್ನು ಬೆಳೆಸದೆ ಹೋದ ಕಾರಣಾಗಿಯೇ ಅವರ

ಪ್ರಗತಿಯು ಕುಂಠಿತವಾಯಿತು. ಅವರು ಸ್ಥಾಪಿಸಿ ಬೆಳೆಸಿದ್ದ ಜ್ಞಾನ ಕೇಂದ್ರಗಳು ಪರಕೀಯ ಧಾಳಿಗೆ ತುತ್ತಾಗಿ ವಿಧ್ವಂಸವಾದವು. ಮುದ್ರಣ ಯಂತ್ರವು ಬಳಕೆಯಲ್ಲಿಲ್ಲದ ಅಂದಿನ ದಿನಗಳಲ್ಲಿ ಅಂತಹ ಅಮೂಲ್ಯ ಕೃತಿಗಳ ಪ್ರತಿಗಳು ಲಭ್ಯವಿಲ್ಲದ್ದಕ್ಕಾಗಿ ಜ್ಞಾನ ಪ್ರಸಾರದ ವೇಗ ಕುಂಠಿತವಾಯಿತು. ದುರಾಕ್ರಮಣಗಳಿಗೆ ಬಲಿಯಾದ ಬುದ್ಧಿಜೀವಿಗಳು ಪ್ರಾಣ ರಕ್ಷಣೆಗೆ ಓಡಿ ಹೋಗಬೇಕಾಗಿ ಬಂದ ಪರಿಸ್ಥಿತಿಯಿಂದಾಗಿ ಬೌದ್ಧಿಕ ಸಾಧನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಬದಲು ಹೊಟ್ಟೆಯ ಪಾಡಿಗಾಗಿ ಅವರು ಸಂಕಷ್ಟ ಪಡಬೇಕಾದ ದುರ್ಭರ ಪ್ರಸಂಗ ಒದಗಿತು. ಜ್ಞಾನಾರ್ಜನೆ ಮತ್ತು ಶೈಕ್ಷಣಿಕ ಸಾಧನೆಗಳನ್ನು ಕುರಿತಂತೆ ಅವರ ಆಸ್ಥೆ, ಆಸಕ್ತಿಗಳು ಕುಂಠಿತವಾಗುತ್ತಾ ಹೋದವು. ಆ ರೀತಿ ಉಂಟಾದ ಅನಾಸ್ಥೆ, ಅನಾಸಕ್ತಿಗಳು ಈಗಲೂ ಈ ಸಮಾಜದಲ್ಲಿ ಬಹುಮಟ್ಟಿಗೆ ಉಳಿದುಹೋಗಿವೆ. ಸ್ಥಾಪಿತ ಹಿತಾಸಕ್ತಿಗಳೂ, ಸ್ವಯಂ ಘೋಷಿತ ಸಂಪ್ರದಾಯಸ್ಥರ ಪ್ರಭಾವಗಳೂ ಶಿಕ್ಷಣದ ಸಾರ್ವತ್ರಿಕತೆ ಹಾಗೂ ಪ್ರಸಾರಗಳಿಗೆ ವಿಘ್ನಗಳನ್ನು ಉಂಟು ಮಾಡಿವೆ.

ಸೌಭಾಗ್ಯಕ್ಕೆನ್ನುವಂತೆ ಇಂದಿನ ಪೀಳಿಗೆಯ ಕೆಲ ಉತ್ಸಾಹೀ ಯುವ-ವೃಂದ ಹಾಗೂ ಸೃಜನಶೀಲ ಮತ್ತು ಸಂವೇದನಾಶೀಲ ಲೇಖಕರ ಹಾಗೂ ಧುರೀಣರ ಸಮುದಾಯಗಳು ಈಗ ತಡವಾಗಿಯಾದರೂ ಎಚ್ಚೆತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಹಾಗೂ ಸಾಹಿತ್ಯ ಸೃಷ್ಟಿಯಲ್ಲಿ ಹೆಚ್ಚಿನ ಕಾಳಜಿ ವಹಿಸಿ ಜನಕಲ್ಯಾಣ ಸಾಧನೆಗೆ ನೆರವಾಗಲು ಮುಂದೆ ಬಂದಿವೆ. ಅಂತಹವರ ಪ್ರಯತ್ನದ ಫಲವೇ ಈ ಕೃತಿ. ಈ ಕೃತಿ ಒಳಗೊಂಡ ಅನೇಕ ಲೇಖನಗಳು ಮುಸ್ಲಿಮ್ ಸಮುದಾಯದ ಬಹುಮುಖ ಸಮಸ್ಯೆಗಳ ವಿಮರ್ಶಾತ್ಮಕ ವಿಶ್ಲೇಷಣೆಗಳೆನಿಸಿವೆ. ಈ ಲೇಖನಗಳನ್ನು ಓದಿ ಇವು ಮುಂದೆ ಮಾಡುವ ಸಮಸ್ಯೆಗಳ ಅಧ್ಯಯನ ಮಾಡಿ ಆ ಸಮಸ್ಯೆಗಳ ಪರಿಹಾರಕ್ಕೆ ವ್ಯಾಪಕ ರೀತಿಯಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮುಂದುವರಿಯುವ ದೃಢ ಸಂಕಲ್ಪ ಮಾಡುವ ಮೂಲಕ ಈ ಸಮಾಜದ ಸರ್ವತೋಮುಖ ಶ್ರೇಯೋಭಿವೃದ್ಧಿಯನ್ನು ಸಾಧಿಸುವುದು ಕಷ್ಟವಾಗಲಿಕ್ಕಿಲ್ಲ.

ಅದು ಸಾಧ್ಯವಾದೀತು, ಸಾಧ್ಯವಾಗಬೇಕು ಎಂದು ಮನಃಪೂರ್ವಕವಾಗಿ ಹಾರೈಸುತ್ತೇನೆ.

ಪ್ರೊ। ಎಂ. ಆರ್.ಗಜೇಂದ್ರಗಡ್
ಉಪಕುಲಪತಿ
ಕುವೆಂಪು ವಿಶ್ವವಿದ್ಯಾನಿಲಯ

ಶಿವಮೊಗ್ಗ
1-9-1991

# ಪರಿವಿಡಿ


ಪ್ರಕಾಶಕರ ಮಾತು

ಮುನ್ನುಡಿ — ಪ್ರೊ। ಎಂ.ಆರ್.ಗಜೇಂದ್ರಗಡ್

1. ಬ್ಯಾರಿಸಮಾಜ ಮತ್ತು ಶಿಕ್ಷಣ — ಬಿ.ಎಂ.ಇಚ್ಲಂಗೋಡು 1
2. ಶಿಕ್ಷಣದಲ್ಲಿ ಮುಸ್ಲಿಮರು, ದಲಿತರು ಮತ್ತು ಹಿಂದುಳಿದ ವರ್ಗದವರು ಹಿಂದಿರುವುದೇಕೆ? — ಫೇರೂರುಜಾರು 13
3. ಪಠ್ಯಪುಸ್ತಕಗಳಲ್ಲಿ ಆಕ್ಷೇಪಾರ್ಹ ಅಂಶಗಳು — ಪಿ.ಎ.ಖಾದರ್ 22
4. ಶೈಕ್ಷಣಿಕ ಸಂಸ್ಥೆಗಳಲ್ಲಿ ಕೋಮುವಾದದ ಪ್ರಭಾವ — ಡಾ। ಆರ್ಕೆ, ಮಣಿಪಾಲ 29
5. ಕಾನ್ವೆಂಟ್‌ಗಳಸುತ್ತಮುತ್ತ — ಮಕ್ಬೂಲ್ ಅಹ್ಮದ್ ಸಿರಾಜ್ 35
6. ಶಿಕ್ಷಕರಿಗೆ ಶಿಕ್ಷಣ — ಬಿ.ಭಾಸ್ಕರ ರಾವ್ 42
7. ಮುಸ್ಲಿಮರ ಶೈಕ್ಷಣಿಕ ಸ್ಥಿತಿಗತಿ — ಡಾ। ಮುಹಮ್ಮದ್ ಪೀರ್ 47
8. ಮುಸ್ಲಿಮರ ಶೈಕ್ಷಣಿಕ ಸಮಸ್ಯೆಗಳು: ಪತನಗಾಥೆ ಮತ್ತು ಉತ್ಥಾನ ಪಥ — ಎ.ಎಸ್.ಪುತ್ತಿಗೆ 57
9. ಮೀಸಲಾತಿ ಹಿನ್ನೆಲೆಯಲ್ಲಿ ಮುಸ್ಲಿಮರ ಶೈಕ್ಷಣಿಕ ಸಮಸ್ಯೆಗಳು — ಪಿ.ಎಸ್.ಶ್ರೀಧರ ಮೂರ್ತಿ 77
10. ಶೈಕ್ಷಣಿಕ ಅವಕಾಶಗಳು ಮತ್ತು ಮುಸ್ಲಿಮರು - ಒಂದು ಚಿಂತನೆ — ಎನ್.ಇಸ್ಮಾಈಲ್ 88
11. ಶಿಕ್ಷಣ-ಕೆಲವು ಸಾಂಸ್ಕೃತಿಕ ಅಪಕಲ್ಪನೆಗಳು — ಇಸ್ಹಾಕ್ ಅಗ್ನಾಡಿ 98
12. ಭಾರತೀಯ ಶಿಕ್ಷಣ ಪದ್ಧತಿ ಮತ್ತು ಮುಸ್ಲಿಮರು — ಡಾ। ಪುರುಷೋತ್ತಮ ಬಿಳಿಮಲೆ 105
13. ಶಿಕ್ಷಣ ಪ್ರಸಾರದಲ್ಲಿ ವಿದ್ವಾಂಸರ ಪಾತ್ರ — ಮುಹ್ಯುದ್ದೀನ್ ಕುಟ್ಟಿ ಅಲ್‌ಖಾಸಿಮಿ 110
14. ಆಧುನಿಕ ಶಿಕ್ಷಣ ವ್ಯವಸ್ಥೆ ಮತ್ತು ನೈತಿಕ ಪ್ರಜ್ಞೆ — ಅಮೃತ ಸೋಮೇಶ್ವರ 120
15. ನವಾಯಿತರು ಮತ್ತು ಶಿಕ್ಷಣ — ಡಾ। ಝಮೀರುಲ್ಲಾ ಷರೀಫ್ 125
16. ಶಿಕ್ಷಣರಂಗದ ವ್ಯಾಪಾರೀಕರಣ — ನರೇಂದ್ರ ನಾಯಕ್ 128
17. ದಲಿತರ ಹೋರಾಟಧಲ್ಲಿ ಮುಸ್ಲಿಮರೂ ಪಾಲ್ಗೊಳ್ಳಬೇಕು — ಬಿ.ಎಂ.ಹನೀಫ್ 134
18 ನಮ್ಮ ಶಿಕ್ಷಣ ತಜ್ಞರು — ಆರ್.ವಿ.ಭಂಡಾರಿ 141
19. ಇಸ್ಲಾಮೀ ಶಿಕ್ಷಣ ವ್ಯವಸ್ಥೆಯ ಧ್ಯೇಯ ಮತ್ತು ವೈಶಿಷ್ಟ್ಯಗಳು — ಇಬ್ರಾಹೀಮ್ ಸಈದ್ 162
20. ಪ್ರಜೆಗಳನ್ನು ಪ್ರಜಾತಂತ್ರಕ್ಕೆ ತಕ್ಕವರನ್ನಾಗಿಸುವ ಅನೌಪಚಾರಿಕ ಶಿಕ್ಷಣ — ಡಾ। ಪ.ನಾರಾಯಣ ರಾವ್ 172

ಬಿ. ಎಮ್‌. ಇಚ್ಲಂಗೋಡು
ಎಮ್‌. ಎ; ಬಿ. ಎಲ್‌.
ರೀಡರ್‌, ಇತಿಹಾಸ ವಿಭಾಗ,
ಮಹಾವೀರ ಕಾಲೇಜ್‌, ಮೂಡಬಿದ್ರೆ.

# ಬ್ಯಾರಿ ಸಮಾಜ ಮತ್ತು ಶಿಕ್ಷಣ

ಕೇರಳದ ಕಾಸರಗೋಡಿನಿಂದ ಧಕ್ಷಿಣಕನ್ನಡದ ಬೈಂದೂರಿನ ವರೆಗೆ, ಕಡಲ ತಡಿಯಲ್ಲಿ ಹಬ್ಬಿನಿಂತಿರುವ ತೆಂಗುಗಳು, ಕಂಗುಗಳು ತಲೆದೂಗಿ ಆಹ್ವಾನಿಸುವ ಈ ಸುಂದರ ನಾಡಿನ ಒಂದು ವಿಶಿಷ್ಟ ಸಮುದಾಯವೇ ಬ್ಯಾರಿಗಳು. ಬ್ಯಾರಿಗಳು, ನೆಬಿವರ್ಯರು ಇಸ್ಲಾಮ್‌ ಧರ್ಮವನ್ನು ಅರೇಬಿಯಾದಲ್ಲಿ ಪ್ರಸರಿಸುತ್ತಿರುವ ಕಾಲದಲ್ಲೇ ಇಸ್ಲಾಮ್‌ ಸ್ವೀಕರಿಸಿದವರೆಂಬ ಅಭಿಮತವನ್ನು ಕೆಲವು ಪಂಡಿತರು ಸೂಚಿಸಿದ್ದಾರೆ. ಕ್ರಿ.ಶ. ಏಳನೆಯ ಶತಮಾನದಲ್ಲಿ ಅರಬ್‌ ವ್ಯಾಪಾರಿಗಳ ಸಂಪರ್ಕದಿಂದಾಗಿ ಇಸ್ಲಾಮ್‌ ಧರ್ಮವನ್ನು ಸ್ವೀಕರಿಸಿ ಸ್ವತಂತ್ರ ಸಮಾಜವಾಗಿ ಬೆಳೆದ ತುಳುನಾಡಿನ ಮುಸ್ಲಿಮರೇ ಬ್ಯಾರಿಗಳು. ಮಲಬಾರ್‌ ಕರಾವಳಿಯಲ್ಲಿ 'ಮಾಪ್ಲಾ' ಸಮುದಾಯವೂ, ಕೊಂಕಣ ಕರಾವಳಿಯಲ್ಲಿನ ನವಾಯತರೂ ಇದೇ ರೀತಿ ಅರಬ್‌ ಸಂಪರ್ಕದಿಂದಾಗಿ ಮುಸ್ಲಿಮರಾದವರು, ಮಾತ್ರವಲ್ಲ ಈ ಎಲ್ಲಾ ವರ್ಗಗಳೂ 'ಶಾಫಿ' ಮದ್‌ಹಬ್‌[illegible]ೀ ಅಂಗೀಕರಿಸಿದವರು. ಅರಬ್‌ ವ್ಯಾಪಾರಿಗಳು ಈ ಪ್ರದೇಶದಲ್ಲಿ ದೀರ್ಘಕಾಲದ ವರೆಗೆ ತಂಗಿದ್ದು, ಸ್ಥಳೀಯ ಸ್ತ್ರೀಯರನ್ನು ಮದುವೆಯಾಗಿ, ಅವರ ಸಂತಾನಗಳು ಈ ಹೊಸ ಸಮುದಾಯಗಳ ಮೂಲ ಜನಾಂಗವೆಂಬ ಅಭಿಮತವನ್ನು ರೋಲಾಂಡಸನ್‌, ಸ್ಟರ್ರಕ್‌ ಮತ್ತು ಹಲವಾರು ಸಂಶೋಧಕರು ಸ್ಪಷ್ಟಪಡಿಸಿದ್ದಾರೆ. ಬಾರ್ಕೂರು, ಮಂಗಳೂರು, ಉಳ್ಳಾಲ, ಮಂಜೇಶ್ವರ, ಕುಂಬಳೆ ಮತ್ತು ಕಾಸರಗೋಡು - ಕರಾವಳಿಯ ಪ್ರಮುಖ ವ್ಯಾಪಾರೀ ಪಟ್ಟಣಗಳಾಗಿದ್ದು ನೇರ ಅರಬ್‌ ವ್ಯಾಪಾರಿ ಸಂಪರ್ಕವನ್ನು ಹೊಂದಿಕೊಂಡಿತ್ತು. ಕರಾವಳಿಯುದ್ದಕ್ಕೂ ಅರಬರ ಪ್ರಭಾವವಿದ್ದುದರಿಂದ, ಅರಬರ ನೇರ ಸಂಪರ್ಕ ಹಾಗೂ ಅದರೊಡನೆ ಧಾರ್ಮಿಕ ಪ್ರಸಾರ ಕೂಡಾ ಸರಳವಾಗಿ ನಡೆಯಿತು. ಈ ರೀತಿ ಕರಾವಳಿಯ ನಾಡಿನಲ್ಲಿ ಬ್ಯಾರಿ ಸಮುದಾಯ ಆರಂಭಗೊಂಡಿತು.

ಕಡಲ ತೀರದ ಈ ನಾಡಿನ ಪ್ರಾಚೀನ ಜನರಲ್ಲಿ ಬಹು ಪಾಲು ಜನರು ಮೂಲ ದ್ರಾವಿಡ ವರ್ಗಕ್ಕೆ ಸೇರಿದ ಜನರಾಗಿದ್ದರು. ಹರಿಜನರೆಂದು ಕರೆಯಲ್ಪಡುತ್ತಿದ್ದ ಈ ಜನರ ಮೇಲೆ ಕಾಲಾಂತರದಲ್ಲಿ ಬಂದು ನೆಲೆಸಿದ ಬ್ರಾಹ್ಮಣರೂ, ಜೈನರೂ ಆಧಿಪತ್ಯ ನಡೆಸಲಾರಂಭಿಸಿದರು. ಬ್ರಾಹ್ಮಣರ ಪ್ರಾಬಲ್ಯ ಕದಂಬ ಅರಸೊತ್ತಿಗೆಯ ಬಲಹೀನತೆಯೊಂದಿಗೆ ಕುಗ್ಗಿ ಹೋದರೂ ಜೈನರು ಕರಾವಳಿಯ ವ್ಯಾಪಕ ಪ್ರಬಲ ವರ್ಗವಾಗಿ ಬೆಳೆದರು. ಬಳ್ಳಾಲರು, ಶೆಟ್ಟಿಗಳು ಮತ್ತು ಹೆಗ್ಗಡೆಗಳು ಬೀಡಿನ ಮನೆತನಗಳಾಗಿದ್ದು, ಪ್ರತಿಪಳ್ಳಿಯನ್ನು ವರ್ಗೀಯ ಪ್ರಭುತ್ವಕ್ಕೊಳಪಡಿಸಿ ಒಂದು ತರದ ಊಳಿಗಮಾನ್ಯ ಪದ್ಧತಿಯು ಜಾರಿಯಲ್ಲಿತ್ತು. ಬ್ರಾಹ್ಮಣ ಮತ್ತು ಜೈನ ಪ್ರಭುಗಳ ಪ್ರಭುತ್ವವು ಕೀಳ್ವರ್ಗದ ಹರಿಜನ, ಗಿರಿಜನರನ್ನೂ, ಬಿಲ್ಲವ, ಬೋವಿ ಮುಂತಾದ ವರ್ಗದವರನ್ನೂ ಅಸ್ಪೃಶ್ಯರಾಗಿಯೇ ಪರಿಗಣಿಸಿತು. ಪರಿಣಾಮವಾಗಿ, ಸಮಾನತೆಯ ಕೊಡುಗೆಯೊಡನೆ ಭಾರತಕ್ಕೆ ಬಂದ ಅರಬರು ಸ್ಥಳೀಯ ಪ್ರಭುಗಳಿಗಿಂತಲೂ ಈ ನಾಡ ಜನರ ಆತ್ಮೀಯ ಗೆಳೆಯರಾದರು. ಅರಬರಿಂದ ಬಂದ ಇಸ್ಲಾಮ್ ವರ್ಗೀಯತೆಯೆಂಬ ಬೆಂಕಿಯಲ್ಲಿ ಬೇಯುತ್ತಿದ್ದ ಸಾವಿರಾರು ಕೀಳ್ಜಾತಿಯ ಜನರಿಗೊಂದು ಅಭಯಸ್ಥಾನವಾಗಿ ಪರಿಣಮಿಸಿತು. ಅರಬ-ಸ್ಥಳೀಯ ಸಂಬಂಧವೂ ತೀವ್ರವಾಗಿ ಬೆಳೆಯಲಾರಂಭಗೊಂಡು ಬ್ಯಾರಿ, ಮಾಪ್ಲಾ, ನವಾಯತ ಸಮುದಾಯಗಳು ವೃದ್ಧಿಯಾಗ ತೊಡಗಿದವು. ಹೀಗೆ ಆರಂಭಗೊಂಡ ಸಮುದಾಯಕ್ಕೆ ಕಾಲಕ್ರಮೇಣ, ಸ್ಥಳೀಯ ಅರಸರ ಬೆಂಬಲವೂ ದೊರಕಿತು. ಗಟ್ಟಿಮುಟ್ಟಿನ ದೇಹವುಳ್ಳ, ದೃಢಕಾಯರಾದ ಜನರು ಕೀಳ್ಜಾತಿಯಲ್ಲೇ ಅಧಿಕವಾಗಿದ್ದು, ಪ್ರಾಚೀನ ಅರಸರಿಗೆ ತಮ್ಮ ಸೇನೆಯಲ್ಲಿ ಸೇರಿಸಲಾರದ ಸ್ಥಿತಿಯಲ್ಲಿದ್ದರು. ಪೋರ್ಚುಗೀಸರಂತಹ ಪಾಶ್ಚಾತ್ಯರ ಆಕ್ರಮಣ ಆರಂಭವಾದಾಗ ರಕ್ಷಣೆಗಾಗಿ ಸೇನಾಬಲದ ಅಗತ್ಯವಿತ್ತು. ಆ ಕೊರತೆಯನ್ನು ನೀಗಿಸಲು ಬ್ಯಾರಿ ಮತ್ತು ಮಾಪ್ಲಾ ಜನರನ್ನೇ ಸೇರಿಸಿಕೊಳ್ಳುವಂತಾಯಿತು. ಕೇರಳದಲ್ಲಿ ಮಾಪ್ಲಾ ಬೆಳವಣಿಗೆಗೆ ಜಮೊರಿನ್ ಅರಸರ ಕೊಡುಗೆ ಮರೆಯುವಂತಹದಲ್ಲ. ಬ್ಯಾರಿಗಳ ಅಭಿವೃದ್ಧಿಗೆ ಜೈನ ಅರಸರೂ ಸಹಕರಿಸಿದ್ದರು. ಜೈನ ರಾಣಿ ಅಬ್ಬಕ್ಕ ಮಾಪ್ಲಾ ಜನರ ಸೇನೆಯನ್ನಿಟ್ಟು ಪೋರ್ಚುಗೀಸರನ್ನು ಸದೆಬಡಿದಿದ್ದಳು. ಜೈನ - ಬ್ಯಾರಿ ಸಂಪರ್ಕದಿಂದ ನಾಡಿನ ಆರ್ಥಿಕತೆ ಬೆಳೆಯಿತೆಂಬುದು ಸರ್ವವಿದಿತ.

ಕೇರಳದ ಮಾಪ್ಲಾ ಜನರಂತೆ ಬ್ಯಾರಿಗಳ ಬೆಳವಣಿಗೆಗೆ ಕೇರಳದ 'ದೀನಾರ್ ಮಿಶನ್' ಕಾರಣವಾಗಿತ್ತು. ಹ| ಮಾಲಿಕ್ ಬಿನ್ ದೀನಾರ್, ಹ| ಹಬೀಬ್ ಬಿನ್ ಮಾಲಿಕ್, ಹ| ಶರ್ಫ್‌ಬಿನ್ ಮಾಲಿಕ್, ಹ| ಮಾಲಿಕ್ ಬಿನ್ ಹಬೀಬ್ ಮತ್ತು ಅವರ ಪತ್ನಿ ಕಮರಿಯತ್ ಮತ್ತು ಅವರ ಹತ್ತು ಮಕ್ಕಳು, ಈ ಧರ್ಮಪ್ರಸಾರ ಮಿಶನ್‌ನಲ್ಲಿದ್ದರು. ಕರಾವಳಿಯ ಹತ್ತು ಕಡೆಗಳಲ್ಲಿ ಮಸೀದಿಗಳನ್ನು ಸ್ಥಾಪಿಸಿ, ಇಸ್ಲಾಮಿನ ಕೇಂದ್ರಸ್ಥಾನವನ್ನು ನಿರ್ಮಿಸಿದ್ದರು. ಅವುಗಳಲ್ಲಿ ಕಾಸರಗೋಡು, ಮಂಗಳೂರು ಮತ್ತು ಬಾರ್ಕೂರು ಕೂಡಾ

ಒಳಗೊಂಡಿದ್ದವು. ಹ। ಮಾಲಿಕ್ ಬಿನ್ ಹಬೀಬ್‌ರವರ ಮಕ್ಕಳಾದ ಹ। ಇಬ್ರಾಹಿಂ, ಹ। ಮೂಸಾ ಮತ್ತು ಹ। ಮಹಮೂದ್‌ರವರು ಬಾರ್ಕೂರು, ಮಂಗಳೂರು ಮತ್ತು ಕಾಸರಗೋಡಿನಲ್ಲಿ ಪ್ರಪ್ರಥಮ 'ಖಾಝಿ'ಗಳಾಗಿ ನೆಲೆಗೊಂಡು ಧರ್ಮಪ್ರಚಾರ ನಡೆಸಿದ್ದರೆಂಬುದನ್ನು ಲೋಗನ್ ಬರೆದ 'ಮಲಬಾರ್ ಮೇನುವಲ್'ನಲ್ಲಿ ದಾಖಲಿಸಿದ್ದಾರೆ. ಕಾಸರಗೋಡು ಜಿಲ್ಲೆಯ ಇಚ್ಲಂಗೋಡು ಗ್ರಾಮದಲ್ಲಿರುವ 'ಮಾಲಿಕ್ ದೀನಾರ್' ಸಮಾಧಿ ಹ। ರಾಫಿಇ ಬಿನ್‌ಹಬೀಬ್‌ರವರದ್ದೆಂದು ಶ್ರೀಕಂಠಪುರದಲ್ಲಿ ಪತ್ತೆಯಾದ ಶಾಸನವೊಂದು ಬಹಿರಂಗ ಪಡಿಸಿದೆಯಲ್ಲದೆ ಸ್ಥಳೀಯ 'ನೇಲಕ್ಕಯರ್' ನ ಲಿಖಿತ ಪುರಾವೆ ಆ ಮಸೀದಿ ಹಿಜರಿ 134ರಲ್ಲಿ ಅಂದರೆ ಕ್ರಿ.ಶ. 758ರಲ್ಲಿ ನಿರ್ಮಿತವಾಯಿತೆಂದು ತಿಳಿಸುತ್ತದೆ. ಈ ಪ್ರದೇಶದಲ್ಲಿ ದೀನಾರ್ ಧರ್ಮಪ್ರಸಾರ ಕಾರ್ಯವೂ ನಡೆದಿತ್ತೆಂಬುದಕ್ಕೆ ಬೇರೆ ಪುರಾವೆಗಳ ಅಗತ್ಯವಿಲ್ಲ. ಇವೆಲ್ಲವೂ ಬ್ಯಾರಿಗಳ ಆವಾಸ ಸ್ಥಾನಗಳಾಗಿವೆ. 'ತುಹ್ಫತುಲ್ ಮುಜಾಹಿದೀನ್' ಎಂಬ ಪ್ರಸಿದ್ಧ ಚರಿತ್ರಗ್ರಂಥವನ್ನು ಬರೆದ ಜೈನುದ್ದೀನ್‌ರವರು ಈ ಪ್ರದೇಶಗಳಲ್ಲಿ ಹಲವಾರು ಸಂತರು ಪ್ರವಾಸ ಮಾಡಿ, ಧರ್ಮಸ್ಥಾಪನೆ ಮಾಡಿದ್ದಾರೆಂಬುದನ್ನು ತಿಳಿಸಿದ್ದಾರೆ. ತಮಿಳುನಾಡಿನಲ್ಲಿ ಧರ್ಮಪ್ರಚಾರ ಮಾಡಿದ ಸುಪ್ರಸಿದ್ಧ ಸಂತ ಹ। ಬಾಬಾ ಫಕ್ರುದ್ದೀನ್‌ರವರು ಕರಾವಳಿಯ ಮೂಲಕ ಕಾಸರಗೋಡು, ಉಳಿಯ, ಮಂಗಳೂರು, ಒಳಚಿಲು (ತುಂಬೆ) ಮತ್ತು ಅಜಿಲಮೊಗರು ಎಂಬಲ್ಲಿ ಸಕ್ರಿಯವಾಗಿ ನೆಲೆಸಿ, ಧರ್ಮಪ್ರಸಾರ ಮಾಡಿದರೆಂದು ವಿಭಿನ್ನ ದಾಖಲೆಗಳು ತಿಳಿಸುತ್ತವೆ. ಅಜಿಲಮೊಗರುವಿನಲ್ಲಿ ದೀರ್ಘಕಾಲ ನಿಂತಿದ್ದು ಹ। ಜಕರಿಯಾ ಎಂಬವರನ್ನು ಅವರ ಪ್ರತಿನಿಧಿಯಾಗಿ 'ಖಾಝಿ' ಯಾಗಿ ನೇಮಕ ಮಾಡಿದರೆಂದೂ, ಆ ಸ್ಥಳದಲ್ಲಿ ಇಂದಿಗೂ ವರ್ಷಂಪ್ರತಿ 'ಮಾಲಿದಾ ಉರೂಸ್' ನಡೆಸುತ್ತಾ ಬರುವ ಜಮಾತ್ ಪ್ರತಿಪಾದಿಸುತ್ತಿದೆ. ಡಾ। ತಾರಾಚಂದ್ ಮತ್ತು ಡಾ। ತರ್ಸ್ಟನ್ ಎಂಬ ವಿದ್ವಾಂಸರು ಹಿಜರಿ 564 (ಕ್ರಿ.ಶ1186)ರಲ್ಲಿ ಈ ಪ್ರಸಾರ ಕಾರ್ಯ ನಡೆದಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಸ್ಥಳೀಯ ದಾಖಲೆಗಳು ಹಿಜರಿ 694 (ಕ್ರಿ.ಶ.1294) ರಲ್ಲಿ ಹ। ಬಾಬಾ ಫಕ್ರುದ್ದೀನ್‌ರವರು ಆಂಧ್ರಪ್ರದೇಶದ ಪೆನುಕೊಂಡದಲ್ಲಿ ಮರಣ ಹೊಂದಿದ್ದರೆಂದು ತಿಳಿಸುತ್ತದೆ. ಶೈಖ್‌ಫರೀದ್ ಮಸೂದ್ ಗಂಜ್ ಸಕ್ಕರ್‌ರವರು ಮಂಗಳೂರಿನಲ್ಲೂ, ಹ। ಸಯ್ಯದ್ ಮುಹಮ್ಮದ್ ಶರೀಫುಲ್ ಮದನಿಯವರು ಉಳ್ಳಾಲದಲ್ಲೂ, ಹ। ಸೈಯದ್ ಸಿದ್ದೀಕ್ ಯೂಸುಫ್‌ವಲಿಯವರು ಅಡ್ಯಾರಿನಲ್ಲೂ ಮತ್ತು ಸೈಯ್ಯದ್ ಶಾಹಾಮೀರ್‌ವಲಿಯವರು ಮಂಗಳೂರಿನಲ್ಲೂ ಸಶ್ರಮ ಧರ್ಮಪ್ರಸಾರ ಮಾಡಿ, ಈ ಪ್ರಧೇಶದ ಬ್ಯಾರಿಗಳ ನಿರಂತರ ಧಾರ್ಮಿಕ ಬೆಳವಣಿಗೆಗೆ ಕಾರಣರಾದರೆಂದು ದಾಖಲೆಗಳು ತಿಳಿಸುತ್ತವೆ.

ತುಳುನಾಡಿನ ಪ್ರಮುಖ ಮುಸ್ಲಿಮ್ ಪಂಗಡವಾದ ಬ್ಯಾರಿಗಳನ್ನು ಮಾಪ್ಲಾ ಮತ್ತು

ನವಾಯತರಷ್ಟೇ ಪ್ರಾಚೀನತೆ, ಮೂಲ ಪ್ರಬುದ್ಧತೆ ಇದ್ದರೂ ಒಂದು ಪ್ರತ್ಯೇಕ ವರ್ಗವಾಗಿ ಈ ವರೆಗೂ ಗುರುತಿಸಿಲ್ಲ. ಮುಖ್ಯವಾಗಿ, ಬ್ಯಾರಿಭಾಷೆ ಕೇರಳದ ಮಾಪ್ಲಾ ಭಾಷೆಯನ್ನೇ ಹೋಲುವುದರಿಂದ ಅವರನ್ನೂ 'ಮಾಪ್ಲಾ'ಗಳೆಂದೇ ಈಗಲೂ ಕರೆಯುತ್ತಾರೆ.

ಇತ್ತೀಚೆಗೆ ಬೆಂಗಳೂರಿನ ಕೆಲವು ಬ್ಯಾರಿ ಮುಖಂಡರು 'ಬ್ಯಾರಿ ವೆಲ್ಫೇರ್ ಎಸೋಸಿಯೇಶನ್' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಬ್ಯಾರಿಗಳ ಅಸ್ತಿತ್ವವನ್ನು ಬೆಳಕಿಗೆ ತರುವ ಪ್ರಯತ್ನ ನಡೆಸುತ್ತಿದ್ದಾರಲ್ಲದೆ ಬ್ಯಾರಿಗಳ ಕಲ್ಯಾಣಕ್ಕಾಗಿಯೂ ದುಡಿಯುತ್ತಿದ್ದಾರೆ. ಜಿಲ್ಲೆಯ ಬ್ಯಾರಿ ಪ್ರಮುಖರು ಕಣ್ತೆರೆದು ಬ್ಯಾರಿಗಳಿಗೂ ಸ್ವತಂತ್ರ ಮೂಲ ಮತ್ತು ಅಸ್ತಿತ್ವವಿದೆಯೆಂದು ತಿಳಿದುಕೊಂಡರೆ, ಬ್ಯಾರಿ ಕಲ್ಯಾಣ ಸಂಘದೊಡನೆ ಸೇರಿ ಶ್ರಮಿಸಿದರೆ ಈ ಪ್ರದೇಶದ ಬ್ಯಾರಿ ಸಮಾಜ ಒಂದು ಪ್ರತಿಷ್ಠೆಯ ಸ್ಥಾನಕ್ಕೇರಬಹುದೆಂಬುದೇ ನನ್ನ ಆಶಯ. ಬ್ಯಾರಿಗಳು ಮಾಪ್ಲಾಗಳಲ್ಲವೆಂಬುದನ್ನು ಒಪ್ಪಿಕೊಳ್ಳಬೇಕು. ತುಳು ಪಾಡ್ದನಗಳಿಂದ ಹಿಡಿದು, ಪ್ರತಿಯೊಂದು ಹಳೆಯ ದಾಖಲೆಗಳಲ್ಲೂ ಹಳೆಯ ಸ್ಥಳೀಯ ಮುಸ್ಲಿಮರನ್ನು 'ಬ್ಯಾರಿ' ಯಾ ಬ್ಯಾರ್ದಿಗಳೆಂದೇ ಕರೆದಿರುವುದೂ, 'ಬ್ಯಾರಿ' ಪದ ಅವರ ಪ್ರತ್ಯೇಕತೆಯ ಮಾತ್ರವಲ್ಲ ಗೌರವಸೂಚಕವೂ ಆಗಿತ್ತೆಂಬುದನ್ನು ತಿಳಿದುಕೊಂಡರೆ, ಬ್ಯಾರಿಗಳು ಮಾಪ್ಲಾಗಳಲ್ಲವೆಂದು ಸ್ಪಷ್ಟವಾಗುವುದು. ಕೇರಳ ತೀರದಲ್ಲಿ ಹಬ್ಬಿಕೊಂಡಿರುವ ಮಾಪ್ಲಾಗಳು, ವ್ಯಾಪಾರಿಗಳೇ ಆಗಿದ್ದರೂ ಯಾವೊಬ್ಬನೂ ತಾನು 'ಬ್ಯಾರಿ' ಎಂದು ದಾಖಲಿಸಿಕೊಂಡಿಲ್ಲ. ಅವರು 'ಮಾಪ್ಲಾ' ಅನ್ನಿಸಿಕೊಳ್ಳಲು ಅಭಿಮಾನ ಪಟ್ಟಂತೆ, ಪ್ರತಿಯೋರ್ವ ಬ್ಯಾರಿಯೂ ಅಂದು ತಾನು 'ಬ್ಯಾರಿ' ಅನ್ನಿಸಿಕೊಳ್ಳಲು ಅಭಿಮಾನ ಪಟ್ಟಿದ್ದ. 1905ರ ಸರ್ವೇ ದಾಖಲೆ ಪುಸ್ತಕ (ಅಡಂಗಲು) (ಕೌಚ್‌ಮನ್ ಸರ್ವೇ) ನೋಡಿದರೆ, ಪ್ರತಿ ಹಳ್ಳಿಗಳಲ್ಲೂ ಸಾವಿರಾರು ಬ್ಯಾರಿಗಳನ್ನೂ ಬ್ಯಾರ್ದಿಗಳನ್ನೂ ಭೂಮಾಲಿಕರಾಗಿ ಹೆಸರಿಸಿದ್ದನ್ನು ಕಾಣಬಹುದು. 'ಸಾಹೇಬರು', 'ಮಾಪ್ಲಾ'ಗಳು ಪ್ರತ್ಯೇಕ ತಮ್ಮ ಅಸ್ಥಿತ್ವ ಹೆಸರಿನಲ್ಲೇ ದಾಖಲಿಸಿದಂತೆ, ಬ್ಯಾರಿ ಪೂರ್ವಜರು ತಮ್ಮ ಮೂಲವನ್ನು ಉಳಿಸಿಕೊಳ್ಳಲು ಹಾಗೆ ಮಾಡಿದ್ದರು.

'ಬ್ಯಾರಿ' ಪದವು ಸ್ಥಳೀಯ ತುಳುಭಾಷೆಯ ಪದ. ವ್ಯಾಪಾರಿಗೆ ತುಳು ಭಾಷೆ 'ಬ್ಯಾರಿ' ಅನ್ನುತ್ತದೆ. ಬ್ಯಾರಿಗಳ ಮೂಲ ಕಸಬು ವ್ಯಾಪಾರ. 1891ರ ಸೆನ್ಸಸ್ ದಾಖಲೆಯಂತೆ, ಈ ಜಿಲ್ಲೆಯಲ್ಲಿದ್ದ 95,000 ವ್ಯಾಪಾರಿಗಳಲ್ಲಿ 90,345ಮಂದಿ ಬ್ಯಾರಿಗಳಾಗಿದ್ದರು. 2104 ನವಾಯತರಿದ್ದರು. ಅಂದಿನ ದಾಖಲೆ ಬ್ಯಾರಿಗಳನ್ನು 'ಮಾಪ್ಲಾ'ಗಳೆಂದು ಬರೆದಿದೆ. ಅರಬ್ ಸಂಪರ್ಕದಿಂದ ಬೆಳೆದ ಈ ಜನರು ಅರಬ್ ಸಂಪ್ರದಾಯದ ವ್ಯಾಪಾರ ಕಸಬನ್ನೇ ಆಧಾರವಾಗಿರಿಸಿ, ಸ್ಥಳೀಯ ಬ್ಯಾರಿಗಳಾಗಿ ವೃದ್ಧಿ ಹೊಂದಿದರು. ಅರಬೀ ಭಾಷೆಯ 'ಬೇಹಾರೀ' ಅಂದರೆ 'ಕಡಲು ವ್ಯಾಪಾರಿ' ಎಂಬರ್ಥ ಬರುವಂತೆ ಪದ ಉಪಯೋಗಿಸಿದ್ದು ಕಂಡು ಬಂದಿದೆ. ಮಸೀದಿಗಳಿಗೆ 'ಮಹಜೀದ್' ಎಂದೂ ಬ್ಯಾರಿಗಳಿಗೆ 'ಬೇಹಾರಿ'ಗಳೆಂದೂ

ಹಲವಾರು ಪ್ರಾಚೀನ ದಾಖಲೆಗಳಲ್ಲಿ ಬರೆದಿದೆ. ಅಜಿಲಮೊಗರಿನ ಸಾಧುರೀ ಬ್ಯಾರಿ, ಮಂಜೇಶ್ವರದ ಮಮ್ಮಿ ಸೂಪಿ ಬ್ಯಾರಿ ಮತ್ತು ಮೂಲ್ಕಿ ಬಪ್ಪನಾಡಿನ ಬಪ್ಪಬ್ಯಾರಿ ಐತಿಹಾಸಿಕ ಪುರುಷರು. ಇವರ ಶ್ರೀಮಂತಿಕೆ ಮತ್ತು ಸಮಾಜಕಾರ್ಯಗಳು ಪ್ರಶಂಸಿಸಲ್ಪಟ್ಟಿವೆ.

ಪ್ರಾಚೀನ ಬ್ಯಾರಿಗಳು ಅನಕ್ಷರಸ್ತರಾಗಿದ್ದು ಸ್ಥಳೀಯ ಭಾಷೆಯಿಂದ ಪ್ರಭಾವಿತರಾಗಿದ್ದರು. ಬ್ಯಾರಿಗಳು ಆಡುವ ಬ್ಯಾರಿಭಾಷೆ ಮಲೆಯಾಳವಲ್ಲ. ಮಲೆಯಾಳದ ಪ್ರಭಾವ ಇರುವುದಕ್ಕಿಂತ ಹೆಚ್ಚು ತುಳುಭಾಷೆಯ ಪ್ರಭಾವ ಇದೆಯೆಂದು ಪ್ರಸಿದ್ಧ ಸಂಶೋಧಕ ಡಾ| ಸುಶೀಲಾ ಉಪಾಧ್ಯಾಯ ತಿಳಿಸಿದ್ದಾರೆ. ಶೇಕಡಾ 50%ಕ್ಕಿಂತ ಹೆಚ್ಚು ತುಳು ಪದಗಳನ್ನು ಹೊಂದಿದ್ದು ಸಂಪೂರ್ಣ ತುಳು ವ್ಯಾಕರಣವನ್ನು ಅಳವಡಿಸಿಕೊಂಡಿರುವುದು ಈ ಭಾಷೆಯ ವೈಶಿಷ್ಟ್ಯ. ಮಲೆಯಾಳ ವ್ಯಾಕರಣಕ್ಕೂ ಬ್ಯಾರಿ ಭಾಷೆಯ ವ್ಯಾಕರಣಕ್ಕೂ ಧ್ರುವಾಂತರ ವ್ಯತ್ಯಾಸವಿದೆ. ಮಾತ್ರವಲ್ಲ, ಮಲೆಯಾಳವನ್ನು ಹೋಲುವ ಈ ಭಾಷೆ ಬ್ಯಾರಿಗಳಲ್ಲಿ ಮಾತ್ರವಲ್ಲ ಸ್ಥಳೀಯ ಬೋವಿ, ಬಿಲ್ಲವ ಮುಂತಾದ ವರ್ಗದವರಲ್ಲೂ ಬಹು ಹಿಂದಿನ ಕಾಲದಲ್ಲೇ ಬಳಸುತ್ತಿದ್ದುದನ್ನೂ, ಈಗಲೂ ಹೀಗೆ ರೂಪೀಕರಣಗೊಂಡು ಮಲೆಯಾಳವಾಗುವ ಭಾಷೆ ಬೆಸ್ತರ ಒಂದು ವರ್ಗ ಬಳಸುತ್ತಿರುವುದನ್ನೂ ನಾವು ಕಾಣಬಹುದು. 'ಬಟ್ಟೆಬರಹ' ಎಂಬ ಒಂದು ಬರಹವನ್ನು - ಬರೆಯಲು ಉಪಯೋಗಿಸುತ್ತಿದ್ದುದನ್ನೂ, ಹಲವಾರು ಬಟ್ಟೆ ಬರಹ ದಾಖಲೆಗಳನ್ನೂ ಈಗಲೂ ಕೆಲವು ವಯೋವೃದ್ಧ ಹಿರಿಯರು ಜೋಪಾನವಾಗಿಟ್ಟುಕೊಂಡಿರುವುದನ್ನು ಇಂದಿಗೂ ನಾವು ಕಾಣಬಹುದು. ಇಂತಹ ನೂರಾರು ಪುರಾವೆಗಳು ಬ್ಯಾರಿ ಸಮುದಾಯದ ಸ್ವತಂತ್ರ ಮೂಲ ಮತ್ತು ಅಸ್ತಿತ್ವದ ಬಗೆಗೆ ಸುಸ್ಪಷ್ಟ ಸಾಕ್ಷ್ಯಗಳನ್ನು ನೀಡುತ್ತದೆ.

ಪಾಶ್ಚಾತ್ಯ ಊಳಿಗಮಾನ್ಯ ಪದ್ಧತಿಯನ್ನು ಹೋಲುವ ಮಂಗಳೂರಿನ ಪ್ರಸಿದ್ಧ 'ಪದಿನಾರಗ'ದ ಅವಶೇಷಗಳು ಇಂದಿಗೂ ಗತಕಾಲದ ವೈಭವದ ಪುರಾವೆಗಳಾಗಿ ಉಳಿದಿವೆ. ಆ ಪ್ರಸಿದ್ಧ ಮನೆತನದ ಸಂತಾನಗಳು ಹಳೆಯ ವೈಭವದ ಕತೆಗಳನ್ನು ಮರೆತು, ತಮ್ಮ ಮನೆತನದ ಹಿರಿತನದ ಗೊಡವೆಯನ್ನೇ ಮರೆತು ಆಧುನಿಕ ಸಂಪ್ರದಾಯಕ್ಕೆ ಬದ್ಧವಾಗಿವೆ. 'ಬ್ಯಾರಿ'ಗಳ ಮಧ್ಯೆ ತಲೆಯೆತ್ತಿ ನಿಂತ ಊಳಿಗಮಾನ್ಯ ಪ್ರಭುತ್ವದ ಒಳಿತು ಕೆಡುಕುಗಳ ಪರಾಮರ್ಶೆಗೆ 'ಪದಿನಾರಗ' ಒಂದು ಉತ್ತಮ ನಿದರ್ಶನ. ಸತ್ಸಂಪ್ರದಾಯಗಳು ಅಳಿಯುವುದಿಲ್ಲ. ಸಂಪ್ರದಾಯದ ದೋಷಗಳನ್ನು ಯಾವ ಧರ್ಮವೂ ತಿದ್ದಲು ಯತ್ನಿಸುವುದಿಲ್ಲ. ಇಂತಹ ಒಂದು ಸಾಂಸ್ಕೃತಿಕ ಅಪರಿವರ್ತನೆಯ ದೋಷಕ್ಕೆ ಬಲಿಯಾಗಿ ಮರವೆಯಾದ ಉದಾಹರಣೆ ಪದಿನಾರಗ. ಬ್ಯಾರಿಗಳ 'ಇಲ್ಲಂ' ಪದ್ಧತಿಯು ಊಳಿಗಮಾನ್ಯ ಪ್ರಭುತ್ವದ ಮತ್ತೊಂದು ಸಾಕ್ಷ್ಯ. ಸ್ಥಳೀಯ ಬಂಟ ಯಾ ನಾಡವರಲ್ಲಿ ಊರ್ಜಿತದಲ್ಲಿದ್ದ 'ಬಲಿ' ಪದ್ಧತಿಯೇ ಬ್ಯಾರಿ ಸಮಾಜದ 'ಇಲ್ಲಂ' ಪದ್ಧತಿ. ಮಾತೃಮೂಲವಾಗಿರುವ

(Maternal) ಹಿರಿತನ ಈ ಪದ್ಧತಿಯ ವೈಶಿಷ್ಟ್ಯ. ಇಸ್ಲಾಮ್ ಧರ್ಮ ಮಾತೃಮೂಲ ಕುಟುಂಬವನ್ನು ಒಪ್ಪುವುದಿಲ್ಲ. ಮಾಪ್ಲಗಳೂ ಸೇರಿದಂತೆ, ಬೇರೆ ಯಾವ ವರ್ಗದ ಮುಸ್ಲಿಮರಲ್ಲೂ ಈ ಮಾತೃಮೂಲ ಕುಟುಂಬಿಕ ಪದ್ಧತಿ ಇರಲಿಲ್ಲ. ಈ 'ಇಲ್ಲಂ' ಪದ್ಧತಿಯೇ ಬ್ಯಾರಿಗಳ ಪ್ರತ್ಯೇಕತೆಗೆ ಸ್ಪಷ್ಟ ಸಾಕ್ಷ್ಯವಾಗಿದೆ. ಈ ಪದ್ಧತಿಯು ಎಷ್ಟೊಂದು ಪ್ರಭಾವಶಾಲಿಯಾಗಿತ್ತೆಂದರೆ, ಮದುವೆ ಸಂಬಂಧಗಳಲ್ಲೂ, ಮೆಹರ್ ನಿಶ್ಚಯದಲ್ಲೂ ಕೂಡಾ ಇಲ್ಲಂ ಪರಿಗಣನೆಗೆ ಬರುತ್ತಿದ್ದುವು. ಮಾತ್ರವಲ್ಲ ಒಂದೇ 'ಇಲ್ಲಂ' ಕೂಟಕ್ಕೆ ಸೇರಿದ ಕುಟುಂಬಗಳ ಮಧ್ಯೆ ವೈವಾಹಿಕ ಸಂಬಂಧ ನಿಷಿದ್ಧವಾಗಿತ್ತು. ಆಧುನಿಕ ಸಮುದಾಯದಲ್ಲಿ ಈ 'ಇಲ್ಲಂ' ಪದ್ಧತಿಯೇ ನಿಂತುಹೋಗಿ ಇಂದು ಕೇವಲ 'ಹಳೆಯ ಪದ್ಧತಿ'ಯಾಗಿ ವಯೋವೃದ್ಧರ ಕತೆಯೊಳಗೆ ಅಡಗಿಹೋಗಿದೆ. ಬ್ಯಾರಿ ಸಮಾಜದ ವೈಶಿಷ್ಟ್ಯಗಳನ್ನು ವಿವರಿಸ ಹೊರಟರೆ ಒಂದು ಬೃಹತ್ ಗ್ರಂಥವೇ ಆಗಬಹುದು.

ಬ್ಯಾರಿ ಸಮಾಜ ಅತ್ಯಂತ ಪ್ರಾಚೀನತೆಯುಳ್ಳ ಮುಸ್ಲಿಮ್ ಸಮಾಜವಾಗಿದ್ದರೂ, ಶೈಕ್ಷಣಿಕವಾಗಿ ಬಹಳ ಹಿಂದುಳಿದಿದೆ. ಕೇವಲ ಆಡುಭಾಷೆಯಾದ 'ಬ್ಯಾರಿಭಾಷೆ' ಪ್ರತ್ಯೇಕ ಭಾಷೆಯಾಗಿ ಬೆಳೆಯಲಿಲ್ಲ. ಮಾತ್ರವಲ್ಲದೆ, ಬ್ಯಾರಿಗಳ ಧಾರ್ಮಿಕ ಬೆಳವಣಿಗೆಗೆ ಮಲಬಾರಿನಿಂದ ಆಮದಾದ ಮೌಲವಿಗಳೇ ಆಧಾರವಾಗಿದ್ದರು. ಇದರಿಂದಾಗಿ ಬ್ಯಾರಿ ಭಾಷೆಯ ಮೇಲೆ ಮಲೆಯಾಳದ ಪ್ರಭಾವ ಬಹಳವಾಗಿತ್ತು. ಆದರೂ, ಬ್ಯಾರಿ ಭಾಷೆಯ ಸ್ವಂತಿಕೆ ಬ್ಯಾರಿ ಸಂಸ್ಕೃತಿಯಲ್ಲಿ ನಾಶವಾಗದೆ ಉಳಿದಿತ್ತು. ಕೇರಳದ 'ಪಾಟ್ಟು ಮಾಲಿಕೆ'ಗಳೂ, 'ಮಾಪಿಳ್ಳಪ್ಪಾಟ್ಟು'ಗಳೂ ಜನಪ್ರಿಯವಾಗುವ ಮೊದಲು, ಬ್ಯಾರಿಭಾಷೆಯೇ ಬ್ಯಾರಿಗಳ ಪ್ರಿಯ ಭಾಷೆಯಾಗಿತ್ತು. ಅಘಂಡಿ ರಾಜಾವು, ಮೂಸಾನೆಬಿ, ನಾಗರಾಜ, ಪೆನ್ನರಸಿಡೆರಾಯ, ಬಂಗಾರ್ದೆ ತೂಸಿ ಮುಂತಾದ ಸುಂದರ ಕತೆಗಳು ಬಾಯ್ದೆರೆಯಲ್ಲೇ ಚಿಮ್ಮುತ್ತಿದ್ದ ಸಾಹಿತ್ಯಗಳಾಗಿದ್ದವು. ಹಲವಾರು ಸುಂದರ ಹಾಡುಗಳು, ಧಾರ್ಮಿಕ ಕೀರ್ತನೆಗಳು, ತೋಭಾನೆಗಳು, ಗುಣಗಾನಗಳು ಜನರಲ್ಲಿ ಪ್ರಚಲಿತವಾಗಿದ್ದವು. ಆದರೆ, ಮಾಪಿಳ್ಳಪ್ಪಾಟ್ಟು ಆ ಸಾಹಿತ್ಯ ಪರಂಪರೆಗೇ ಕೊಡಲಿಯೇಟು ಕೊಟ್ಟಿತು.

ಬ್ಯಾರಿಭಾಷೆ ಸ್ಥಳೀಯವಾಗಿ ಮಾತ್ರ ಬಳಕೆಯಾಗಿದ್ದುದರಿಂದ, ಮಲಬಾರಿನ ಧರ್ಮಪ್ರಸಾರದ ನೇತಾರರಿಗೆ ಎಟಕಲಾರದ ಭಾಷೆಯಾಗಿತ್ತು. ಇದರಿಂದಾಗಿ ಧಾರ್ಮಿಕ ಮಾಧ್ಯಮವಾಗಿ 'ಅರಬೀ - ಮಲೆಯಾಳ' ಎಂಬ ಭಾಷೆ ಪ್ರಚಲಿತವಾಗಿತ್ತು. ಪ್ರತಿಯೋರ್ವ ಮುಸ್ಲಿಮನಿಗೂ 'ಕುರ್‌ಆನ್ ಪಾರಾಯಣ' ಕಡ್ಡಾಯವಾಗಿದ್ದುದರಿಂದ, ಪ್ರತಿ ಮಸೀದಿ ಕೇಂದ್ರಗಳಲ್ಲೂ ಒಂದು 'ಓತುಪಳ್ಳಿ' ಇರುತ್ತಿತ್ತು. ಈ ಓತುಪಳ್ಳಿಗಳಲ್ಲಿ ಅರಬೀ ಅಕ್ಷರಾಭ್ಯಾಸ ಮಾಡಿಸಿ, ನೇರ ಪವಿತ್ರ ಕುರ್‌ಆನ್ ಪಾರಾಯಣ ಆರಂಭವಾಗುತ್ತಿತ್ತು. ಅದೇ ಅಕ್ಷರ ತಂತಮ್ಮ ಭಾಷೆಯ ನಿರೂಪಣೆಗೂ ಬಳಕೆಯಾಗುವಂತೆ ಅರಬೀ - ಮಲೆಯಾಳ ರೂಪುಗೊಂಡಿತ್ತು.

ಲಿಪಿ ಅರಬೀ ಆಗಿದ್ದು ಭಾಷೆ ಮಲೆಯಾಳವಾಗಿದ್ದುದರಿಂದ ಅದನ್ನೂ ಹಾಗೆ ಕರೆಯಲಾಗಿತ್ತು. ಇಂತಹ ಧಾರ್ಮಿಕ ಅವಶ್ಯಕತೆಯನ್ನು ಮನಗಂಡು ಕೇರಳದ ಪ್ರಸಿದ್ಧ ಉಲಮಾ ಸೈಯದ್ ಸನಾಉಲ್ಲಾ ಮುಕ್ತಿ ತಂಗಳ್, ಈ ಅರಬೀ - ಮಲೆಯಾಳವನ್ನು ನಿರ್ಮಿಸಿದರು. 'ಮುಅಲ್ಲಿಮುಲ್ ಇಖ್ವಾನ್' ಎಂಬ ಅವರ ಗ್ರಂಥವು ಅರಬೀ ಮಲೆಯಾಳದ ಬೆಳವಣಿಗೆಯನ್ನು ವಿವರಿಸುತ್ತದೆ. ಈ ಭಾಷೆ ಮಾಪ್ಲಾ ಮೌಲವಿಗಳ ಮೂಲಕ ಬ್ಯಾರಿಗಳ ಧಾರ್ಮಿಕ ಶಿಕ್ಷಣದ ಮಾಧ್ಯಮವಾಗಿ ಬೆಳೆಯಿತು. ಮಾತ್ರವಲ್ಲದೆ, 'ಮಾಪಿಳ್ಳಪ್ಪಾಟ್ಟು'ಗಳ ಜನಪ್ರಿಯತೆಗೂ ಕಾರಣವಾಯಿತು. ಮೌಲೂದು, ರಾತೀಬ್ ಮುಂತಾದ ಕೀರ್ತನೆಗಳೂ ಈ ಭಾಷೆಯಲ್ಲೇ ಪ್ರಚಾರ ಪಡೆಯಿತು. 1574ರಲ್ಲಿ ಬರೆದ ಪೊನ್ನಾನಿಯ ಮಕ್‌ದೂಮ್ ಹಿರಿಯ ಜೈನುದ್ದೀನ್‌ರವರ ಫತಹುಲ್ ಮುಈನ್‌ಗ್ರಂಥವು ಜನಪ್ರಿಯ ಫಿಕ್ಹ್ ಗ್ರಂಥವಾಗಿ ಬ್ಯಾರಿಗಳಿಗೆ ದೊರಕಿತು. 1521ರಲ್ಲಿ ಪೊನ್ನಾನಿಯ ಜೈನುದ್ದೀನ್ ಬಿನ್ ಅಲಿಯವರಿಂದ ಬರೆಯಲ್ಪಟ್ಟ 'ಮಂಕೂಸ್ ಮೌಲೂದು' ಜನಪ್ರಿಯ ಮೌಲೂದು ಕೀರ್ತನೆಯಾಗಿ ಬೆಳೆಯಿತು. ನಿತ್ಯ ಧಾರ್ಮಿಕ ಆಚಾರಗಳಂತೆ ಈ ಮೌಲೂದು, ರಾತೀಬ್ ಪಾರಾಯಣಗಳು ಬ್ಯಾರಿ ಸಮಾಜದೊಳಗೆ ಹಾಸುಹೊಕ್ಕಾಗಿ ಸೇರುವಂತೆ ಅರಬೀ - ಮಲೆಯಾಳ ಮಾಧ್ಯಮ ಪ್ರಭಾವ ಬೀರಿತು. ದಫ್‌ರಾತೀಬ್ ಮತ್ತು ನೇರ್ಚೆಪಾಟ್ಟುಗಳೂ ಮಾಪ್ಲಮೌಲವಿಗಳ ಪ್ರಭಾವದಿಂದಲೇ ಆಮದಾದ ಸಾಹಿತ್ಯ ವೈಖರಿಗಳು. ಇವಲ್ಲದೆ ಕಿಸ್ಸಪ್ಪಾಟ್ಟು, ಮಾಲಪಾಟ್ಟು, ಒಪ್ಪನಪಾಟ್ಟು, ಮೈಲಾಂಜಿ ಪಾಟ್ಟು, ಅಮ್ಮಾಯಿಪಾಟ್ಟು, ತಾಲೇಲ ಪಾಟ್ಟು ಮುಂತಾದ ಮಾಪ್ಲ ಸಾಹಿತ್ಯಗಳೂ ಮಾಪ್ಲಾಮೌಲವಿಗಳಿಂದ ಕಲಿಸಲ್ಪಟ್ಟು ಬ್ಯಾರಿಗಳಲ್ಲಿ ಜನಪ್ರಿಯವಾಗಿದ್ದುವು. ಮುಹಿಯುದ್ದೀನ್ ಮಾಲ, ನಫೀಸತ್ ಮಾಲ ಮುಂತಾದ ನೇರ್ಚೆಪಾಟ್ಟುಗಳು ಬ್ಯಾರಿಗಳಲ್ಲಿ ಧರ್ಮಾಚಾರದಷ್ಟೇ ಪ್ರಾಮುಖ್ಯತೆಯನ್ನು ಪಡೆದಿದ್ದವು. ಬಾಪಕುಂಞ ಮುಸ್ಲಿಯಾರರಿಂದ ರಚಿತವಾದ 'ಸೈಯದ್ ಮದನಿಮಾಲ' ಕೂಡಾ ಸಾಕಷ್ಟು ಪ್ರಚಾರದಲ್ಲಿತ್ತು. ಮಂಗಳೂರಿನ ಪದಿನಾರಗದ ಕಾಲದಲ್ಲಿ ಒಪ್ಪನ ಪಾಟ್ಟುಗಳಿಗೆ ಬಹಳ ಪ್ರಾಧಾನ್ಯವಿತ್ತು. ಮೈಲಾಂಜಿ ಪಾಟ್ಟು ಇತ್ತೀಚೆಗಿನವರೆಗೂ ವೈವಾಹಿಕ ಸಂದರ್ಭಗಳಲ್ಲಿ ಅನಿವಾರ್ಯವಾದ ವಿನೋದವಾಗಿತ್ತು. ಇವೆಲ್ಲವುಗಳೂ ಕ್ರಮಬದ್ಧವಾಗಿ 'ಓತುಪಳ್ಳಿ'ಗಳಲ್ಲಿ ಮಾಪ್ಲಾ ಮೌಲವಿಗಳಿಂದ ಕಲಿಸಲ್ಪಡುತ್ತಿದ್ದವು. ಅಲ್ಲದೆ ಪ್ರತ್ಯೇಕ 'ಪಾಟ್ಟುಮಾಲಿಕೆ ಸಂಘ'ಗಳೂ ಇರುತ್ತಿದ್ದವು. ಇಂತಹ ಹಲವಾರು ಪಾಟ್ಟುಮಾಲಿಕೆ ಸಂಘಗಳನ್ನು ಮಂಗಳೂರಿನಲ್ಲೂ ಸಂಘಟಿಸಿದ್ದರು. ಕೇರಳದಲ್ಲಿ ಮಲೆಯಾಳೀ ಸಾಹಿತ್ಯ ಕ್ರಾಂತಿಕಾರಕವಾಗಿ ಬೆಳೆಯತೊಡಗಿದಾಗ, ಅರಬೀ - ಮಲೆಯಾಳದ ಪ್ರಾಧಾನ್ಯತೆ ಕಳೆದು ಹೋಯಿತಲ್ಲದೆ, ಬರಬರುತ್ತಾ ಈಗ ಬ್ಯಾರಿಗಳಲ್ಲಿ ಮಾತ್ರವಲ್ಲ, ಕೇರಳದಲ್ಲೇ ಅರಬೀ ಮಲೆಯಾಳ ಭಾಷೆ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿದೆ. ಇದರಿಂದಾಗಿ ಇಂದಿನ ಬ್ಯಾರಿ ಸಮಾಜ ಅರಬೀ- ಮಲೆಯಾಳದ ಸ್ಥಾನವನ್ನು ತುಂಬಬಲ್ಲ ಉತ್ತಮ ಭಾಷಾ ಮಾಧ್ಯಮದ ಆಗಮನಕ್ಕೆ ಕಾಯುತ್ತಿದೆ.

ಕರ್ನಾಟಕದೊಳಗೆ ಕನ್ನಡದ ಪ್ರಭಾವ ತುಂಬಿರುವಾಗ 'ಕೇರಳದ ಮಲೆಯಾಳಕ್ಕೆ ಧಾರ್ಮಿಕ ಮಾಧ್ಯಮವಾಗುವ ಅರ್ಹತೆಯಿಲ್ಲ' ಎಂಬುದು ಒಂದು ವಾದವಾದರೆ, 'ಕನ್ನಡ ಮುಸ್ಲಿಮ್ ಸಂಸ್ಕೃತಿಯನ್ನು ಪ್ರತಿಬಿಂಬಿಸುವಷ್ಟು ಅರಬಿ ಪದಗಳನ್ನು ಹೊಂದಿಕೊಂಡಿಲ್ಲದಿರುವುದರಿಂದ ಮುಸ್ಲಿಮರ ಧಾರ್ಮಿಕ ಮಾಧ್ಯಮ ಆಗಲು ಅರ್ಹವಲ್ಲ, ಎಂಬ ವಾದವೂ ಸತ್ಯವಾಗಿದೆ. ಆದರೆ ಮಲೆಯಾಳ ಕನ್ನಡ ಎರಡೂ ಭಾರತೀಯ ಭಾಷೆಯಾಗಿದ್ದು, ಯಾವುದೂ ಸೂಕ್ತ ಎನ್ನುವ ಪ್ರಶ್ನೆಗಿಂತ ಬ್ಯಾರಿ ಸಮಾಜಕ್ಕೆ ಯಾವುದು ಅನಿವಾರ್ಯವೆಂಬುದನ್ನು ತಿಳಿದು, ಒಂದು ಮಾಧ್ಯಮವನ್ನು ಪ್ರಮುಖರೂ ಮೌಲವಿಗಳೂ ಅಂಗೀಕರಿಸುವುದೊಳಿತು. ಆದರೆ ಬ್ಯಾರಿ ಸಮಾಜ ಮಾಪ್ಲಾ ಮೌಲವಿಗಳ ಹಿಡಿತದಿಂದ ಮುಕ್ತವಾಗಿಲ್ಲದ ಕಾರಣ ಸ್ವತಂತ್ರ ಭಾಷೆ ಮತ್ತು ಸಂಸ್ಕೃತಿಯ ಇಚ್ಛೆಯನ್ನು ಜಾಗರೂಕವಾಗಿಯೇ ಪ್ರಯೋಗಕ್ಕಿಳಿಸಬೇಕಾಗಿದೆ. ಧರ್ಮಶಿಕ್ಷಣಕ್ಕೂ, ಧಾರ್ಮಿಕ ಮುಖಂಡತ್ವಕ್ಕೂ ಇನ್ನೂ ಮಲಬಾರಿನ ಮೌಲವಿಗಳನ್ನೇ ಹೊಂದಿಕೊಂಡಿರಬೇಕಾಗಿ ಬಂದಿರುವುದು ಬ್ಯಾರಿ ಸಮಾಜದ ದೌರ್ಬಲ್ಯವೆನ್ನಬೇಕು. ಉಳ್ಳಾಲದಂತಹ ಪ್ರಸಿದ್ಧ ಧಾರ್ಮಿಕ ಶಿಕ್ಷಣ ಕೇಂದ್ರಗಳಿದ್ದರೂ ಅವುಗಳಿನ್ನೂ ಮಲಬಾರಿನ ಪಡಿಯಚ್ಚುಗಳಾಗಿಯೇ ಮುಂದುವರಿಯುತ್ತಿರುವುದೂ, ಬ್ಯಾರಿ ಸಮಾಜ ಸ್ವತಂತ್ರ ಗೌರವವುಳ್ಳ ಸಮುದಾಯವೆಂಬ ಎಚ್ಚರಿಕೆ ಮೂಡದಿರುವುದೂ ಈ ದೌರ್ಬಲ್ಯಕ್ಕೆ ಕಾರಣ. ಮೊದಲು ಬ್ಯಾರಿಗಳು ಎಚ್ಚರವಾಗಿರಬೇಕು. ತಮ್ಮ ಭಾಷೆ, ತಮ್ಮ ಸಂಸ್ಕೃತಿ ಮತ್ತು ತಮ್ಮ ನಾಡಿನ ಅಭಿಮಾನ ಮೂಡಬೇಕು. ಕಣ್ತೆರೆದು ಸುತ್ತ ಮುತ್ತ ನೋಡಬೇಕು. ತುಳುವರು ತುಳುವರಾಗಲು ಅಭಿಮಾನ ಪಡುತ್ತಾರೆ. ಕೊಂಕಣರು ಕೊಂಕಣರಾಗಲು, ಕೊಡವರು ಕೊಡವರಾಗಲು ಬಯಸುತ್ತಾರೆ. ಶತಮಾನಗಳ ಪರಂಪರೆ ಹೊತ್ತ ಬ್ಯಾರಿಗಳು ಮಾತ್ರ ಬ್ಯಾರಿಗಳಾಗಲು ಬಯಸುವುದಿಲ್ಲ. ಬ್ಯಾರಿ ಸಂಸ್ಕೃತಿಗೆ, ಬ್ಯಾರಿಗಳ ಶೈಕ್ಷಣಿಕ ಅಧೋಗತಿಗೆ ಇದೊಂದು ಆಮೂಲಾಗ್ರ ಕಾರಣವೆಂದು ಸುಸ್ಪಷ್ಟವಾಗಿ ಹೇಳಬಹುದು.

ಬ್ಯಾರಿಗಳ ಶೈಕ್ಷಣಿಕ ಅಭಿವೃದ್ಧಿಗೆ ಆರಂಭದಿಂದಲೂ ಆತಂಕಗಳಿದ್ದುವು. ಮೊದಲನೆಯದಾಗಿ ಧಾರ್ಮಿಕ ಶಿಕ್ಷಣ ಮಾಧ್ಯಮದ ಕೊರತೆ ಮತ್ತು ಮಲಬಾರಿನ ಮೌಲವಿಗಳನ್ನೇ ಹೊಂದಿಕೊಂಡಿರಬೇಕಾದ ದುಸ್ಥಿತಿ. ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಪ್ರಭಾವ ಬೀರಿದ ಟೀಪು ಸುಲ್ತಾನನ ಆಡಳಿತ ಮತ್ತು ಧಾರ್ಮಿಕ ಪುನರುತ್ಥಾನ ಈ ಕೊರತೆಯನ್ನು ನೀಗಿಸಲಿಲ್ಲ. ಹೊಸತಾಗಿ ಬೆಳೆದು ಬಂದ ಉರ್ದುಭಾಷೆ ಮತ್ತು ಹನಫೀ ವರ್ಗದೊಡನೆ ನಿಕಟವಾಗಿ ಹೊಂದಿಕೊಳ್ಳಲಿಲ್ಲ. ಯಾಕೆಂದರೆ, ಅರಬಿ ಮಲೆಯಾಳದ ಧಾರ್ಮಿಕ ದಿಗ್ಬಂಧನ ಅವರ ಮೇಲೆ ಬಲವಾಗಿತ್ತು. ಮಾತ್ರವಲ್ಲದೆ ಅರಬಿ ಮಲೆಯಾಳದ ಪಾಟ್ಟು ಮಾಲಿಕೆಗಳೂ, ನೇರ್ಚೆ ಪ್ಪಾಟ್ಟುಗಳೂ ಬಹುಮಟ್ಟಿಗೆ ವಿನೋದಗಾನಗಳಾಗಿದ್ದು, ಧಾರ್ಮಿಕ ಚೌಕಟ್ಟಿನ ನಿಯಂತ್ರಣವಿಲ್ಲದೆ ಪ್ರಚಾರಗೊಳ್ಳುತ್ತಿದ್ದುದರಿಂದ ಅದೊಂದು ಆಕರ್ಷಣೆಯಾಗಿತ್ತು.

ದಕ್ಕಣದ ಮೊಹರಂ ನ ಆಲಿವೀ ಉತ್ಸವ ಧಾರ್ಮಿಕವಲ್ಲದಿದ್ದರೂ ಜನಪ್ರಿಯವಾದಂತೆಯೇ ಈ ಪಾಟ್ಟು ಮಾಲಿಕೆಗಳೂ ಜನಾಕರ್ಷಣೆ ಪಡೆದಿತ್ತು. ಇದರಿಂದ ಶಿಕ್ಷಣ ಮೌಲ್ಯವು ಕುಂದಿ ಹೋಗಿ ಅದೊಂದು ಸಾಮಾಜಿಕ ಆಚರಣೆಯಾಗಿ ಬಳಕೆಯಲ್ಲಿತ್ತು. ಇದರಿಂದಾಗಿ ಬಹಳಷ್ಟು ಮೌಢ್ಯಗಳನ್ನು ಬ್ಯಾರಿಗಳ ಮಧ್ಯೆ ತುಂಬಲು ಈ ಮಾಧ್ಯಮ ಬಳಕೆಯಾಯಿತು. ಬ್ಯಾರಿಗಳ ಸಾಂಸ್ಕೃತಿಕ ಅಧೋಗತಿಯನ್ನು ರೂಪಿಸುವ ಕೊಂಡಿಯಾಗಿ ಈ ಮಲಬಾರಿ ಮೌಲವಿಗಳ ಶಿಕ್ಷಣ ವ್ಯವಸ್ಥೆ ಬೆಳೆಯಿತು. ಪರಿಣಾಮ ಯಾವನೇ ಬ್ಯಾರಿ ಕೂಡಾ ಒಬ್ಬ ಪ್ರಸಿದ್ಧ ಧರ್ಮ ಪಂಡಿತನಾಗಲಿಲ್ಲ. ಕ್ರಾಂತಿಕಾರಿ ನಾಯಕನಾಗಲಿಲ್ಲ. ಮಾತ್ರವಲ್ಲದೆ, ಬ್ಯಾರಿಗಳ ಪರಿಸ್ಥಿತಿ ನಾವು ಬ್ಯಾರಿಗಳೆನ್ನಲು ನಾಚುವ ಸ್ಥಿತಿಗಿಳಿಯಿತು.

ಬ್ರಿಟಿಷರ ಪ್ರಭುತ್ವ ಬಂದಾಗಿನಿಂದ ಆಧುನಿಕ ಶಿಕ್ಷಣದ ಬೆಳಕು ಹರಿಯ ತೊಡಗಿತು. ಆಂಗ್ಲ ಮಾಧ್ಯಮ ಜನತೆಯ ಅಂಧಕಾರವನ್ನು ಹೋಗಲಾಡಿಸುವ ಪ್ರಯತ್ನ ಮಾಡಿತು. ಆದರೆ ಟೀಪು ಸುಲ್ತಾನನ ಪತನಕ್ಕೆ ಬ್ರಿಟಿಷರೇ ಹೊಣೆಯಾಗಿದ್ದುದರಿಂದ ಕರ್ನಾಟಕದ ಮುಸ್ಲಿಮರಿಗೆ ಬ್ರಿಟಿಷರು ಬದ್ಧ ವೈರಿಗಳಾಗಿದ್ದರು. ಪ್ರಬುದ್ಧ ಧರ್ಮಪಂಡಿತರು ಒಮ್ಮಿಂದೊಮ್ಮೆಗೆ ಇಂಗ್ಲಿಷ್ ಭಾಷೆಯನ್ನು ತಿಳಿದುಕೊಳ್ಳುವಂತಿರಲಿಲ್ಲ. ಇದರಿಂದಾಗಿ ಆಂಗ್ಲ ವಿದ್ಯಾಭ್ಯಾಸ ಪದ್ಧತಿಯನ್ನು 'ಶೈತಾನೀಕ್ರಮ'ವೆಂದೇ ನಿರ್ಧರಿಸಿದರು. ಆ ಭಾಷೆಯ ಮೂಲಕ ಪಡೆಯಬಹುದಾದ ಯಾವುದೇ 'ಜ್ಞಾನ' ವನ್ನು 'ಇಲ್ಮ್' ಎಂದು ಒಪ್ಪಲು ಧಾರ್ಮಿಕ ಮುಖಂಡರು ಸಿದ್ಧರಿರಲಿಲ್ಲ. ಇದರಿಂದಾಗಿ, ಜ್ಞಾನದ ಹೆಬ್ಬಾಗಿಲು ಮಾನವ ಕೋಟಿಗೆ ತೆರೆದುಕೊಟ್ಟರೂ ಕೂಡಾ ಮುಸ್ಲಿಮರಿಗದು ಅಜ್ಞಾನದ ದಾರಿಯಾಯಿತು. ಹತ್ತೊಂಬತ್ತನೇ ಶತಮಾನದ ಮೊದಲರ್ಧದವರೆಗೂ ಯಾವ ಬ್ಯಾರಿಯೂ ಧೈರ್ಯದಿಂದ ಶಾಲೆಗೆ ಹೋಗುವಂತಿರಲಿಲ್ಲ. ಆಂಗ್ಲ ಶಿಕ್ಷಣದ ಅನುಕರಣೆ ನಿಷಿದ್ಧ ವರ್ತನೆ ಎಂದು ತಿಳಿದಿದ್ದು, ಮುಸ್ಲಿಮ್ ಸಮಾಜದ ಬೆಳವಣಿಗೆಗೆ ಆತಂಕವಾಗಿ ನಿಂತಿತು. ಹೊಸಲು ದಾಟಿದ ಸ್ತ್ರೀಯರು ಬಾವಿಯೊಳಗಿನ ಕಪ್ಪೆಯಂತೆ ಗಾಢಾಂಧಕಾರದಲ್ಲಿ ಮುಳುಗಿ ಹೋಗಿದ್ದರು. ಉಲಮಾಗಳ ಸಂಕುಚಿತ ಚಿತ್ತವು ಅಂದಿನ ಸ್ತ್ರೀ ಸಮಾಜದ ಸಾಮಾಜಿಕ ಜ್ಞಾನದ ಮೇಲೆ ಹೇರಿ ಬಿಟ್ಟ ಮಹಾ ಬಂಡೆಯಂತಿತ್ತು. ಇದರಿಂದಾಗಿ ಬ್ಯಾರಿ ಸಮಾಜದ ಅಧೋಗತಿಗೆ ಬಹುಮಟ್ಟಿಗೆ ಹಿಂದಿನ ಶತಮಾನದ ಧಾರ್ಮಿಕ ನಾಯಕತ್ವದ ನಿರ್ಧಾರಗಳೇ ಕಾರಣವೆಂದರೆ ಅತಿಶಯವಾಗದು.

ಆದರೂ ಮಂಗಳೂರಿನ ಕೆಲವು ಶ್ರೀಮಂತ ಕುಟುಂಬಗಳು ಈ ನಿಲುವನ್ನು ಉಲ್ಲಂಘಿಸಿ, ಶೈಕ್ಷಣಿಕ ಅಭಿವೃದ್ಧಿಗಾಗಿ ಶ್ರಮಿಸಿದ್ದರು. ಅದರ ಫಲವಾಗಿ ಬ್ರಿಟಿಷ್ ಸರಕಾರವು ಮುಸ್ಲಿಮರ ಶಿಕ್ಷಣದ ಬಗ್ಗೆ ಪ್ರತ್ಯೇಕ ಆಸಕ್ತಿ ವಹಿಸಿಕೊಂಡಿತು. 1871ರಲ್ಲಿ ಪ್ರಥಮವಾಗಿ ಧಾರ್ಮಿಕ ಶಿಕ್ಷಣದೊಡನೆ ಪ್ರಾಥಮಿಕ ಶಿಕ್ಷಣ ಒದಗಿಸುವ ಧಾರ್ಮಿಕ ಮುಲ್ಲಾಗಳಿಗೆ ಸರಕಾರಿ

ಸಂಬಳ ಒದಗಿಸಿತು. ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಿತು.1893ರಲ್ಲಿ ಇಡೀ ಜಿಲ್ಲೆಯಲ್ಲಿ ಕೇವಲ ಮೂವರು ಮುಸ್ಲಿಮ್ ವಿದ್ಯಾರ್ಥಿಗಳು ಕಾಲೇಜು ಹಂತ ತಲಪಿದ್ದರು. 27 ಮಂದಿ ಹೈಯರ್ ಪ್ರೈಮರಿ ಮತ್ತು 1425 ಮಂದಿ ಪ್ರಾಥಮಿಕ ಶಿಕ್ಷಣ ಹಂತ ತಲಪಿದ್ದರು. ಇವರಲ್ಲಿ ಬರೇ 105 ಹುಡುಗಿಯರಿದ್ದರು. ಸಂಖ್ಯೆ ಕಡಿಮೆಯಾಗಿದ್ದರೂ ಆ ಕಾಲಕ್ಕದೊಂದು ಕ್ರಾಂತಿಕಾರಿ ಬೆಳವಣಿಗೆಯಾಗಿತ್ತು.

ಇಂತಹ ಶೈಕ್ಷಣಿಕ ದುಃಸ್ಥಿತಿಯಿಂದ ಮೇಲೆತ್ತಲು ಪ್ರಯತ್ನಿಸಿದ ಕೆಲವು ಪ್ರಮುಖರಿದ್ದಾರೆ. 'ಬುರ್ಖಾದೊಳಗಿನ ಮಹಿಳೆ ಶಿಕ್ಷಣಕ್ಕೆ ಹೊರಗೆ' ಎಂಬ ತಪ್ಪು ಧೋರಣೆಯನ್ನು ಬದಲಿಸಲು ಹಲವರು ಪ್ರಯತ್ನ ಪಟ್ಟರು. ಬಾಲ್ಯವಿವಾಹ ಮಹಿಳೆಯರ ಪಾಲಿಗೊಂದು ಆಘಾತವಾಗಿತ್ತು. ಅಜ್ಞಾನದ ಕತ್ತಲಲ್ಲಿ ಬೆಳೆದ ಹೆಣ್ಣು ಮಗು ಕಿರಿಯ ಹರೆಯದಲ್ಲಿ ಕುಟುಂಬದ ಹೊಣೆ ಹೊರ ಬೇಕಾಗಿತ್ತು. ಧಾರ್ಮಿಕ ದಿಗ್ಬಂಧನದೊಳಗೆ ಸಿಕ್ಕಿಕೊಂಡಿದ್ದ ಮಹಿಳೆಯರೂ ಪುರುಷರೂ ಬೃಹತ್ ಸಮಾಜದ ಆಗುಹೋಗುಗಳಿಂದ ವಂಚಿತರಾಗಿ ಇಡೀ ಸಮಾಜವೇ ಅಧೋಗತಿಗಿಳಿಯಿತು. ಇಂತಹ ಪರಿಸ್ಥಿತಿಯನ್ನು ಸುಧಾರಿಸಲು ಇಪ್ಪತ್ತನೆಯ ಶತಮಾನದ ಆರಂಭದಿಂದಲೇ ಪ್ರಯತ್ನಗಳು ನಡೆದವು. (1902)ರ ಅಂಜುಮನ್ ಮುನೀರುಲ್ ಇಸ್ಲಾಮ್ - ಮದ್ರಸಾ ಮತ್ತು ಪ್ರಾಥಮಿಕ ಶಾಲೆಗಳ ಸ್ಥಾಪನೆ, (1914)ರ. ಇಸ್ಲಾಮಿಯಾ ಕ್ಲಬ್- ಲೈಬ್ರೇರಿಯನ್ನೂ, ಅಂಜುಮನ್ ಇತ್ತಿಹಾದುಲ್ ಇಸ್ಲಾಮ್ ಮತ್ತು ಅಂಜುಮನ್ ಖಿವ್ವತುಲ್ ಇಸ್ಲಾಮ್ - ಪಾಟ್ಟುಮಾಲಿಕೆಗಳನ್ನೂ; ಮುಸ್ಲಿಮ್ ಎಜುಕೇಶನ್ ಎಸೋಸಿಯೇಶನ್ (1924)ಹೈಸ್ಕೂಲು; ಬದ್ರಿಯಾ ಲಿಟರರಿ ಸೊಸೈಟಿ (1930)ರಾತ್ರಿ ಶಾಲೆ; ಸೀರತ್ ಕಮಿಟಿ (1930) ಮಿಲಾದ್ ಸಮಾರಂಭ; ಕ್ರೆಸೆಂಟ್ ಕ್ಲಬ್ (1930)ಲೈಬ್ರರಿ, ಮತ್ತು ಮುಸ್ಲಿಮ್ ವೆಲ್ಫೇರ್ ಲೀಗ್ (1937)ರಾತ್ರಿ ಶಾಲೆಗಳು; ಇತ್ಯಾದಿಗಳನ್ನು ಸ್ಥಾಪಿಸಿ, ಮುಸ್ಲಿಮರ ಶೈಕ್ಷಣಿಕ ಪ್ರಗತಿಗಾಗಿ ನಿರಂತರ ಶ್ರಮಿಸಿದರು. ಕಾಸರಗೋಡಿನ ಅಜೀಜಿಯಾ ಎಜುಕೇಶನ್ ಸೊಸೈಟಿ ಮಂಗಳೂರು ಮತ್ತು ಕಾಸರಗೋಡಿನಲ್ಲಿ ಮುಸ್ಲಿಮ್ ಹೆಮ್ಮಕ್ಕಳ ಶಿಕ್ಷಣ ಸಂಸ್ಥೆ ನಿರ್ಮಿಸಲು ಪ್ರಯತ್ನಿಸಿತು.

ಮಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟ ಪ್ರಥಮ ಶಾಲೆಯೇ ಮುನೀರುಲ್ ಇಸ್ಲಾಮ್ ಮದ್ರಸ. ಇದು 1892ರಲ್ಲಿ ಆರಂಭಗೊಂಡಿತು. ಹಾಜಿ ಕುಂಞ ಮುಸ್ಲಿಯಾರರು ಪ್ರಥಮ ಉಸ್ತಾದ್. ಇಲ್ಲಿ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯೂ ಇತ್ತು. ಇಂತಹ ಶಾಲೆಗಳು ಹಲವೆಡೆಗಳಲ್ಲಿ ಸ್ಥಾಪನೆಗೊಂಡು ವಿದ್ಯಾಭ್ಯಾಸಕ್ಕೆ ಶ್ರಮಿಸಿದವು. 1902ರ ಭಯಾನಕ ಪ್ಲೇಗಿನ ಪರಿಣಾಮದಿಂದಾಗಿ ಜನರಲ್ಲಿ ಶಿಕ್ಷಣದ ಅವಶ್ಯಕತೆಯ ಪ್ರಜ್ಞೆಮೂಡಿತೆನ್ನಬಹುದು. ಕಲೆಕ್ಟರ್ ಅಜೀಜುದ್ದೀನ್‌ರವರು ಮುಸ್ಲಿಮರ ಹಿಂದುಳಿಯುವಿಕೆಗೆ ಶಿಕ್ಷಣದ ಕೊರತೆಯೇ ಕಾರಣವೆಂಬುದನ್ನು ತಕ್ಕಮಟ್ಟಿಗೆ ತಿಳಿಸಲು ಪ್ರಯತ್ನಿಸಿದರು. ಎಡ್ವಕೇಟ್ ಉಸ್ಮಾನ್

ಸಾಹೇಬರೂ, ಕಾರ್ಕಳದ ಹುಸೇನ್ ಸಾಹೇಬರೂ, ಮಹಮೂದ್ ಶೆಮ್ನಾಡ್ ಮತ್ತು ಮುಹಮೂದ್ ಶೆರೂಲರೂ ಈ ನಿಟ್ಟಿನಲ್ಲಿ ಬಹಳಷ್ಟು ಶ್ರಮವಹಿಸಿ, ಮುಸ್ಲಿಮ್ ಶಿಕ್ಷಣದ ಪ್ರತಿಪಾದಕರಾಗಿ ಮುಂದೆ ಬಂದರು. ಮಂಗಳೂರಿನ ಕಂದಕದ ಕೆಲವು ವ್ಯಾಪಾರಿಗಳೂ ಆಸಕ್ತರಾಗಿ ಮುಂದೆ ಬಂದರು. ಹಾಜಿ ಮೂಸುಕುಂಞ, ಅಬ್ದುಲ್ಲಾ ಬಿನ್ ಅಮ್ಮೊಟಿ, ತೆಂಗಿನ ಕಾಯಿ ಮಾಮಬ್ಬಾಕ, ಸೈಕಲ್ ಅಹ್ಮದರವರು ಒಟ್ಟು ಸೇರಿ, ಹಾರೂನ್ ಈಸಾ ಸೇಟ್‌ರವರ ಸ್ಥಳದಾನದೊಡನೆ ಕಂದಕದ ಬದ್ರಿಯಾ ಮಸೀದಿಯನ್ನೂ (1917) ನಿರ್ಮಿಸಿ, ಅಲ್ಲೇ ಶಿಕ್ಷಣ ಒದಗಿಸುವ ಯತ್ನವನ್ನು ಮಾಡಿದರು. ಬಂದರದ ಕುಂಞಮುಹಾಜಿ, ಬೆಂಡಿಹಾಜಾರರೆಂದೇ ಪ್ರಸಿದ್ಧರಾದ ಹಾಜಿ ಅಬ್ದುಲ್ ರಹ್ಮಾನ್ ಮತ್ತು ಹಾಜಿ ಹಸನ್ ಈಸಾ ಸೇಟರು, ಮುಸ್ಲಿಮ್ ಶಿಕ್ಷಣದ ದಾತಾರರಾಗಿ ಮುಂದೆ ಬಂದರು. 1924ರಲ್ಲಿ ಮುಸ್ಲಿಮ್ ಎಜುಕೇಶನ್ ಎಸೋಸಿಯೇಶನ್ ಆರಂಭಗೊಂಡಿತು. ಸಿ. ಮಹಮೂದರೂ ಟಿ.ಯು. ಅಬ್ಬಾಕನವರೂ ನೆರವು ನೀಡಿ ಅದೊಂದು ಸಂಸ್ಥೆಯಾಗಿ ಬೆಳೆಯುವಂತೆ ಮಾಡಿದರು. ಹಾಗೆ ಆರಂಭಗೊಂಡ ಬದ್ರಿಯಾ ಸಂಸ್ಥೆಯು ಕಾಲಕ್ರಮೇಣ ಬೆಳೆದು ಪ್ರೌಢಶಾಲೆಯಾಗಿ, ಇಂದು ಜೂನಿಯರ್ ಕಾಲೇಜು ಹಾಗೂ ಪದವಿ ಕಾಲೇಜು ಮಟ್ಟದವರೆಗೆ ಬೆಳೆದುಬಂದಿದೆ. ಮುಸ್ಲಿಮ್ ಶಿಕ್ಷಣ ಪ್ರಯತ್ನದಲ್ಲಿ ಇದೊಂದು ಹೆಮ್ಮೆಯ ಪ್ರಗತಿಯೆನ್ನಬಹುದು.

ಅಂತಹದೇ ಇನ್ನೊಂದು ಪ್ರಯತ್ನ 1927ರಲ್ಲಿ ನಡೆಯಿತು. ಇಸ್ಮಾಯಿಲ್ ಬಿನ್‌ರಹೀಂ, ಪಿ. ಮುಹಮ್ಮದ್ ಮತ್ತು ಪಿ. ಮಹಮೂದ್ ಬಿನ್ ಪಳ್ಳಿ ಎಂಬ ಯುವಕರು ಮೌಲವಿ ಇಸ್ಮಾಯಿಲ್ ರಹೀಂರವರ ಸಹಾಯದಿಂದ ಮದ್ರಸುತ್ತುಲ್ ಅಜ್‌ಹಾರಿಯ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಇಂದಿಗೂ ಅದೊಂದು ಉತ್ತಮ ಧಾರ್ಮಿಕ ವಿದ್ಯಾಕೇಂದ್ರವಾಗಿ ಬೆಳೆದುನಿಂತಿದೆ. ಇಷ್ಟರಲ್ಲಿ ಮುಸ್ಲಿಮ್ ಯುವಕರು ವಿದ್ಯಾವಂತರಾಗುವ ಸೌಲಭ್ಯಗಳಿದ್ದರೂ ಮಂದನೆಲೆಯಲ್ಲಿ ಮುಂದೆ ಬರುತ್ತಿದ್ದರು. ಆದರೆ ಹುಡುಗಿಯರ ಬಗ್ಗೆ ಶಿಕ್ಷಣವೊಂದು ದೂರದ ಬೆಟ್ಟವಾಗಿತ್ತು. ಹುಡುಗಿಯರಿಗಾಗಿ ಒಂದು ಮುಸ್ಲಿಮ್ ಪ್ರೌಢ ಶಾಲೆಯನ್ನು ತೆರೆಯುವಲ್ಲಿ ಮಹಮೂದರು ಪ್ರಯತ್ನ ಪಟ್ಟರು. ಬಹಳಷ್ಟು ಪರಿಶ್ರಮದ ಫಲವಾಗಿ ಮಂಗಳೂರಿನಲ್ಲೊಂದು 'ಮುಸ್ಲಿಮ್ ಹುಡುಗಿಯರ ಹೈಸ್ಕೂಲು' ಆರಂಭಗೊಂಡಿತು. ಆದರೆ ಮಂಗಳೂರಿನ ಮುಸ್ಲಿಮರ ಪ್ರತಿಕ್ರಿಯೆ ಭಿನ್ನವಾಗಿತ್ತು. ಕೇವಲ ಆರು ಮಂದಿ ಹುಡುಗಿಯರಿಗಿಂತ ಹೆಚ್ಚು ಹುಡುಗಿಯರು ಬರಲೇ ಇಲ್ಲ. ಪರಿಣಾಮವಾಗಿ ಎರಡೇ ವರ್ಷಗಳಲ್ಲಿ ಸರಕಾರೀ ಹೈಸ್ಕೂಲು ಆಗಿ ಪರಿವರ್ತನೆಗೊಂಡು, ಸರಕಾರ ಮುಸ್ಲಿಮರಿಗಿತ್ತ ಕೊಡುಗೆಯೂ ಕೂಡಾ ನಿಷ್ಫಲಗೊಂಡಿತು.

ಮುಸ್ಲಿಮ್ ಶಿಕ್ಷಣ ಸೌಲಭ್ಯಗಳ ಅಭಾವವೇ ಶೈಕ್ಷಣಿಕ ಹಿನ್ನಡೆಗೆ ಕಾರಣವಾಗಿರಲಿಲ್ಲ. ಧಾರ್ಮಿಕ ಚೌಕಟ್ಟಿನಲ್ಲಿ ಪರಿಭ್ರಾಂತರಾದ ಹುಡುಗಿಯರೂ, ಹುಡುಗರೂ, ಆಧುನಿಕ ಶಿಕ್ಷಣದ ಬಗ್ಗೆ ತಳೆದ ಭಯಾವರಿತ ಮನೋಭಾವವೇ ಒಂದು ಪ್ರಬಲ ಕಾರಣ.

ಧಾರ್ಮಿಕ ಹಾಗೂ ಲೌಕಿಕ ವಿದ್ಯಾಭ್ಯಾಸವುಳ್ಳ ಉಲಮಾಗಳಿಲ್ಲದಿರುವುದೇ ಇಂತಹ ದೌರ್ಭಾಗ್ಯಕ್ಕೆ ಕಾರಣವೆಂದು ಹೇಳಬಹುದು. ಧರ್ಮನಾಯಕರ ಅಲಕ್ಷ್ಯ ಇಡೀ ಸಮಾಜಕ್ಕೇ ಕೇಡಾಗಿ, ಇಪ್ಪತ್ತನೆಯ ಶತಮಾನದ ಕೊನೆಯಲ್ಲಿ ಕೂಡ ಬ್ಯಾರಿ ಸಮಾಜದ ಹೆಮ್ಮಕ್ಕಳು ಶಿಕ್ಷಣಕ್ಕಾಗಿ ಮುಂದೆ ಬರಲೊಪ್ಪುವುದಿಲ್ಲ. ಸಮುದಾಯದ ಸಾಮಾಜಿಕ ನೆಲೆಗಟ್ಟು, ಪ್ರಮುಖರ ಶೈಕ್ಷಣಿಕ ಹಿನ್ನೆಲೆ ಪರಿಪೂರ್ಣ ಬೆಳವವರೆಗೂ ಇತರ ಕೋಮಿನ ಮಟ್ಟದಲ್ಲಿ ಶಿಕ್ಷಣ ವ್ಯವಸ್ಥೆಯು ಮುಸ್ಲಿಮರಲ್ಲಿ ಬೆಳೆಯಲು ಸಾಧ್ಯವಿಲ್ಲ. ಬ್ಯಾರಿ ಸಮಾಜ ಎಚ್ಚರಗೊಳ್ಳಬೇಕು. ಶಿಕ್ಷಣದ ಅಗತ್ಯ ಮನವರಿಕೆ ಆಗಬೇಕು. ಆಗ ಮಾತ್ರ ಈ ಸಮುದಾಯ ಮೇಲೆ ಬರಲು ಸಾಧ್ಯ.

------

● ಪೇರೂರು ಜಾರು
ಬಸ್ಸು ನಿಲ್ದಾಣದ ಹಿಂದೆ,
ಕೆಂಗೇರಿ, ಬೆಂಗಳೂರು.

# ಶಿಕ್ಷಣದಲ್ಲಿ ಮುಸ್ಲಿಮರು, ದಲಿತರು ಮತ್ತು ಹಿಂದುಳಿದ ವರ್ಗದವರು ಹಿಂದಿರುವುದೇಕೆ ?

ಇಡೀ ಜಗತ್ತಿನಲ್ಲಿ ಪ್ರತೀ ವರ್ಷ 150 ಮಿಲಿಯ ಜನ ಶಾಲೆಗೆ ಕಾಲಿಟ್ಟರೂ, ಅವರಲ್ಲಿ ಓದು ಮುಗಿಸುವವರು ಕಾಲು ಭಾಗಕ್ಕಿಂತಲೂ ಕಡಿಮೆಯೇ. ಉನ್ನತ ಓದು ಮುಗಿಸುವವರು ಶೇಕಡಾ 5ಕ್ಕಿಂತಲೂ ಕಡಿಮೆ. ಅದರಲ್ಲೂ ಅರ್ಧದಲ್ಲೇ ಶಾಲೆ ಬಿಟ್ಟು ದುಡಿಮೆಗೆ ತೊಡಗುವ ಮಕ್ಕಳ ಸಂಖ್ಯೆ ಆಫ್ರಿಕಾ ಖಂಡ ಮತ್ತು ಏಷ್ಯಾಖಂಡದಲ್ಲೇ ಹೆಚ್ಚು.

ಜಗತ್ತಿನಲ್ಲೇ ಶಾಲೆಗೆ ಸೇರಿ ಓದು ಅರ್ಧದಲ್ಲಿ ಬಿಡುವ ಅಥವಾ ಶಾಲೆಗೇ ಸೇರದ ಮಕ್ಕಳ ಸಂಖ್ಯೆ ಭಾರತದಲ್ಲೇ ಹೆಚ್ಚು. ಭಾರತದಲ್ಲಿ ಪ್ರತಿವರ್ಷ ಎರಡೂವರೆ ಕೋಟಿ ಹೊಸ ಮಕ್ಕಳು ಶಾಲೆಗೆ ಸೇರುತ್ತಾರೆಂದು ಅಂದಾಜು. ಆದರೆ ಪ್ರತಿವರ್ಷ ಸುಮಾರು ಒಂದೂ ಮುಕ್ಕಾಲು ಕೋಟಿ ಮಕ್ಕಳು ಐದನೆ, ಏಳನೆ ತರಗತಿ ಮುಟ್ಟದೆಯೇ ಶಾಲೆ ಬಿಡುತ್ತಾರೆಂಬುದು ಒಂದು ಕಹಿಯಾದ ಸತ್ಯ.

ಹೀಗೆ ಶಾಲೆ ಬಿಡುವವರು ಬಾಲಕಾರ್ಮಿಕರಾಗಿ ದುಡಿದು ಸಂಸಾರ ಭಾರವನ್ನು ಅತಿ ಚಿಕ್ಕ ವಯಸ್ಸಿನಲ್ಲೇ ಹೊರುವವರಾಗುತ್ತಾರೆ. ಅದರಲ್ಲೂ ಶಾಲೆಯನ್ನು ಅರ್ಧದಲ್ಲೇ ಬಿಡುವವರಲ್ಲಿ ದಲಿತ ಮತ್ತು ಮುಸ್ಲಿಮ್ ಹಾಗೂ ಅತಿ ಹಿಂದುಳಿದವರ ಜಾತಿ ಜನವರ್ಗದ

ಮಕ್ಕಳೇ ಹೆಚ್ಚು.

ಜಗತ್ತಿನಲ್ಲಿ 5,20,00,000 ಲೆಕ್ಕಕ್ಕೆ ಸಿಕ್ಕಿರುವ ಬಾಲ ಕಾರ್ಮಿಕರಿದ್ದಾರೆ. ಈ ಬಾಲ ಕಾರ್ಮಿಕರಲ್ಲಿ ಕಾಲುಭಾಗ ಭಾರತಕ್ಕೆ ಸೇರಿದವರು. ಅಂದರೆ ಅಧಿಕೃತವಾಗಿ ಭಾರತದಲ್ಲಿ ಒಂದು ಕೋಟಿ ಮೂವತ್ತು ಲಕ್ಷ ಬಾಲ ಕಾರ್ಮಿಕರಿದ್ದಾರೆ. ಆದರೆ ಲೆಕ್ಕಕ್ಕೆ ಸಿಗದ ಇಷ್ಟೇ ಬಾಲ ಕಾರ್ಮಿಕರು ಇನ್ನೂ ಇರಬಹುದೆಂಬುದು ಸಮಾಜ ತಜ್ಞರ ಹೇಳಿಕೆ.

ಹೀಗೆ ಬಾಲ ಕಾರ್ಮಿಕರಾಗಿರುವವರಲ್ಲಿ ಮೂರನೇ ಎರಡು ಭಾಗ ಶಾಲೆಯ ಮುಖವನ್ನೇ ಕಾಣದವರು. ಉಳಿದವರು ಐದನೆಯ ತರಗತಿಯ ಒಳಗೆ ಶಾಲೆ ಬಿಟ್ಟವರು. ಶಾಲೆಯ ಮುಖವನ್ನೇ ಕಾಣದ ಬಾಲ ಕಾರ್ಮಿಕರಲ್ಲಿ ಮೂರನೇ ಎರಡು ಭಾಗ ಮುಸ್ಲಿಮ್ ಮತ್ತು ದಲಿತ ಜನಾಂಗಕ್ಕೆ ಸೇರಿದವರಾದರೆ, ಮೂರನೇ ಒಂದು ಭಾಗ ಅತಿ ಹಿಂದುಳಿದ ಜಾತಿ ಜನವರ್ಗಕ್ಕೆ ಸೇರಿದವರು. ಶಾಲೆಯ ಮುಖ ಕಂಡು ಓದು ಅರೆಬರೆ ಮುಗಿಸಿ ಬಂದ ಬಾಲಕಾರ್ಮಿಕರಲ್ಲಿ ನಾಲ್ಕನೇ ಒಂದು ಭಾಗ ಹಿಂದುಳಿದ ವರ್ಗ, ನಾಲ್ಕನೇ ಒಂದು ಭಾಗ ಅತಿ ಹಿಂದುಳಿದ ಜಾತಿಯವರಾಗಿದ್ದು, ಇನ್ನುಳಿದವರು ಮುಸ್ಲಿಮ್ ಮತ್ತು ದಲಿತರು.

ವಿದ್ಯೆಯ ವಿಷಯದಲ್ಲಿ ಭಾರತದಲ್ಲಿ ದಲಿತರು ಮತ್ತು ಮುಸ್ಲಿಮರ ಪರಿಸ್ಥಿತಿ ಹೆಚ್ಚು ಕಡಿಮೆ ಒಂದೇ ಆಗಿರುವುದು ಕಂಡು ಬರುತ್ತದೆ. ಹಿಂದುಳಿದ ಜಾತಿ ವರ್ಗದ ಜನ ಇವರಿಗಿಂತ ತುಸು ಮುಂದಿರುವುದು ಕಾಣಬರುತ್ತದೆ. ಕ್ರಿಶ್ಚಿಯನರಲ್ಲಿ ಕಡುಬಡವರು ಕಂಡುಬಂದರೂ ಅವರಲ್ಲಿ ಶಿಕ್ಷಣದ ಕೊರತೆಯಿರುವವರ ಸಂಖ್ಯೆ ನಗಣ್ಯ. ಇದಕ್ಕೆ ಕಾರಣ ಕ್ರಿಶ್ಚಿಯನ್ ವಿದ್ಯಾಸಂಸ್ಥೆಗಳು ತಮ್ಮ ಜನವರ್ಗದವರ ಓದಿನಲ್ಲಿ ಆಸ್ಥೆ ವಹಿಸಿರುವುದಾಗಿದೆ.

ಏಷ್ಯಾ ಮತ್ತು ಆಫ್ರಿಕಾ ಖಂಡ ಬಿಟ್ಟರೆ ಜಗತ್ತಿನ ಬೇರೆಲ್ಲೆಡೆ ಶೇಕಡಾ 75ಕ್ಕಿಂತಲೂ ಹೆಚ್ಚಿನವರು ಓದಿದವರು. ಚೀನಾ, ಜಪಾನ್‌ಗಳು ಈಗ ಓದಿನಲ್ಲಿ ಅಂಥ ಗುರಿ ಸಾಧಿಸಿವೆ. ಭಾರತದಂಥ ದೇಶದಲ್ಲಿ ಕೆಲವೆಡೆ ಓದಿದವರ ಸಂಖ್ಯೆ15%ಕ್ಕಿಂತಲೂ ಕಡಿಮೆ. ದೇಶದಲ್ಲಿ ಓದಿನಲ್ಲಿ ಮುಂದುವರಿದ ರಾಜ್ಯಗಳೆಂದರೆ ಕೇರಳ ಮತ್ತು ನಾಗಾಲ್ಯಾಂಡ್. ಕರ್ನಾಟಕದ ತುಳುನಾಡು ಪ್ರದೇಶವನ್ನು ಈ ಪಟ್ಟಿಯಲ್ಲಿ ಸೇರಿಸಿಕೊಳ್ಳಬಹುದು. ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿದ್ಯೆಯಲ್ಲಿ ಮುನ್ನಡೆ ಸಾಧಿಸಿರುವ ಪ್ರದೇಶ ಪಾಂಡಿಚೇರಿ. ಇಲ್ಲಿನ ವಿದ್ಯಾ ಮುನ್ನಡೆಗೆ ಕ್ರಿಶ್ಚಿಯನ್ ಸಂಸ್ಥೆಗಳು ಕಾರಣವೆನ್ನಬಹುದು.

ವಿದ್ಯೆ ಮತ್ತು ಧಾರ್ಮಿಕ ಪ್ರಚಾರಕ್ಕೆ ಆರಂಭ ಕಾಲದಿಂದಲೂ ಸಂಬಂಧವಿದ್ದರೂ ಅದನ್ನು ಕ್ರಿಶ್ಚಿಯನ್ ಮಿಷನರಿಗಳು ಬಳಸಿಕೊಂಡಷ್ಟು ಪರಿಣಾಮಕಾರಿಯಾಗಿ ಬೇರೆ ಯಾರೂ ಬಳಸಿಕೊಂಡಿಲ್ಲ. ನಾಗಾಲ್ಯಾಂಡ್‌ನ ಗುಡ್ಡಗಾಡು ಜನರನ್ನು ಸ್ಥಳೀಯರು ಅಸ್ಪೃಶ್ಯರಂತೆ ಇಟ್ಟಿದ್ದರು. ಕ್ರಿಶ್ಚಿಯನರು ಅವರನ್ನು ಇಗರ್ಜಿಗೆ ಕರೆದು ತಮ್ಮ ಧರ್ಮಕ್ಕೆ ಸೇರಿಸಿಕೊಂಡು,

ಓದು ನೀಡಿದರು. ಪರಿಣಾಮವಾಗಿ ಇಂಗ್ಲಿಷನ್ನು ಆಡಳಿತ ಭಾಷೆಯಾಗಿ ಹೊಂದಿರುವ ದೇಶದ ಏಕೈಕ ರಾಜ್ಯವಾಗಿದೆ ನಾಗಾಲ್ಯಾಂಡ್. ಕೇರಳ, ಪಾಂಡಿಚೇರಿ, ದ.ಕ. ಜಿಲ್ಲೆಯ ವಿಷಯದಲ್ಲೂ ಇದೇ ಪರಿಣಾಮವನ್ನು ಸ್ಥಳೀಯ ಭಾಷೆಯ ರೀತ್ಯಾ ಗುರುತಿಸಬಹುದು.

ಮುಸ್ಲಿಮರಲ್ಲೂ ಓದು ಮತ್ತು ಧರ್ಮಕ್ಕೆ ಸಂಬಂಧವಿತ್ತು. ಕೇರಳ ಮತ್ತು ತುಳುನಾಡಿನಲ್ಲಿ ಮಸೀದಿಗೆ ಪಳ್ಳಿ (ಳ್ಳಿ) ಎನ್ನಲಾಗುತ್ತದೆ. ಇದಕ್ಕೆ ಏನೇ ಅರ್ಥ ಕೊಟ್ಟರೂ ಆರಂಭದಲ್ಲಿ ಅಲ್ಲಿ ವಿದ್ಯಾದಾನಕ್ಕೆ ಮಹತ್ವವಿತ್ತೆಂಬುದು ಸುಸ್ಪಷ್ಟ. ಹಾಗೆ ನೋಡಿದರೆ ಮುಸಲ್ಮಾನರಲ್ಲಿ ಹೆಚ್ಚು ಓದಿದವರು ಸಿಗುವುದು ಕೇರಳ - ತುಳು ನಾಡಿನ ಕರಾವಳಿಯಲ್ಲೇ. ಇನ್ನೂ ವಿಶೇಷದ ಸಂಗತಿಯೆಂದರೆ ಇಡೀ ಕರ್ನಾಟಕದಲ್ಲಿ ಮುಸ್ಲಿಮರ ಕನ್ನಡದಲ್ಲಿ ಹೆಚ್ಚು ಸ್ಪಷ್ಟತೆ ಕಾಣುವುದು ದ.ಕ.ದ ಮುಸ್ಲಿಮರಲ್ಲೇ. ಏನೇ ಆದರೂ ಒಟ್ಟು ಸಂಖ್ಯೆ ಕಂಡಾಗ ಮುಸ್ಲಿಮರಲ್ಲಿ ಅವಿದ್ಯಾವಂತರು ಇಲ್ಲವೇ ಅರೆ ವಿದ್ಯಾವಂತರ ಸಂಖ್ಯೆ ಹೆಚ್ಚು.

ಭಾರತದ ಮುಸ್ಲಿಮರಾರೂ ಅರೇಬಿಯಾದಿಂದ ಇಲ್ಲಿಗೆ ಬಂದು ನೆಲೆಸಿದವರಲ್ಲ. ದೇಶದಲ್ಲಿ ಧಾರ್ಮಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಶೋಷಿಸಲ್ಪಟ್ಟವರೇ ಕ್ರಿಶ್ಚಿಯನರಾಗಿ, ಮುಸ್ಲಿಮರಾಗಿ ಮತಾಂತರಗೊಂಡರು. ಕಾರಣ ಸುಸ್ಪಷ್ಟ. ಧಾರ್ಮಿಕ ಸ್ವಾತಂತ್ರ್ಯ, ಆರ್ಥಿಕ ಭದ್ರತೆ, ಸಾಮಾಜಿಕ ನ್ಯಾಯ. ಹಿಂದೂ ಮತದಡಿ ಹಿಂದುಳಿದ ಜಾತಿ ಜನ ವರ್ಗ ಮತ್ತು ದಲಿತರಿಗೆ ಈ ಮೂರನ್ನೂ ನಿರಾಕರಿಸಲಾಗಿತ್ತು. ಅವರ ಬದುಕು ದಸ್ಯುಗಳಂತಿತ್ತು. ಇದನ್ನು ಸ್ಪಷ್ಟವಾಗಿ ಉಲ್ಲೇಖಿಸಿರುವ ಸ್ವಾಮಿ ವಿವೇಕಾನಂದರು ಬಂಗಾಲದಲ್ಲಿ ನನ್ನ ದಲಿತ ಸೋದರರು ಮುಸ್ಲಿಮರಾಗುವುದನ್ನು ಕಂಡೆ ಎಂದಿದ್ದಾರೆ. ಬಂಗಾಲದ (ಈಗಿನ ಬಾಂಗ್ಲಾದೇಶ ಸೇರಿ) ಮುಸ್ಲಿಮರಲ್ಲಿ ಶೇಕಡಾ 80 ಜನ ದಲಿತರೆಂಬುದನ್ನೂ ಅವರು ಉಲ್ಲೇಖಿಸಿದ್ದಾರೆ.

ದ.ಕ ಮತ್ತು ಕೇರಳ ಸುತ್ತಿನಲ್ಲೂ ಇದೆ ನಡೆದದ್ದು. ಇಲ್ಲಿನ ಮುಸ್ಲಿಮರ ಭಾಷೆ ಬ್ಯಾರಿ ಭಾಷೆ. ಮುಖ್ಯವಾಗಿ ಮಲೆಯಾಳಿ ಭಾಷೆಯಿಂದ ಈ ಭಾಷೆ ಕವಲೊಡೆದಿದ್ದು ತುಳು ಬೆರೆತಿರುವುದನ್ನು ಕಾಣುವಾಗ ಇವರು ಮೂಲತಃ ಸ್ಥಳೀಯ ದಲಿತ, ಬುಡಕಟ್ಟು ಮತ್ತು ಹಿಂದುಳಿದ ಜನವರ್ಗದವರೆಂಬುದು ನಿರ್ವಿವಾದ. ಹೀಗೆ ಮತಾಂತರಗೊಂಡಾಗ ಅವರಿಗೆ ಧಾರ್ಮಿಕ ಸ್ವಾತಂತ್ರ್ಯ ಸಿಕ್ಕಿತು. ಸಾಮಾಜಿಕ ನ್ಯಾಯ ಸ್ವಲ್ಪ ಮಟ್ಟಿಗೆ ದಕ್ಕಿತು. ಆದರೆ ಮೂಲದಿಂದ ಬಡತನ ಬದಲಾಗಲಿಲ್ಲ. ಓದಿಗೆ ಆರ್ಥಿಕ ಅಡಿಪಾಯವೂ ಮುಖ್ಯ ಅಲ್ಲವೇ. ಉದಾ: ಮೇಲ್ಜಾತಿಯಿಂದ ಮುಸ್ಲಿಮರಾದವರು ಬಹು ಓದಿದವರಾಗಿದ್ದಾರೆ.

ವೈದಿಕ ಧರ್ಮದ ಸೇಡಿನ ಜ್ವಾಲೆಗೆ ಸಿಲುಕಿದ ಧರ್ಮಗಳಲ್ಲಿ ಬೌದ್ಧ ಮತ್ತು ಜೈನರೂ ಇದ್ದಾರೆ. ಇದರಲ್ಲಿ ಬಹಳಷ್ಟು ಜನ ಜೈನರೂ ಮುಸ್ಲಿಮರಾಗಿರುವುದನ್ನು

ಕಾಣಬಹುದು. ಇದಕ್ಕೆ ಒಳ್ಳೆ ಉದಾಹರಣೆ ಒಂದು ಕಾಲದಲ್ಲಿ ತುಳುನಾಡಿನ ಭಾಗವೇ ಆಗಿದ್ದ ಬಟಕಳ (ಭಟ್ಕಳ)ದ ಮಂದಿ. ಇಲ್ಲಿನ ಮುಸ್ಲಿಮರಲ್ಲಿ ಬಹುಪಾಲು ಜನ ಜೈನರಿಂದ ಮುಸ್ಲಿಮರಾದವರು. ಸ್ವಾರಸ್ಯವೆಂದರೆ ಈಗಲೂ ಇವರಲ್ಲಿ ಕೆಲವರು ಕತ್ತಲಾದ ಮೇಲೆ ಊಟ ಮಾಡುವುದಿಲ್ಲ. ಆದರೆ ಇವರು ಸ್ವಲ್ಪ ಓದಿದವರಾಗಿರಲೂ ಕಾರಣ ಹಿಂದಿನಿಂದಲೂ ಇದ್ದ ಸಾಮಾಜಿಕ ಸ್ಥಾನಮಾನ.

ಬೆಂಗಳೂರಿನಲ್ಲಿ ರೈಲು ನಿಲ್ದಾಣದ ಬಳಿ ಮುಸ್ಲಿಕೇರಿ (ಗೋರಿಪಾಳ್ಯ) ಕಾಣಬಹುದು. ಇಲ್ಲಿ ಇವರೊಂದಿಗಿರುವವರು ದಲಿತರು. ಅದೇ ರೀತಿ ಪೆರಿಯಾರ್ ನಗರದಲ್ಲಿ ಕಾಣಬಹುದು. ದಲಿತರು ಕ್ರಿಶ್ಚಿಯನರಾಗಿರುವುದಕ್ಕೆ ಭಾರತಿನಗರ ಸುತ್ತಿನಲ್ಲಿ ಉದಾಹರಣೆ ಕಾಣಬಹುದು.

ಅತಿ ದಲಿತ, ಬುಡಕಟ್ಟು ಮತ್ತು ಅತಿ ಹಿಂದುಳಿದ ಜಾತಿ ಜನರೇ ಶೇಕಡಾ 80ಕ್ಕಿಂತಲೂ ಹೆಚ್ಚಾಗಿ ಮುಸ್ಲಿಮರಾದವರಾದ್ದರಿಂದ ಅವರ ಆರ್ಥಿಕ ಸ್ಥಿತಿ, ಸಾಮಾಜಿಕ ಹಿಂದುಳಿಕೆ ಈ ದೇಶದ ಜಾತಿ ನೀತಿಯಲ್ಲಿ ಖಂಡಿತ ಭಾರೀ ಬದಲಾವಣೆ ಕಾಣಲಿಲ್ಲ. ಅಂಥ ಬದಲಾವಣೆ ಸಾಧ್ಯವಾಗದೆ ಓದಿನ ಮಹತ್ವ, ಓದುವ ಶಕ್ತಿ ಅವರಿಗೆಟಕುವುದಿಲ್ಲ. ಇನ್ನೊಂದು - ಓದಿನ ಹಾದಿ ತೆರೆಯುವಂತಾದ್ದೆಂದರೆ ಪೇಟೆಯ ಸಾನ್ನಿಧ್ಯ.

ಈ ನಿಟ್ಟಿನಲ್ಲೂ ಮುಸ್ಲಿಮರು ವಂಚಿಸಲ್ಪಟ್ಟಿದ್ದಾರೆ. ಅಂದರೆ ನಗರದ ಬ್ರಾಹ್ಮಣರ ಹೋಟೆಲ್‌ನಲ್ಲಿ ಮುಸ್ಲಿಮ್ ಹೋಗಿ ತಿನ್ನಬಲ್ಲ. ಆದರೆ ಮುಸ್ಲಿಮ್ ಇಲ್ಲವೇ ದಲಿತನ ಹೋಟೆಲ್‌ನಲ್ಲಿ ಬ್ರಾಹ್ಮಣ ಬಂದು ತಿನ್ನಲಾರ. ಹಾಗಾಗಿ ಸಾಮಾಜಿಕ ಕೀಳರಿಮೆ ಈ ಜನವರ್ಗದಲ್ಲಿ ಬೇರೂರಿಬಿಟ್ಟಿದೆ. ಒಮ್ಮೆ ಕೀಳರಿಮೆ ಬೇರು ಬಿಟ್ಟರೆ ಅದು ಮಾನಸಿಕ ಪರಿಣಾಮ ಬೀರಿ ವ್ಯಕ್ತಿಯ ಕಲಿಕೆಯ ಮಟ್ಟವನ್ನು ಒಂದು ಮಿತಿಗೊಳಪಡಿಸುತ್ತದೆ. ಪೇಟೆ ಹಳ್ಳಿಯ ವಿಷಯದಲ್ಲೂ ಇದೆ ಆಗಿದೆ. ಮೊನ್ನೆ ಆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪೇಟೆಯ ಜನರೇ ರ್‍ಯಾಂಕ್ ಪಡೆದರು. ಆದರೆ ಹಳ್ಳಿಯ ಮೇಲ್ಜಾತಿಯವನಿಗೆ ಸಹ ಒಂದು ರ್‍ಯಾಂಕ್ ಸಿಗಲಿಲ್ಲ ಏಕೆ ?

ಮುಸ್ಲಿಮರ ಪೇಟೆಯ ಸಂಬಂಧವೂ ಸೀಮಿತವಾದುದಾಗಿದೆ. ಬ್ರಿಟಿಷರ ಕಾಲದಲ್ಲಿ ಸರ್ಕಾರಿ ನೌಕರಿಯಲ್ಲಿ ಮುಸ್ಲಿಮರ ಪ್ರಮಾಣ ಶೇಕಡಾ 20ಕ್ಕಿಂತ ಹೆಚ್ಚಾಗಿತ್ತು. ಆದರೆ ಇಂದು ಶೇಕಡಾ 3ರಷ್ಟು ಮಾತ್ರ ಇದೆ. ಹಾಗಾಗಿ ಪೇಟೆಯಲ್ಲಿ ಮುಸ್ಲಿಮರ ಸಂಬಂಧವೆಂದರೆ ಸಣ್ಣ ವ್ಯಾಪಾರಿಗಳಾಗಿ ವಾಸ್ತವ್ಯ. ಇಂಥ ವ್ಯಾಪಾರಿಗಳು ತಮ್ಮ ಮಕ್ಕಳು ಹೆಚ್ಚು ಓದುವುದನ್ನು ಇಷ್ಟಪಡುವುದಿಲ್ಲ. ತಮ್ಮ ಮಕ್ಕಳು ಲೆಕ್ಕ ಮಾಡಲಿಕ್ಕೆ ಕಲಿತು ತಮ್ಮ ವೃತ್ತಿಯನ್ನು ಮುಂದುವರಿಸಿದರೆ ಸಾಕು ಎಂಬ ಮನೋಭಾವವೇ ಇದಕ್ಕೆ ಕಾರಣ. ಕೇಳಿದರೆ ''ಓದಿದರೆ ಕೆಲಸ ಎಲ್ಲಿ ಸಿಗುತ್ತದೆ ಸ್ವಾಮಿ?. ಇದರಲ್ಲೇ ಹೊಟ್ಟೆ ತುಂಬುತ್ತದೆ'' ಎಂಬ ವೇದಾಂತ

ಬೇರೆ ಹೇಳುತ್ತಾರೆ.

ತುಳುನಾಡಿನಲ್ಲಿ ಈ ಬ್ಯಾರಿ ಎಂಬ ಪದ ತುಳುವಿನ ಬ್ಯಾರ ಅಂದರೆ ವ್ಯಾಪಾರ ಎಂಬ ನುಡಿಯಿಂದ ಹುಟ್ಟಿದೆ. ದೇಶಕ್ಕೆ ಕಡಲ ಮೂಲಕ ವ್ಯಾಪಾರಕ್ಕೆ ಬಂದವರು ಅರಬರು. ಅವರ ಮೂಲಕ ಮೊದಲಿಗೆ ವ್ಯಾಪಾರ ಕುದುರಿದ್ದು ಅಂದಿನ ತುಳುನಾಡಿನ ನಾಲ್ಕು ಮುಖ್ಯ ಬಂದರುಗಳಾಗಿದ್ದ ಕುಡಲ, ಬಾರಕೂರು, ಬಟಕಳ ಮತ್ತು ಪೊ(ಹೊ)ನ್ನಾವರಗಳಲ್ಲಿ . ಇಲ್ಲೆಲ್ಲ ಮೂಲದ ಮುಸ್ಲಿಮರನ್ನು ಸ್ಥಳೀಯ ಸಂಪ್ರದಾಯದಂತೆ ಕಾಣಬಹುದು. ಹಾಗಾಗಿ ಬ್ಯಾರಿ ಭಾಷೆಯಲ್ಲಿ ಮಲೆಯಾಳಿ ಮತ್ತು ತುಳುವಿನ ಸೊಗಡು ಜೋರಾಗಿದೆ.

ಕಲಿಕೆಯಲ್ಲಿ ಓದುವ ಮಾಧ್ಯಮವೂ ಪರಿಣಾಮ ಬೀರುತ್ತದೆ. ನಾನು ಶಾಲೆ ಓದುತ್ತಿದ್ದಾಗ ಒಂದು ವಿಷಯ ಗಮನಿಸಿದೆ. ಕ್ರಿಶ್ಚಿಯನ್ (ಕೊಂಕಣಿ) ಹುಡುಗರು ಕನ್ನಡದಲ್ಲಿ ಹಿಂದಿರುತ್ತಿದ್ದರು. ಅದೇ ರೀತಿ ಬ್ಯಾರಿಗಳು ಸಹ. ಆದರೆ ಸಾರಸ್ವತರು ಕೊಂಕಣಿಗರೇ ಆದ್ದರೂ ಕ್ರಿಶ್ಚಿಯನರಷ್ಟು ಹಿಂದಿರುತ್ತಿರಲಿಲ್ಲ. ಇದಕ್ಕೆ ಕಾರಣವೇನೆಂದು ಕೆದಕಿದಾಗ ಒಂದು ವಿಷಯ ಸ್ಪಷ್ಟವಾಗುತ್ತದೆ. ಹಿಂದುಗಳು ಸಾರಸ್ವತರನ್ನು ಸಾಮಾಜಿಕವಾಗಿ ಅಪ್ಪಿಕೊಂಡಷ್ಟು ಹಿಂದುಗಳು ಕ್ರಿಶ್ಚಿಯನ್ ಇಲ್ಲವೇ ಮುಸ್ಲಿಮರನ್ನು ಅಪ್ಪಿಕೊಂಡಿರಲಿಲ್ಲ. ಅಂದರೆ ಅಸ್ಪೃಶ್ಯರಂತೆ ಇಡದಿದ್ದರೂ ಬಹಳಷ್ಟು ದೂರವೇ ಇಟ್ಟಿದ್ದರು. ಹಾಗಾಗಿ ಅವರಿಗೆ ಇವರೊಡನೆಯ ಭಾಷಾ ಸಂಪರ್ಕ ಕಡಿಮೆ. ಶಾಲೆಯಲ್ಲಿ ಸಹಜವಾಗಿ ಆ ಭಾಷೆಯಲ್ಲಿ ಓದಬೇಕೆಂದರೆ ಬಾಯಿ ನರಳುವುದು ಸಹಜ. ಇಂಗ್ಲಿಷ್ ಓದಿ ಬರೆದು ಮಾತಾಡಲು ಬಾರದ ಪದವೀಧರರನ್ನೂ, ಶ್ರೀಮಂತರ ಮನೆಯ ಅಡುಗೆ ಆಳು ಓದಿಲ್ಲದಿದ್ದರೂ ಇಂಗ್ಲಿಷ್ ಮಾತನಾಡುವುದನ್ನೂ ನಾವಿಂದು ಕಾಣಬಹುದಲ್ಲವೇ?

ಹಾಗೆಂದ ಮೇಲೆ ಓದಿನಲ್ಲಿ ಮಾತೃಭಾಷೆಯ ಮಹತ್ವ ಅರ್ಥವಾಗದಿರದು. ಇದೂ ಕೆಲವೊಮ್ಮೆ ಮುಸ್ಲಿಮರು ಹಾಗೂ ಭಾಷಾ ಅಲ್ಪ ಸಂಖ್ಯಾಕರು ಓದು ಬಿಡಲು ಕಾರಣವಾಗುವುದಿದೆ. ಅಂದರೆ ಫೇಲಾದರು ಎನ್ನಿ, ಮನೆಯವರು ಶಾಲೆ ಬಿಡಿಸಬಹುದು. ಇನ್ನೇಕೆ ಓದು ಎಂದು ಆತನಿಗನಿಸಬಹುದು. ಫೇಲಾದವರಿಗೆ ಮುಂದೆ ಓದಲು ಕೆಲವೆಡೆ ಸೀಟೇ ಸಿಗದಿರಬಹುದು. ಆದ್ದರಿಂದ ಕನಿಷ್ಟ ಐದನೇ ತರಗತಿಯವರೆಗೆ ಎಲ್ಲರ ಮಾತೃಭಾಷೆಯಲ್ಲೇ ಶಿಕ್ಷಣ ಸಿಗುವ ವ್ಯವಸ್ಥೆಯಾಗಬೇಕು. ಆ ಬಳಿಕವೂ ಆತ ಬಯಸಿದಲ್ಲಿ ಯಾವುದೇ ಮಾಧ್ಯಮದಲ್ಲೇ ಕಲಿತರೂ ಮಾತೃಭಾಷೆಯಲ್ಲೂ ಉತ್ತರಿಸಲು ಸಾಧ್ಯವಿರುವಂತಿರಬೇಕು.

ಇದು ಅಷ್ಟೇ ಅಲ್ಲದೆ ನಮ್ಮ ಶಾಲಾ ಕಾಲೇಜುಗಳಲ್ಲಿ ಜಾತಿ ನೀತಿಯ ಪಕ್ಷಪಾತ ಮತ್ತು ಪೂರ್ವಗ್ರಹ ಪೀಡಿತ ನೀತಿಗಳನ್ನು ಪರದೆಯ ಹಿಂದೆ ಧಾರಾಳವಾಗಿ ನೋಡಬಹುದು.

ಇದೂ ಮುಸ್ಲಿಮ್ ಮತ್ತು ದಲಿತರು ಹಾಗೂ ಅತಿ ಹಿಂದುಳಿದವರಲ್ಲಿ ಓದಿನ ಅನಾಸಕ್ತಿಗೆ ಕಾರಣವಾಗಿರುತ್ತದೆ. ಅನಾಸಕ್ತಿಯವನು ಶಾಲೆಗೆ ಹೋದರೂ ಪಾಸಾಗಲಾರ; ಪಾಸಾದರೂ ಫಸ್ಟ್ ಕ್ಲಾಸ್ ಬರಲಾರ. ಇದಕ್ಕೆ ನನ್ನ ಓದಿನಲ್ಲೇ ಒಂದು ಉದಾಹರಣೆ ಇದೆ. ಒಂದೇ ಒಂದು ವರ್ಷ ನನಗೆ ಕ್ರಿಶ್ಚಿಯನ್ 'ನನ್' ಒಬ್ಬರಲ್ಲಿ (ಬ್ರಹ್ಮಾವರ ನಿರ್ಮಲ ಶಾಲೆ) ವಿದ್ಯೆ ಕಲಿವ ಅವಕಾಶ ಸಿಕ್ಕಿತು. ಆ ವರ್ಷ ನಾನು ನನ್ನ ವಿದ್ಯಾರ್ಥಿ ಜೀವನದಲ್ಲೇ ಅತಿ ಹೆಚ್ಚಿನ ಅಂಕಗಳನ್ನು ಪಡೆದಿದ್ದೆ. ಕಾರಣ ಅವರು ನನ್ನನ್ನು ಓದಲು ಪ್ರೋತ್ಸಾಹಿಸಿದರು.

ಕೆಲ ಹಿಂದುಳಿದ ಉಪಾಧ್ಯಾಯರ ಕೈಯಲ್ಲೂ ನಾನು ಉತ್ತಮ ವಿದ್ಯಾರ್ಥಿಯಾಗಿದ್ದೆ. ಆದರೆ ಮೇಲ್ಜಾತಿಯ ಉಪಾಧ್ಯಾಯರೆನ್ನ ಕ್ಲಾಸ್ ಟೀಚರ್ ಆದಾಗ ನಾನು ದಡ್ಡ ವಿದ್ಯಾರ್ಥಿಯಾಗಿದ್ದೆ! ಹಾಗೆಂದ ಮೇಲೆ ವಿದ್ಯಾರ್ಥಿಗೆ ಸಿಗುವ ಉಪಾಧ್ಯಾಯನೂ ಮುಖ್ಯ ಅನ್ನಿ. ಮುಸ್ಲಿಮ್ ಮತ್ತು ದಲಿತರು ತಮ್ಮ ಪರವಲ್ಲದಿದ್ದರೂ ತಮ್ಮನ್ನು ಅರ್ಥಮಾಡಿಕೊಳ್ಳುವ ಉಪಾಧ್ಯಾಯರನ್ನು ನೋಡುವುದು ಕಡಿಮೆ. ಇದೂ ಮುಸ್ಲಿಮ್ ಜನವರ್ಗದವರು ಓದಿನಲ್ಲಿ ಹಿಂದುಳಿದಿರಲು ಕಾರಣವೆಂದು ನಾನು ಒತ್ತಿ ಹೇಳಬೇಕಾಗಿದೆ. ಇದಕ್ಕೆ ಮೇಲ್ಜಾತಿಯವರ ಮನ ಪರಿವರ್ತನೆಯಾಗದೆ ಪರಿಹಾರ ಕಾಣದು.

ಮುಸ್ಲಿಮ್ ಭೂಮಿವಿದ್ಯೆಯಲ್ಲಿ ಕೆಲವು ಕ್ರಾಂತಿಗಳನ್ನು ಮಾಡಿದ್ದಾಗಿದೆ. ಜಗತ್ತಿನಲ್ಲಿ ಮೊತ್ತಮೊದಲಿಗೆ ಶಿಕ್ಷಣ ಕಡ್ಡಾಯ ಮಾಡಿದ್ದು ಪರ್ಶಿಯಾದಲ್ಲಿ - 1819ರಲ್ಲಿ. ಇದನ್ನನುಸರಿಸಿ 1870ರಲ್ಲಿ ಇಂಗ್ಲೆಂಡ್‌ನಲ್ಲಿ ಪ್ರಾಥಮಿಕ ಓದು ಕಡ್ಡಾಯವೆನಿಸಿತು. ಈ ಸುತ್ತಿನ ಸುಮೇರಿಯನರಂತೂ ಕ್ರಿ.ಪೂ. 3500ರ ಸುತ್ತಿನಲ್ಲೇ 'ಇ - ಡುಬ್‌ಬಾ' ಎಂಬ ಶಿಕ್ಷಣ ಸಂಸ್ಥೆಗಳನ್ನು ಹೊಂದಿದ್ದರು. ಶಿಕ್ಷಣದ ಮಹತ್ವವನ್ನು ಕುರಾನ್ ಸ್ಪಷ್ಟವಾಗಿಯೇ ಹೇಳಿದೆ. ಜಗತ್ತಿನ ಮೊತ್ತಮೊದಲ ವಿಶ್ವವಿದ್ಯಾನಿಲಯ 'ಕಾರೂಯಿನ್' ಕ್ರಿ.ಶ. 859ರಲ್ಲೇ ಮೊರಾಕ್ಕೋದಲ್ಲಿ ಕಾರ್ಯಾರಂಭ ಮಾಡಿತು. ಯುರೋಪಿನ ಮೊದಲ ವಿಶ್ವವಿದ್ಯಾನಿಲಯ ಬ್ರೊಲೋಗ್ನಾ ಹುಟ್ಟಿದ್ದು ಬಹುತಡವಾಗಿ -1088ರಲ್ಲಿ.

ಆದರೆ ಯುರೋಪಿಯನರು ಮತ್ತು ಕ್ರಿಶ್ಚಿಯನರು ವಿದ್ಯೆಯ ಮಹತ್ವವನ್ನು ಮುಸ್ಲಿಮರಿಗಿಂತ ಹೆಚ್ಚು ಅರಿತರೆಂದೇ ಹೇಳಬೇಕು. ಇಂದು ಜಗತ್ತಿನಲ್ಲೇ ಹೆಚ್ಚು ವಿದ್ಯಾರ್ಥಿಗಳಿರುವ ವಿಶ್ವವಿದ್ಯಾನಿಲಯವೆಂದರೆ ರೋಮ್‌ನದೇ. ಇಲ್ಲಿ 1,80,000 ವಿದ್ಯಾರ್ಥಿಗಳು ಓದುತ್ತಿದ್ದಾರೆ. ಅತಿ ಸಣ್ಣ ಭಾಷೆಗೂ ಮಹತ್ವ ನೀಡಿ ಓದಿಗವಕಾಶ ನೀಡಿದ ನಾಡು ರಶ್ಯಾ. ಮಾಸ್ಕೋದ ಲೆನಿನ್‌ಹಿಲ್‌ನಲ್ಲಿರುವ ಎಂ.ವಿ. ಲೊಮೊನೋಸೋವ್ ಯುನಿವರ್ಸಿಟಿ ಜಗತ್ತಿನಲ್ಲೇ ಅತಿ ಸುಸಜ್ಜಿತವಾದ ಮತ್ತು ವಿಸ್ತಾರವಾದ ಯುನಿವರ್ಸಿಟಿಯಾಗಿದೆ. ಇದರ ಮುಖ್ಯ ಕಟ್ಟಡವೇ 40ಸಾವಿರ ಕೋಣೆಗಳನ್ನೊಳಗೊಂಡು 32ಮಹಡಿಯದಾಗಿದ್ದು ಸರ್ವ ವ್ಯವಸ್ಥಿತವಾದುದಾಗಿದೆ.

ರೋಮ್‌ನ ಅಕ್ಕರೆ ಮತ್ತು ರಶ್ಯಾದ ಸುಸಜ್ಜಿತತೆಯೂ ಓದಿನ ಮೇಲೆ ಪರಣಾಮ ಬೀರುವ ಅಂಶಗಳಾಗಿವೆ. ನಮ್ಮಲ್ಲಿಯೂ ಕೆಲವರು 'ನನ್ನ ಮಗ ಆ ಕಾನ್ವೆಂಟಿನಲ್ಲೆ ಓದಬೇಕು' ಎಂದು ಹೇಳುವುದನ್ನು ನೋಡಬಹುದು. ಅದಕ್ಕೆ ಕಾರಣ ಇಲ್ಲಿನ ಮಟ್ಟಿಗೆ ಆ ಕಾನ್ವೆಂಟ್ ಮಾಡಿರುವ ಹೆಸರು. ಜಗತ್ತಿನ ಅತಿ ವೆಚ್ಚದ ಶಾಲೆ ಸ್ವಿಝರ್‌ಲ್ಯಾಂಡಿನಲ್ಲಿದೆ. ಇಲ್ಲಿನ ಗ್ಲಾಟಡ್ ಇಂಟರ್‌ನ್ಯಾಶನಲ್ ಶಾಲೆಯ ವಿದ್ಯಾರ್ಥಿಯ ವಾರ್ಷಿಕ ವೆಚ್ಚ 60ಸಾವಿರ ರೂಪಾಯಿ. ಹೊರ ವೆಚ್ಚ ದರ ಇನ್ನೆಷ್ಟೋ ಪಟ್ಟು. ಇಂಥ ಗಿನ್ನೆಸ್ ಸಂಗತಿಗಿಂತ ನಮ್ಮ ಹುಡುಗರು ಹೆಚ್ಚಾಗಿ ಓದಿ ಗಿನ್ನೆಸ್ ಹೋಗಬೇಕು.

ಜರ್ಮನಿಯ ಜೆಸ್ಸೆನ್ ವಿಶ್ವವಿದ್ಯಾನಿಲಯದಲ್ಲಿ ವಿಟ್ಟೆಯ ಕಾರ್ಲ್ ಲುಕಾವ್ 13-4-1814ರಲ್ಲಿ ತನ್ನ 12ನೇ ವಯಸ್ಸಿನಲ್ಲೆ ಪಿ.ಎಚ್.ಡಿ. ಪಡೆದರು. 30-9-1717ರಲ್ಲಿ ಎಡಿನ್‌ಬರ್ಗ್ ಯುನಿವರ್ಸಿಟಿಯಲ್ಲಿ ಲೆಕ್ಕದ ಪ್ರೊಫೆಸರಾಗಿ ಸೇರುವಾಗ ಕೋಲಿನ್ ಮಾಕ್ಲೂರಿನ್ ವಯಸ್ಸು ಬರೇ 19. ವಿಲಿಯಮ್ ಥಾಮ್ಸನ್ ತನ್ನ ಹತ್ತನೇ ವಯಸ್ಸಿನಲ್ಲೇ ಮೆಟ್ರಿಕ್ ಮುಗಿಸಿದ. ಇಂಥ ಅತಿಶಯ ಓದೂ ಅಗತ್ಯವಲ್ಲ. ಅಮೇರಿಕದ ನೇಪಲ್ಸ್‌ನ ಎರಿಕ್‌ಸನ್‌ರ 11ಗಂಡು ಮತ್ತು 3ಹೆಣ್ಣು ಮಕ್ಕಳು ಎಲ್ಲರೂ 1962-78ರ ಅವಧಿಯಲ್ಲಿ ಡಬಲ್‌ಡಿಗ್ರಿ ಪಡೆದದ್ದು ಒಂದು ಸಾಧನೆ. ಇಂಥ ಸಾಧನೆ ನಮ್ಮ ಹುಡುಗರು ಮಾಡಬೇಕು.

ಕೆಲವೊಮ್ಮೆ ಅಲೆಮಾರಿತನವೂ ಓದಿಗೆ ಮಾರಕವಾಗಬಹುದು. ಭಾರತದ ಮುಸ್ಲಿಮರಲ್ಲಿ ಬಹುಪಾಲು ಜನ ಅಲೆಮಾರಿ ವ್ಯಾಪಾರಿ, ಕೂಗಿ ಮಾರುವವರು, ತಿರುಗಿ ದುಡಿಯುವವರಾಗಿರು ವುದೂ ಅವರ ಮಕ್ಕಳ ವಿದ್ಯಾಭ್ಯಾಸದಲ್ಲಿ ತೊಡಕಾಗಿದೆ. ಭಾರತದಲ್ಲಿ ಬುಡಕಟ್ಟು ಜನಾಂಗದವರನ್ನು ಬಿಟ್ಟರೆ ಮುಸ್ಲಿಮರೇ ಹೆಚ್ಚು ಅಲೆಮಾರಿಗಳು. ಅದರಲ್ಲೂ ಕೇರಳ ಮತ್ತು ತುಳುನಾಡಿನ ಮಾಪಿಳ್ಳೆ ಬ್ಯಾರಿಗಳು ಇಂಥ ವ್ಯವಹಾರಕ್ಕೇ ಹೆಚ್ಚು ಹೊಂದಿಕೊಂಡಿದ್ದಾರೆ. ಇಂಥವರ ಮಕ್ಕಳ ಓದೂ ತಡೆಗೀಡಾಗುತ್ತದೆ. 1933-43ರ ಹತ್ತೇ ವರ್ಷದ ಅವಧಿಯಲ್ಲಿ ಅಮೆರಿಕದ ವಿಲ್ಮಾ ವಿಲಿಯಮ್ಸ್ ಎಂಬ ಹೆಣ್ಣು 265ಶಾಲೆಗಳಲ್ಲಿ ಓದಬೇಕಾಯಿತು ! ಕಾರಣ ಈಕೆಯ ತಂದೆತಾಯಿ ಶೋ ಬಿಜಿನೆಸ್‌ನಲ್ಲಿದ್ದು ಊರೂರು ತಿರುಗುತ್ತಿದ್ದರು.

ಉದಾಹರಣೆಗೆ ಭಾರತದ ಸರ್ಕಸ್ ಕಲಾವಿದರಲ್ಲಿ ಕೇರಳದ ಅದರಲ್ಲೂ ಮುಸ್ಲಿಮರ ಸಂಖ್ಯೆ ಗಣನೀಯವಾಗಿದೆ. ಇವರ ಮಕ್ಕಳು ಓದಲು ಅವಕಾಶವೇ ಇಲ್ಲ. ಕಾರಣ ಅಲೆದಾಟ ಮತ್ತು ವೃತ್ತಿ ಶಿಕ್ಷಣದ ಆತುರ. ಇನ್ನೂ ಸ್ವಾರಸ್ಯದ ಹಾಗೂ ವಿಷಾದದ ಸಂಗತಿಯೆಂದರೆ ಅತಿ ಚಿಕ್ಕ ವಯಸ್ಸಿನಲ್ಲೇ ಕಲಿಯುವ ಕೆಲ ವೃತ್ತಿ ಶಿಕ್ಷಣಗಳಲ್ಲಿ ಈ ಮುಸ್ಲಿಮರ ಸಂಖ್ಯೆಯೇ ಹೆಚ್ಚು. ಅವರಿಗೆ ವೃತ್ತಿ ಹೊಟ್ಟೆಗೆ ನೀಡುತ್ತದಾದರೂ ಓದು ಸೊನ್ನೆಯಾದುದರಿಂದ ಬದುಕು ಅಷ್ಟು ಸುಲಭವಲ್ಲ. ಓದಿದವರ ಶೋಷಣೆಗೆ ಈ ಮಂದಿ ಒಳಗಾಗುತ್ತಾರೆ.

ಮುಂಬೈನ ಕಸಾಯಿಖಾನೆಯ ಮಾಂಸ ವಿಭಾಗದಲ್ಲಿ ರಕ್ತದಲ್ಲಿ ಮುಳುಗಿ ಮಾಂಸ ಎತ್ತಲು ಮಕ್ಕಳೇ ಆಗಬೇಕು. ಶಿವಕಾಶಿಯ ಪಟಾಕಿ, ಬೆಂಕಿಪೊಟ್ಟಣ ಕೈಗಾರಿಕೆ ಮಕ್ಕಳ ದುಡಿಮೆಯಿಲ್ಲದಿದ್ದರೆ ನಿಂತೇ ಹೋಗುತ್ತದೆ. ದೇಶದಲ್ಲಿ ಬಿಸಾಡಿದ ಚೂರುಪಾರು ಆರಿಸಿ ಮತ್ತೆ ಕಚ್ಚಾ ಸಾಮಗ್ರಿಯಾಗಿ ಕಳುಹಿಸುವುದರಲ್ಲೂ ಮಕ್ಕಳೇ ಹೆಚ್ಚು. ಇನ್ನೂ ವಿಷಾದದ ಸಂಗತಿಯೆಂದರೆ ಇವರಲ್ಲಿ ಮುಸ್ಲಿಂ ಹುಡುಗರ ಸಂಖ್ಯೆಯೇ ಹೆಚ್ಚು. ನಗರದ ಸೈಕಲಂಗಡಿ, ಗ್ಯಾರೇಜ್‌ನಂಥವೂ ಇದಕ್ಕೆ ಉದಾಹರಣೆಯಾಗುತ್ತವೆ. ಹೋಟೆಲಂತೂ ಬಿಡಿ, ಭಾರತದಲ್ಲೇ ಮಲೆಯಾಳಿ ಕಾಕ ಮತ್ತು ಉಡುಪಿ ಹೋಟೆಲ್‌ಗಳು ಪ್ರಸಿದ್ಧ. ಒಂದರಲ್ಲಿ ಮುಸ್ಲಿಮ್ ಹುಡುಗರು ಕಾರ್ಮಿಕರಾದರೆ, ಇನ್ನೊಂದರಲ್ಲಿ ಅತಿ ಹಿಂದುಳಿದ ಜಾತಿಯ ಬಾಲಕರು ಜೀತದಂತೆ ದುಡಿಯುವುದನ್ನು ಇಂದಿಗೂ ಕಾಣಬಹುದು.

ಇಲ್ಲಿನ ನೀತಿ ಎಷ್ಟು ಕೆಟ್ಟದಾಗಿರುತ್ತದೆಂದರೆ ನನಗೆ ಗೊತ್ತಿದ್ದ ಮೇಲ್ಜಾತಿಯ ಹೋಟೆಲೊಂದಕ್ಕೆ ಊರಿಂದ ಜನರನ್ನು ಕರೆತಂದರು. ಅದರಲ್ಲಿ ಸ್ವಲ್ಪ ಓದಿದ ಇಬ್ಬರು ಕೆಳಜಾತಿ ಮತ್ತು ಮುಸ್ಲಿಂ ಹುಡುಗರನ್ನು ಕ್ಲೀನ್ ಕೆಲಸಕ್ಕೆ ಹಾಕಿದ ಮಾಲಕ ಬರೇ ಶಾಲೆಯ ಮುಖ ಮಾತ್ರ ಕಂಡಿದ್ದ ತನ್ನ ಜಾತಿಯವನನ್ನು ಸಪ್ಲೈ ಕೆಲಸಕ್ಕೆ ನೇಮಿಸಿಕೊಂಡ. ಇಂಥ ಸಂಭವಗಳೂ ಮುಸ್ಲಿಮ್ ಮತ್ತು ದಲಿತ ಹಾಗೂ ಅತಿ ಹಿಂದುಳಿದ ಜನ ವರ್ಗದವರಲ್ಲಿ ಓದಿ ಪ್ರಯೋಜನವಿಲ್ಲವೆಂಬ ಭಾವನೆ ಬಲಿಯುವಂತೆ ಮಾಡುತ್ತದೆ. ಅಂದರೆ ಈ ಕಾರಣದಿಂದಲೂ ಕೆಲವರು ಶಾಲೆಗೆ ಮುಖ ಹಾಕದೆ ಕೂರುವುದಿದೆ. ಅಂದರೆ ಸಾಮಾಜಿಕ ಪರಿಸರವೇ ಇವರ ಓದಿಗೆ ಪ್ರತಿಕೂಲವಲ್ಲದಿದ್ದರೂ ತಡೆಯೊಡ್ಡುವಂತಿದೆ ಯೆಂಬುದು ಸ್ಪಷ್ಟ.

ಒಟ್ಟಿನಲ್ಲಿ,

1) ಆರ್ಥಿಕ ಸ್ಥಿತಿ
2) ಪರಂಪರಾಗತ ಸ್ಥಿತಿ
3) ಸಾಮಾಜಿಕ ಪರಿಸ್ಥಿತಿ
4) ಜಾತಿ ನೀತಿ ಇತ್ಯಾದಿಗಳೇ ಮುಸ್ಲಿಮರ ಓದಿಗೆ ತಡೆಯಾಗಿವೆಯೆಂಬುದನ್ನು ಗುರುತಿಸಿಕೊಳ್ಳಬಹುದು.

ಆರ್ಥಿಕ ಸ್ಥಿತಿ: ಒಂದು ಆರ್ಥಿಕ ಸ್ಥಿತಿ ಸುಭದ್ರವಿಲ್ಲದಿರುವುದು, ಮತ್ತೊಂದು ನಮ್ಮ ಸಂಪಾದನೆಗೆ ಓದು ಬೇಕಿಲ್ಲ ಎಂದು ತಿಳಿದಿರುವುದು.

ಪರಂಪರಾಗತ ಸ್ಥಿತಿ: ಮಾಡುವ ವೃತ್ತಿಗೆ ಓದು ಅಗತ್ಯವಿಲ್ಲವೆಂದುಕೊಂಡಿರುವುದು. ಎರಡನೆಯದಾಗಿ ಓದು ನಮ್ಮ ಹಕ್ಕಲ್ಲ; ಅದು ಮೇಲ್ಜಾತಿಯವರದೆಂದು ನಂಬಿರುವುದು.

**ಸಾಮಾಜಿಕ ಪರಿಸ್ಥಿತಿ:** ಸಾವಿರಾರು ವರ್ಷಗಳಿಂದ ಬದಲಾಗದ ಸ್ಥಿತಿಗತಿ, ಬದಲಾದರೂ ಹೋಗದ ಕೀಳರಿಮೆ, ಮತ್ತಿನ್ನೊಂದು ವಿದ್ಯಾಸೌಲಭ್ಯ ಸವಲತ್ತುಗಳು ಈ ಜನವರ್ಗದವರಿಗೆ ದೂರವಾಗಿರುವುದು.

**ಜಾತಿನೀತಿ:** ಒಂದು - ಓದು ಹುಟ್ಟಿನಿಂದ ಎಂದು ಬ್ರೈನ್‌ವಾಶ್ ಮಾಡುವ ಜನ, ಮಗದೊಂದು ನಾನಾ ರೀತಿಯಿಂದ ಮುಸ್ಲಿಮ್, ದಲಿತ, ಹಿಂದುಳಿದವರ ಓದಿಗೆ ಕಲ್ಲುಹಾಕುವ ತಂತ್ರಗಳು.

ಇವಕ್ಕೆಲ್ಲ ಪರಿಹಾರ ಸುಲಭವಿಲ್ಲ. ಓದಿನಲ್ಲಿ ಹಿಂದುಳಿದ ಜನವರ್ಗಕ್ಕೆ ಮೀಸಲಾತಿ, ಅನ್ಯಭಾಷೆಯಲ್ಲಿ ಓದುವಾಗ ಗ್ರೇಸ್‌ಮಾರ್ಕ್, ಹತ್ತಿರದಲ್ಲೇ ವಿದ್ಯಾ ಸವಲತ್ತುಗಳು ಸಿಗುವಂತೆ ಮಾಡುವುದು, ಸೂಕ್ತ ಪ್ರೋತ್ಸಾಹಕಗಳನ್ನು ಘೋಷಿಸುವುದು, ಉಚಿತ ಹೈಸ್ಕೂಲು ಮತ್ತು ಅಗ್ಗದ ಉನ್ನತ ಶಿಕ್ಷಣ , ಓದಲು ಧೈರ್ಯ ತುಂಬುವಿಕೆ, ಸೂಕ್ತ ಓದಿಗೆ ಸೂಕ್ತ ಕೆಲಸದ ಭರವಸೆ, ಜಾತಿ ಕುತಂತ್ರಗಳ ಕೊನೆ, ಸೂಕ್ತ ಶಿಕ್ಷಕರು ಇತ್ಯಾದಿ ಸಿಕ್ಕರೆ ಮಾತ್ರ ಮುಸ್ಲಿಮರಲ್ಲಿ ಓದುವವರ ಸಂಖ್ಯೆ ಹೆಚ್ಚುವಂತೆ ಮಾಡಬಹುದು.

ಹಿಂದಿನ ಕಾಲದಲ್ಲಿ ಶಿಕ್ಷಕರು ರಾತ್ರಿ ಅಭ್ಯಾಸ ಮಾಡಿ ಬೆಳಿಗ್ಗೆ ಬಂದು ಪಾಠ ಮಾಡುತ್ತಿದ್ದರು. ಇಂದಿನ ಉಪಾಧ್ಯಾಯರುಗಳೋ ರಾತ್ರಿ ರಾಜಕೀಯ ಮಾತಾಡಿ, ಬಾರ್ ಇತ್ಯಾದಿ ಹೊಕ್ಕಾಡಿ ಬೆಳಿಗ್ಗೆ ಹೋಗಿ ತೋಚಿದ ಪಾಠ ಮಾಡುತ್ತಾರೆ. ವಿದ್ಯಾರ್ಥಿಯೇನಾದರೂ ಪ್ರಶ್ನೆ ಕೇಳಿದರೆ ಕೆಲವೊಮ್ಮೆ ತಿಳಿಯದ ಉಪಾಧ್ಯಾಯರು ''ಇಂಥ ಸಿಲ್ಲಿ ಪ್ರಶ್ನೆ ಕೇಳಬೇಡಿ'' ಎಂದು ಬಾಯಿ ಹಾರಿಸಿಬಿಡುತ್ತಾರೆ.

ಹೌದು, ಇದೆಲ್ಲ ಈಗೇಕೆ ಎನ್ನುತ್ತೀರಾ? ಮೇಲಿನ ಎಲ್ಲ ಸಮಸ್ಯೆಗಳು ಬಗೆಹರಿದು ಅನಕ್ಷರತೆ ದೂರವಾಗಬೇಕಾದರೆ ಅಲ್ಲಿ ಮುಂದಾಳಾಗಿ ನಿಲ್ಲಬೇಕಾದವನೆ ಉಪಾಧ್ಯಾಯ. ಆತನೆ ಹಿಂದೆ ಹೇಳಿದ ಎಲ್ಲ ಸಮಸ್ಯೆಗಳ ಸಾಕಾರ ಮೂರ್ತಿ; ಮೂಲ ಬೀಜ, ತಾಯಿಬೇರು ಆದಲ್ಲಿ ಯಾವ ಸುಧಾರಣೆಯೂ ಹಿಂದುಳಿದವರ ವಿದ್ಯೋನ್ನತಿಗೆ ದಾರಿ ತೋರಲಾರದು. ಇದನ್ನು ಮನಗಂಡವರು ಈ ನಿಟ್ಟಿನಲ್ಲಿ ತೀವ್ರ ಕಾರ್ಯ ತತ್ಪರರಾದರೆ ಏನೋ ಅಲ್ಪಸ್ವಲ್ಪ ಪ್ರಗತಿ ಕಾಲಾನಂತರದಲ್ಲಿ ಕಂಡೀತೆಂದು ಆಶಿಸೋಣ.

------

● ಪಿ. ಎ. ಖಾದರ್
ಅಧ್ಯಕ್ಷರು,
ಕರ್ನಾಟಕ ಮುಸ್ಲಿಮ್ ಪ್ರಗತಿ ಪರಿಷತ್,
ಮಂಗಳೂರು.

# ಪಠ್ಯ ಪುಸ್ತಕಗಳಲ್ಲಿ ಆಕ್ಷೇಪಾರ್ಹ ಅಂಶಗಳು

ಜನಾಂಗವೊಂದರ ಯಶಸ್ಸಿನ ಮೂಲಕಾರಣವನ್ನು ಅದರ ಪ್ರಾಥಮಿಕ ಶಾಲೆಗಳ ಪಠ್ಯಪುಸ್ತಕಗಳಲ್ಲಿ ಹುಡುಕಬಹುದೆಂದು ಹೇಳುತ್ತಾರೆ. ಒಂದು ರಾಷ್ಟ್ರದ ಸಾಧನೆಯು ಮೂಲಭೂತವಾಗಿ ಅದರ ಜನತೆಯ ಬೌದ್ಧಿಕ-ನೈತಿಕ-ದೈಹಿಕ ಸಾಮರ್ಥ್ಯಗಳನ್ನು ಹೊಂದಿಕೊಂಡಿದೆ. ಶಾಲಾ ಶಿಕ್ಷಣವೇ ಈ ಸಾಮರ್ಥ್ಯಗಳಿಗೆ ಮೂಲ. ಶಿಕ್ಷಣದ ಮಹತ್ವದ ಭಾಗವಾದ ಪಠ್ಯ ಪುಸ್ತಕಗಳ ಗುಣಮಟ್ಟದ ಮೇಲೆ ಇಡೀ ರಾಷ್ಟ್ರದ ಭವಿಷ್ಯವು ಅಡಗಿದೆಯೆಂಬುದು ಇದರಿಂದ ವೇದ್ಯವಾಗುತ್ತದೆ.

ಆದರೆ ನಮ್ಮ ದೇಶದಲ್ಲಿ ಪಠ್ಯಗಳ ರಚನೆಯ ಕುರಿತು ಎಲ್ಲೆಡೆ ಅಸಡ್ಡೆಯು ಆವರಿಸಿದೆ. ಇದಕ್ಕೆ ಮೊದಲನೆಯ ಕಾರಣ ಪ್ರಾಥಮಿಕ ಶಿಕ್ಷಣದ ಕುರಿತು ಸರಕಾರದ ಹಾಗೂ ಸಾರ್ವಜನಿಕರ ದಿವ್ಯ ಅಲಕ್ಷ್ಯ. ಸುಮಾರು ಶೇಕಡಾ 5ರಷ್ಟಿರುವ ಶ್ರೀಮಂತ ವರ್ಗಗಳಿಗೆ ಆಂಗ್ಲ ಮಾಧ್ಯಮ ಶಾಲೆಗಳು ಲಭ್ಯವಿದ್ದರೆ, ಉಳಿದ 95% ಸಾಮಾನ್ಯ ಮಂದಿಗಿರುವ ಶಾಲೆಗಳು 'ಚಲ್ತೀಕಾನಾಮ್‌ಗಾಡಿ'ಯಂತೆ ನಡೆಯುತ್ತಿವೆ. ಹಾಗಾಗಿ ಕನ್ನಡ ಪಠ್ಯಪುಸ್ತಕಗಳ ಗತಿಯೂ ಹಾಗೇ ಇದೆ. ಎರಡನೆಯ ಕಾರಣ ಪಠ್ಯಗಳನ್ನು ಬರೆಯುವ ಮಹಾಶಯರಲ್ಲಿ ಕಂಡುಬರುವ ಪ್ರತಿಭೆಯ ಕೊರತೆ. ಲೇಖನಿ ಹಿಡಿಯಬಲ್ಲ ಯಾರಾದರೂ ಪಠ್ಯ ಪುಸ್ತಕಗಳನ್ನು ಬರೆಯಲು ಸಾಧ್ಯವೆಂಬ ಭ್ರಮೆ ನಮ್ಮಲ್ಲಿ ಬೆಳೆದು ಬಂದಿದೆ. ಇತರ ರಂಗಗಳಲ್ಲಿರುವಂತೆ, ಲಂಚ ರುಷುವತ್ತುಗಳೇ ಪಠ್ಯ ಲೇಖಕರ ಆಯ್ಕೆಯಲ್ಲಿಯೂ

ನಿರ್ಣಾಯಕವಾಗುತ್ತಿದೆ. ವಿದ್ಯಾರ್ಥಿಗಳ ಮನೋಭಾವವನ್ನು ಅರಿತುಕೊಂಡು ಅವರ ವೈಯಕ್ತಿಕ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸುವುದರೊಂದಿಗೆ ಸೂಕ್ತ ಸಾಮಾಜಿಕ ಮೌಲ್ಯಗಳನ್ನೂ ಅಳವಡಿಸಿಕೊಂಡು ಬರೆಯುವ ಜಾಣ್ಮೆ ಪಠ್ಯಲೇಖಕರಲ್ಲಿರಬೇಕಾಗಿದೆ. ಸೂಕ್ಷ್ಮವಾದ ಸಾಮಾಜಿಕ ಪ್ರಜ್ಞೆ, ರಾಷ್ಟ್ರದ ಭವಿಷ್ಯದ ಕುರಿತು ದೂರದೃಷ್ಟಿ ಇರಬೇಕಾಗಿದೆ. ಮೂರನೆಯ ಕಾರಣ, ಪಠ್ಯಗಳ ತಯಾರಿಯಲ್ಲಿ ಸರಕಾರದ ಅಥವಾ ರಾಜಕಾರಣಿಗಳ ಕೊಳಕು ಕೈವಾಡ. ಈಗಿನ ದುರವಸ್ಥೆಗೆ ಎಲ್ಲಕ್ಕಿಂ[illegible] ಮಿಗಿಲಾದ ಕಾರಣವೇನೆಂದರೆ, ಪಠ್ಯಪುಸ್ತಕಗಳ ಗುಣಮಟ್ಟದ ಬಗ್ಗೆ ನಮ್ಮ ಶಿಕ್ಷಕವೃಂದ[illegible] ರೌದ್ರ ಮೌನ! ಎಂತಹ ಕಳಪೆ ಪಠ್ಯಗಳ ಬಗ್ಗೆಯೂ ಪಿಟ್ಟೆನ್ನದೆ ಶಿರಸಾವಹಿಸಿ ಬೋಧಿಸುವ ನಮ್ಮ ಶಿಕ್ಷಕರೂ ಇದಕ್ಕೆ ಜವಾಬ್ದಾರರಾಗುತ್ತಾರೆ. ಅವರು ಸಾಮೂಹಿಕವಾಗಿ ತಮ್ಮ ಪ್ರತಿರೋಧವನ್ನು ವ್ಯಕ್ತಪಡಿಸಿದರೆ, ಸುಧಾರಣೆಗೆ ಬಲವಾದ ಚಾಲನಶಕ್ತಿ ದೊರೆಯುವುದು ಖಂಡಿತ.

ನಮ್ಮ ಪಠ್ಯಪುಸ್ತಕಗಳಲ್ಲಿ ಸದ್ಯ ಕಂಡುಬರುವ ಲೋಪದೋಷಗಳನ್ನು ಈ ಕೆಳಕಂಡಂತೆ ವಿಂಗಡಿಸಬಹುದು:

1. ವಿದ್ಯಾರ್ಥಿಗಳ ಬುದ್ಧಿಮಟ್ಟಕ್ಕೆ ಎಟಕಲಾರದ ವಿಷಯ ಮತ್ತು ಭಾಷಾಶೈಲಿ.
2. ಆಸಕ್ತಿ- ಅಭಿರುಚಿಯನ್ನು ಕೊಲ್ಲುವಂತಹ ನೀರಸ ನಿರೂಪಣೆ.
3. ಕೋಮು ಭಾವನೆಗಳನ್ನು ಮೂಡಿಸುವ ಉಲ್ಲೇಖಗಳು.
4. ಮೂಢನಂಬಿಕೆ ಸಂಪ್ರದಾಯ ಶರಣತೆಯನ್ನು ಪುಷ್ಟೀಕರಿಸುವ ಅಂಶಗಳು.

ವಿಷಯ ಮತ್ತು ಶೈಲಿ: ಶಿಕ್ಷಣದ ಮೂಲಭೂತ ಉದ್ದೇಶಗಳಲ್ಲಿ ನಿರ್ದಿಷ್ಟ ವಿಷಯದ ಜ್ಞಾನವನ್ನು ನೀಡುವುದು ಮೊದಲನೆಯದು. ಮಗುವಿಗೆ ಕೊಡುವ ಆಹಾರವು ಅದಕ್ಕೆ ಜೀರ್ಣಿಸಲು ಸಾಧ್ಯವಾಗುವಂತಿರಬೇಕು. ನಮ್ಮಲ್ಲಿರುವ ಅನೇಕ ಪಠ್ಯಗಳು ವಿದ್ಯಾರ್ಥಿಗಳಿಗೆ ಜ್ಞಾನ ದಾನ ಮಾಡುವ ಬದಲು ಬರೆದವರ ಜ್ಞಾನ ಭಂಡಾರವನ್ನು ಪ್ರದರ್ಶಿಸುವ ಉದ್ದೇಶದಿಂದ ಬರೆದಂತಿದೆ. ಅಂತಹ ಪಠ್ಯಗಳಲ್ಲಿ ಪ್ರಸ್ತಾಪಿಸಿರುವ ಮಾಹಿತಿಗಳು, ತತ್ವಗಳು, ಕಲ್ಪನೆಗಳು, ವಿಚಾರಗಳು ಎಳೆ ಮನಸ್ಸಿಗೆ ನಿಲುಕಲಾರದಷ್ಟು ಕ್ಲಿಷ್ಟವಾಗಿವೆ. ಪರಿಣಾಮವಾಗಿ, ವಿದ್ಯಾರ್ಥಿಗಳು ಒಂದೋ ಅವುಗಳನ್ನು ಕಂಠಪಾಠ ಮಾಡಿ ಪರೀಕ್ಷೆಯಲ್ಲಿ ಪಾಸಾಗುತ್ತಾರೆ; ಇಲ್ಲದಿದ್ದರೆ 'ಶಿಕ್ಷಣ'ವೆಂಬ ಶಿಕ್ಷೆಯನ್ನು ಬಿಟ್ಟೋಡುತ್ತಾರೆ. ಉದಾಹರಣೆಗೆ: ಮೂರನೆಯ ತರಗತಿಯ ವಿದ್ಯಾರ್ಥಿಗೆ - ರಾಷ್ಟ್ರದ ಸಂವಿಧಾನ, ದೇಶದ ವಿವಿಧ ಹಂತಗಳಲ್ಲಿರುವ ಆಡಳಿತ ವ್ಯವಸ್ಥೆ ಮುಂತಾದ ವಿಷಯಗಳನ್ನು ಗ್ರಹಿಸಿಕೊಳ್ಳುವುದು ಅಸಾಧ್ಯ ಮಾತ್ರವಲ್ಲದೆ ಈ ಮಜಲಿನಲ್ಲಿ ಅಪ್ರಸ್ತುತ. ಅದರ ಬದಲು ಮಕ್ಕಳ ಅನುಭವ ವ್ಯಾಪ್ತಿಯೊಳಗೆ, ಕಲ್ಪನಾಶಕ್ತಿಯೊಳಗೆ ಬರುವ ವಿಷಯಗಳ ಬುನಾದಿಯ ಮೇಲೆಯೇ ಪಠ್ಯಗಳನ್ನು ರಚಿಸುವ ಬುದ್ಧಿವಂತಿಕೆ ಇರಬೇಕು. ಇನ್ನು, ವಿಷಯ ಕಬ್ಬಿಣದ ಕಡಲೆಯಾದರೆ, ಅದನ್ನು

ಅಭಿವ್ಯಕ್ತಗೊಳಿಸಿದ ಭಾಷಾಶೈಲಿಯಂತೂ ಆ ಕಡಲೆಯನ್ನು ಕಹಿಬೇವಿನಲ್ಲಿ ಅದ್ದಿಕೊಟ್ಟಂತೆ ಇರುತ್ತದೆ. ದೊಡ್ಡ ದೊಡ್ಡ ಸಂಸ್ಕೃತ ಪದಗಳು, ಉಚ್ಚರಿಸಲಾಗದ ಸಂಧಿಪ್ರಯೋಗಗಳು, ಅಂಕುಡೊಂಕಾದ ವಾಕ್ಯಗಳು, ಅಸ್ಪಷ್ಟ ನಿರೂಪಣೆ, ಹಾಡಲಾಗದ ಹಾಡುಗಳು, ಬೇರೆಬೇರೆ ಪ್ರದೇಶಗಳ ಗ್ರಾಮ್ಯಭಾಷೆ- ಇವೇ ಮೊದಲಾದ ಅಡೆತಡೆಗಳು ಮಕ್ಕಳ ತೊಡಕನ್ನು ಹೆಚ್ಚಿಸಿ ಅವರು ತಮ್ಮ ಪಠ್ಯಪುಸ್ತಕಗಳನ್ನೇ ದ್ವೇಷಿಸುವಂತೆ ಮಾಡುತ್ತವೆ. 'ಶಿಕ್ಷಣದ ಉಚ್ಚಮಟ್ಟ'ವೆಂದರೆ 'ಪಠ್ಯಗಳ ಎಟಕಲಾರದ ಮಟ್ಟ'ವೆಂಬ ಭ್ರಮೆಯಿಂದ ನಾವೆಲ್ಲ ಮುಕ್ತರಾಗಬೇಕು.

ನಿರೂಪಣೆ: ಶಿಕ್ಷಣವೆಂದರೆ ಜ್ಞಾನವನ್ನು, ಮಾಹಿತಿಗಳನ್ನು ಮಕ್ಕಳ ತಲೆಯೊಳಗೆ ತುರುಕಿಸುವುದಲ್ಲ. ಅದರಿಂದ ನಿಜವಾದ ಜ್ಞಾನೋದಯವಾಗಲು ಸಾಧ್ಯವೂ ಇಲ್ಲ. ಅವರಲ್ಲಿ ಕುತೂಹಲವನ್ನು ಕೆರಳಿಸಿ, ಇನ್ನಷ್ಟು ಅನ್ವೇಷಿಸುವ ಆಲೋಚಿಸುವ ಸ್ಫೂರ್ತಿಯನ್ನು ಪ್ರಚೋದಿಸಿದರೆ ಮಾತ್ರ ವಿದ್ಯೆಯು ಸೃಜನ ಶೀಲವಾಗಬಹುದು. ವಿದ್ಯಾರ್ಥಿಗಳ ಮನಸ್ಸಿನಲ್ಲಿ ಆಸಕ್ತಿಯನ್ನಾಗಲಿ, ಅಭಿರುಚಿಯನ್ನಾಗಲಿ ಉಂಟುಮಾಡದ ಶಿಕ್ಷಣ ನಿರರ್ಥಕವೆಂದೇ ಹೇಳಬಹುದು. ಪಠ್ಯಗಳನ್ನು ಕಲಿಸುವ ಉಪಾಧ್ಯಾಯರು ಸ್ವತಃ ತಮ್ಮ ಕೌಶಲ್ಯವನ್ನು ಉಪಯೋಗಿಸಿಕೊಂಡು, ಆಸಕ್ತಿಯನ್ನುಂಟುಮಾಡುವ ರೀತಿಯಲ್ಲಿ ಪಾಠಗಳನ್ನು ಕಲಿಸಬೇಕೆಂಬುದು ನಿಜ. ಆದರೆ ಪಠ್ಯಪುಸ್ತಕಗಳ ಸ್ವರೂಪ, ನಿರೂಪಣೆಗಳು ಅನೇಕಸಲ ಅವರನ್ನು ಅಸಹಾಯಕರನ್ನಾಗಿ ಮಾಡುತ್ತವೆ. ಪಠ್ಯಗಳನ್ನು ಬರೆಯುವವರೂ ವಿಷಯ ನಿರೂಪಣೆಯನ್ನು ಈ ನಿಟ್ಟಿನಲ್ಲಿ ಮಾಡಿದರೆ ಉಪಾಧ್ಯಾಯರ ಕೆಲಸ ಸುಲಭವಾಗುತ್ತದೆ. ಪ್ರತಿಯೊಂದು ಪಾಠವನ್ನು ಹೇಗೆ, ಯಾವ ಸಲಕರಣೆಗಳನ್ನು ಹಾಗೂ ಪ್ರಯೋಗಗಳನ್ನು ಉಪಯೋಗಿಸಿ ಕಲಿಸಬಹುದೆಂಬ ಸ್ಥೂಲ ಸೂಚನೆಗಳನ್ನು ಪಠ್ಯಪುಸ್ತಕದಲ್ಲಿಯೇ ಕೊಡುವುದು ತುಂಬ ಉಪಯುಕ್ತ.

ಕೋಮುವಾದ: ನಮ್ಮ ಪಠ್ಯಪುಸ್ತಕಗಳಲ್ಲಿರುವ ಅತ್ಯಂತ ಕಳವಳಕಾರಿ ಅಂಶವೇನೆಂದರೆ ಎಳೆಯರ ಎದೆಯಲ್ಲಿ ಕೋಮುಭಾವನೆಯನ್ನು ಮೂಡಿಸುವ ವಿಷ(ಯ)ಗಳು. ಈ ಕೋಮುವಾದವು ಅನೇಕ ರೂಪಗಳಲ್ಲಿ ವ್ಯಕ್ತವಾಗುತ್ತಿದೆ. ಭಾರತ ದೇಶದ 'ಇತಿಹಾಸ'ದ ಹೆಸರಿನಲ್ಲಿ ಅನೇಕ ಕಟ್ಟುಕತೆಗಳು ಪಠ್ಯಪುಸ್ತಕಗಳಲ್ಲಿ ನುಸುಳಿಕೊಂಡಿವೆ. ಇವುಗಳಲ್ಲಿ ಕೆಲವನ್ನು ಬ್ರಿಟಿಷ್ ಇತಿಹಾಸಕಾರರಿಂದ ಎರವಲು ಪಡೆದಿದ್ದರೆ, ಉಳಿದವುಗಳು ನಮ್ಮ 'ಇತಿಹಾಸಕಾರ'ರೇ ತಮ್ಮ ಸೃಜನಾಶಕ್ತಿಯನ್ನು ಉಪಯೋಗಿಸಿಕೊಂಡು ಸೃಷ್ಟಿಸಿರುವ 'ಒನಕೆ ಓಬವ್ವ' ನಂತಹ ಕತೆಗಳು. ಉದಾಹರಣೆಗೆ, ಮಧ್ಯಕಾಲೀನ ಯುಗದಲ್ಲಿ (ಇದನ್ನು 'ಮುಸ್ಲಿಮ್ ಯುಗ'ವೆಂದು ತಪ್ಪಾಗಿ ಕರೆಯಲಾಗುತ್ತಿದೆ; ಬ್ರಿಟಿಷರ ಕಾಲವನ್ನು ನಾವು 'ಕ್ರೈಸ್ತಯುಗ' ವೆಂದು ಕರೆಯುತ್ತಿಲ್ಲವಲ್ಲ?) ಕೆಲವು ಮುಸ್ಲಿಮ್ ದಾಳಿಕೋರರು ಅಥವಾ

ರಾಜರು ನಡೆಸಿದರೆನ್ನಲಾದ ದಬ್ಬಾಳಿಕೆಯನ್ನು ಎತ್ತಿ ತೋರಿಸಲಾಗುತ್ತದೆ. ಆದರೆ ಆ ಕಾಲದಲ್ಲಿ ಇತರ ಮತಪಂಥಗಳಿಗೆ ಸೇರಿದ ಆಕ್ರಮಣಕಾರರೂ ಸಹ ಅದೇ ರೀತಿಯಾಗಿ ವರ್ತಿಸುತ್ತಿದ್ದರೆಂಬ ಅಂಶವನ್ನೂ, ಅದು ಆಗಿನ ಕಾಲದ ಸಾಮಾನ್ಯ ಸಂಗತಿಯೆಂಬ ಸತ್ಯವನ್ನೂ ಬಚ್ಚಿಡಲಾಗುತ್ತಿದೆ. ಆರ್ಯರೂ ಸಹ ಭಾರತಕ್ಕೆ ದಾಳಿ ಮಾಡಿದಾಗ ಇಲ್ಲಿನ ದ್ರಾವಿಡರನ್ನೂ, ಅವರ ಸಂಸ್ಕೃತಿಯನ್ನೂ ದಮನಿಸಿದರೆಂಬುದನ್ನು ಪಠ್ಯಪುಸ್ತಕಗಳಲ್ಲಿ ತಿಳಿಸಲಾಗುತ್ತಿದೆಯೆ? ಕೆಲ ಹಿಂದೂ ರಾಜರು ಬೌದ್ಧ ಜೈನ ದೇವಾಲಯಗಳನ್ನು ಕೆಡವಿದರು ಅಥವಾ ಹಿಂದೂ ದೇವಾಲಯಗಳಾಗಿ ಪರಿವರ್ತಿಸಿದರು ಎಂಬ ಅಂಶ ಎಲ್ಲಿ ಪ್ರಕಟವಾಗಿದೆ? ಹಿಂದಿನ ಕಾಲದ ವರ್ತನೆಗಳನ್ನು ಇಂದಿನ ಮೌಲ್ಯಗಳ ಅಳತೆಗೋಲಿನಲ್ಲಿ ತೀರ್ಮಾನಿಸುವುದು ಮೂರ್ಖತನ. ಇದಕ್ಕಿಂತ ಖಂಡನಾರ್ಹ ಸಂಗತಿಯೆಂದರೆ ಈ ಕತೆಗಳಲ್ಲಿ ಹೆಚ್ಚಿನವು ಅಪ್ಪಟ ಸುಳ್ಳುಗಳ ಕಂತೆಯಾಗಿರುವುದು ಅಥವಾ ಅತಿರಂಜಿತವಾಗಿರುವುದು. ಮುಸ್ಲಿಮ್ ರಾಜರುಗಳಲ್ಲಿ ಹೆಚ್ಚಿನವರು ಧರ್ಮಸಹಿಷ್ಣುಗಳಾಗಿದ್ದರು; ತಮ್ಮ ಬಹುಸಂಖ್ಯಾತ ಹಿಂದುಪ್ರಜೆಗಳನ್ನು ಸಂತುಷ್ಟರನ್ನಾಗಿಡುವ ಜಾಣ ಧೋರಣೆಗಳನ್ನು ಅನುಸರಿಸುತ್ತಿದ್ದರು. ಅಷ್ಟೇ ಏಕೆ, ರಾಜ್ಯಾಡಳಿತ ನಡೆಸಲು ಅವರು ಹಿಂದೂ ಪಾಳೆಯಗಾರರನ್ನೂ, ಅಧಿಕಾರಿಗಳನ್ನೂ, ಯುದ್ಧಮಾಡಲು ಹಿಂದೂ ಸೇನಾಧಿಕಾರಿಗಳನ್ನೂ, ಸೈನಿಕರನ್ನೂ ನೇಮಿಸುತ್ತಿದ್ದರು. ಈ ಎಲ್ಲ ಸತ್ಯಾಂಶಗಳನ್ನು ಕಡೆಗಣಿಸುವುದರ ಉದ್ದೇಶವೆಂದರೆ "Suppressio veri, suggestio falsi" ಎಂಬ ನುಡಿಯಂತೆ 'ಸತ್ಯವನ್ನು ಅಡಗಿಸಿ ಮಿಥ್ಯವನ್ನು ಸೂಚಿಸುವ, ಕುತಂತ್ರವೇ ಆಗಿದೆ.

ಮಧ್ಯಕಾಲೀನ ಯುಗದಲ್ಲಿ ಈ ದೇಶವನ್ನು ಆಕ್ರಮಿಸಿ ರಾಜ್ಯವಾಳಿದವರು ಇಸ್ಲಾಮ್ ಧರ್ಮದ ಸ್ಥಾಪನೆಗಾಗಿ ಹಾಗೆ ಮಾಡಿರಲಿಲ್ಲ. ಹಾಗಾಗಿದ್ದರೆ ಆರೇಳು ಶತಮಾನಗಳ ಅವಧಿಯಲ್ಲಿ ಈ ದೇಶದ ಶೇಕಡಾ 80ಕ್ಕಿಂತ ಹೆಚ್ಚು ಮಂದಿ ಹಿಂದುಗಳಾಗಿ ಉಳಿಯಲು ಮತ್ತು ಲಕ್ಷಾಂತರ ಹಿಂದೂ ದೇವಾಲಯಗಳು ಉಳಿದುಕೊಳ್ಳಲು ಸಾಧ್ಯವಾಗುತ್ತಿತ್ತೆ? ಈ ಮುಸ್ಲಿಮ್ ರಾಜರು - ಇತರ 'ಪರಾಕ್ರಮಿ'ಗಳಂತೆ - ತಮ್ಮ ಆರ್ಥಿಕ - ರಾಜಕೀಯ ಆಕಾಂಕ್ಷೆಗಳನ್ನು ತಣಿಸಿಕೊಳ್ಳಲು ಹವಣಿಸಿದರೇ ಹೊರತು ಧಾರ್ಮಿಕ ಉದ್ದೇಶದಿಂದ ಕಾರ್ಯಪ್ರವೃತ್ತರಾಗಿರಲಿಲ್ಲ. ಕೆಲವೊಂದು ವೇಳೆ ಈ ಮಂದಿ ತಮ್ಮ ಸ್ವಾರ್ಥ ಸಾಧನೆಗಾಗಿ ಧರ್ಮದ ಸೋಗನ್ನು ಹಾಕಿಕೊಂಡಿರಬಹುದಷ್ಟೆ. ಇನ್ನೊಂದು ವಾಸ್ತವಾಂಶವೇನೆಂದರೆ, ಭಾರತದ ಸುಮಾರು 90% ಮುಸ್ಲಿಮರು ಹಿಂದೂ ನಿಮ್ನಜಾತಿಗಳಿಂದ ಮತಾಂತರಗೊಂಡವರು. ತಥಾ ಕಥಿತ 'ಮುಸ್ಲಿಮ್‌ಯುಗ'ದಲ್ಲಿ ಸಹ ಸಾಮಾನ್ಯ ಮುಸ್ಲಿಮ್ ವರ್ಗಗಳ ಆರ್ಥಿಕ-ರಾಜಕೀಯ ಪರಿಸ್ಥಿತಿಯು ಇಂದಿನಂತೆಯೇ ನಿಕೃಷ್ಟವಾಗಿತ್ತು. ಈ ವಾಸ್ತವಾಂಶವನ್ನು ಕಡೆಗಣಿಸಿ ನಮ್ಮ ಕೆಲ ಲೇಖಕರು ಮುಸ್ಲಿಮರೆಲ್ಲರೂ ಹಿಂದೆ ಹಿಂದುಗಳ

ಮೇಲೆ ದಬ್ಬಾಳಿಕೆ ನಡೆಸುತ್ತಿದ್ದವರೆಂದು ಅರ್ಥ ಬರುವಂತೆ ಬರೆಯುತ್ತಿರುವುದು ದುರದೃಷ್ಟಕರ.

ದೇಶದ ಭವಿಷ್ಯದ ದೃಷ್ಟಿಯಿಂದ ಪಠ್ಯಪುಸ್ತಕಗಳಿಂದ ಕೋಮುವಾದಿ ಅಂಶಗಳನ್ನು ಕಿತ್ತೊಗೆಯುವುದು ಅತ್ಯಗತ್ಯ. ಇಲ್ಲದಿದ್ದರೆ ನಮ್ಮ ರಾಷ್ಟ್ರ, ನಮ್ಮ ಸಮಾಜ ದೊಂಬಿ ಹಿಂಸೆಗಳಿಂದ ವಿಘಟನೆಯ ದವಡೆಯಿಂದ ಎಂದೆಂದಿಗೂ ಬಿಡುಗಡೆಗೊಳ್ಳಲಾರದು.

**ಮೂಢನಂಬಿಕೆಗಳು:-** ಧರ್ಮದ ಹೆಸರಿನಲ್ಲಿ, ಸಂಸ್ಕೃತಿಯ ಹೆಸರಿನಲ್ಲಿ ಅನೇಕ ಅನುಚಿತ ಭಾವನೆಗಳನ್ನು ನಮ್ಮ ಪಠ್ಯಗಳಲ್ಲಿ ಸೇರಿಸಲಾಗಿದೆ. ದೈವಿಕತೆ, ಪವಿತ್ರತೆ, ಅದೃಷ್ಟ, ವಿಧಿ, ಹರಕೆ, ಮಂತ್ರ, ಮಾಟ, ಹೋಮಯಾಗ, ತಂತ್ರ, ಜ್ಯೋತಿಷ್ಯ, ಪವಾಡಗಳು, ಭೂತಪಿಶಾಚಿಗಳು, ಅತಿಮಾನವರು ಎಂಬಿತ್ಯಾದಿ ವಿಷಯಗಳನ್ನು ಅವೈಜ್ಞಾನಿಕ ರೀತಿಯಲ್ಲಿ ನಿರೂಪಿಸಲಾಗಿದೆ. ಮಾತ್ರವಲ್ಲದೆ ಕಾಲಬಾಧಿತವಾದ ಸನಾತನ ಸಾಮಾಜಿಕ ಮೌಲ್ಯಗಳನ್ನು ವೈಭವೀಕರಿಸಲಾಗುತ್ತಿದೆ. ಉದಾಹರಣೆಗೆ: ಸ್ತ್ರೀ-ಪುರುಷ, ಹೆತ್ತವರು-ಮಕ್ಕಳು, ಗುರು-ಶಿಷ್ಯ, ಯಜಮಾನ-ಸೇವಕ ಇವೇ ಮೊದಲಾದ ಸಾಮಾಜಿಕ ಸಂಬಂಧಗಳಲ್ಲಿ ಈಗ ಹೆಚ್ಚಿನ ಸಮಾನತೆ ನೆಲೆಯಲ್ಲಿ ಆರೋಗ್ಯಕರ ಬದಲಾವಣೆಗಳು ಆಗಿದ್ದರೂ, ನಮ್ಮ ಪಠ್ಯಗಳಲ್ಲಿ ಅವು ಪ್ರತಿಬಿಂಬಿತವಾಗಿಲ್ಲ. ಇದು ವಿದ್ಯಾರ್ಥಿಗಳ ಬೌದ್ಧಿಕ - ವೈಚಾರಿಕ ಬೆಳವಣಿಗೆಯ ಮೇಲೂ, ಸಾಮಾಜಿಕ ಸಂಬಂಧಗಳ ಮೇಲೂ ದುಷ್ಪರಿಣಾಮವನ್ನುಂಟು ಮಾಡಬಹುದು. ಎಲ್ಲ ಹಳೆಯ ಮೌಲ್ಯಗಳನ್ನೂ, ಸಂಪ್ರದಾಯಗಳನ್ನೂ ತೊಡೆದು ಹಾಕಬೇಕೆಂದು ಇದರ ಅರ್ಥವಲ್ಲ. ಒಳ್ಳೆಯ ಅಂಶಗಳನ್ನು ಕಾಪಾಡಿಕೊಂಡು, ಮಿಥ್ಯ, ಅವೈಜ್ಞಾನಿಕ, ಅನುಚಿತ ಹಾಗೂ ಹಾನಿಕಾರಕವಾದ ನಂಬಿಕೆಗಳನ್ನೂ, ಮೌಲ್ಯಗಳನ್ನೂ ಹೋಗಲಾಡಿಸಬೇಕೆಂಬುದೇ ಇದರ ಇರಾದೆ. ಅಂಧವಿಶ್ವಾಸಗಳನ್ನು, ಕಂದಾಚಾರಗಳನ್ನು ಹುರಿದುಂಬಿಸುವುದರಿಂದ ನಮ್ಮ ಪ್ರಗತಿಯು ಕುಂಠಿತವಾಗುತ್ತದೆ. ಎಳೆಯರಲ್ಲಿ ಆಧುನಿಕ, ವೈಜ್ಞಾನಿಕ ಮನೋಭಾವವು ಬೆಳೆಯದಿದ್ದರೆ ದೇಶದ ಆರ್ಥಿಕ-ಸಾಮಾಜಕ-ರಾಜಕೀಯ ವಿಕಸನವು ನಿಂತುಹೋಗಿ ಅಧಃಪತನಕ್ಕೆ ಹಾದಿಯಾಗುತ್ತದೆ.

'ಸಂಸ್ಕೃತಿ' ಎಂದರೆ ಪುರಾತನ ಸಂಪ್ರದಾಯಗಳು ಹಾಗೂ ಸನಾತನ ಮೌಲ್ಯಗಳು ಎಂಬ ತಪ್ಪು ಕಲ್ಪನೆಯು ಸಾಮಾನ್ಯವಾಗಿದೆ. ಅದರಲ್ಲಿಯೂ ಬಹುಸಂಖ್ಯಾತ ಕೋಮಿಗೆ ಸೇರಿದ ಮೇಲ್ಜಾತಿಗಳ ಪದ್ಧತಿಗಳೇ 'ಪರಿಶುದ್ಧಸಂಸ್ಕೃತಿ'ಯೆಂಬ ಭಾವನೆಯುನ್ನು ಸೃಷ್ಟಿಸಲಾಗಿದೆ. ಆದರೆ ನಿಜಾಂಶವೇನೆಂದರೆ, ಸಂಸ್ಕೃತಿಯೆಂಬುದು ಸತ್ತ ಪಳೆಯುಳಿಕೆಯಲ್ಲ; ನಿಂತನೀರಲ್ಲ; ಸಾಮಾಜಿಕ ವಿಘಟನೆಯ ಸಾಧನವೂ ಅಲ್ಲ. ಅದು ಒಂದು ಜೀವಂತ, ನಿರಂತರ ಬೆಳೆಯುತ್ತಿರುವ, ಮಾನವ ಕೋಟಿಯನ್ನು ಒಂದುಗೂಡಿಸುವ ಪ್ರಗತಿಪ್ರವಾಹ. ಮಾನವೀಯ ಮೌಲ್ಯಗಳೇ ಅದರ ಜೀವಾಳ; ಸತ್ಯಶೋಧನೆಯೇ ಅದರ ಉದ್ದೇಶ. ಮಾನವೀಯತೆ ಮತ್ತು ವೈಚಾರಿಕತೆಗಳು ಅದರಿಂದ ಕಾಣೆಯಾದರೆ ಅದು ಅಸಂಸ್ಕೃತ, ಅನಾಗರಿಕ

ಸಂಪ್ರದಾಯವಾಗಿಯೇ ಉಳಿಯುತ್ತದೆ. ಭಾರತೀಯ ಸಂಸ್ಕೃತಿಯೆಂದರೆ ಈ ದೇಶದ ಪುರಾತನ ಧರ್ಮವಲ್ಲ; ಮಧ್ಯಕಾಲೀನ ಇಸ್ಲಾಮಿಕ ಸಂಪ್ರದಾಯವೂ ಅಲ್ಲ; ಆಮೇಲೆ ಬಂದ ಪಾಶ್ಚಾತ್ಯ ನಾಗರಿಕತೆಯೂ ಅಲ್ಲ. ಭಾರತೀಯ ಸಂಸ್ಕೃತಿಯೆಂದರೆ ಇಂದು ಚಾಲ್ತಿಯಲ್ಲಿರುವ ನಮ್ಮ ಆಧುನಿಕ ಸಂಸ್ಕೃತಿ. ಅದು ಮೇಲೆ ಹೇಳಿದ ಎಲ್ಲ ಪರಂಪರೆಗಳನ್ನೂ ಅರಗಿಸಿಕೊಂಡು ಉದ್ಭವಿಸಿದ ಒಂದು ಹೊಸ ಸೃಷ್ಟಿ. ಇದು ಸುಂದರವಾಗಿದ್ದರೂ ದೋಷರಹಿತವಾಗಿಲ್ಲ. ಈ ಸಂಸ್ಕೃತಿ ಇನ್ನೂ ಬೆಳೆಯಬೇಕಾಗಿದೆ, ಪ್ರಬುದ್ಧಗೊಳ್ಳಬೇಕಾಗಿದೆ. ವಿವಿಧ ಬಣ್ಣಗಳ ಹೂಗಳಿಂದ ಕಂಗೊಳಿಸುವ ಈ ಹೂದೋಟದಲ್ಲಿ ಅನೇಕ ಕಳೆಗಳೂ ಹುಟ್ಟಿಕೊಂಡಿವೆ. ಅವುಗಳು ವಿಷವೃಕ್ಷಗಳಾಗಿ ಬೆಳೆಯುವ ಮೊದಲೇ ಕಿತ್ತೊಗೆಯಬೇಕು. ಮತ್ತು ಈ ಹೂದೋಟಕ್ಕೆ ಮಾನವೀಯತೆಯ, ವೈಚಾರಿಕತೆಯ ನೀರನ್ನು ಒದಗಿಸಬೇಕು. ಆಗ ಅದು ಪ್ರಪಂಚದ ಅತ್ಯಂತ ಅದ್ಭುತ ಸಂಸ್ಕೃತಿಗಳಲ್ಲಿ ಒಂದಾಗಿ ಅರಳಬಹುದು. ಇಲ್ಲದಿದ್ದರೆ ಕೋಮುವಾದ, ಜಾತೀಯತೆ, ಅಂಧವಿಶ್ವಾಸ ಮುಂತಾದ ವಿಷವೃಕ್ಷಗಳು ಅದನ್ನು ಆಕ್ರಮಿಸಿಕೊಳ್ಳಬಹುದು. ಪರಿಣಾಮವಾಗಿ ನಮ್ಮ ಸಮಾಜವು ಆಂತರಿಕ ವಿಘಟನೆಗಳಿಗೆ ತುತ್ತಾಗಿ ವಿನಾಶಗೊಳ್ಳಬಹುದು. ಗತಕಾಲದ ಜಗತ್ತಿನ ಕೆಲವು ಜನಾಂಗಗಳಿಗೆ ಒದಗಿದ ಗತಿಯಂತೆ, ಭಾರತದ ಇತಿಹಾಸವೂ ಒಂದು ದುರಂತ ಕತೆಯಾಗಿ ಕೊನೆಗೊಳ್ಳಬಹುದು.

ನಮ್ಮ ಪಠ್ಯಪುಸ್ತಕಗಳಲ್ಲಿ ಆಕ್ಷೇಪಾರ್ಹ ಅಂಶಗಳು ಇಲ್ಲದಂತೆ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದು ಎಂಬ ಕುರಿತು ಕೆಲವು ಸೂಚನೆಗಳನ್ನು ಇಲ್ಲಿ ಕೊಡಬಹುದು:

1. ಸದ್ಯ ಚಾಲ್ತಿಯಲ್ಲಿರುವ ಎಲ್ಲ ಪಠ್ಯಪುಸ್ತಕಗಳನ್ನು ಸಂಶೋಧಿಸಿ ಅವುಗಳಲ್ಲಿ ನುಸುಳಿರುವ ಅಸಂಗತ, ಕೋಮುವಾದಿ ಹಾಗೂ ಮೂಢನಂಬಿಕೆಗಳ ಅಂಶಗಳನ್ನು ತೊಡೆದು ಹಾಕಬೇಕು ಮತ್ತು ಮಕ್ಕಳ ಮನಶ್ಶಾಸ್ತ್ರಕ್ಕನುಸಾರವಾಗಿ ಅವುಗಳ ವಿಷಯದಲ್ಲಿಯೂ, ನಿರೂಪಣೆಯ ವಿಧಾನದಲ್ಲಿಯೂ ಪರಿಷ್ಕರಣೆ ಮಾಡಬೇಕು. ಇದಕ್ಕೋಸ್ಕರ ಪ್ರಗತಿಶೀಲ ವಿದ್ವಾಂಸರ ಸಮಿತಿಯೊಂದನ್ನು ಸರಕಾರವು ನೇಮಿಸಬೇಕು. ಈ ಸಮಿತಿಯು ತನ್ನ ಸ್ವಂತ ಸಂಶೋಧನೆಯ ಮೂಲಕವೂ, ಶಿಕ್ಷಕ ವೃಂದದಿಂದ - ಸಾರ್ವಜನಿಕರಿಂದ ಆಹ್ವಾನಿಸಲ್ಪಟ್ಟ ಸೂಚನೆಗಳ ಮೂಲಕವೂ ಪರಿಷ್ಕರಣೆಯ ವಿವರಗಳನ್ನು ಗುರುತಿಸಬೇಕು.

2. ಪಠ್ಯಗಳನ್ನು ಬರೆಯಲು ಅರ್ಹತೆಯುಳ್ಳ ಲೇಖಕರನ್ನು ಮಾತ್ರ ಆರಿಸಬೇಕು. ಅಂತಹ ಆರಿಸುವಿಕೆಗೆ ಧೀಮಂತ ಮಂದಿಯ ಸ್ವತಂತ್ರ ಮಂಡಲಿಯೊಂದನ್ನು ರಚಿಸಬೇಕು. ಆರಿಸಲ್ಪಡುವ ಲೇಖಕರಲ್ಲಿ ಪ್ರಗತಿಶೀಲತೆ, ವೈಜ್ಞಾನಿಕ ಮನೋಭಾವ, ಜಾತ್ಯಾತೀತತೆ ಹಾಗೂ ಮಾನವೀಯ ಗುಣಗಳಿರಬೇಕು ಮಾತ್ರವಲ್ಲದೆ ಸಾಹಿತ್ಯಿಕ ಪ್ರತಿಭೆಯೂ ಶೈಕ್ಷಣಿಕ

ಮನಃಶಾಸ್ತ್ರದ ಅರಿವೂ ಇರಬೇಕು.

3. ಪಠ್ಯಪುಸ್ತಕಗಳ ರಚನೆ ಸಂಬಂಧ ನೇಮಿಸಲಾಗುವ ಎಲ್ಲ ಸಮಿತಿ ಮಂಡಲಿಗಳಲ್ಲಿ ಸಮಾಜದ ವಿವಿಧ ವರ್ಗಗಳಿಗೆ - ಅದರಲ್ಲೂ ಅಲ್ಪಸಂಖ್ಯಾತರಿಗೆ ಮತ್ತು ದಲಿತವರ್ಗಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡಬೇಕು.

4. ಪಠ್ಯಗಳನ್ನು ಬರೆಯುವವರು ಬೇರೆ ಬೇರೆ ದೇಶಗಳಲ್ಲಿ ಅದರಲ್ಲೂ ಮುಂದುವರಿದ ದೇಶಗಳಲ್ಲಿ ಉಪಯೋಗಿಸಲ್ಪಡುವ ಪಠ್ಯಪುಸ್ತಕಗಳನ್ನು ಅಭ್ಯಸಿಸಿ ಅವುಗಳಲ್ಲಿರುವ ಉತ್ತಮ ಗುಣಗಳನ್ನು ತಮ್ಮ ಕೃತಿಗಳಲ್ಲಿ ಸೂಕ್ತವಾಗಿ ಅಳವಡಿಸಲು ಪ್ರಯತ್ನಿಸಬೇಕು. ಅವುಗಳಲ್ಲಿನ ವಿಷಯವಸ್ತುಗಳು, ನಿರೂಪಣೆ, ವಿನ್ಯಾಸ ಹಾಗೂ ವಿಧಾನಗಳಿಂದ ನಾವು ಕಲಿಯಬೇಕಾದ ಅಂಶಗಳು ಧಾರಾಳವಿರಬಹುದು.

5. ಪಠ್ಯ ಪುಸ್ತಕಗಳ ರಚನೆಯಲ್ಲಿ ಪ್ರತಿಭಾನ್ವಿತ ಉಪಾಧ್ಯಾಯರುಗಳಿಗೆ ಸಿಂಹಪಾಲು ಕೊಡತಕ್ಕದ್ದು. ಅವುಗಳ ತಯಾರಿಯ ಪ್ರತಿಯೊಂದು ಹಂತದಲ್ಲಿಯೂ ಶಿಕ್ಷಕರ ಸಹಭಾಗಿತ್ವಕ್ಕೆ ಅವಕಾಶವಿರಬೇಕು. ಅವರ ಸಲಹೆಗಳನ್ನು ಗೌರವಿಸಬೇಕು.

ನಮ್ಮ ದೇಶ ಹಾಗೂ ಸಮಾಜ ಇಂದು ಕವಲು ದಾರಿಯಲ್ಲಿ ನಿಂತಿದೆ. ಅದರ ಮುಂದಿರುವ ಒಂದು ದಾರಿಯು ಶಾಂತಿ, ಸೌಹಾರ್ದ ಮತ್ತು ಪ್ರಗತಿಯೆಡೆಗೆ ಹೋದರೆ ಇನ್ನೊಂದು ಕ್ಷೋಭೆ, ಹಿಂಸೆ ಮತ್ತು ಸಾರ್ವತ್ರಿಕ ಅಧಃಪತನಕ್ಕೆ ಒಯ್ಯುತ್ತದೆ. ನಾವು ಮೊದಲನೆಯ ದಾರಿಯಲ್ಲಿ ಮುಂದುವರಿಯಬೇಕಾದರೆ ಮುಂದಿನ ಜನಾಂಗವಾದ ನಮ್ಮ ಇಂದಿನ ಮಕ್ಕಳಲ್ಲಿ ಒಳ್ಳೆಯ ಮೌಲ್ಯಗಳ ಬೀಜಗಳನ್ನು ಬಿತ್ತಬೇಕು. ಆ ದಿಸೆಯಲ್ಲಿ ತೆಗೆದುಕೊಳ್ಳಬೇಕಾದ ಮೊದಲ ಹೆಜ್ಜೆಯೇನೆಂದರೆ ಶಾಲಾಪಠ್ಯ ಪುಸ್ತಕಗಳಲ್ಲಿರುವ ಲೋಪದೋಷಗಳನ್ನು ನಿವಾರಿಸಿ ಉತ್ತಮ ಮೌಲ್ಯಗಳಿಂದ ಅವುಗಳನ್ನು ತುಂಬುವುದೇ ಆಗಿದೆ. ನಮ್ಮ ಘನ ಸರಕಾರ ಹಾಗೂ ಸಂಬಂಧಪಟ್ಟ ಇತರ ಮಹನೀಯರು ಇನ್ನಾದರೂ ಈ ರಾಷ್ಟ್ರೀಯ ಹೊಣೆಗಾರಿಕೆಯೆಡೆಗೆ ಗಮನಹರಿಸುವರೆಂದು ಹಾರೈಸಬಹುದೆ?

------

● ಡಾ. ಆರ್ಕೆ
118 ಎ.ಐ.ಜಿ.,
ಹುಡ್ಕೊ, ಮಣಿಪಾಲ - 576 119.

# ಶೈಕ್ಷಣಿಕ ಸಂಸ್ಥೆಗಳಲ್ಲಿ ಕೋಮುವಾದದ ಪ್ರಭಾವ

ಕೋಮುವಾದಕ್ಕೆ ಧಾರ್ಮಿಕ ಮುಖವಾಡವಿದ್ದರೂ ಅದು ಸಾಮಾನ್ಯವಾಗಿ ವ್ಯಕ್ತವಾಗುವ ರೀತಿಯನ್ನು ಗಮನಿಸಿದರೆ ಅದೊಂದು ಧಾರ್ಮಿಕೇತರ ವಿದ್ಯಮಾನ ಎನಿಸುತ್ತದೆ. ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿನ ವಿಶೇಷ ಸವಲತ್ತು ಮತ್ತು ಅಧಿಕಾರಗಳಿಗಾಗಿ ಜರುಗುವ ವಿಶಿಷ್ಟ ಪೈಪೋಟಿಯ ಒಂದು ಮಾದರಿಯಿದು. ಕೋಮುಗಲಭೆಗಳು ಹೆಚ್ಚಾಗಿ ಕೈಗಾರಿಕಾ ಪ್ರದೇಶಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಅರ್ಥಪೂರ್ಣತೆಯನ್ನು ಈ ಹಿನ್ನೆಲೆಯಲ್ಲಿ ವಿಚಾರಮಾಡಬೇಕು. ಈಚಿನ ದಿನಗಳಲ್ಲಿ ಕೋಮುಗಲಭೆಗಳು ಕೈಗಾರಿಕಾಪ್ರದೇಶಗಳಲ್ಲದೆ ನಗರೀಕರಣಕ್ಕೊಳಗಾಗುತ್ತಿರುವ ಗ್ರಾಮೀಣ ಪರಿಸರಗಳಿಗೂ ಹರಡಿಕೊಳ್ಳುತ್ತಿರುವುದನ್ನು ಗಮನಿಸಿದರೆ ಈ ಪೈಪೋಟಿಯು ಒಂದು ತೀವ್ರ ಸಿದ್ಧಾಂತವಾಗಿ ಮುಂದೊತ್ತಲ್ಪಡುತ್ತಿರುವ ಬಗೆಯನ್ನು ಕಡೆಗಣಿಸುವಂತಿಲ್ಲ. ಎಪ್ಪತ್ತರ ದಶಕಕ್ಕೆ ಹೋಲಿಸಿದರೆ ಎಂಬತ್ತರ ದಶಕದಲ್ಲಿ ಉ. ಭಾರತದ ಪ್ರಮುಖ ಕೈಗಾರಿಕಾ ಪ್ರದೇಶಗಳಲ್ಲಿ ದುಡಿಯುವ ವರ್ಗದ ಮುಸ್ಲಿಮರ ಸಂಖ್ಯೆ ಇಳಿಯಮುಖವಾಗುತ್ತಿರುವುದು ನಮ್ಮನ್ನು ಚಿಂತನೆಗೆ ಹಚ್ಚುತ್ತದೆ. ಹೆಚ್ಚುತ್ತಿರುವ ಕೋಮುಗಲಭೆಗಳಿಂದಾಗಿ ಜೀವಭಯದಿಂದ ತತ್ತರಿಸಿಹೋದ ಮುಸ್ಲಿಮ್ ದುಡಿಯುವ ಜನತೆ ಹೆಚ್ಚು ಭದ್ರತೆಯ ಆಸೆಯಿಂದ ವಲಸೆಹೋಗುತ್ತಿದೆ. ಅವರು ವಲಸೆಹೋದ ಸ್ಥಳಗಳೆಲ್ಲ ಹಿಂದೂ ಪುರಾಣಪುರುಷರ ಜನ್ಮಸ್ಥಳವೋ ಕರ್ಮಸ್ಥಳವೋ ಆಗಿಬಿಡುವುದರಿಂದ ಮುಸ್ಲಿಮ್ ಸಮುದಾಯದ ಪಾಲಿಗೆ ಭದ್ರತೆ ಭ್ರಮೆಯಾಗುತ್ತದೆ. ಮುಸ್ಲಿಮ್ ಸಮುದಾಯ ಅಲೆಮಾರಿಯಾಗಬೇಕಾಗುತ್ತದೆ. ಹೀಗಾಗಿ, 'ಅಲ್ಪಸಂಖ್ಯಾತರು ರಾಷ್ಟ್ರದ ಮುಖ್ಯಪ್ರವಾಹದಲ್ಲಿ

ಧುಮುಕಬೇಕು, ಹಿಂದೂಗಳೊಂದಿಗೆ ಒಂದಾಗಬೇಕು' ಎಂದು ಬಡಕೊಳ್ಳುವುದು ಆತ್ಮವಂಚನೆಯ ಅಪಲಾಪವಾಗುತ್ತದೆ.

ಭಿನ್ನ ಕೋಮುಗಳ ಸಾಮಾಜಿಕ - ರಾಜಕೀಯ ವಿಶೇಷಾಧಿಕಾರದ ಹಿತಾಸಕ್ತಿ ಉಳಿದ ಕ್ಷೇತ್ರಗಳಲ್ಲಿ ಹೇಗೋ ಶೈಕ್ಷಣಿಕ ಕ್ಷೇತ್ರದಲ್ಲೂ ಹಾಗೆಯೇ ಠಾಣ್ಯ ಹೂಡಿದೆ. ಶಾಲೆ ಎಂದರೆ ಸರಸ್ವತಿಯ ಮಂದಿರ ಎಂದು, ಗುರುಗಳನ್ನು ದೇವರೆಂದು ಹಾಡಿ ಹೊಗಳುವ ಅತಿಯಲ್ಲಿ ಸರಸ್ವತಿಯ ಮಂದಿರ ಅಂಗಡಿಯಾಗಿರುವುದು, ಗುರುಗಳು ಈ ಅಂಗಡಿಯಲ್ಲಿ ಮಾರಾಟಗಾರರಾಗಿರುವುದು ಅಪ್ರಿಯ ಸತ್ಯವಾಗಿದೆ. ಎಷ್ಟೋ ಶಾಲೆಗಳು ಆರೆಸ್ಸೆಸ್ ಗರಡಿಗಳಾಗಿವೆ. ಎಷ್ಟೋ ಶಾಲಾಶಿಕ್ಷಕರು ಸಮವಸ್ತ್ರಹಾಕದಿದ್ದರೂ 'ಬೌದ್ಧಿಕ'ರಾಗಿ 'ಸರಸಂಚಾಲಕ'ರಾಗಿ ಕೆಲಸಮಾಡುತ್ತಿದ್ದಾರೆ. 'ನಾವು' 'ಅವರು' ಎಂಬ ಸರ್ವನಾಮದ ಹಿಂಸಾತ್ಮಕ ವ್ಯಾಕರಣದ ಹೊಸ ಪರಿಭಾಷೆ ಶಾಲೆಗಳಲ್ಲಿ ಪ್ರಯೋಗಗೊಳ್ಳುತ್ತಿದೆ. 'ದೇಶಭಕ್ತ' 'ದೇಶದ್ರೋಹಿ' ಎಂಬ ವಿಭಜನೆಗೆ ಇವೊತ್ತು ರಾಮನೇ ಕೇಂದ್ರವಾಗಿದ್ದಾನೆ. ನಂಬಿಸುವುದು, ನಂಬುವಂತೆ ಬ್ರೈನ್‌ವಾಶ್ ಮಾಡುವುದೇ ಇತಿಹಾಸವಾಗಿದೆ. ನಂಬುಗೆ ನಿಜವಲ್ಲವೆಂಬ, ನಿಷ್ಠುರ ಸಾಕ್ಷಿ ಹೆಜ್ಜೆ ಹೆಜ್ಜೆಗೆ ತೊಡರುವಷ್ಟಿದ್ದರೂ ಸಂಖ್ಯಾಬಲದ ಮುಂದೆ ಅವೆಲ್ಲ ತಲೆಬಾಗಬೇಕಾಗಿದೆ. ಸಂವಿಧಾನ, ಸರಕಾರ, ಕಾನೂನು, ವರಿಷ್ಠ ನ್ಯಾಯಾಲಯ - ಎಲ್ಲವೂ ಈ ನಂಬುಗೆಯನ್ನೇ ಓಲೈಸಬೇಕಾಗುತ್ತದೆ.

ಪ್ರಸ್ತುತ ವ್ಯವಸ್ಥೆ ತನ್ನನ್ನು ತಾನು ಅಭಿವ್ಯಕ್ತಿಮಾಡಿಸಿಕೊಳ್ಳುವುದು ಎರಡು ರೂಪಗಳಲ್ಲಿ: ಒಂದು, ಹಿಂಸೆ; ಎರಡು, ಸುಳ್ಳು. ಹಿಂಸೆ ಪರಿಣಾಮದಲ್ಲಿ ಇನ್ನಷ್ಟು ಹೀನವಾಗಿ, ಉಗ್ರವಾಗಿ ಜನಜೀವನವನ್ನು ಕಾಡುವುದು ಸುಳ್ಳಿನ ಮೂಲಕ. ಹಿಂಸೆ- ಸುಳ್ಳು ಪರಸ್ಪರ ತೆಕ್ಕೆಹಾಕಿಕೊಂಡಿರುವ ನಮ್ಮ ವ್ಯವಸ್ಥೆ, ಚರ್ಚೆ-ಸಂವಾದ-ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಗಡಿಪಾರು ಮಾಡುತ್ತಿರುವ ಪ್ರಕ್ರಿಯೆಯಲ್ಲಿ ಇದನ್ನು ಚೆನ್ನಾಗಿ ಮನಗಾಣುತ್ತೇವೆ. ಬಾಬ್ರಿಮಸೀದಿಯಿರುವ ಸ್ಥಳದಲ್ಲೇ ರಾಮನ ಜನ್ಮಭೂಮಿಯಿತ್ತು ಎಂಬ ಸುಳ್ಳು, ಹಿಂಸೆಯ ಗರ್ಭದಿಂದ ಹೊರಬಿದ್ದಿದ್ದು, ಹಿಂಸೆಯನ್ನು ಮುಂದುವರಿಸಿರುವುದನ್ನು, ವ್ಯಾಪಕಗೊಳಿಸಿರುವುದನ್ನು ಆಡ್ವಾನಿಯವರ ರಥಯಾತ್ರೆಯ ನಂತರ ಖಚಿತವಾಗಿ ಕಂಡುಕೊಳ್ಳಬಹುದಾಗಿದೆ. ಮೇಲಿನ ಸುಳ್ಳು, ಹಿಂಸೆಯ ಉದ್ದೇಶದಿಂದ ಸೃಷ್ಟಿಯಾಗಿದ್ದು, ಆ ಹಿಂಸೆಯನ್ನು ಒಪ್ಪುವ ಮನಸ್ಸುಗಳು ಮರುಸುಳ್ಳುಗಳನ್ನು, ಪೂರಕ ಸುಳ್ಳುಗಳನ್ನು ಸೃಷ್ಟಿಮಾಡುವುದರಲ್ಲೂ ಈ ಹಿಂಸಾನಂದದ ಪ್ರವೃತ್ತಿಯನ್ನು ಗುರುತಿಸಬಹುದು.

ನಮ್ಮ ಸಂಸ್ಕೃತಿಯಲ್ಲಿ ಈ 'ಒಪ್ಪಿಕೊಳ್ಳುವ', ಎಲ್ಲವನ್ನೂ ಗೃಹೀತವಾಗಿ ತೆಗೆದುಕೊಳ್ಳುವ ಪ್ರವೃತ್ತಿ ಈಚೆಗೆ ಹೆಚ್ಚುತ್ತಿರುವುದೆಂದೇ ಪ್ರಜಾಸತ್ತೆಯ ಮೌಲ್ಯಾಧಾರಗಳು ಕುಸಿಯುತ್ತ ಬಂದಿರುವುದು. ಒಪ್ಪಿಕೊಳ್ಳುವುದು ಹುಂಬ ಮನಸ್ಸಿನ ಲಕ್ಷಣ. ಸಮಾಜ

ವಿಜ್ಞಾನದ ಪರಿಭಾಷೆಯಲ್ಲಿ ಹೇಳುವುದಾದರೆ ಮಧ್ಯಮ ವರ್ಗದ ಕ್ಷೇಮದ ಹಾದಿ. ಖಂಡಿತವಾಗಿ ಇದು ದುಡಿಯುವ ವರ್ಗದ ಸ್ವಭಾವವಾಗಲಾರದು. ಅರ್ಧಂಬರ್ಧ ಶಿಕ್ಷಣ ಪಡೆದ, ಆದರೆ ಪ್ರಜ್ಞಾವಂತರಲ್ಲದ, ಈ ಜನವರ್ಗ ಪಟ್ಟಣದ ಸವಲತ್ತುಗಳ ಮೇಲೆ ಕಣ್ಣುನೆಟ್ಟದ್ದು. ತನ್ನ ಉದ್ದೇಶ ಎಡಕಿಸಿಕೊಳ್ಳುವುದಕ್ಕೆ ಪೂರಕವಾದ ತಂತ್ರವನ್ನು ಹೂಡಲೆತ್ನಿಸುತ್ತದೆ. ಸುಶಿಕ್ಷಿತರೆನಿಸಿಕೊಂಡ, ತಕ್ಕಮಟ್ಟಿಗೆ ಒಳ್ಳೆಯ ಸ್ಥಿರ ಆದಾಯವುಳ್ಳ, ಈ ಜನವರ್ಗ ಅದ್ವಾನಿಯವರ ರಥದ ಕೀರಲುದನಿಯನ್ನು ಪಡಿನುಡಿಯುತ್ತಿರುವುದು ಇವೊತ್ತು ಎಲ್ಲೆಂದರಲ್ಲಿ ಕೇಳಬಹುದಾಗಿದೆ. ಗುರು-ಶಿಷ್ಯರು ಪರಸ್ಪರ ಚರ್ಚಿಸಿ ನಿರ್ಣಯಕ್ಕೆ ಬರುತ್ತಿದ್ದ ಉಪನಿಷತ್ಪರಂಪರೆ, ಚಾರ್ವಾಕವಾದ, ಭೌತವಾದಿ ಪ್ರಭಾವದಿಂದ ಬೆಳೆದು ಬಂದ ಸಾಂಖ್ಯ ನ್ಯಾಯ ವೈಶೇಷಿಕ ಯೋಗ ದರ್ಶನಗಳು, ಬೌದ್ಧ - ಜೈನ ಮತಗಳು, ಹಿಂದೂ-ಮುಸ್ಲಿಮ್ ಭಾವೈಕ್ಯದ ಸೃಷ್ಟಿಯಾಗಿರುವ ಸೂಫೀ-ಭಕ್ತಿಪಂಥಗಳು ಇವನ್ನೆಲ್ಲ ಜಗತ್ತಿಗೆ ನೀಡಿದ ನಮ್ಮ ಸಂಸ್ಕೃತಿಯಲ್ಲಿ ಈ ಬಗೆಯ ಸಮೂಹಸನ್ನಿಗೆ, ಭೌದ್ಧಿಕ ದಾಸ್ಯಕ್ಕೆ ಸ್ಥಳಾವಕಾಶವಿರಲಾರದೆಂಬ ವಿವೇಚನೆ ಕೂಡ ಈ ವರ್ಗಕ್ಕೆ ಇಲ್ಲವಾಗಿಬಿಟ್ಟಿದೆ. ಒಪ್ಪಿಸುವವನು ಹೇಳಿದ್ದನ್ನು ಒಪ್ಪಿಕೊಳ್ಳುವ ಮೂಲಕ ತಮ್ಮ ಬದುಕಿನ ದಾರಿ ಸುಕರವೂ ಸುಗಮವೂ ಆಗುವುದೆಂದು ಮನಗಂಡ ಈ ವರ್ಗಕ್ಕೆ ಸಾಮಾಜಿಕ ಹೊಣೆ, ರಾಷ್ಟ್ರೀಯ ಪ್ರಜ್ಞೆ ಇವೆಲ್ಲ ಬುಡಬುಡಿಕೆಯ ಮಾತುಗಳಾಗಿವೆ. ಸ್ವತಃ ಒಪ್ಪಿಕೊಳ್ಳುವುದಲ್ಲದೆ, ತಮ್ಮ ಕೈಕೆಳಗಿನವರನ್ನು ಮತ್ತು ತಮ್ಮ ವರ್ಚಸ್ಸಿಗೆ ಬರುವವರನ್ನು ಒಪ್ಪಿಕೊಳ್ಳುವ ಹಾಗೆ ಸಮ್ಮೋಹನ ಮಾಡುವ ಇಲ್ಲವೇ ಬಲವಂತಪಡಿಸುವ ಮೂಲಕ ಈ ಜನವರ್ಗ ಒಪ್ಪಿಸುವ, ಪಳಗಿಸುವ, ದಮನಕಾರಿ ಹಿತಾಸಕ್ತಿಗಳಿಗೆ ಪೋಷಕವಾಗಿ ಬಿಡುತ್ತದೆ.

ಶಿಕ್ಷಣ ಮತ್ತು ರಾಜಕೀಯ ಕ್ಷೇತ್ರದಲ್ಲಿ ಈ ಪ್ರವೃತ್ತಿಯ ಅಪಾಯವೆಂದರೆ ಒಪ್ಪುವ, ಒಪ್ಪಿಸುವ ಪ್ರಕ್ರಿಯೆಯಲ್ಲಿ ಪ್ರಶ್ನಿಸುವ ಮತ್ತು ಪ್ರಶ್ನಿಸುವಂತೆ ಮಾಡುವ ಪ್ರಗತಿಪರ ಮನೋಧರ್ಮ ಸಾಯುತ್ತದೆ. ಹಿಂಸೆ ಮಂತ್ರವಾಗುತ್ತದೆ; ಸುಳ್ಳು ತಂತ್ರವಾಗುತ್ತದೆ. ಶಾಲೆ ಕಾಲೇಜುಗಳಲ್ಲಿ ಎಲ್ಲ ಕೋಮುಗಳವರಿಗೂ ಸಮ್ಮತವಾಗುವ ರಾಷ್ಟ್ರಗೀತೆಯನ್ನು ಬಿಟ್ಟು ಆಯಾ ಸ್ಥಳದ ದೈವದ ಸ್ತುತಿಯ ಅಥವಾ ಆಡಳಿತ ಮಂಡಲಿಗೆ ಪ್ರಿಯವಾಗುವ ಧಾರ್ಮಿಕ ಕೀರ್ತನೆಗಳನ್ನು ಹಾಡಿಸಲಾಗುತ್ತದೆ. ತಮಾಷೆಯ ಸಂಗತಿ ಎಂದರೆ ಅಮೆರಿಕಾದಿಂದ ಪುಕ್ಕಟೆ ಪಡೆದ ಮಧ್ಯಾಹ್ನದ ಉಪಾಹಾರದ ಸರಬರಾಜಿನ ವೇಳೆ ವೈದಿಕ ಮಂತ್ರಗಳ ಪಠನದ ವಿಧಿ ಮುಗಿದ ಮೇಲೇ ವಿದ್ಯಾರ್ಥಿಗಳ ಕೈ ತಟ್ಟೆಗಿಳಿಯಬೇಕಾಗಿತ್ತು!

ಈ ವ್ಯವಸ್ಥೆಯೊಳಗಿನ ಹಿಂಸೆ ಕೆಲವೊಮ್ಮೆ ಸ್ಫೋಟಗೊಳ್ಳುತ್ತದೆ; ಇನ್ನು ಕೆಲವೊಮ್ಮೆ ಒಳಗಿಂದೊಳಗೇ ಹೊಗೆಯಾಡುತ್ತಿರುತ್ತದೆ. ಈ ಪ್ರಚ್ಛನ್ನವಾದ ಹಿಂಸೆ, ಈ ವ್ಯವಸ್ಥೆಯ ಭಾಗವಾಗಿರುವ ಶಿಕ್ಷಣದಲ್ಲೂ ಹುದುಗಿಯೇ ಇದೆ. ನಮ್ಮ ವಿದ್ಯಾವಂತ ವರ್ಗ

ಆತ್ಮವಂಚಕವಾಗಿರುವ ಕಾರಣವನ್ನು ಇಲ್ಲಿ ಹುಡುಕಬಹುದಾಗಿದೆ. ಶೈಕ್ಷಣಿಕ ಸಂಸ್ಥೆಗಳಲ್ಲಿ ರಾಜಕೀಯ ಬೇಡವೆನ್ನುವ ಶಿಕ್ಷಕವರ್ಗ ತನಗರಿವಿಲ್ಲದೆಯೇ ಕೆಟ್ಟರಾಜಕೀಯ ಸಿದ್ಧಾಂತವೊಂದರ ಅಡಿಯಾಳಾಗಿರುವ ದುರಂತವಿದು. ಈ ದುರಂತದ ಇನ್ನೊಂದು ಮುಖವೆಂದರೆ ರಾಜಕೀಯವೆಂದರೆ ಪುಢಾರಿಗಿರಿಯಷ್ಟೇ ಅಲ್ಲ; ಅದು ವಿಸ್ತೃತ ಸಮಾಜದ ಅಭೀಷ್ಟೆಗಳಿಗೆ ಆಕಾರ ನೀಡುವ ಪ್ರಗತಿಪರ ಮತ್ತು ಅತ್ಯಾವಶ್ಯಕ ಜೀವನಕ್ಷೇತ್ರವೂ ಹೌದು ಎಂಬ ಕನಿಷ್ಠ ತಿಳಿವಳಿಕೆ ಈ ವರ್ಗಕ್ಕಿಲ್ಲವಾಗಿರುವುದು. ಇಂಥವರು ಶಾಲೆಕಾಲೇಜುಗಳಲ್ಲಿ ಹೇಳಿದ್ದನ್ನೆ ಹೇಳುತ್ತ ಬಂದಿದ್ದಾರೆ; ತಮ್ಮ ಸ್ಮರಣಶಕ್ತಿಯೇ ಪ್ರತಿಭೆ ಎಂದು ಭ್ರಮಿಸಿದ್ದಾರೆ. ವಿವರಗಳನ್ನು ಗುಪ್ಪೆ ಹಾಕುತ್ತ ಬಂದಿದ್ದಾರೆ; ಈ ವಿವರವೇ ಜ್ಞಾನವೆಂದು ಬಗೆದಿದ್ದಾರೆ. ನಮ್ಮ ಪಠ್ಯ ಕ್ರಮವಾಗಲೀ ಪಠ್ಯ ಬೋಧನೆಯಾಗಲೀ ಮೌಲ್ಯಮಾಪನ ವಿಧಾನವಾಗಲೀ ಈ ಹಿಂಸೆಯನ್ನೂ ಸಮರ್ಥಿಸುವ ಸುಳ್ಳು ನೀತಿಕೋಶವನ್ನೇ ನಿರ್ಮಿಸಿವೆ; ಪಾಲಿಸುತ್ತ ಬಂದಿವೆ. ಪಾಠದ ಶೀರ್ಷಿಕೆ ಮತ್ತು ಕೊನೆಯ ನೀತಿವಾಕ್ಯ 'ಸುಳ್ಳು ಹೇಳಬೇಡ' 'ಹೆಣ್ಣನ್ನು ಹೀನೈಸಬೇಡ' 'ಜಾತಿ-ಕೋಮುದ್ವೇಷ ಸಲ್ಲದು' 'ಚೆನ್ನಾಗಿ ದುಡಿದು ಸಂಪಾದಿಸಬೇಕು' ಎಂದಿದ್ದರೂ, ಪಾಠದ ಹೂರಣ ಮತ್ತು ಈ ನೀತಿಗಳನ್ನು ಸಂದೇಶಿಸಲಾಗುವ 'ಸನ್ನಿವೇಶ' , ತದ್ವಿರುದ್ಧವಾದ ಸತ್ಯಗಳನ್ನು ಸ್ಥಾಪಿಸುತ್ತ ಹೋಗುತ್ತದೆ. ಈ ಪ್ರಚ್ಛನ್ನ ಪಠ್ಯಕ್ರಮದ ದ್ವಂದ್ವಗಳನ್ನು ಪ.ಬಂಗಾಳದ ಸರಕಾರ ಪ್ರಜ್ಞಾಪೂರ್ವಕವಾಗಿ ನೀಗಿಸಿಕೊಳ್ಳಲು ತೊಡಗಿದೆ. ಹಾಗಾಗಿ ಇಂದು ಗಣಿತದ ಸಮಸ್ಯೆಯಲ್ಲಾದರೂ ಕಲಬೆರಕೆಯಿಂದ ವ್ಯಾಪಾರಿ ಗಳಿಸುವ ಲಾಭದ ಶತಾಂಶ ಕಂಡು ಹುಡುಕುವ ಪ್ರಮೇಯ ಅಲ್ಲಿ ತಪ್ಪಿಸಲಾಗಿದೆ.

ಕೋಮುಗಲಭೆಗೆ ಅನ್ವಯಿಸಿ ಹೇಳುವುದಾದರೆ ನಿರ್ದಿಷ್ಟ, ಸ್ಥಳೀಯ, ಕ್ಷುಲ್ಲಕ ಅಥವಾ ಕಿಡಿಗೇಡಿ ಘಟನೆ ಅಥವಾ ಸನ್ನಿವೇಶವೊಂದನ್ನು ಎತ್ತಿಕೊಂಡು ಅದರ ಮೂಲಕ ಒಂದು ಕೋಮಿನ ವಿರುದ್ಧ ಸಾರ್ವತ್ರಿಕವಾದ ಹಾಗೂ ಸಾಮಾನ್ಯೀಕೃತ ಸಿದ್ಧಾಂತವೊಂದನ್ನು ಸ್ಥಾಪಿಸಲು ಹೊರಡುವ ಪ್ರಕ್ರಿಯೆ ಮೇಲೆ ಪ್ರಸ್ತಾಪಿಸಿದ ಹಿಂಸೆ-ಸುಳ್ಳುಗಳೆರಡರ ಮಿಶ್ರಣವಾಗಿರುತ್ತದೆ ಎನ್ನಬಹುದು. ಕೋಮುಗಲಭೆಯನ್ನು ತಣ್ಣಗಾಗಿಸಲು ನಾವು ಯಶಸ್ವಿಯಾದರೂ, ಅದರ ಪರಿಣಾಮವನ್ನು ನಿಯಂತ್ರಿಸುವಲ್ಲಿ ನಾವು ಯಶಸ್ವಿಯಾಗುತ್ತೇವೆ ಎನ್ನುವ ಖಾತರಿ ಇಲ್ಲ. ಆದರೂ, ಪ್ರಜ್ಞಾವಂತ ನಾಗರಿಕರು ಇರುವೆಲ್ಲಾ ಮಾಧ್ಯಮಗಳ ಮೂಲಕ, ಸಾಧನಗಳ ಮೂಲಕ, ತಮ್ಮ ಪ್ರಯತ್ನವನ್ನು ಕೈಗೊಳ್ಳಲೇಬೇಕಾಗಿದೆ. ಈ ಪ್ರಯತ್ನವನ್ನು ಯೋಜನಾಪೂರ್ವಕವಾಗಿ ಕೈಗೊಳ್ಳಲಾಗದಿರುವುದಕ್ಕೇ ರಾಮಾಯಣ-ಮಹಾಭಾರತ - The Sword of Tippu ನಂಥ ಟಿ.ವಿ. ಧಾರಾವಾಹಿಗಳ ಪ್ರಸಾರದ ವೇಳೆ ಅಥವಾ ಅದರ ಹಿಂದು ಮುಂದು ಕೋಮುಗಲಭೆಗಳು ಕಾಣಿಸಿಕೊಳ್ಳುವಂತಾದುದು. ಇದರ ವಿರುದ್ಧ ದ್ವಂದ್ವ ಯುದ್ಧ ಮಾಡುವ ಬದ್ಧತೆಯುಳ್ಳವರು ಅಸ್ಗರಾಲಿ

ಎಂಜಿನಿಯರ್ ಹೇಳುವಂತೆ ತಮ್ಮ ಬದ್ಧತೆಯೊಂದಿಗೆ ಲದು ಅಪೇಕ್ಷಿಸುವ ದಿಟ್ಟತನವನ್ನೂ ಪ್ರದರ್ಶಿಸಬೇಕಾಗುತ್ತದೆ.

ಹಿಂಸೆ ಮತ್ತು ಸುಳ್ಳುಗಳ ಸಂಸ್ಕೃತಿಯ ವಿರುದ್ಧ ಪ್ರತಿವ್ಯೂಹವನ್ನು ರಚಿಸುವ ಸಂದರ್ಭದಲ್ಲಿ ಶಿಕ್ಷಣವನ್ನು ಪ್ರಮುಖ ಕ್ಷೇತ್ರವನ್ನಾಗಿ ಮಾನ್ಯಮಾಡಬೇಕಾಗಿದೆ. ಪೂರ್ವ ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಹಂತದ ವರೆಗೂ ಈ ಪ್ರತಿವ್ಯೂಹದ ವಿಸ್ತೃತ ಕಲ್ಪನೆ ನಮಗಿರಬೇಕು. ಶಿಕ್ಷಣದಲ್ಲಿ - ಪಠ್ಯಕ್ರಮದಲ್ಲಿ, ಪೂರಕ ಪಠ್ಯಕ್ರಮದಲ್ಲಿ, ಔಪಚಾರಿಕ ಮತ್ತು ಅನೌಪಚಾರಿಕ ಕಾರ್ಯಕ್ರಮಗಳಲ್ಲಿ ಕೋಮುಸೌಹಾರ್ದದ ಅರ್ಥಪೂರ್ಣ ನೆಲೆಗಳನ್ನು ಕ್ರೋಢೀಕರಿಸಬೇಕು. ಇದು ಪಾಠ ಬೋಧನೆಯ ಎಡೆಯೆಡೆಯಲ್ಲಿ integrate ಆಗಿ ಮೂಡಿಬರಬೇಕೇ ವಿನಾ ಚದುರಿದಂತೆ ಅಥವಾ ಪ್ರತ್ಯೇಕ ಪ್ರವಚನವಾಗಿ ಕಾಣಿಸಿಕೊಳ್ಳಬಾರದು. ನಮ್ಮ ಚರಿತ್ರೆಯಲ್ಲಿ ಮತ್ತು ನಾಗರಿಕತೆಯ ವಿಕಾಸದ ವಿವಿಧ ಘಟ್ಟಗಳಲ್ಲಿ ವಿವಿಧ ಕೋಮುಗಳ ಅಂತರವಲಂಬನದ ನಮ್ಮ ಸಂಸ್ಕೃತಿ ಶ್ರೀಮಂತವಾಗಿ ಬೆಳೆದುಬಂದ ಹಿನ್ನೆಲೆಯನ್ನು ವಸ್ತುನಿಷ್ಠವಾಗಿ ಮಂಡಿಸುವ ಮೂಲಕ, ಕೋಮು ಘರ್ಷಣೆಗಿಂತ ಕೋಮು ಸೌಹಾರ್ದದ ನೆಲೆಗಳೇ ಎದ್ದುಕಾಣುವ ಬಗೆಯನ್ನು ಮನಗಾಣಿಸುವ ಮೂಲಕ, ಕೋಮುವಾದದ ಭಿತ್ತನೆಗೆ ವಿರುದ್ಧವಾದ ಮಾನಸಿಕ ನೆಲೆಯನ್ನು ನಿರ್ಮಾಣಗೊಳಿಸಿದಂತಾಗುತ್ತದೆ.

ಎರಡನೆಯದಾಗಿ, ವಿಚಾರಗಳು ಒಳ್ಳೆಯದಾಗಿರಲಿ ಕೆಟ್ಟದಾಗಿರಲಿ, ಅವುಗಳಿಗೆ ಜೀವಕೊಡುವ ಮತ್ತು ವಿದ್ಯಾರ್ಥಿ ಜನಾಂಗಕ್ಕೆ ಅವುಗಳನ್ನು ಸಂವಹನಿಸುವ ಶಿಕ್ಷಕವರ್ಗವನ್ನು ಕೋಮುವಾದದ ವಿರುದ್ಧ ಹೋರಾಡಲು ಸುಸಜ್ಜಿತರನ್ನಾಗಿಸಬೇಕು. ಎಷ್ಟೋ ಶಿಕ್ಷಕರಿಗೆ ಈ ತರಬೇತಿಯಿಂದ ಅವರ ಮನಸ್ಸಿನಲ್ಲಿ ಲಾಗಾಯ್ತಿನಿಂದ ಬೆರೆತುಬಂದ ಅವೈಜ್ಞಾನಿಕ ಪ್ರತಿಗಾಮಿ ವಿಚಾರಗಳನ್ನು ಶುದ್ಧೀಕರಿಸುವ ಪರಿಮಾರ್ಜನೆಯ (Therapeautical) ಚಿಕಿತ್ಸೆಯೂ ಇದರೊಂದಿಗೇ ಜರುಗಬೇಕಾಗಿದೆ. ಶಿಕ್ಷಣಕ್ಷೇತ್ರದಲ್ಲೇ ಕೋಮುಸೌಹಾರ್ದದ ಸೈದ್ಧಾಂತಿಕ, ಚಾರಿತ್ರಿಕ ನೆಲೆಗಳನ್ನು ಅಧ್ಯಯನಿಸಿರುವ ಶಿಕ್ಷಕರಿಂದ ಹಾಗೂ ಪ್ರಾಯೋಗಿಕವಾಗಿ ಈ ದಿಸೆಯಲ್ಲಿ ವಿಶೇಷ ಸಾಧನೆ ಮಾಡಿರುವ ತಜ್ಞರಿಂದ ಮಾರ್ಗದರ್ಶನ ಹಾಗೂ ಪ್ರಾತ್ಯಕ್ಷಿಕೆ ಏರ್ಪಡಿಸುವುದು ಹೆಚ್ಚು ಫಲಪ್ರದ. ಚರಿತ್ರೆ, ಭಾಷಾಬೋಧನೆ, ಸಾಮಾನ್ಯ ವ್ಯವಹಾರ, ಆಡಳಿತ, ಸಹಪಠ್ಯ ಚಟುವಟಿಕೆಗಳು, ಕುಟುಂಬ ಹಾಗೂ ನಾಗರಿಕ ಜೀವನದ ವಿವಿಧ ಕ್ಷೇತ್ರಗಳು - ಹೀಗೆ ಕೋಮುಸೌಹಾರ್ದದ ಸೂಕ್ಷ್ಮಾತಿಸೂಕ್ಷ್ಮ ನೆಲೆಗಳನ್ನು ಶಿಕ್ಷಕರಿಗೆ ಮನದಟ್ಟು ಮಾಡಿಸಬೇಕಾಗಿದೆ.

ಮೂರನೆಯದಾಗಿ, ಪಠ್ಯಪುಸ್ತಕ ರಚನೆಯಲ್ಲಿ ಕೂಡ ಯಾವುದೇ ಅವೈಜ್ಞಾನಿಕ ಹಾಗೂ ಕೋಮುದ್ವೇಷದ ಅಂಶಗಳು ಕಾಣಿಸಿಕೊಳ್ಳದಂತೆ ನಿಗಾವಹಿಸಬೇಕು ಹಾಗೂ

ರಾಷ್ಟ್ರೀಯ, ಪ್ರಜಾಸತ್ತಾತ್ಮಕ ಮತ್ತು ಸಮಾಜವಾದಿ ಮೌಲ್ಯಗಳ ಬಿತ್ತನೆಗೆ ಯೋಗ್ಯ ಅವಕಾಶ ಕಲ್ಪಿಸಬೇಕು. ಇದು ಬೋಧನೆಯ ವಿಷಯವಷ್ಟೇ ಆಗಿರದೆ, ಪ್ರಾಯೋಗಿಕವೂ ಆಗಿ ಮೂಡಿಬರುವಂತೆ ಪಠ್ಯಕ್ರಮವನ್ನು 'ನಮ್ಯ' (flexible)ವಾಗಿ ರೂಪಿಸಬೇಕು.

ನಾಲ್ಕನೆಯದಾಗಿ, ಶೈಕ್ಷಣಿಕ ಸಂಸ್ಥೆಗಳಲ್ಲಿ ವಿವಿಧ ಕೋಮುಗಳವರಿಗೆ ಆಡಳಿತ ಮಂಡಲಿ, ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿಗಳಲ್ಲಿ - ಸೂಕ್ತ ಪ್ರಾತಿನಿಧ್ಯ ಕಲ್ಪಿಸಬೇಕು. ಒಂದು ಕೋಮಿನ ವ್ಯಕ್ತಿಯನ್ನು ಇನ್ನೊಂದು ಕೋಮಿನ ದೇವಾಲಯದ ಧರ್ಮದರ್ಶಿಯನ್ನಾಗಿ ನೇಮಕ ಮಾಡುವುದು ಹೇಗೆ ಪ್ರಯೋಜನಕಾರಿಯೋ ಹಾಗೆಯೇ ಒಂದು ಕೋಮಿನ ಶೈಕ್ಷಣಿಕ ಸಂಸ್ಥೆಯಲ್ಲಿ ಇನ್ನೊಂದು ಕೋಮಿನ ಶಿಕ್ಷಕರನ್ನು ನೇಮಿಸುವುದು ಭಾವೀ ಜನಾಂಗದ ವ್ಯಕ್ತಿತ್ವದ ರೂಪಣೆಯಲ್ಲಿ ಹೆಚ್ಚು ಪ್ರಯೋಜನಕಾರಿ. ಎಷ್ಟೋ ಕಡೆ ಕೋಮು ಗಲಭೆಗಳನ್ನು ತಡೆಗಟ್ಟಲು ಪೋಲೀಸರನ್ನು, ಅರೆಸೈನಿಕ ದಳವನ್ನು ಕಳಿಸುವಾಗ, ಭಿನ್ನ ಕೋಮಿನವರಿಗೆ ಪ್ರಾತಿನಿಧ್ಯವಿಲ್ಲದಿರುವುದೇ ಗಲಭೆಯ ಹೆಚ್ಚಳಕ್ಕೆ ಕಾರಣವಾಗುವುದಿದೆ. ಹಾಗೆಯೇ, ಶಾಲೆ ಕಾಲೇಜುಗಳಲ್ಲಿ ಭಿನ್ನ ಕೋಮುಗಳವರು ಒಟ್ಟಿಗೆ ಕೆಲಸ ಮಾಡುವಂತಾದರೆ ಪರಸ್ಪರ ತಿಳಿವಳಿಕೆ, ಮೆಚ್ಚುಗೆ, ಸಹಕಾರಗಳ ಮೂಲಕ ಸಾಮಾಜಿಕ ಜೀವನದ ಮೇಲೆ ಸಕಾರಾತ್ಮಕ ಪ್ರಭಾವವುಂಟಾಗುತ್ತದೆ. ಆದರೆ, ಇವರೆಲ್ಲರನ್ನೂ ಮೊದಲೇ ಸೂಚಿಸಿದಂತೆ, ತರಬೇತಿ - ಮಾರ್ಗದರ್ಶನ ಮತ್ತು ಮಾನಸಿಕ ಪರಿಮಾರ್ಜನೆಗೊಳಪಡಿಸುವ ಅಗತ್ಯವನ್ನು ಮರೆಯಬಾರದು.

ಕೊನೆಯದಾಗಿ, ಕಾಯ್ದೆ ಕಟ್ಟಳೆಗಳನ್ನು, ವಿವಿಧ ವೃತ್ತಿಗಳ ನೀತಿ ಸಂಹಿತೆಗಳನ್ನು ಬಿಗಿಯಾಗಿ ಪಾಲಿಸಿಕೊಂಡು ಬರಲು ಒತ್ತಾಯಪಡಿಸುವುದು ಅಗತ್ಯ. ರಾಜಕೀಯವಾಗಿ ದಿಟ್ಟವಾದ ನಿರ್ಧಾರ ತೆಗೆದುಕೊಂಡು, ಕೋಮು ಸೌಹಾರ್ದದ ರಕ್ಷಣೆಗಾಗಿ ಕಾನೂನು ವ್ಯವಸ್ಥೆಯನ್ನೂ ಆಡಳಿತ ಯಂತ್ರವನ್ನೂ ಪುನರ್ ರೂಪಿಸುವುದು; ಅದಕ್ಕೆ ಸಮಾಜವಾದಿ ಚಾಲನೆಯನ್ನು ನೀಡುವುದು ವಿಹಿತ. ಇದಕ್ಕೆ ಪೂರಕವಾಗಿ ಸುಳ್ಳು ಸುದ್ದಿಗಳನ್ನು ಹಬ್ಬಿಸದಂತೆ ಮತ್ತು ಅಂಥ ವದಂತಿಗಳಿಗೆ ಮಾಧ್ಯಮಗಳಲ್ಲಿ ಅವಕಾಶವಿಲ್ಲದಂತೆ ನಿಯಂತ್ರಣವಿಟ್ಟುಕೊಳ್ಳು ವುದು ಆವಶ್ಯಕ. ಕೋಮುವಾದವನ್ನು ಬಿತ್ತುವ ಎಲ್ಲ ಸಂಘಟನೆಗಳನ್ನು ನಿಷೇಧಿಸುವುದು, ಕೊನೆಯ ಪಕ್ಷ ಶೈಕ್ಷಣಿಕ ಸಂಸ್ಥೆಗಳ ಮೇಲೆ ಈ ಸಂಘಟನೆಗಳ ಕಪಿಮುಷ್ಟಿಯಿಲ್ಲದ ಸ್ಥಿತಿಯನ್ನುಂಟುಮಾಡುವುದು ಹಾಗೂ ಕೋಮು ಸೌಹಾರ್ದವನ್ನು ಬಲಗೊಳಿಸುವ ಪ್ರಗತಿಪರ ಚಟುವಟಿಕೆಗಳನ್ನು ಮತ್ತು ಸಂಘಟನೆಗಳನ್ನು ಊರ್ಜಿತಪಡಿಸುವುದು ಎಂದಿಗಿಂತ ಇಂದು ಹೆಚ್ಚು ಅಗತ್ಯ. ನಾಳಿನ ನಮ್ಮ ಪ್ರಜೆಗಳು ಎಂಥವರಿರಬೇಕು, ನಾಳಿನ ನಮ್ಮ ಸಮಾಜ ಎಂಥದಿರಬೇಕು ಎಂಬ ಖಚಿತವಾದ ಮುನ್ನೋಟ ನಾವು ಬೇಗನೆ ಬೆಳೆಸಿಕೊಳ್ಳಬೇಕು.

— — — — — —

● ಮಕ್ಬೂಲ್ ಅಹ್ಮದ್ ಸಿರಾಜ್
ಸಹ ಸಂಪಾದಕ,
ಇಸ್ಲಾಮಿಕ್ ವ್ಯಾಸ್,
ಬೆಂಗಳೂರು - 560 025.

# ಕಾನ್ವೆಂಟ್‌ಗಳ ಸುತ್ತ ಮುತ್ತ

"ನಿಮ್ಮನ್ನು ಸೃಷ್ಟಿಸಿದ್ದು ಯಾರು?" ಎಂಬ ಪ್ರಶ್ನೆಗೆ ಒಬ್ಬ ಮುಸ್ಲಿಮ್ ಬಾಲಕನ ಉತ್ತರ; "ನನ್ನ ತಂದೆ".

"ನಾಲ್ವರು ಖಲೀಫರ ಹೆಸರು ತಿಳಿಸಿ" ಎಂಬ ಪ್ರಶ್ನೆಗೆ ಇನ್ನೊಬ್ಬ ಮುಸ್ಲಿಮ್ ವಿದ್ಯಾರ್ಥಿ ನೀಡಿದ ಉತ್ತರ; "ಜಿಬ್ರೀಲ್, ಮೀಕಾಈಲ್, ಇಸ್ರಾಫೀಲ್, ಅಝ್ರಾಈಲ್" "ಪ್ರವಾದಿ ಮುಹಮ್ಮದ್ (ಸ) ಯಾರು?" ಎಂದು ಕೇಳಿದ್ದಕ್ಕೆ ಒಬ್ಬ ಮುಸ್ಲಿಮ್ ವಿದ್ಯಾರ್ಥಿನಿ ನೀಡಿದ ಶೋಚನೀಯ ಉತ್ತರ; " ಅವರು ಮುಸಲ್ಮಾನರ ದೇವರು".

ಮದ್ರಾಸಿನ 'ಕುರ್‌ಆನ್ ಎಂಡ್ ಸೀರತ್ ಎಕಾಡೆಮಿ' ವತಿಯಿಂದ, ವಿವಿಧ ಶಾಲೆಗಳಲ್ಲಿ ಕಲಿಯುವ ಮುಸ್ಲಿಮ್ ವಿದ್ಯಾರ್ಥಿಗಳಿಗೆ ಇಸ್ಲಾಮಿನ ಕುರಿತು ಎಷ್ಟು ತಿಳಿದಿದೆ ಎಂಬುದನ್ನು ಅರಿಯಲು ನಡೆಸಲಾದ ಒಂದು ಪರೀಕ್ಷೆಯಲ್ಲಿ ಪ್ರಕಟವಾದ ಅದ್ಭುತಗಳಿವು. ಇದು ಸುಮಾರು 15ವರ್ಷಗಳ ಹಿಂದಿನ ಘಟನೆ. ಆಗ ವಿದ್ಯಾರ್ಥಿಗಳಾಗಿದ್ದವರು ಈಗಾಗಲೇ ಶಿಕ್ಷಣ, ರಾಜಕೀಯ, ಆಡಳಿತ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಉನ್ನತೋನ್ನತ ಹುದ್ದೆಗಳಿಗೆ ತಲುಪಿರಬಹುದು. ಒಂದು ವಿಧದಲ್ಲಿ ಇವರೇ ಇಂದು ಆ ಕ್ಷೇತ್ರಗಳಲ್ಲಿ ಮುಸ್ಲಿಮರನ್ನು ಪ್ರತಿನಿಧಿಸುತ್ತಿರುವವರು. ಆ ಕ್ಷೇತ್ರಗಳಲ್ಲಿ ಯಾವುದಾದರೂ ತೀರ್ಮಾನ ಕೈಗೊಳ್ಳುವ ಸಂದರ್ಭ ಬಂದಾಗ ಮುಸ್ಲಿಮ್ ದೃಷ್ಟಿಕೋನವನ್ನು ತಿಳಿಯಲು ಅಥವಾ ಮುಸ್ಲಿಮ್ ಹಿತಾಸಕ್ತಿಯ ಬಗ್ಗೆ ಅರಿಯಲು ಈ 'ಪ್ರತಿನಿಧಿ'ಗಳನ್ನು ಅವಲಂಬಿಸಲಾಗುತ್ತದೆ. ಇವರ ಜ್ಞಾನದ ಮಟ್ಟ ಹೀಗಿರುವಾಗ ಇವರು ಮಾಡುವ ಪ್ರಾತಿನಿಧ್ಯದ ಸ್ವರೂಪ ಹೇಗಿರಬಹುದು ಎಂಬುದನ್ನು ಊಹಿಸಬಹುದು.

ಮುಸ್ಲಿಮರ ಪೈಕಿ 4%ಮಂದಿಯನ್ನು ಧಾರಾಳ ಆದಾಯವುಳ್ಳ ಮೇಲ್ವರ್ಗ ಎಂದು ಗುರುತಿಸಬಹುದು. ನಮ್ಮ ಕೋರ್ಟು, ವಿಶ್ವವಿದ್ಯಾಲಯ, ಪಾರ್ಲಿಮೆಂಟು, ಸಂಶೋಧನಾ ಕೇಂದ್ರಗಳು ಇತ್ಯಾದಿಗಳಲ್ಲಿ ಮುಸ್ಲಿಮರನ್ನು ಪ್ರತಿನಿಧಿಸುವುದು ಸಾಮಾನ್ಯವಾಗಿ ಇದೇ ಗುಂಪಿನವರು. ಇವರಲ್ಲಿ ಹೆಚ್ಚಿನವರು ಯಾವುದಾದರೂ ನಗರದ ಅತ್ಯಂತ ಶ್ರೀಮಂತ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಉದಾ: ದೆಹಲಿಯ ಫ್ರೆಂಡ್ಸ್ ಕಾಲನಿ, ಹೈದರಾಬಾದಿನ ಬಂಜಾರಾಹಿಲ್ಸ್, ಮದ್ರಾಸ್‌ನ ನುಂಗಮ್ ಬಾಕ್ಕಮ್, ಬೆಂಗಳೂರಿನ ಇಂದಿರಾ ನಗರ ಅಥವಾ ಮುಂಬಯಿಯ ಪಾಲಿಹಿಲ್ಸ್‌ಗಳಲ್ಲಿ ಇವರ ಭವ್ಯ ಸೌಧಗಳನ್ನು ಕಾಣಬಹುದು. ಇವರ ಮಕ್ಕಳು ಹೋಗುವ ಶಾಲೆಗಳಿಗೆ ಸೈಂಟ್ ಜೋಸೆಪ್ಸ್, ಸೈಂಟ್ ಝೇವಿಯರ್ಸ್, ಸೈಂಟ್ ಫ್ರಾನ್ಸಿಸ್ ಮುಂತಾದ ಹೆಸರುಗಳಿರುತ್ತವೆ. ಈ ಮಕ್ಕಳಿಗೆ ಅತ್ಯಂತ ಹತ್ತಿರದಲ್ಲಿರುವ ಮಸೀದಿ ಕೂಡಾ, ಅಲ್ಲಿನ ಅಝಾನ್ ಇವರ ಕಿವಿಗಳಿಗೆ ಬೀಳದಷ್ಟು ದೂರದಲ್ಲಿರುತ್ತದೆ. ಶೇಕ್ಸ್‌ಪಿಯರ್, ವರ್ಡ್ಸ್‌ವರ್ಥ್, ಸ್ಟಿವನ್‌ಸನ್ ಮುಂತಾದವರು ಮಾತ್ರ ಇವರಿಗೆ ಬಾಲ್ಯದಲ್ಲೇ ಪರಿಚಿತರಾಗಿರುತ್ತಾರೆ.

ಇಸ್ಲಾಮಿನ ಬಗ್ಗೆ, ಮುಸ್ಲಿಮ್ ಇತಿಹಾಸದ ಬಗ್ಗೆ ಇವರಿಗೇನಾದರೂ ತಿಳಿಯುವುದಿದ್ದರೂ ಅದು ಎ.ಎಸ್. ಸ್ಯಾಪಾಲ್, ರಾಬಿನ್‌ಸನ್ ಮುಂತಾದವರು ಎಷ್ಟು ಹೇಳಿದ್ದಾರೋ ಅಷ್ಟು ಮಾತ್ರ. ಗಾಲಿಬ್, ಇಕ್ಬಾಲ್, ಹಾಲಿ ಮುಂತಾದವರ ಕುರಿತು ಇವರ ಜ್ಞಾನ ಆ ವ್ಯಕ್ತಿಗಳ ಕುರಿತು ಸಿನಿಮಾಗಳಲ್ಲಿ ಎಷ್ಟು ತಿಳಿಸಲಾಗುತ್ತದೋ ಅಷ್ಟಕ್ಕೇ ಸೀಮಿತ. ಇವರು ಬೆಳೆಯುವ ಪರಿಸರದಲ್ಲಿ ಗಝ್ಝಾಲಿ, ಸಅದೀ, ಮೌಲಾನಾರೂಮೀ, ಹಸನುಲ್‌ಬನ್ನಾ ಮುಂತಾದ ಹೆಸರುಗಳನ್ನು ಕೇಳುವ ಅವಕಾಶವೇ ಇರುವುದಿಲ್ಲ. ಸಂಭಾಷಣೆಯ ವೇಳೆ ಏನಾದರೂ ಉಪಮೆ ಬೇಕಾದಾಗ ಅವರಿಗೆ ನೆನಪಾಗುವುದು ರಾಬಿನ್‌ಹುಡ್ ಅಥವಾ ಸಿಂಡ್ರೆಲಾರ ಪಾತ್ರಗಳು ಮಾತ್ರ. ಹಝ್ರತ್‌ಉಮರ್ ಫಾರೂಕ್(ರ) ಅಥವಾ ಟೀಪು ಸುಲ್ತಾನ್ ಯಾವ ಕಾರಣಕ್ಕೆ ಆದರ್ಶ ವ್ಯಕ್ತಿಗಳೆಂದು ಅವರಿಗೆ ಸ್ವಲ್ಪವೂ ತಿಳಿದಿರುವುದಿಲ್ಲ.

ಭವ್ಯ ಮನೆಗಳಲ್ಲಿ ಜನಿಸುವ, ಕಾನ್ವೆಂಟ್‌ಗಳಲ್ಲಿ ಕಲಿಯುವ , ದೊಡ್ಡವರ ಸಮಾಜದಲ್ಲಿ ತಿರುಗಾಡುವ ಈ ಮುದ್ದು ಮಕ್ಕಳು ದೊಡ್ಡವರಾದಾಗ ಇಸ್ಲಾಮಿನ ಶರೀಅತ್ ಎಂಬುದು ಅವರ ದೃಷ್ಟಿಯಲ್ಲಿ ಒಂದು ಗೊಡ್ಡು ಸಂಪ್ರದಾಯವಾಗಿರುತ್ತದೆ. ಮುಸ್ಲಿಮರು 'ಪರ್ಸನಲ್‌ಲಾ'ದ ರಕ್ಷಣೆಗೆ ಒತ್ತಾಯಿಸಿದಾಗ ಅದು ಅವರಿಗೆ ಒಂದು ಮೂಲಭೂತವಾದಿ ಕೃತ್ಯವೆಂದು ತೋರುತ್ತದೆ. ಪರ್ದಾ ದ ಬಗ್ಗೆ, ಅದನ್ನು ಧರಿಸಿದರೆ ನೋಡುವವರು ಏನೆಂದಾರು ಎಂದು ಅವರು ಭಯಪಡುತ್ತಾರೆ. ಇಂತಹ ಒಂದು ಪೀಳಿಗೆಯಲ್ಲಿ ಇಸ್ಲಾಮೀ ವೈಶಿಷ್ಟ್ಯಗಳು ಕ್ಷಯವಾಗುತ್ತಾ ಕೆಲವು ಸಂಕೇತಗಳು ಮಾತ್ರ ಉಳಿದಿರುತ್ತವೆ. ಮುಂದಿನ ಪೀಳಿಗೆ, ಸಮಾಜದಲ್ಲಿ ತನ್ನನ್ನು ಪ್ರತ್ಯೇಕವಾಗಿ ಗುರುತಿಸಲು ನೆರವಾಗುವ ಈ ಸಂಕೇತಗಳನ್ನು

ತಾತ್ಸಾರದಿಂದ ನೋಡಲಾರಂಭಿಸುತ್ತದೆ.

ಮುಸ್ಲಿಮ್ ಶ್ರೀಮಂತರು ಭಾರತದಲ್ಲಿ ಒಂದು ಬಗೆಯ ಸಾಂಸ್ಕೃತಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದಾರೆ. ಈ ಬಿಕ್ಕಟ್ಟಿನ ಬೇರುಗಳಿರುವುದು, ಅವರಿಗೆ ನೀಡಲಾಗುವ ಶಿಕ್ಷಣ, ಅವರು ವಾಸಿಸುವ ಅತ್ಯಾಧುನಿಕ ಪ್ರದೇಶಗಳ ವಿಶಿಷ್ಟ ವಾತಾವರಣ ಮತ್ತು ಸಮಾಜ ಹಾಗೂ ಮಾಧ್ಯಮಗಳ ಪ್ರಭಾವದಲ್ಲಿ.

ಮುಸ್ಲಿಮ್ ಸಮಾಜದ ಬಡವರಲ್ಲಿರುವ ಶೈಕ್ಷಣಿಕ ಹಿಂದುಳಿಕೆ ಮತ್ತು ಅದರಿಂದ ಸಮಾಜಕ್ಕಿರುವ ಅಪಾಯದ ಬಗ್ಗೆ ಈಗ ತುಸು ಜಾಗೃತಿ ಮೂಡುತ್ತಿದೆ. ಆದರೆ ಮುಸ್ಲಿಮ್ ಶ್ರೀಮಂತರಿಗೆ ಸರಿಯಾದ ಶಿಕ್ಷಣ ಸಿಗುತ್ತಿಲ್ಲ ಮತ್ತು ಆ ಕಾರಣ ಅವರನ್ನು ಕ್ರಮೇಣ ಸಮಾಜವು ಕಳೆದುಕೊಳ್ಳುತ್ತಿದೆ ಎಂಬ ವಾಸ್ತವಿಕತೆಯನ್ನು ಇನ್ನೂ ಹೆಚ್ಚಿನವರು ಮನಗಂಡಂತಿಲ್ಲ.

ಬಿಶಪ್ ಕಾಟನ್ಸ್, ಬಾಲ್ಡ್‌ವಿನ್ಸ್ ಅಥವಾ ಗುಡ್‌ಶೆಫರ್ಡ್ಸ್ ಶಾಲೆಗಳಲ್ಲಿ ಮುಸ್ಲಿಮ್ ಮಕ್ಕಳ ಕ್ರೈಸ್ತೀಕರಣ ನಡೆಯದಿದ್ದರೂ, ಕನಿಷ್ಠ ಪಕ್ಷ ಆಂಗ್ಲೀಕರಣವಂತೂ ಖಂಡಿತ ನಡೆಯುತ್ತದೆ. ಮಿಶ್ರ ಶಿಕ್ಷಣ, ಶ್ರೀಮಂತಿಕೆಯ ಪೊಳ್ಳು ಮೌಲ್ಯಗಳು, ಕೃತಕ ಶಿಷ್ಟಾಚಾರಗಳು ಇವೆಲ್ಲಾ ಕ್ರಮೇಣ ಮುಸ್ಲಿಮ್ ವಿದ್ಯಾರ್ಥಿ - ವಿದ್ಯಾರ್ಥಿನಿಯರಲ್ಲಿ ತಮ್ಮ ಧರ್ಮ-ಸಂಸ್ಕೃತಿಗಳ ಯಾವ ಕ್ಷೀಣ ಛಾಯೆಯೂ ಉಳಿಯದಂತೆ ಅವರನ್ನು ಬೋಳಿಸಿ ಬಿಡುತ್ತವೆ. ಇಂತಹ ಇಬ್ಬರು ಮುಸ್ಲಿಮ್ ವಿದ್ಯಾರ್ಥಿಗಳು ಪರಸ್ಪರರನ್ನು ಭೇಟಿಯಾಗುವಾಗ, ಅಗಲುವಾಗ ಅವರ ನಡುವೆ ಹ್ಯಾ ಮತ್ತು ಬ್ಯಾಗಳಿರುತ್ತವೆಯೇ ಹೊರತು ಅಸ್ಸಲಾಮು ಅಲೈಕುಮ್, ಖುದಾಹಾಫಿಝ್‌ಗಳು ಇರುವುದಿಲ್ಲ. ಮುಸ್ಲಿಮ್ ಹುಡುಗಿಯರು ತಮ್ಮ ಇಚ್ಛೆಗೆ ವಿರುದ್ಧವಾಗಿ ಅರೆನಗ್ನತೆಯ ಉಡುಪುಗಳನ್ನು ಧರಿಸಬೇಕಾಗುತ್ತದೆ. ಇಂತಹ ಯುನಿಫಾರ್ಮ್‌ಗಳು ಕಡ್ಡಾಯವಾಗಿರುವಲ್ಲಿ ಮಾನ ರಕ್ಷಣೆಯೂ ಅನ್ಯರ ಕೃಪೆಗೆ ಒಳಪಡುತ್ತದೆ.

ಮದ್ರಾಸ್‌ನ ಕಾನ್ವೆಂಟ್ ಒಂದರಲ್ಲಿ ಅರ್ಧ ಲಂಗದ ಸಮವಸ್ತ್ರವನ್ನು ಕಡ್ಡಾಯಗೊಳಿಸಿದ್ದರಿಂದ ಮುಸ್ಲಿಮ್ ವಿದ್ಯಾರ್ಥಿನಿಯೊಬ್ಬಳ ಹೆತ್ತವರು ಬೇಸರಗೊಂಡರು. ತಮ್ಮ ಮಗಳಿಗೆ ಮರ್ಯಾದಸ್ಥವಾದ ಪೂರ್ಣ ಉಡುಪು ಧರಿಸಲು ಅನುಮತಿಸಬೇಕೆಂದು ವಿವಿಧ ರೀತಿಯಲ್ಲಿ ಬೇಡಿಕೊಂಡರು. ಆದರೆ ಅವರ ಬೇಡಿಕೆ ಈಡೇರಲಿಲ್ಲ. ಗರಿಷ್ಠ ಒತ್ತಡ ಹಾಕಿದಾಗ ಕೊನೆಗೆ, ಆ ಹುಡುಗಿ ಶಾಲೆಯ ಗೇಟ್ ತನಕ ತನ್ನಿಚ್ಛೆಯ ವಸ್ತ್ರ ಧರಿಸಿ ಬರಬಹುದೆಂದು ತಿಳಿಸಲಾಯಿತು.

ಒಬ್ಬರಂತೂ ಇಂತಹದೇ ಸನ್ನಿವೇಶದಲ್ಲಿ ಕಾನ್ವೆಂಟ್‌ನ ಸನ್ಯಾಸಿನಿ ಶಿಕ್ಷಕಿಯೊಡನೆ "ಅಮ್ಮಾ! ನೀವು ಧರಿಸುವಂತಹ ಗೌರವದ ವಸ್ತ್ರವನ್ನೇ ನನ್ನ ಮಗಳಿಗೂ ಧರಿಸಲು

ಬಿಡಿ'' ಎಂದು ಗೋಗರೆಯಬೇಕಾಯಿತು.

ಇಂತಹ ಸಮಸ್ಯೆಗಳ ಬಗ್ಗೆ ಅನೇಕ ಮುಸ್ಲಿಮರಿಗೆ ತಿಳಿದಿದೆ. ಆದರೆ ಅದೇ ವೇಳೆ ಅವರಿಗೆ ತಮ್ಮ ಇತಿ ಮಿತಿಗಳೂ ತಿಳಿದಿದೆ. ವಿವಿಧ ಧರ್ಮ ಪ್ರಚಾರಕರು ನಡೆಸುವಂತಹ ಶಾಲೆಗಳು ನಮ್ಮ ಬಳಿ ಇಲ್ಲ ಮತ್ತು ನಮ್ಮ ಬಳಿ ಇರುವ ಶಾಲೆಗಳಲ್ಲಿ ಅಂತಹ ಶೈಕ್ಷಣಿಕ ಗುಣಮಟ್ಟವಿಲ್ಲ ಎಂಬ ಭಾವನೆಯಿಂದ ಅವರು ಸುಮ್ಮಗಾಗುತ್ತಾರೆ.

ಉರ್ದು ಭಾಷೆಯ ಸಮಸ್ಯೆಯನ್ನೇ ತೆಗೆದು ನೋಡಿ. ಅದು ಈ ದೇಶದ ಹೆಚ್ಚಿನ ಮುಸ್ಲಿಮರ ಮಾತೃ ಭಾಷೆ. ಹೆಚ್ಚಿನ ವೇಳೆ ನಮ್ಮ ಮೇಲ್ವರ್ಗದವರು ಕಲಿಯುವ ಶಾಲೆಗಳಲ್ಲಿ (ಉಳಿದ ಬಹುತೇಕ ಶಾಲೆಗಳಲ್ಲೂ) ವಿದ್ಯಾರ್ಥಿಗಳಿಗೆ ಲಭ್ಯವಿರುವ ಆಯ್ಕೆ, ಹಿಂದಿ, ಇಂಗ್ಲಿಷ್ ಮತ್ತು ಒಂದು ಪ್ರಾದೇಶಿಕ ಭಾಷೆ ಮಾತ್ರ. ಮಾತೃ ಭಾಷೆ ಉರ್ದುವಾಗಿದ್ದರೆ ಅದಕ್ಕೆ ಯಾವುದೇ ರಿಯಾಯಿತಿ ಇಲ್ಲ. ಭಾರತದ ಹಿಂದೀ ಪ್ರದೇಶಗಳಲ್ಲಂತೂ ಉರ್ದುವನ್ನು ಉದ್ದೇಶಪೂರ್ವಕವಾಗಿ ಶಾಲೆಗಳಿಂದ ಹೊರಗಟ್ಟಲಾಗಿದೆ. ಉರ್ದು ಶಿಕ್ಷಕರು ಸಾಮಾನ್ಯವಾಗಿ ಮುಸ್ಲಿಮರಾಗಿರುವುದರಿಂದ ಅವರನ್ನು ಉದ್ಯೋಗದಿಂದ ದೂರವಿಡುವುದೂ ಇದರ ಒಂದು ಉದ್ದೇಶವಾಗಿರಬಹುದು.

ಒಟ್ಟಿನಲ್ಲಿ ಶಾಲೆಗಳಲ್ಲಿ ಉರ್ದು ಅಲಭ್ಯವಾಗಿ ಬಿಟ್ಟಿದೆ. ಅದರ ಪರಿಣಾಮವೆಂಬಂತೆ ವಿದ್ಯಾರ್ಥಿಯು ಭಾಷೆಯನ್ನು ಆಧರಿಸಿರುವ ತನ್ನ ಸಾಂಸ್ಕೃತಿಕ ಪರಂಪರೆಯನ್ನು ಗಣನೀಯವಾಗಿ ಕಳೆದುಕೊಳ್ಳುತ್ತಾನೆ. ಅನುವಾದಿತ ಕೃತಿಗಳು ತಕ್ಕ ಮಟ್ಟಿಗೆ ಸಹಾಯಕವಾಗಬಲ್ಲವಾದರೂ ಒಂದು ಭಾಷೆಯಲ್ಲಿರುವ ಸಾಹಿತ್ಯ ಸಂಪತ್ತಿನ ತೀರಾ ಸಣ್ಣ ಭಾಗವೊಂದನ್ನು ಮಾತ್ರ ಇತರ ಭಾಷೆಗಳಿಗೆ ವರ್ಗಾಯಿಸಲು ಸಾಧ್ಯ. ಹೀಗೆ ಅನುವಾದಿತವಾದ ಸಾಹಿತ್ಯವು ಮೂಲದಲ್ಲಿರುವ ಸೊಬಗನ್ನು ಹೊಂದಿರುವುದಿಲ್ಲ ಎಂಬುದು ಒಂದು ವಾಸ್ತವಿಕತೆ. ಉರ್ದುಭಾಷೆ ಮುಸ್ಲಿಮ್ ಪರಂಪರೆಯ ವಿಷಯದಲ್ಲಿ ಹೊಂದಿರುವ ಅಪಾರ ಭಂಡಾರದಿಂದ ಪ್ರಸ್ತುತ ವಿದ್ಯಾರ್ಥಿಗಳು ಪೂರ್ಣ ವಂಚಿತರಾಗುತ್ತಾರೆ. ಹಾಗೆಯೇ ದೇಶದ ಮುಸ್ಲಿಮರ ಆಗುಹೋಗುಗಳ ಬಗ್ಗೆ ಸವಿಸ್ತಾರವಾಗಿ ತಿಳಿಸುವ ಉರ್ದು ಪತ್ರಿಕಾ ಮಾಧ್ಯಮದಿಂದಲೂ ಇವರು ಬಹಳ ದೂರ ನಿಂತಿರಬೇಕಾಗುತ್ತದೆ.

ಇಂತಹ ಹಿನ್ನೆಲೆಯಿಂದ ಬರುವ ಮುಸ್ಲಿಮ್ ಎಳೆಯರಿಗೆ ತಮ್ಮ ಕುಟುಂಬ ಅಥವಾ ಪರಿಸರದ ಮುಸ್ಲಿಮರು ಆಚರಿಸುವ ಧಾರ್ಮಿಕ ಕ್ರಿಯೆಗಳೆಲ್ಲಾ ಯಾವುದೇ ಅರ್ಥ ಇಲ್ಲದ ತರ್ಕಹೀನ ಸಂಪ್ರದಾಯಗಳಾಗಿ ತೋರುತ್ತವೆ. ಅವನ ಕುತೂಹಲಗಳನ್ನು ತಣಿಸುವ ಅವನ ಪ್ರಶ್ನೆಗಳನ್ನು ಸಮಾಧಾನಕರವಾಗಿ ಉತ್ತರಿಸುವ ಸಾಧನಗಳು ಅವನಿಗೆ ಲಭ್ಯವಿರುವುದಿಲ್ಲ. ರಮಝಾನ್ ತಿಂಗಳಲ್ಲಿ ಅವನ ಮನೆಯ ಹಿರಿಯರು ಉಪವಾಸ ಆಚರಿಸುವಾಗ ಅದಕ್ಕೆ ಕಾರಣವೇನು; ಅದರ ಹಿನ್ನೆಲೆ, ಉದ್ದೇಶ ಮತ್ತು ಪ್ರಯೋಜನಗಳೇನು

ಎಂಬಿತ್ಯಾದಿ ಯಾವುದೂ ವಿಷಯವನ್ನು ತಿಳಿಯಲು ಅವನಿಗೆ ಅವಕಾಶವಿರುವುದಿಲ್ಲ. ಹಾಗೆಯೇ ಅವನ ಅಜ್ಜ- ಅಜ್ಜಿ ಅಥವಾ ಇನ್ನಾರಾದರೂ ಹಜ್ಜ್ ಯಾತ್ರೆಗೆ ಹೋದಾಗ ಈ ವಿಶ್ವ ಸಮ್ಮೇಳನದ ಕುರಿತು ಅವನಲ್ಲಿ ಗೌರವ ಭಾವನೆ ಬೆಳೆಸುವ ಯಾವ ಸಾಧನವೂ ಅವನ ಸಮೀಪ ಇರುವುದಿಲ್ಲ.

ಇದಕ್ಕೆ ತದ್ವಿರುದ್ಧವಾಗಿ ಅವನಿಗೆ ಫ್ಯಾಂಟಮ್, ಮ್ಯಾಂಡ್ರೇಕ್, ಲಾರೆಲ್ ಎಂಡ್ ಹಾರ್ಡಿ ಮುಂತಾದ ಕಾಮಿಕ್‌ಗಳು, ಚಿತ್ರಕಥಾ ಮಾಲಿಕೆಗಳು ಧಾರಾಳವಾಗಿ ಸಿಗುತ್ತವೆ. ಇವುಗಳಲ್ಲಿ ತೀರಾ ಕಾಲ್ಪನಿಕವಾದ ಕಥೆಗಳನ್ನು ವರ್ಣರಂಜಿತವಾಗಿ ಮಂಡಿಸಲಾಗುತ್ತದೆ. ಕಾಲ್ಪನಿಕ ಪಾತ್ರಗಳು - ಹೀರೋಗಳಾಗಿರುತ್ತವೆ. ಈ ಪೈಕಿ ಕೆಲವು ಪುಸ್ತಕಗಳಲ್ಲಿ ಇಸ್ಲಾಮಿನ ಹಾಗೂ ಮುಸ್ಲಿಮರ ವಿರುದ್ಧ ಟೀಕೆಗಳೂ ಇರುತ್ತವೆ. ಕೆಲವೊಮ್ಮೆ ಈ ಟೀಕೆ ಬಹಳ ವ್ಯಕ್ತವಾಗಿರದೆ ಸಾಂಕೇತಿಕವಾಗಿರುತ್ತವೆ. ಉದಾಹರಣೆಗೆ ಕಳ್ಳರು, ದರೋಡೆಕೋರರು ಅಥವಾ ಅಪಹರಣಕಾರರಿಗೆ ಮುಸ್ಲಿಮ್ ವೇಷ ತೊಡಿಸಿ ಅವರನ್ನು ಮುಸ್ಲಿಮ್ ಹೆಸರುಗಳಿಂದ ಗುರುತಿಸಲಾಗುತ್ತದೆ.

ಇನ್ನು ರೇಡಿಯೋ, ಟಿ.ವಿ. ಮುಂತಾದ ಸರಕಾರಿ ಮಾಧ್ಯಮಗಳಲ್ಲಿ ಸಾಮಾಜಿಕ ಕಾರ್ಯಕ್ರಮದ ಹೆಸರಲ್ಲಿ ಬಹು ಸಂಖ್ಯಾತರ ನಂಬಿಕೆಗಳನ್ನು ವೈಭವೀಕರಿಸುವ, ಪೌರಾಣಿಕ ಕಥೆಗಳನ್ನು ಮತ್ತು ಅನೇಕ ಮೂಢ ನಂಬಿಕೆಗಳನ್ನು ಹೇರುವ ಪ್ರಯತ್ನ ನಡೆಯುತ್ತದೆ. ಸಂಸ್ಕೃತಿಯ ಹೆಸರಲ್ಲಿ ಯಾವುದೋ ಒಂದು ವರ್ಗದ ಸಂಸ್ಕೃತಿಯನ್ನು ಮಾತ್ರ ಪ್ರಚಾರ ಮಾಡಲಾಗುತ್ತದೆ. ಸಮತೋಲನಕ್ಕೊಂದು ಒಮ್ಮೊಮ್ಮೆ ಕವ್ವಾಲಿ, ಗಝಲ್ ಇತ್ಯಾದಿಗಳನ್ನು ಕೇಳಿಸಿ ಅಥವಾ ಯಾವುದಾದರೂ ಉರೂಸ್ ಶರೀಫ್‌ನ ಒಂದೆರಡು ದೃಶ್ಯಗಳನ್ನು ತೋರಿಸಿ ಕಣ್ಣಿಗೆ ಮಣ್ಣೆರಚಲಾಗುತ್ತದೆ. ಒಟ್ಟಿನಲ್ಲಿ ಮುಸ್ಲಿಮ್ ಮಕ್ಕಳಿಗೆ ತಮ್ಮ ಸಂಸ್ಕೃತಿಯನ್ನು ಅರಿಯುವ ಯಾವುದೇ ಅವಕಾಶ ಸಿಗದಂತಾಗಿದೆ.

ಇತ್ತ ಈ ಮಕ್ಕಳಿಗೆ ಇಂಗ್ಲಿಷ್ ಭಾಷೆಯಲ್ಲಿ ಸೂಕ್ತವಾದ ಇಸ್ಲಾಮೀ ಪುಸ್ತಕಗಳಾದರೂ ಲಭ್ಯ ಇವೆಯೇ? ಲಭ್ಯ ಇರುವ ಕೆಲವೇ ಪುಸ್ತಕಗಳ ಪೈಕಿ ಹೆಚ್ಚಿನವುಗಳು ತೀರಾ ಕಳಪೆ ಗುಣಮಟ್ಟದವುಗಳು. ನಗರಗಳ ಪುಸ್ತಕದಂಗಡಿಗಳಲ್ಲಿ ಇಸ್ಲಾಮಿನ ಕುರಿತು, ಸೂಫೀವಾದದ ಕುರಿತು ಐರೋಪ್ಯರು ಬರೆದ ಪುಸ್ತಕಗಳು ಮಾತ್ರ ದೊರೆತರೆ ಮುಸ್ಲಿಮರ ಪುಸ್ತಕದಂಗಡಿಗಳಲ್ಲಿ ಯೂಸೂಫ್ - ಝುಲೇಖಾ ಮುಂತಾದ ಕಳಪೆ ಕಥೆ ಪುಸ್ತಕಗಳಷ್ಟೇ ದೊರೆಯುತ್ತವೆ.

ಈ ಮಕ್ಕಳಿಗೆ ಸಿಗುವ ಕೌಟುಂಬಿಕ ವಾತಾವರಣವಾದರೂ ಎಂತಹುದು? ಇಸ್ಲಾಮ್ ಧರ್ಮ ಗೊಡ್ಡು ಸಂಪ್ರದಾಯಗಳಿಂದ ಮುಕ್ತವಾದ ಸರಳ ಧರ್ಮ. ಅದು ಆದೇಶಿಸುವ ಪ್ರತಿಯೊಂದು ಆಚರಣೆಯ ಹಿಂದೆಯೂ ವ್ಯಕ್ತಿಗೂ ಸಮಾಜಕ್ಕೂ ಅಪಾರ ಪ್ರಯೋಜನಗಳಿರು

ತ್ತವೆ. ಆದರೆ ಈ ಎಳೆಯರಿಗೆ ತಮ್ಮ ಮನೆಯವರು ಕಲಿಸುವ ಆಚರಣೆಗಳ ಉದ್ದೇಶ ಅಥವಾ ಅವುಗಳಲ್ಲಿ ಅಡಗಿರುವ ಯುಕ್ತಿಯನ್ನು ತಿಳಿಸುವವರಾರೂ ಇಲ್ಲ. ಕೆಲವು ಸಂದರ್ಭಗಳಲ್ಲಿ ಸ್ವತಃ ಮನೆಯವರಿಗೇ ತಾವು ಫಿತ್ರ್ ನೀಡುವುದೇಕೆ ಅಥವಾ ಕುರ್ಬಾನಿ ಮಾಡುವುದೇಕೆ ಎಂಬುದು ತಿಳಿದಿರುವುದಿಲ್ಲ. ಹೀಗಿರುವಾಗ ಅವರ ಮಕ್ಕಳು ಈ ಆಚರಣೆಗಳ ಬಗ್ಗೆ ತಾತ್ಸಾರ ಭಾವನೆ ಬೆಳೆಸಿಕೊಂಡರೆ ಆಶ್ಚರ್ಯವೇನಿದೆ. ಇದು ಸಾಲದೆಂಬಂತೆ ನಮ್ಮ ದೇಶದ ಪತ್ರಿಕೆಗಳವರು ಮತ್ತು ಹಲವೊಮ್ಮೆ ಶಿಕ್ಷಕರು ಕೂಡ ಮುಸ್ಲಿಮರ ವಿವಿಧ ನಂಬಿಕೆ ಮತ್ತು ಆಚರಣೆಗಳ ವಿರುದ್ಧ ತಪ್ಪು ಅಭಿಪ್ರಾಯವನ್ನು ಪೋಷಿಸಿರುತ್ತಾರೆ. ನಿಜವಾಗಿ ದಲ್ವಾಯಿ, ಚಾಗ್ಲಾ ಮುಂತಾದವರಿಗೆ ಜನ್ಮ ನೀಡುವುದು ಇದೇ ವಾತಾವರಣ.

ಶ್ರೀಮಂತರು ತಮ್ಮ ಮಕ್ಕಳನ್ನು ಮದ್ರಸಗಳಿಗೆ ಕಳುಹಿಸುವುದಿಲ್ಲ ಎಂಬ ಕೊರಗು ಹಲವರಿಗಿದೆ. ನಿಜವಾಗಿ ಹೆಚ್ಚಿನ ಮುಸ್ಲಿಮ್ ಶ್ರೀಮಂತರಿಗೆ ತಮ್ಮ ಮಕ್ಕಳು ಧಾರ್ಮಿಕ ವಿದ್ಯಾಭ್ಯಾಸ ಪಡೆಯಬೇಕೆಂಬ ಆಸಕ್ತಿ ಇದೆ. ಆದರೆ ಅದಕ್ಕೆ ಇರುವ ವ್ಯವಸ್ಥೆ ಅವರಿಗೆ ಸ್ವೀಕಾರಾರ್ಹವಲ್ಲ. ತಲೆ ಬೋಳಿಸಿ, ಟೊಪ್ಪಿ - ಮುಂಡಾಸು ಧರಿಸಿ, ನೆಲದಲ್ಲಿ ಕೂತು ಎಲ್ಲವನ್ನೂ ಕಂಠಪಾಠ ಮಾಡುವ ಪದ್ಧತಿಯನ್ನು ಅವರು ಒಪ್ಪದಿರುವುದು ಸ್ವಾಭಾವಿಕ. ಸೂಕ್ತ ಆಸನ ವ್ಯವಸ್ಥೆ, ಉತ್ತಮ ಪಠ್ಯ ಪದ್ಧತಿ ಮತ್ತು ವೈಜ್ಞಾನಿಕವಾದ ಬೋಧನಾ ವಿಧಾನ ಲಭ್ಯವಿರುವಲ್ಲಿ ಇವರು ಖಂಡಿತ ತಮ್ಮ ಮಕ್ಕಳನ್ನು ಧಾರ್ಮಿಕ ಮದ್ರಸಾಗಳಿಗೆ ಕಳುಹಿಸುತ್ತಾರೆ.

ಒಂದು ಸಮೀಕ್ಷೆಯ ಪ್ರಕಾರ ದೆಹಲಿಯಲ್ಲಿ ಪ್ರತಿವರ್ಷ ಕನಿಷ್ಠ ಪಕ್ಷ 4000 ಮುಸ್ಲಿಮ್ ಮಕ್ಕಳು ತಲಾ 2 ಸಾವಿರ ರೂಪಾಯಿಗಿಂತ ಹೆಚ್ಚು ವಿವಿಧ ಮೊತ್ತಗಳನ್ನು ತೆತ್ತು ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಪ್ರವೇಶ ಪಡೆಯುತ್ತಾರೆ. ನಾವಿಲ್ಲಿ ಎರಡು ಸಾವಿರ ರೂಪಾಯಿಗಳನ್ನೇ ಆಧಾರವಾಗಿ ಪರಿಗಣಿಸಿದರೂ ಒಟ್ಟು ಮೊತ್ತ 8 ಲಕ್ಷ ರೂಪಾಯಿಗಳಾಗಿರುತ್ತವೆ. ಈ ಮೊತ್ತದಿಂದ ಒಂದು ಸುಸಜ್ಜಿತ ಪ್ರಾಥಮಿಕ ಮುಸ್ಲಿಮ್ ಕಾನ್ವೆಂಟನ್ನು ಸ್ಥಾಪಿಸಲು ಧಾರಾಳ ಸಾಕಾಗುತ್ತವೆ. ಅಂದರೆ ಮುಸ್ಲಿಮರು ದೆಹಲಿಯೊಂದರಲ್ಲೇ ವರ್ಷಕ್ಕೊಂದು ಕಾನ್ವೆಂಟ್ ತೆರೆಯಲು ಆರ್ಥಿಕವಾಗಿ ಸಮರ್ಥರಾಗಿದ್ದಾರೆ ಎಂದಂತಾಯಿತು.

ಮದ್ರಾಸು, ಬೆಂಗಳೂರು ಅಥವಾ ಮುಂಬಯಿಯ ಮುಸ್ಲಿಮರಿಗೆ ಹೋಲಿಸಿದರೆ ದೆಹಲಿಯ ಮುಸ್ಲಿಮರು ಹೆಚ್ಚು ಬಡವರು.

ಇಲ್ಲಿ ನನಗೆ ಒಂದು ಘಟನೆಯನ್ನು ಪ್ರಸ್ತಾಪಿಸಬೇಕೆನಿಸುತ್ತಿದೆ. ನಾನು ತಮಿಳ್ನಾಡಿನ ರಾಮನಾಥಪುರಂ ಜಿಲ್ಲೆಯಲ್ಲಿ ಒಂದು ವಿಚಾರಗೋಷ್ಠಿಯಲ್ಲಿ ಭಾಗವಹಿಸಲು ಹೋಗಿದ್ದೆ. ಅಲ್ಲಿ ಶ್ರೀ ಕುಮಾರ್ ಎಂಬ ತರುಣನೊಬ್ಬ ನನ್ನ ಬಳಿ ಬಂದು ಮಾತನಾಡತೊಡಗಿದ. ಅಪ್ಪಟ ಪಟ್ಟಣಿಗನಾಗಿದ್ದ ಈ ಎಳೆಯ ತರುಣ ತನಗೆ ಇಸ್ಲಾಮಿನ ಕುರಿತು ಅಧ್ಯಯನ

ನಡೆಸುವ ಆಸಕ್ತಿ ಇದೆ ಎಂದು ಹೇಳಿದ. ಕಾರಣ ಕೇಳಿದಾಗ ಬಹಳ ಸರಳವಾಗಿ ಹೇಳಿದ ''ಮದ್ರಾಸಿನ ಕ್ರೆಸೆಂಟ್ ಪ್ರಥಮ ಶಾಲೆಯಲ್ಲಿ ಕಲಿಯುತ್ತಿದ್ದಾಗ ನಾನು ಮತ್ತು ಒಬ್ಬ ಮುಸ್ಲಿಮ್ ಹುಡುಗ ಜೊತೆ ಜೊತೆಗೇ ವಾಸಿಸುತ್ತಿದ್ದೆವು. ಆ ನನ್ನ ಮಿತ್ರ ಯಾವ ವಸ್ತುವನ್ನೂ ಒಬ್ಬನೇ ತಿನ್ನುತ್ತಿರಲಿಲ್ಲ. ಎಷ್ಟು ಸಣ್ಣ ವಸ್ತುವಿದ್ದರೂ ಅದನ್ನು ಹಂಚಿ ತಿನ್ನುತ್ತಿದ್ದ. ಒಂದು ಬಾಳೆ ಹಣ್ಣು ತಂದರೂ ಅರ್ಧವನ್ನು ನನಗೆ ಕೊಡದೇ ಇರುತ್ತಿರಲಿಲ್ಲ. ಆತ ನೆರೆಕರೆಯವರ ಜೊತೆ ಹೇಗೆ ವರ್ತಿಸಬೇಕೆಂಬ ಕುರಿತು ಪ್ರವಾದಿ ಮುಹಮ್ಮದ್(ಸ)ರ ಬೋಧನೆಗಳನ್ನು ಆಗಾಗ ಸ್ಮರಿಸುತ್ತಿದ್ದ. ಜೊತೆಗಾರರಿಗೆ ಕೊಡದೆ ತಾನೊಬ್ಬನೇ ತಿನ್ನುವುದು ಪಾಪ ಎಂದು ಹೇಳುತ್ತಿದ್ದ. ಅವನ ಈ ಗುಣಗಳಿಗೆ ಅವನ ಧರ್ಮವೇ ಕಾರಣ ಎಂದು ನಾನು ಈಗಲೂ ನಂಬಿದ್ದೇನೆ. ಅಂತಹ ಧರ್ಮದ ಬಗ್ಗೆ ಮತ್ತಷ್ಟು ಅಧ್ಯಯನ ಮಾಡಬೇಕೆಂದಿದ್ದೇನೆ.''

ಆತ ಕಲಿತ ಶಾಲೆ ಮದ್ರಾಸಿನ ಕೆಲವು ಶ್ರೀಮಂತರಿಂದ ನಡೆಸಲ್ಪಡುವ ಮುಸ್ಲಿಮ್ ಕಾನ್ವೆಂಟ್. ಅಲ್ಲಿಯ ಪಠ್ಯ ಪದ್ಧತಿ ಬಹುತೇಕ ಇತರ ಶಾಲೆಗಳಂತೆಯೇ ಇದೆ. ಆದರೆ ಕೆಲವು ಇಸ್ಲಾಮೀ ಪಾಠಗಳನ್ನು ಅದರಲ್ಲಿ ಸೇರಿಸಿಕೊಳ್ಳಲಾಗಿದೆ. ವಿದ್ಯಾರ್ಥಿಗಳಿಗೆ ಇಸ್ಲಾಮಿನ ಕುರಿತು ಮೂಲಭೂತವಾದ ಕೆಲವು ಅಂಶಗಳನ್ನು ಕಲಿಸಿಕೊಡಲಾಗುತ್ತದೆ. ಇಸ್ಲಾಮೀ ಚಾರಿತ್ರ್ಯವನ್ನು ಬೆಳೆಸುವುದಕ್ಕೆ ವಿಶೇಷ ಗಮನ ನೀಡಲಾಗುತ್ತದೆ. ಈ ಶಾಲೆಯಲ್ಲಿ ಮುಸ್ಲಿಮೇತರರು ಕೂಡಾ ಸುಮಾರು 10%ದಷ್ಟಿರುತ್ತಾರೆ. ಇಂತಹ ಶಾಲೆಗಳಿಂದ ಬಡ ಮುಸ್ಲಿಮರಿಗೆ ಯಾವುದೇ ಪ್ರಯೋಜನ ಇಲ್ಲ ಎಂಬುದನ್ನು ವ್ಯವಸ್ಥಾಪಕರು ಕೂಡಾ ಒಪ್ಪಿಕೊಳ್ಳುತ್ತಾರೆ. ಇಷ್ಟಾಗಿಯೂ ಈ ಶಾಲೆಯಿಂದ ಹೊರಡುವ ಒಬ್ಬ ಮುಸ್ಲಿಮೇತರ ವಿದ್ಯಾರ್ಥಿ ಕೂಡಾ ಇಸ್ಲಾಮಿನ ಹಾಗೂ ಮುಸ್ಲಿಮರ ಕುರಿತು ಒಳ್ಳೆಯ ಭಾವನೆ ಬೆಳೆಸಿಕೊಂಡಿರುತ್ತಾನೆ ಎಂಬ ಅಂಶ ಬಹಳ ಗಮನಾರ್ಹ.

(ಕನ್ನಡಕ್ಕೆ: ಎ.ಎಸ್. ಪುತ್ತಿಗೆ)

● ಬಿ. ಭಾಸ್ಕರ ರಾವ್
ಅಂಕಣಕಾರರು,
ಉದಯವಾಣಿ.

# ಶಿಕ್ಷಕರಿಗೆ ಶಿಕ್ಷಣ

ಶಿಕ್ಷಣವನ್ನು ಗೆಲ್ಲಿಸುವವರು, ಬದುಕಿಸುವವರು, ಬದಲಾಯಿಸುವವರು ಶಿಕ್ಷಕರು. ಶಿಕ್ಷಕರು ತರಗತಿಯ ನಾಲ್ಕು ಗೋಡೆಗಳ ನಡುವೆ ಏನು ಹೇಳುತ್ತಾರೆಂಬುದನ್ನು ಅವಲಂಬಿಸಿ ದೇಶದಲ್ಲಿ ಶಾಂತಿ, ಸಾಮರಸ್ಯ ಉಳಿಯುವಂತಹ ಪರಿಸ್ಥಿತಿ ಎಂದಿಗಿಂತ ಹೆಚ್ಚಾಗಿ ಇಂದು ಇದೆ.

ದೇಶದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರವನ್ನು ಯಾರೂ ಅಲ್ಲಗಳೆಯಲಾರರು. ಶಿಕ್ಷಣ, ಅಭಿವೃದ್ಧಿ, ಕಲ್ಯಾಣ ಎಂದೊಡನೆ ನಾಯಕರ ಕಣ್ಣ ಮುಂದೆ ಶಾಲಾ ಕಾಲೇಜು ಕಟ್ಟಡಗಳು, ಪ್ರಯೋಗಾಲಯಗಳು, ಗ್ರಂಥಾಲಯಗಳು ಬರುತ್ತವೆ; ಶಿಕ್ಷಕರು ನೆನಪಾಗುವುದಿಲ್ಲ. ಆದರೆ ಪಠ್ಯ ಪುಸ್ತಕಗಳಲ್ಲಿರುವ ಪಾಠಗಳನ್ನು (ಮುಖ್ಯವಾಗಿ ಇತಿಹಾಸ, ಸಮಾಜ ವಿಜ್ಞಾನ) ತರಗತಿ ಕೋಣೆಗಳೊಳಗೆ ವಿದ್ಯಾರ್ಥಿಗಳಿಗೆ ತಲುಪಿಸುವ ಶಿಕ್ಷಕರು ಸಾಮಾಜಿಕ ಸಾಮರಸ್ಯ ಮತ್ತು ಕೋಮು ಸೌಹಾರ್ದತೆಗೆ ನೀಡಬಲ್ಲ ಕಾಣಿಕೆ ಮಹತ್ವಪೂರ್ಣವಾದ್ದರಿಂದ ಮತ್ತು ಅವರು ಇವೆರಡನ್ನು ಕೆಡಿಸಬಲ್ಲ ಸಾಮರ್ಥ್ಯ ಉಳ್ಳವರೂ ಆದ್ದರಿಂದ ಶಿಕ್ಷಣ ನೀತಿ ರೂಪಿಸುವ ರೂವಾರಿಗಳು ಈಗ ಶಿಕ್ಷಕರನ್ನು ತುಂಬ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಶಿಕ್ಷಕರು ತರಗತಿಗಳೊಳಗೆ, ಶಾಲಾ ಆವರಣದಲ್ಲಿ ವಿದ್ಯಾರ್ಥಿಗಳಲ್ಲಿ ಸಹನೆ, ಪರಸ್ಪರ ತಿಳಿವಳಿಕೆ, ಸಾಮರಸ್ಯ, ಮಾನವೀಯತೆ ಮೊದಲಾದ ಉನ್ನತ ಮೌಲ್ಯಗಳನ್ನು ರೂಢಿಸಬಲ್ಲರು. ಹಾಗೆಯೇ ಪರಜೀವನವಿಧಾನ ಅಸಹಿಷ್ಣುತೆಯನ್ನು, ಕೋಮು ದ್ವೇಷವನ್ನು ಹರಡಬಲ್ಲರು; ಮತೀಯ ಹಾಗೂ ಸಾಮಾಜಿಕ ಸಹನೆ ಅನಗತ್ಯ ಸರಕು ಎಂದು ವಿದ್ಯಾರ್ಥಿಗಳು ತಿಳಿಯುವಂತೆ ಕೂಡ ಮಾಡಬಲ್ಲರು: ದ್ವೇಷದ ಸೋಂಕು ಹರಡಬಲ್ಲರು. ಆದ್ದರಿಂದ ಶಿಕ್ಷಕ ಸಮಾಜಕ್ಕೆ ಎಷ್ಟು ಅನಿವಾರ್ಯನೋ ಎಷ್ಟು ಉಪಯೋಗಿಯೋ ಅಷ್ಟೇ

ಅಪಾಯಕಾರಿಯೂ ಆಗಬಲ್ಲ.

ಶಿಕ್ಷಕರು ಸಮಾಜದ ಶಾಂತಿ - ಸೌಹಾರ್ದಕ್ಕೆ, ಕೋಮು ಸಾಮರಸ್ಯಕ್ಕೆ ತಂದೊಡ್ಡಬಲ್ಲ ಗಂಡಾಂತರದ ಬಗ್ಗೆ ನಾನು ಯೋಚಿಸುವಂತೆ ಮಾಡಿದ ಘಟನೆಯೊಂದನ್ನು ಉಲ್ಲೇಖಿಸಬೇಕು. ಗಣ್ಯರ ಮಕ್ಕಳಿಗಾಗಿ ಇರುವ (Elitist)ಶಾಲೆಯೊಂದರ ಪ್ರಾಂಶುಪಾಲರೊಬ್ಬರು ಇತ್ತೀಚೆಗೆ ಹೇಳಿದರು. ನನ್ನ ಮಗ ಹೇಳ್ತಾನೆ 'ಅಪ್ಪ ನಾನು ಇಷ್ಟು ದಿನ ತರಗತಿಯಲ್ಲಿ ಅನ್ವರ್‌ನ ಒಟ್ಟಿಗೆ ಕೂತುಕೊಳ್ತಿದ್ದೆ. ಆದ್ರೆ ಈಗ ನನ್ನ ಫ್ರೆಂಡ್ಸ್ ಹೇಳ್ತಾರೆ: ನೀನು ಅವ್ನ ಒಟ್ಟಿಗೆ ಕೂತುಕೊಳ್‌ಬಾರ್ದು. ಅವ ಅಲ್ಲಿಗೆ ನಮಾಜ್ ಮಾಡ್ಲಿಕ್ಕೆ ಹೋಗುವವ.'

ಹತ್ತು ವರ್ಷಗಳ ಹಿಂದೆ ಶಾಲೆಯೊಳಗೆ ಈ ರೀತಿಯಾಗಿ ಕೋಮುವಿಷ ಸೇರಿಕೊಂಡಿರಲಿಲ್ಲ. ಮುಗ್ಧ ಮಕ್ಕಳ ಮನಸ್ಸಿನಲ್ಲಿ 'ನೀನು ಹಿಂದು, ಅವ ಕ್ರಿಶ್ಚಿಯನ್, ಇವ ಮುಸ್ಲಿಮ್ ಎಂಬ ಭಾವನೆಯನ್ನು ಬಿತ್ತುವಂತಹ ಶೈಕ್ಷಣಿಕ ಹಾಗೂ ಸಾಮಾಜಿಕ ಪರಿಸರ ಇರಲಿಲ್ಲ. 'ಮತ ಬ್ಯಾಂಕ್'ಗಳಿಗಾಗಿ ನಡೆದ ಪ್ರಯತ್ನಗಳು, ಕೋಮುವಾದಿಗಳು ರಾಜಕೀಯ ಅಧಿಕಾರಕ್ಕಾಗಿ ನಡೆಸುವ ಕಿತ್ತಾಟಗಳು ಶಾಲೆಯ ಮಕ್ಕಳ ಮುಗ್ಧ ಮನಸ್ಸನ್ನು ಕೂಡ ಕೆಡಿಸುವ ಪರಿಸ್ಥಿತಿ ಇರಲಿಲ್ಲ. ಶಾಲೆ ಎಂದರೆ ಬಡವರ ಮಕ್ಕಳಿಗಾಗಿಯೆ ವಿಶೇಷವಾಗಿ ಮೀಸಲಿರುವ ಸರಕಾರಿ ಶಾಲೆಗಳಲ್ಲ; ಶಿಕ್ಷಿತ ಸಿರಿವಂತರ ಮಕ್ಕಳು ಕಲಿಯುವ ದೇಶದ ಭಾವೀ ಆಡಳಿತಗಾರರು ಹಾಗೂ ನಾಯಕರು ತಯಾರಾಗುವ ಪ್ರತಿಷ್ಠಿತ ಆಂಗ್ಲ ಮಾಧ್ಯಮ ಶಾಲೆಗಳಲ್ಲೆ ಕೋಮು ಬೀಜ ಬಿತ್ತಲಾಗುತ್ತಿದೆ. ಮಕ್ಕಳು ತಮ್ಮ ಶಾಲಾ ಜೀವನ ಮುಗಿಸಿ ಹೊರಬರುವಾಗ 'ನಾವೆಲ್ಲ ಮನುಷ್ಯರು' ಎನ್ನುವ ಬದಲು 'ನಾನು ಹಿಂದು, ಅವ ಮುಸ್ಲಿಮ್, ಇವ ಕ್ರಿಶ್ಚಿಯನ್ ಎನ್ನುವ ಹಣೆಪಟ್ಟಿ ಅಂಟಿಸಿಕೊಂಡೇ ಹೊರಬರುತ್ತಿದ್ದಾರೆ. ಇದಕ್ಕೆ ಶಿಕ್ಷಕರು ಎಷ್ಟು ಹೊಣೆಗಾರರು ? ಇದರಲ್ಲಿ ಮಕ್ಕಳ ಹೆತ್ತವರ ಪಾಲು ಎಷ್ಟು?

- ದಕ್ಷಿಣ ದೆಹಲಿಯ ಪ್ರತಿಷ್ಠಿತ ಆಂಗ್ಲ ಮಾಧ್ಯಮ ಶಾಲೆಯ ಶಿಕ್ಷಕ-ರಕ್ಷಕ ಸಂಘದ ಸಭೆ ನಡೆಯುತ್ತಿತ್ತು. ಮಧ್ಯ ವಯಸ್ಸಿನ ಮಹಿಳೆಯೊಬ್ಬರು ತನ್ನ ಬಳಿ ಕುಳಿತಿದ್ದ ಮಹಿಳೆಯ ಕಿವಿಯಲ್ಲಿ ಪಿಸುಗುಟ್ಟಿದರು: ''ನನ್ನ ಮಗನಿಗೆ ಇತಿಹಾಸ ತರಗತಿ ಖುಶಿ ಕೊಡುವುದಿಲ್ಲ. ಯಾಕೆಂದರೆ ಅವನ ಇತಿಹಾಸ ಪ್ರಾಧ್ಯಾಪಕರು ಮೊಗಲ್‌ದೊರೆ ಔರಂಗಜೇಬನ ಬಗ್ಗೆ ಎಂದೂ ಕೆಟ್ಟಮಾತು ಆಡಿಯೇ ಇಲ್ಲ- ಉಸ್‌ಕಿ ಕುಚ್ ಬುರಾಯಿ ನಹೀ ಕರ್ತಾಹೈ.''

- ಇನ್ನೊಂದು ಅಂಥದೇ ಶಾಲೆ. ಭಾರತದಲ್ಲಿ ಮೊಗಲರ ಆಳ್ವಿಕೆಯ ಕುರಿತು ಪಾಠ ನಡೆಯುತ್ತಿತ್ತು. ಪಾಠ ಮುಗಿದದ್ದೇ ತಡ, ಒಬ್ಬಳು ಚಿಕ್ಕ ಹುಡುಗಿ ಎದ್ದು ಹೋಗಿ ತನ್ನ ಗೆಳತಿಯ ಕಾಲುತುಳಿದು ಗದರಿದಳು: ''ನೀವು ಮುಸ್ಲಿಮರು ನಮಗೆ

ತುಂಬ ಕೆಟ್ಟದು ಮಾಡಿದ್ದೀರಿ-ನಮ್ಮ ಎಲ್ಲ ದೇವಸ್ಥಾನಗಳನ್ನು ನಾಶಪಡಿಸಿದ್ದೀರಿ. ನಾನೀಗ ಪ್ರತೀಕಾರ ತೀರಿಸುತ್ತೇನೆ''.

• ಅಲಹಾಬಾದಿನ ಸೈಂಟ್‌ಮೇರೀಸ್ ಕ್ವಾನ್ವೆಂಟ್. ಎರಡನೆಯ ತರಗತಿಯ ಶಿಕ್ಷಕಿಯೊಬ್ಬರು ತನ್ನ ವಿದ್ಯಾರ್ಥಿನಿಯರಲ್ಲೊಬ್ಬಳನ್ನು ಕರೆದು ಆಕೆ ಮುಸ್ಲಿಮಳೋ ಎಂದು ಕೇಳಿದರು. ಏಳು ವರ್ಷದ ಆ ಹುಡುಗಿಗೆ ತಾನು ಮುಸ್ಲಿಮ್ ಎಂಬ ಬಗ್ಗೆ ಅತ್ಯಂತ ಖಚಿತವಾಗಿ ಏನೂ ಗೊತ್ತಿರಲಿಲ್ಲ. ಮನೆಗೆ ಹೋಗಿ ತನ್ನ ಅಪ್ಪಅಮ್ಮನೊಡನೆ ತಾನು ಯಾರು ಎಂದು ಖಚಿತಪಡಿಸಿಕೊಂಡ ಬಳಿಕ ಮರುದಿನ ಶಿಕ್ಷಕಿಗೆ ತಾನು ಯಾರೆಂದು ವರದಿ ಮಾಡಿದಳು. ಅವಳಿಗೆ ದೊರಕಿದ ಉಡುಗೊರೆ. ಅವಮಾನ: ''ಹಾಗಾದರೆ ನೀನು ಇಲ್ಲಿ ಭಾರತದಲ್ಲಿ ಏನು ಮಾಡುತ್ತಿದ್ದೀಯಾ? ನಿನ್ನನ್ನು ಪಾಕಿಸ್ಥಾನಕ್ಕೆ ಕರೆದುಕೊಂಡು ಹೋಗುವಂತೆ ನಿನ್ನ ಹೆತ್ತವರೊಡನೆ ಹೇಳು'' ಎಂದು ಶಿಕ್ಷಕಿ ಹೇಳಿದಾಗ ಮಗು ಸ್ತಂಭೀಭೂತವಾಯಿತು. ಈ ಘಟನೆ ಮತ್ತು ಇಂಥದೇ ಘಟನೆಗಳು ಮಗುವಿನ ಹಾಗೂ ಅದರ ಹೆತ್ತವರ ಮೇಲೆ ಎಂಥ ಪರಿಣಾಮ ಬೀರಿತೆಂದರೆ ಆ ಇಡೀ ಕುಟುಂಬ ಅಮೆರಿಕಕ್ಕೆ ವಲಸೆಹೋಗಲು ನಿರ್ಧರಿಸಿತು.

• ದೆಹಲಿಯ ಇನ್ನೊಂದು ಪ್ರತಿಷ್ಠಿತ ಪಬ್ಲಿಕ್ ಸ್ಕೂಲಿನ ಹನ್ನೊಂದನೆಯ ತರಗತಿಯ ವಿದ್ಯಾರ್ಥಿನಿಗಾದ ಅವಮಾನವನ್ನು ಅವಳ ಮಾತುಗಳಲ್ಲಿ ಕೇಳಬೇಕು. ''ಅಕ್ಟೋಬರ್ 30ರ ಸುಮಾರಿಗೆ ಇತಿಹಾಸ ಶಿಕ್ಷಕಿ ತರಗತಿಯಲ್ಲಿ ರಾಮಜನ್ಮಭೂಮಿ ವಿಷಯ ಪ್ರಸ್ತಾಪಿಸಿದರು. ಯಾವುದೇ ಬೆಲೆತೆತ್ತಾದರೂ ಈ ಮಂದಿರ ಕಟ್ಟುವುದು ನಮ್ಮ ಜನ್ಮಸಿದ್ಧ ಹಕ್ಕು ಎಂದು ಆಕೆ ಹೇಳುತ್ತಲೇ ಇದ್ದರು. ಶಿಕ್ಷಕಿಯ ಪೂರ್ವಗ್ರಹವನ್ನು ತರಗತಿಯ ಇತರರು ತಮ್ಮದಾಗಿಸಿಕೊಂಡರು. ಅಧ್ಯಯನದಲ್ಲಿ ಅತ್ಯಂತ ಹೆಚ್ಚು ಆಸಕ್ತರಾದ ಮತ್ತು ಶಾಂತ ಚಿತ್ತರಾದ ವಿದ್ಯಾರ್ಥಿಗಳು ಕೂಡ ಮುಸ್ಲಿಮ್ ವಿರೋಧಿ ಘೋಷಣೆಗಳನ್ನು ವ್ಯಕ್ತಪಡಿಸಲಾರಂಭಿಸಿದರು. ಇದನ್ನೆಲ್ಲ ಕೇಳುವುದು ಅಸಹ್ಯವಾಗುತ್ತಿತ್ತು. ಯಾಕೆಂದರೆ ನಾನು ತುಂಬ ಸೆಕ್ಯುಲರ್ ಹಿನ್ನೆಲೆಯಿಂದ ಬಂದವಳು. ಆದರೆ ನಾನವರ ಜತೆ ವಾದಿಸತೊಡಗಿದಾಗ ಅವರು ನನ್ನ ಮಾತುಗಳನ್ನು ಕೇಳಲು ಕೂಡ ಸಿದ್ಧರಿರಲಿಲ್ಲ. ಆದ್ದರಿಂದ ನಾನು ಒಂದೆಡೆ, ತರಗತಿಯ ಇತರ 49 ಮಂದಿ ವಿದ್ಯಾರ್ಥಿಗಳು ಇನ್ನೊಂದೆಡೆ ಎನ್ನುವಂತಾಯಿತು.

• ಇನ್ನೊಬ್ಬಳು ಮುಸ್ಲಿಮ್ ವಿದ್ಯಾರ್ಥಿನಿಯೊಡನೆ ಆಕೆಯ ಕ್ಲಾಸ್‌ಟೀಚರ್ ಯಾಕೆ ಆಕೆಯ ಜನ ಮಸೀದಿಯನ್ನು ಬಿಟ್ಟುಕೊಡುವುದಿಲ್ಲವೆಂದು ಪ್ರತಿದಿನ ಕೇಳುತ್ತಿದ್ದರು.

• ಇನ್ನೊಂದು ಪ್ರಸಿದ್ಧ ಶಾಲೆಯ ವಿದ್ಯಾರ್ಥಿನಿಗೆ ಅವಳ ತಾಯಿ ಎಲ್ಲ ಮುಸ್ಲಿಮರ ಮೈ ಕೆಟ್ಟವಾಸನೆ ಬರುತ್ತದೆ ಎಂದು ಹೇಳಿದ್ದಳು. ಆದ್ದರಿಂದ ಆ ವಿದ್ಯಾರ್ಥಿನಿ ತನ್ನ ಪಕ್ಕದಲ್ಲಿ ಕುಳಿತ ಹುಡುಗಿಯ ಕಡೆ ತಿರುಗಿ ಅವಳನ್ನು ಮೂಸಿನೋಡಿದಳು.

ಮೂಸಿನೋಡಿದ ಮೇಲೆ ಹೇಳಿದಳು: "ಎಲ್ಲ ಮುಸ್ಲಿಮರು 'ಗಂದಾ'. ಅವರು ಹಲವು ದಿನಗಳವರೆಗೆ ಸ್ನಾನ ಮಾಡುವುದಿಲ್ಲ. ಆದರೆ ವಿಚಿತ್ರ, ನಿನ್ನ ಮೈ ವಾಸನೆ ಬರುವುದಿಲ್ಲ."

ಲೇಖಕ ಹಮ್ರಾ ಖುರೇಶಿ ನೀಡಿರುವ ಉದಾಹರಣೆಗಳು ಇವು. ನಾಳೆಯ ನಾಯಕರು, ರಾಜಕಾರಣಿಗಳು, ಅಧಿಕಾರಿಗಳು, ರಾಜತಾಂತ್ರಿಕರು, ವೈದ್ಯರು, ಉನ್ನತ ಪೊಲೀಸ್ ಅಧಿಕಾರಿಗಳು ಹಾಗೂ ಪತ್ರಿಕೋದ್ಯಮಿಗಳಾಗುವ ಮಕ್ಕಳು ಅವು. ಅಂತಹ ಶ್ರೀಮಂತ ಹಾಗೂ ಶಿಕ್ಷಿತ ಕುಟುಂಬಗಳ ಮಕ್ಕಳ ಮನಸ್ಸಿನಲ್ಲೆ ಅಸಹನೆ ಹಾಗೂ ಒಂದು ಸಮುದಾಯದ ಬಗ್ಗೆ ದ್ವೇಷ ತುಂಬುವ ಕೆಲಸ ಶಾಲೆಗಳಲ್ಲಿ ಶಿಕ್ಷಕರಿಂದ ಮತ್ತು ಮಕ್ಕಳ ಹೆತ್ತವರಿಂದ ನಡೆದರೆ ಭವಿಷ್ಯದಲ್ಲಿ, ಇನ್ನು 15-20 ವರ್ಷಗಳ ಬಳಿಕ ಈ ದೇಶದ ಗತಿ ಏನಾಗಬಹುದು? 'ಭಾರತಾಂಬೆಯ ಮಕ್ಕಳು ನಾವು' ಎಂದು ನಮ್ಮ ನಿಮ್ಮ ಶಾಲಾದಿನಗಳಲ್ಲಿ ಹಾಡಿದವರು ನಾವು. ನಮ್ಮ ಮುಂದಿನ ಜನಾಂಗ ಎಂಥ ಹಾಡುಗಳನ್ನು ಹಾಡೀತು? ಹಾಡುಗಳನ್ನು ಹಾಡುವ ವಾತಾವರಣ ಉಳಿದೀತೆ? ಅಥವಾ 'ಹಿಡಿ ಹೊಡಿ ಬಡಿ ಜೀವಸಹಿತ ಬಿಡಬೇಡ' ಎನ್ನುವ ಯುದ್ಧಗೀತೆಗಳನ್ನಷ್ಟೆ ಕೇಳಬೇಕೆ ನಾಳಿನ ಮಕ್ಕಳು? ಹಾಗಾದರೆ ಇಂತಹ ಪರಿಸರ ಬೆಳೆಯದಂತೆ ಏನು ಮಾಡಬೇಕು? ಯಾರು ತಡೆಯಬೇಕು?

ತರಗತಿಯ ಕೋಣೆಯೊಳಗೆ ಕೋಮುಭಾವನೆ ಜಾಗೃತವಾಗದಂತೆ, ಹರಡದಂತೆ ತಡೆಯಬಲ್ಲವರು ಶಿಕ್ಷಕರು ಮಾತ್ರ. ಮಗುವೊಂದು ಮನೆಯಲ್ಲಿ ತಂದೆತಾಯಿಯೋ ಅಥವಾ ನೆರಮನೆಯವರೋ ಆಡುವ ಮಾತುಗಳನ್ನು ಕೇಳಿ ತನ್ನ ವಿಧರ್ಮೀಯ ಸಹಪಾಠಿಯ ಬಗ್ಗೆ ಆಕ್ಷೇಪಾರ್ಹವಾದುದನ್ನೇನಾದರೂ ಹೇಳಿದರೆ 'ಹಾಗೆ ಹೇಳಕೂಡದು' ಎಂದು ಹೇಳಿ ವಾತಾವರಣವನ್ನು ತಿಳಿಗೊಳಿಸುವ ಕೆಲಸ ಮಾಡಬೇಕಾದವರು ಶಿಕ್ಷಕರು ಹಾಗೂ ಶಿಕ್ಷಕಿಯರು.

ಶಾಲೆಗಳಲ್ಲಿ ಧರ್ಮಕ್ಕೆ ಸಂಬಂಧಿಸಿದ ವಿಷಯವನ್ನು ಮತ್ತು ಇತಿಹಾಸವನ್ನು ಅತ್ಯಂತ ಜಾಗರೂಕತೆಯಿಂದ ಬೋಧಿಸಬೇಕಾದ ವಾತಾವರಣ ನಿರ್ಮಾಣವಾಗಿದೆ. ರಾಜಕಾರಣಿಗಳು ಮತ್ತು ರಾಜಕೀಯ ಮಹತ್ವಾಕಾಂಕ್ಷೆಯುಳ್ಳ ಧಾರ್ಮಿಕ ಮುಖಂಡರು ಈಗಾಗಲೇ ಕೋಮು ಮತ್ತು ಜಾತಿದ್ವೇಷವನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿ ಶಿಕ್ಷಕರು, ಶಿಕ್ಷಕಿಯರು ಮಾನಸಿಕ ಸಮತೋಲ ಕಳೆದುಕೊಂಡವರ ಹಾಗೆ ತರಗತಿಯೊಳಗೆ ಯಾವುದೇ ಒಂದು ಧರ್ಮದ ಪರವಹಿಸಿ ಉದ್ರೇಕಕಾರಿಯಾಗಿ ಪಾಠ ಮಾಡತೊಡಗಿದರೆ ಶಾಲೆಯ ಮತ್ತು ಆ ಮೂಲಕ ಊರಿನ ವಾತಾವರಣ 'ವಿಷ'ಮಯವಾಗುವುದರಲ್ಲಿ ಸಂದೇಹವಿಲ್ಲ. ಈ ಮಾತು ಎಲ್ಲ ಮತಧರ್ಮಗಳಿಗೆ ಸೇರಿದ ಶಿಕ್ಷಕ ಶಿಕ್ಷಕಿಯರಿಗೂ ಅನ್ವಯಿಸುತ್ತದೆ. ಮೊಗಲ್ ಇತಿಹಾಸ ಬೋಧಿಸುವ ಹಿಂದೂ ಶಿಕ್ಷಕ ಅಥವಾ ಹಿಂದೂ ರಾಜರುಗಳ ಬಗ್ಗೆ ಪಾಠ ಮಾಡುವ ಮುಸ್ಲಿಮ್ ಅಥವಾ ಕ್ರಿಶ್ಚಿಯನ್ ಶಿಕ್ಷಕ ಅತ್ಯಂತ ವಸ್ತುನಿಷ್ಠನಾಗಿದ್ದಾಗಲೂ ಕೋಮುಭಾವನೆ ಕೆರಳಿಸುವ ಅಪಾಯವಿದೆ. ಯಾಕೆಂದರೆ ಒಬ್ಬ

ದೊರೆ ಒಂದು ಸಮುದಾಯದವರಿಗೆ ಧೀರೋದಾತ್ತ ನಾಯಕನಾಗಿದ್ದರೆ ಆತ ಇನ್ನೊಂದು ಸಮುದಾಯದ ದೃಷ್ಟಿಯಲ್ಲಿ ಖಳನಾಯಕನಿರಬಹುದು. ಆದ್ದರಿಂದ ಇತಿಹಾಸ ಮತ್ತು ಧರ್ಮಕ್ಕೆ ಸಂಬಂಧಿಸಿದಂತೆ ಪಠ್ಯಗಳು, ಬೋಧನಾ ವಿಧಾನ, ದೃಷ್ಟಿಕೋನ ಎಲ್ಲವೂ ಬದಲಾಗಬೇಕಾಗಿದೆ.

ಶಿಕ್ಷಕ ತನ್ನ ಪೂರ್ವಗ್ರಹಗಳನ್ನು ಮಕ್ಕಳ ಮನಸ್ಸಿನಲ್ಲಿ ತುಂಬಕೂಡದು. ಇದಕ್ಕಾಗಿ ಯಾವುದೇ ಸಮುದಾಯದ ಬಗ್ಗೆ ಶಿಕ್ಷಕರಿಗಿರುವ ತಪ್ಪು ತಿಳಿವಳಿಕೆಯನ್ನು ಮೊತ್ತ ಮೊದಲು ಹೋಗಲಾಡಿಸಬೇಕು. 'ಅಲ್ಪ ಸಂಖ್ಯಾಕರ ತುಷ್ಟೀಕರಣ'ದ ಹಣೆಪಟ್ಟಿಯ ಅಡಿಯಲ್ಲಿ ಹರಡಲಾಗುತ್ತಿರುವ ಅರ್ಧಸತ್ಯಗಳನ್ನು ಮತ್ತು ಸುಳ್ಳುಗಳನ್ನು ಶಿಕ್ಷಕರು ಸತ್ಯವೆಂದು ನಂಬದಂತೆ ಮಾಡಲು ಅವರಿಗೆ ಕಮ್ಮಟಗಳನ್ನು ನಡೆಸಿ ಅಂಕಿಸಂಖ್ಯೆ ಸಹಿತವಾಗಿ ಸತ್ಯಸಂಗತಿಯನ್ನು ತಿಳಿಸುವ ಕೆಲಸ ಮಾಡಬೇಕು. ಯಾವ ಯಾವ ಸಮುದಾಯದ ಜನಸಂಖ್ಯೆ ಎಷ್ಟು ಹೆಚ್ಚಿದೆ. ವಾರ್ಷಿಕ ಎಷ್ಟು ಪ್ರತಿಶತ ಹೆಚ್ಚುತ್ತಿದೆ, ಯಾರ್‍ಯಾರು ಪರಸ್ಪರ ಪೈಪೋಟಿ ನಡೆಸುತ್ತ ಮಕ್ಕಳನ್ನು ಹುಟ್ಟಿಸುತ್ತಿದ್ದಾರೆ, ಯಾವ್ಯಾವ ಧರ್ಮಕ್ಕೆ ಸೇರಿದವರು ಸೇನೆ, ಪೊಲೀಸ್, ಐಎಎಸ್, ವಿದೇಶಾಂಗ ಸೇವೆಯಲ್ಲಿ ಎಷ್ಟು ಪ್ರತಿಶತ ಇದ್ದಾರೆ, ಅವರ ಜನಸಂಖ್ಯೆಗನುಗುಣವಾಗಿ ಇದ್ದಾರೆಯೆ? ಎಂಬ ಬಗ್ಗೆ ಶಿಕ್ಷಕರಿಗೆ ವಿವರವಾದ ಮಾಹಿತಿ ನೀಡಬೇಕು. ಅಂದರೆ ಬೆಳೆಯುತ್ತಿರುವ ಕೋಮುವಾದವನ್ನು, ಕೋಮು ರಾಜಕೀಯ ಹಾಗೂ ಕೋಮುಚಿಂತನೆಯನ್ನು ತಡೆಯಬೇಕಾದರೆ ಎಲ್ಲಕ್ಕಿಂತ ಮೊದಲು ಶಿಕ್ಷಕರಿಗೆ ಶಿಕ್ಷಣ ನೀಡಬೇಕು. ಅನೇಕವೇಳೆ ತರಗತಿಯಲ್ಲಿ ಮಕ್ಕಳು ಮಕ್ಕಳ ನಡುವೆ ಹಾಗೂ ಶಿಕ್ಷಕ ವಿದ್ಯಾರ್ಥಿಗಳ ಮಧ್ಯೆ ಚಾಚಿರುವ ಅಜ್ಞಾನವೇ ಒಂದು ವಿಷಯದ ತಪ್ಪುಗ್ರಹಿಕೆಗೆ ಕಾರಣವಾಗುತ್ತದೆ. ಆದ್ದರಿಂದ ಶಿಕ್ಷಕರು ಮನಸ್ಸು ಮಾಡಿದರೆ ಭವಿಷ್ಯದ ಜನಾಂಗ ಧಾರ್ಮಿಕ ಅಸಹನೆ ಹಾಗೂ ದ್ವೇಷದಿಂದ ಮುಕ್ತವಾಗುವಂತೆ ಮಾಡಬಲ್ಲರು. ಕೊಠಾರಿ ಆಯೋಗ ಭಾರತದ ಭವಿಷ್ಯ ತರಗತಿಯಲ್ಲಿ ರೂಪಿತವಾಗುತ್ತದೆ ಎಂದಿತು. ಆದರೆ ಭಾರತಕ್ಕೆ ಭವಿಷ್ಯವೇ ಇಲ್ಲದಂತೆ ಮಾಡುವ ಶಕ್ತಿಗಳು ಸಂಚು ನಡೆಸುತ್ತಿವೆ. ಕೋಮುದ್ವೇಷ ಭಾರತವನ್ನೇ ನಾಶಮಾಡಿ ಬಿಡಬಹುದು, ದೇಶವನ್ನು ಅಸ್ಥಿರಗೊಳಿಸಬಯಸುವ ಶಕ್ತಿಗಳಿಗೆ ಒಂದು ವರದಾನವಾಗಬಹುದು. ಹೀಗಾಗಬಾರದೆಂದಾದಲ್ಲಿ ಕೋಮುವಾದವನ್ನು, ಕೋಮು ರಾಜಕಾರಣವನ್ನು ಶಿಕ್ಷಣ ಸಂಸ್ಥೆಗಳಿಂದ ದೂರವಿಡಬೇಕು. ಇದು ಶಿಕ್ಷಕರು ಮಕ್ಕಳ ಹೆತ್ತವರ ಜತೆಗೂಡಿ ಮಾಡಬಹುದಾದ ಬಹಳ ದೊಡ್ಡ ರಾಷ್ಟ್ರಸೇವೆ.

(ಕೃಪೆ: ಉದಯವಾಣಿ)

------

● ಡಾ. ಮುಹಮ್ಮದ್ ಪೀರ್
ಎಂ.ಎ, ಎಮ್‌ಫಿಲ್, ಪಿಎಚ್‌ಡಿ,
ಸಮಾಜಶಾಸ್ತ್ರ ವಿಭಾಗ,
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ - 575199 (ದ.ಕ).

# ಮುಸ್ಲಿಮರ ಶೈಕ್ಷಣಿಕ ಸ್ಥಿತಿಗತಿ

ಭಾರತೀಯ ಮುಸ್ಲಿಮರ ಶೈಕ್ಷಣಿಕ ಹಿಂದುಳಿಕೆಯ ಮಟ್ಟವನ್ನು ತಿಳಿಯಲು ಯಾವುದೇ ಅಧಿಕೃತ ಅಂಕಿ - ಅಂಶಗಳು ಈ ವರೆಗೆ ಲಭ್ಯವಿಲ್ಲ. ಆದ್ದರಿಂದ ಭಾರತೀಯ ಮುಸ್ಲಿಮರ ಶೈಕ್ಷಣಿಕ ಹಿಂದುಳಿಕೆಯ ಮಟ್ಟವನ್ನು ತಿಳಿಯುವ ಜಿಜ್ಞಾಸೆಯಿರುವ ಯಾವನೇ ವ್ಯಕ್ತಿಯು, ಕೆಲವು ವಿದ್ವಾಂಸರು ಮತ್ತು ಕೆಲವು ಸ್ವತಂತ್ರ ಸಂಘಟನೆಗಳು ದೇಶದ ಕೆಲವು ಭಾಗಗಳಲ್ಲಿ ಆ ಬಗ್ಗೆ ನಡೆಸಿದ ಅಧ್ಯಯನವನ್ನು ಅವಲಂಬಿಸಬೇಕಾಗುತ್ತದೆ. ಪ್ರಸ್ತುತ ಸಮಸ್ಯೆಯ ಬಗ್ಗೆ ನಡೆಸಿದ ಕೆಲವು ಅಧ್ಯಯನಗಳು ಮುಸ್ಲಿಮರ ಶೈಕ್ಷಣಿಕ ಹಿಂದುಳಿಕೆಯ ಮಟ್ಟವು ಹಿಂದೂ ಧರ್ಮದಲ್ಲಿರುವ ಅತ್ಯಂತ ಕೀಳು ಜಾತಿಯವರಲ್ಲಿರುವ ಶೈಕ್ಷಣಿಕ ಹಿಂದುಳಿಯುವಿಕೆಯ ಮಟ್ಟಕ್ಕೆ ಸಮಾನವಾಗಿದೆ ಎಂದು ಹೇಳುತ್ತವೆ. (ಕಾಮತ್, 1968,38-47:1981:1031-33).ಬರೋಡಾ ಮುಸ್ಲಿಮ್ ಎಜ್ಯುಕೇಶನಲ್ ಸೊಸ್ಯಾಟಿಯು ಸಂಘಟಿಸಿದ ಸಮೀಕ್ಷೆಯೊಂದು ಬರೋಡಾದ ಮುಸ್ಲಿಮರು ಅಲ್ಲಿನ ಹರಿಜನರಿಗಿಂತ ಶೈಕ್ಷಣಿಕವಾಗಿ ಹೆಚ್ಚು ಅಭಿವೃದ್ಧಿ ಹೊಂದಿಲ್ಲ ಎಂಬ ಭಯಾನಕ ವಾಸ್ತವಿಕತೆಯನ್ನು ತಿಳಿಸುತ್ತದೆ. ಅಲ್ಲಿ ಐದನೇ ಮತ್ತು ಆರನೇ ತರಗತಿಗಳಲ್ಲಿ ಕಲಿಯುತ್ತಿರುವ ಮುಸ್ಲಿಮ್ ಹೆಣ್ಣು ಮಕ್ಕಳ ಸಂಖ್ಯೆಯು ಹರಿಜನ ಹೆಣ್ಣುಮಕ್ಕಳ ಸಂಖ್ಯೆಗಿಂತಲೂ ಕಡಿಮೆಯಾಗಿದೆಯೆಂದು ಅದು ಹೇಳುತ್ತದೆ (1976:3-6). ಭಾರತದಲ್ಲಿ ಅತಿ ಹೆಚ್ಚು ಸಾಕ್ಷರರಿರುವ ರಾಜ್ಯವಾದ ಕೇರಳದಲ್ಲಿಯೂ ಮುಸ್ಲಿಮರ ಶೈಕ್ಷಣಿಕ ಮಟ್ಟವು ಪರಿಶಿಷ್ಟ ಜಾತಿಗಳಿಗಿಂತ ಕೆಳಮಟ್ಟದಲ್ಲಿದೆ ಯೆಂದು ನೆಟ್ಟೂರು ಆಯೋಗದ ವರದಿ (1970) ಯ ವಿಮರ್ಶಾತ್ಮಕ ಅಧ್ಯಯನದಿಂದ ತಿಳಿದುಬರುತ್ತದೆ. ಅಲ್ಲಿ ಏಳನೇ ತರಗತಿಯವರೆಗೆ ಮುಸ್ಲಿಮರು ಮತ್ತು ಪರಿಶಿಷ್ಟ

ಜಾತಿಯವರು ಸಮಾನ ಅನುಪಾತದಲ್ಲಿ ಮುಂದುವರಿಯುತ್ತಾರೆ. ಎಂಟನೆಯ ತರಗತಿಯಿಂದ ಮುಂದೆ ಪರಿಶಿಷ್ಟ ಜಾತಿಯವರು ಮುಸ್ಲಿಮರಿಗಿಂತ ತೀವ್ರ ಅನುಪಾತದಲ್ಲಿ ಮುಂದುವರಿಯುತ್ತಾರೆ. ನೆಟ್ಟೂರು ಆಯೋಗದ ವರದಿಯು ಈ ರೀತಿ ಹೇಳುತ್ತದೆ. 'ಕೇರಳದಲ್ಲಿ ಮುಸ್ಲಿಮರು ಒಟ್ಟು ಜನಸಂಖ್ಯೆಯ ಶೇ. 19.12ರಷ್ಟಿದ್ದಾರೆ. ಆದರೆ ಅವರು ಕೇರಳದ ಒಟ್ಟು ಇಂಜಿನಿಯರಿಂಗ್ ಪದವೀಧರರ ಶೇ. 9.36ರಷ್ಟು, ವೈದ್ಯಕೀಯ ಪಧವೀಧರರ ಶೇ. 11.46ರಷ್ಟು, ಪಶುವೈದ್ಯರ ಶೇ. 6.52ರಷ್ಟು ಮತ್ತು ಬಿ.ಡಿ.ಎಸ್. ಪಧವೀಧರರ ಶೇ. 3.33ರಷ್ಟು ಮಾತ್ರವೇ ಇದ್ದಾರೆ.'

ಎ.ಬಿ. ಶಾಹ್ ವರದಿ (1981) ಯ ಪ್ರಕಾರ ಕ್ರಿ.ಶ. 1971ರಲ್ಲಿ ಮುಸ್ಲಿಮ್ ಪುರುಷ ಸಾಕ್ಷರರ ಪ್ರಮಾಣವು ಶೇ. 10 ಮತ್ತು ಸಾಕ್ಷರ ಮುಸ್ಲಿಮ್ ಸ್ತ್ರೀಯರ ಪ್ರಮಾಣವು ಕೇವಲ ಶೇ. 0.50 ಆಗಿತ್ತು. ಅವರಲ್ಲಿ ಅಧಿಕಾಂಶ ಜನರು 'ಮದ್ರಸಾ'ಗಳಲ್ಲಿ ಕಲಿತವರು ಅಥವಾ ಕೇವಲ ಪ್ರಾಥಮಿಕ ಶಿಕ್ಷಣದ ಬಳಿಕ ಕಲಿಯುವಿಕೆಯನ್ನು ಸ್ಥಗಿತಗೊಳಿಸಿದವರು ಎಂದು ಪ್ರಸ್ತುತ ವರದಿಯು ತಿಳಿಸುತ್ತದೆ. ಅವರಲ್ಲಿ ಹೆಚ್ಚು ಮಂದಿ ವಿಜ್ಞಾನದಲ್ಲಿ ತೇರ್ಗಡೆಯಾಗದೆ, ಕಾಲೇಜು ಶಿಕ್ಷಣಕ್ಕೆ ಹೋಗುವ ಅರ್ಹತೆಯನ್ನು ಕಳೆದುಕೊಂಡವರು.

ಕರ್ನಾಟಕದಲ್ಲಿ ಗೋಖಲೆ ಇನ್‌ಸ್ಟಿಟ್ಯೂಟ್ ಆಫ್ ಪೂನಾ ನಡೆಸಿದ ಸಂಶೋಧನೆಯ ಸಾರ ಹೀಗಿದೆ. 'ಮುಸ್ಲಿಮ್ ಮಕ್ಕಳ ಒಂದು ದೊಡ್ಡ ಪ್ರಮಾಣವು ಪ್ರಾಥಮಿಕ ಶಿಕ್ಷಣದಿಂದ ವಂಚಿತವಾಗಿದೆ. ಅದೇ ವೇಳೆ ಇನ್ನೊಂದೆಡೆ - ಮುಸ್ಲಿಮ್ ಮಕ್ಕಳು ಹೈಸ್ಕೂಲು ಮಟ್ಟದವರೆಗೆ ಮುಂದುವರಿಯುತ್ತಾರೆ ಮತ್ತು ಅಲ್ಲಿ ಅನುತ್ತೀರ್ಣರಾಗಿ ತಮ್ಮ ಅಕ್ಷರ ಜ್ಞಾನವನ್ನೇ ಮರೆತು ಅನಕ್ಷರಿಗಳಾಗಿ ಉಳಿಯುತ್ತಾರೆ, (ಡೆಕ್ಕನ್ ಹೆರಾಲ್ಡ್, 1984). ಶರ್ಮಾರು ದೆಹಲಿಯಲ್ಲಿ ನಡೆಸಿದ ಸಮೀಕ್ಷೆ (1971-72)ಯಿಂದ ದೆಹಲಿಯಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಮುಸ್ಲಿಮರು ಮತ್ತು ಮುಸ್ಲಿಮೇತರ ಮಕ್ಕಳ ದಾಖಲಾತಿ ಪ್ರಮಾಣದಲ್ಲಿ ಬಹಳಷ್ಟು ಅಂತರವಿರುವುದು ಕಂಡುಬರುತ್ತದೆ. ಹೈಸ್ಕೂಲ್ ದರ್ಜೆಯ ತರಗತಿಗಳಲ್ಲಿ ಮುಸ್ಲಿಮ್ ಮತ್ತು ಮುಸ್ಲಿಮೇತರ ಮಕ್ಕಳ ದಾಖಲಾತಿ ಪ್ರಮಾಣದಲ್ಲಿ ಅಂತರ ಇನ್ನಷ್ಟು ಅಧಿಕವಾಗುತ್ತದೆ. ಪ್ರಾಥಮಿಕ ಶಾಲೆಗಳಲ್ಲಿಯೇ ಹೆಚ್ಚಿನ ಮುಸ್ಲಿಮ್ ಮಕ್ಕಳು ಅನುತ್ತೀರ್ಣರಾಗುವುದು ಇದಕ್ಕೆ ಕಾರಣವಾಗಿದೆ. (ಶರ್ಮಾ 1978)

ಅಲ್ಪ ಸಂಖ್ಯಾತ ಆಯೋಗದ ಕಾರ್ಯದರ್ಶಿ ಎಸ್.ಸಿ. ಸಕ್ಸೇನ ತಮ್ಮ 'ಭಾರತದಲ್ಲಿ ಮುಸ್ಲಿಮರ ಶೈಕ್ಷಣಿಕ ಹಿಂದುಳಿಕೆ ಮತ್ತು ಸಾರ್ವಜನಿಕ ಉದ್ಯೋಗ'ದ ಬಗ್ಗೆ ಸಿದ್ಧಪಡಿಸಿರುವ ವರದಿಯಲ್ಲಿ ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ. 'ಭಾರತದಲ್ಲಿ ಮುಸ್ಲಿಮರು ಶೈಕ್ಷಣಿಕವಾಗಿ ಇತರ ಸಮುದಾಯಗಳವರಿಗಿಂತ ಹತ್ತು ಪಟ್ಟು ಅಧಿಕ ಹಿಂದುಳಿದವರಾಗಿದ್ದಾರೆ'. (ಡೆಕ್ಕನ್

ಹೆರಾಲ್ಡ್, ಡಿಸೆಂಬರ್ 27, 1983). ಮುಸ್ಲಿಮರು ಶೈಕ್ಷಣಿಕವಾಗಿ ಹಿಂದುಳಿದಿರುವುದೇ ಅವರ ಆರ್ಥಿಕ ಹಿಂದುಳಿಯುವಿಕೆಗೆ ಮೂಲ ಕಾರಣವೆಂದೂ ಅವರು ಹೇಳಿದ್ದಾರೆ. ಎ. ಆರ್. ಶೇರ್ವಾನಿಯವರು ನಡೆಸಿದ ಒಂಭತ್ತು ಇಂಟರ್ ಮೀಡಿಯಟ್ ಕಾಲೇಜುಗಳ ಸಮೀಕ್ಷೆ (ರಾಂಪುರ, 1982) ಯು ಇಂಟರ್ ಮೀಡಿಯಟ್ ಪರೀಕ್ಷೆಗೆ ಹಾಜರಾಗುವ ಮುಸ್ಲಿಮೇತರ ವಿದ್ಯಾರ್ಥಿಗಳ ಪ್ರಮಾಣವು ಮುಸ್ಲಿಮ್ ವಿದ್ಯಾರ್ಥಿಗಳಿಗೆ ಹೋಲಿಸಿದಾಗ ಎರಡುವರೆ ಪಟ್ಟು ಅಧಿಕವಾಗಿದೆ ಹಾಗೂ ಆ ಪರೀಕ್ಷೆಯಲ್ಲಿ ಪಾಸಾಗುವ ಮತ್ತು ಪ್ರಥಮ ಶ್ರೇಣಿ ಪಡೆಯುವ ಮುಸ್ಲಿಮೇತರ ವಿದ್ಯಾರ್ಥಿಗಳ ಪ್ರಮಾಣವು ಮುಸ್ಲಿಮ್ ವಿದ್ಯಾರ್ಥಿಗಳಿಗೆ ಹೋಲಿಸಿದಾಗ ಕ್ರಮವಾಗಿ ಮೂರುವರೆ ಪಟ್ಟು ಮತ್ತು ಇಪ್ಪತ್ತು ಪಟ್ಟು ಅಧಿಕವಾಗಿದೆ ಎಂದು ತಿಳಿಸುತ್ತದೆ. (ಇಂಡಿಯನ್ ಎಕ್ಸ್‌ಪ್ರೆಸ್, ಅಕ್ಟೋಬರ್ 1,1983:10)

ಶೈಕ್ಷಣಿಕ ಕೇಂದ್ರಗಳಲ್ಲಿ ಮುಸ್ಲಿಮ್ ವಿದ್ಯಾರ್ಥಿಗಳ ದಾಖಲಾತಿಯ ಪ್ರಮಾಣವು ಅವರು ಬಹುಸಂಖ್ಯೆಯಲ್ಲಿರುವ ಪ್ರದೇಶಗಳಲ್ಲಿಯೂ ಇತರರಿಗಿಂತ ಕಡಿಮೆಯೆಂಬುದು ಕುತೂಹಲ ಕಾರಿ ಅಂಶವಾಗಿದೆ. ಎ.ಆರ್. ಮೂಮಿನ್ (1978:129-33) ರ ಪ್ರಕಾರ ಭೀವಂಡಿ ನಗರದಲ್ಲಿ ಮುಸ್ಲಿಮ್ ಜನಸಂಖ್ಯೆ ಶೇ 60ರಷ್ಟಿದೆ. ಆದರೆ ಭೀವಂಡಿ ಕಾಲೇಜಿನಲ್ಲಿ ಮುಸ್ಲಿಮ್ ವಿದ್ಯಾರ್ಥಿಗಳ ಸಂಖ್ಯೆಯು ಒಟ್ಟು ವಿದ್ಯಾರ್ಥಿಗಳ ಶೇ. 30 ಮಾತ್ರ. ರಶೀದುದ್ದೀನ್ ಖಾನರ ಪ್ರಕಾರ ದೇಶದ ನಾಲ್ಕನೇ ಒಂದರಷ್ಟು ಮುಸ್ಲಿಮ್ ಜನಸಂಖ್ಯೆಯಿರುವ ಉತ್ತರಪ್ರದೇಶದ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣವು ಅವರ ಸಂಖ್ಯಾ ಬಲಕ್ಕೆ ಹೋಲಿಸಿದರೆ ಬಹಳಷ್ಟು ಕಡಿಮೆ. ಹೈಸ್ಕೂಲ್ ತರಗತಿಗಳಲ್ಲಿ ಮುಸ್ಲಿಮ್ ವಿದ್ಯಾರ್ಥಿಗಳ ಸಂಖ್ಯೆಯು ಇನ್ನೂ ಕಡಿಮೆಯಾಗುತ್ತದೆ. ಕಾಲೇಜು ಮಟ್ಟದ ಶಿಕ್ಷಣ ಪಡೆಯುವವರ ಸಂಖ್ಯೆಯು ಬೆರಳೆಣಿಕೆಯಷ್ಟು ಮಾತ್ರ (ರಶೀದುದ್ದೀನ್ ಖಾನ್ 1978:1509-15). ಭಾರತದ 15 ರಾಜ್ಯಗಳ ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿರುವ 430 ಮುಸ್ಲಿಮರೇ ನಡೆಸುವ ಶಿಕ್ಷಣ ಸಂಸ್ಥೆಗಳ ಸಮೀಕ್ಷೆ ನಡೆಸಿರುವ ಹಮ್ದರ್ದ್ ಎಜುಕೇಶನ್ ಸೊಸೈಟಿಯು ಮುಸ್ಲಿಮ್ ವಿದ್ಯಾರ್ಥಿಗಳ ಸಂಖ್ಯೆಯು ಅವರು ಮೇಲಿನ ತರಗತಿಗೆ ಹೋದಂತೆ ಕಡಿಮೆಯಾಗುತ್ತಾ ಬರುತ್ತದೆ. ಇದಕ್ಕೆ ಕಾರಣ ಅವರು ಮೇಲಿನ ತರಗತಿಗಳಲ್ಲಿ ತೇರ್ಗಡೆಯಾಗದೆ ತಮ್ಮ ವಿದ್ಯಾಭ್ಯಾಸವನ್ನು ಮೊಟಕುಗೊಳಿಸುವುದಾಗಿದೆ'' ಎಂದು ತನ್ನ ವರದಿಯಲ್ಲಿ ತಿಳಿಸಿದೆ. ಇದರಿಂದಾಗಿ ಪ್ರಾಥಮಿಕ ಶಾಲಾ ಮಟ್ಟದಲ್ಲಿ ಕೇವಲ ಶೇ. 3.7ರಷ್ಟಿರುವ ಮುಸ್ಲಿಮೇತರ ವಿದ್ಯಾರ್ಥಿಗಳ ಪ್ರಮಾಣವು ಹೈಸ್ಕೂಲು ಮಟ್ಟಕ್ಕಾಗುವಾಗ ಶೇ. 36ರಷ್ಟು ಅಧಿಕವಾಗುತ್ತದೆ. ಅದೇ ಸಂಸ್ಥೆಯು ನಡೆಸಿದ ಮುಸ್ಲಿಮರ ಅಧೀನವಿರುವ 44 ಪ್ರಥಮ ದರ್ಜೆ ಕಾಲೇಜುಗಳ ಸಮೀಕ್ಷೆಯ ಪ್ರಕಾರ ಪ್ರಸ್ತುತ ಕಾಲೇಜುಗಳಲ್ಲಿ

ಮುಸ್ಲಿಮೇತರ ವಿದ್ಯಾರ್ಥಿಗಳ ಸಂಖ್ಯೆಯು ಶೇ. 60 ರಷ್ಟಿದೆ (ಇಂಡಿಯನ್ ಎಕ್ಸ್‌ಪ್ರೆಸ್, ಅಕ್ಟೋಬರ್, 1,1983). ನಿರ್ಮಲ್ ಸಿಂಗ್, ತಮ್ಮ ಗ್ರಂಥದಲ್ಲಿ ''ಹಲೀಮ್ ಮುಸ್ಲಿಮ್'' ಕಾಲೇಜಿನಲ್ಲಿ ಮುಸ್ಲಿಮೇತರ ವಿದ್ಯಾರ್ಥಿಗಳ ಸಂಖ್ಯೆಯು ಮುಸ್ಲಿಮ್ ವಿದ್ಯಾರ್ಥಿಗಳ ಸಂಖ್ಯೆಗಿಂತ ಅಧಿಕವಿದೆ ಎಂದು ಹೇಳಿದ್ದಾರೆ (ನಿರ್ಮಲ್ ಸಿಂಗ್, 1983:95-96). ಒಂದು ಅಭಿಪ್ರಾಯದ ಪ್ರಕಾರ (ರಶೀದುದ್ದೀನ್‌ಖಾನ್, 1978:1509) ದೇಶದ ವೃತ್ತಿಪರ ಕಾಲೇಜು (Professional College) ಗಳಲ್ಲಿ ಮುಸ್ಲಿಮ್ ವಿದ್ಯಾರ್ಥಿಗಳ ಸಂಖ್ಯೆ 1977ರಲ್ಲಿ ಕೇವಲ ಶೇ. 3.5ಮಾತ್ರ. ಕೆ.ಎಲ್. ಗೌಬಾರೂ, ಭಾರತೀಯ ಮುಸ್ಲಿಮರು ಶೈಕ್ಷಣಿಕ ಮತ್ತು ಔದ್ಯೋಗಿಕ ರಂಗಗಳೆರಡರಲ್ಲೂ ಬಹಳ ಹಿಂದುಳಿದಿರುವರೆಂದು ಅಭಿಪ್ರಾಯ ಪಟ್ಟಿದ್ದಾರೆ (ಗೌಬಾ, 1978).

ಶಹಾಬುದ್ದೀನ್‌ರ ಪ್ರಕಾರ ಪಶ್ಚಿಮ ಬಂಗಾಳದಲ್ಲಿ ಮುಸ್ಲಿಮರು ಶೈಕ್ಷಣಿಕ ರಂಗದಂತೆ ಉಳಿದ ಜೀವನದ ಎಲ್ಲ ರಂಗಗಳಲ್ಲೂ ಬಹಳ ಹಿಂದುಳಿದಿದ್ದಾರೆ. ಸಾರ್ವಜನಿಕ ಉದ್ಯೋಗದಲ್ಲಾಗಲಿ, ವೃತ್ತಿಪರ ರಂಗದಲ್ಲಾಗಲಿ, ಕೈಗಾರಿಕೆ ಮತ್ತು ವಾಣಿಜ್ಯ ಕೇಂದ್ರಗಳಲ್ಲಿ ಕೂಲಿ ಕೆಲಸದಲ್ಲಾಗಲಿ ಅವರು ಮುಸ್ಲಿಮೇತರರಿಗಿಂತ ಬಹಳ ಹಿಂದುಳಿದಿದ್ದಾರೆ. (ಇಂಡಿಯನ್ ಎಕ್ಸ್‌ಪ್ರೆಸ್, 24 ನವೆಂಬರ್ 1985:5).

ಎಂ.ಕೆ.ಎ. ಸಿದ್ದೀಕಿಯ ವರದಿಯ ಪ್ರಕಾರ ಕಲ್ಕತ್ತಾ ನಗರದಲ್ಲಿ ಒಟ್ಟು ಜನಸಂಖ್ಯೆಯ ಸುಮಾರು ಶೇ. 15 ರಷ್ಟು ಮುಸ್ಲಿಮರಿದ್ದಾರೆ. ಆದರೆ ಪ್ರಾಥಮಿಕ ಶಾಲೆಗಳಲ್ಲಿ ಅವರ ದಾಖಲಾತಿ ಪ್ರಮಾಣವು ಕೇವಲ ಶೇ. 2.21ರಷ್ಟಾಗಿದ್ದು ಕಾಲೇಜು ಮತ್ತಿತರ ಶೈಕ್ಷಣಿಕ ಸಂಸ್ಥೆಗಳಲ್ಲಿ ಅವರ ದಾಖಲಾತಿಯ ಪ್ರಮಾಣವು ಶೇ 0.50ಕ್ಕಿಂತಲೂ ಕಡಿಮೆಯಾಗಿದೆ. ಮುಸ್ಲಿಮರೇ ನಡೆಸುತ್ತಿರುವ ಶಾಲೆಗಳ ಸಂಖ್ಯೆಯು ತೀರಾ ಕಡಿಮೆ. 'ನಗರದ 411 ಹೈಸ್ಕೂಲುಗಳ (220 ಹುಡುಗರ ಮತ್ತು 191ಹುಡುಗಿಯರ) ಪೈಕಿ ಮುಸ್ಲಿಮರು ನಡೆಸುವ ಹೈಸ್ಕೂಲುಗಳು ಕೇವಲ ಒಂದು ಡಜನ್‌ನಷ್ಟು ಮಾತ್ರ. ನಗರದಲ್ಲಿರುವ 94 ಕಾಲೇಜುಗಳ ಪೈಕಿ ಯಾವುದೇ ಒಂದು ಕಾಲೇಜು ಮುಸ್ಲಿಮರ ಅಧೀನದಲ್ಲಿಲ್ಲ' (1990:98-99). ಸಿದ್ದೀಕಿಯವರ ಅಭಿಪ್ರಾಯದಂತೆ 'ಮುಸ್ಲಿಮರು ನಡೆಸುವ ಶಾಲೆಗಳಲ್ಲಿ ನೀಡಲಾಗುವ ಶಿಕ್ಷಣದ ಗುಣಮಟ್ಟವು ತೀರಾ ಕಳಪೆಯಾದುದು. ಇದರಿಂದಾಗಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಮುಸ್ಲಿಮರ ಕೈಯಿಂದ ಸರಕಾರವು ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ. ಹೀಗೆ ಮುಸ್ಲಿಮ್ ವಿದ್ಯಾರ್ಥಿಗಳನ್ನು ಆ ಶಾಲೆಗಳಿಗೆ ಕಳುಹಿಸುವುದು ಕಷ್ಟಕರವಾಗುತ್ತದೆ'

'1986ರ ಹೊಸ ಶಿಕ್ಷಣ ನೀತಿ' ಯೂ ಮುಸ್ಲಿಮರು ಶೈಕ್ಷಣಿಕವಾಗಿ ಹಿಂದುಳಿದಿರುವುದನ್ನು ಒಪ್ಪಿದೆ ಮತ್ತು ಕೆಲವು ಪರಿಹಾರೋಪಾಯಗಳನ್ನು ಸೂಚಿಸಿದೆ. ಅವುಗಳಲ್ಲಿ ಕೆಲವನ್ನು ಈ ಕೆಳಗೆ ಕೊಡಲಾಗಿದೆ.

''ಕೆಲವು ಅಲ್ಪಸಂಖ್ಯಾತ ವಿಭಾಗಗಳು ಶೈಕ್ಷಣಿಕವಾಗಿ ಬಹಳಷ್ಟು ಹಿಂದುಳಿದಿವೆ. ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಆಧಾರದ ಮೇಲೆ ಈ ವಿಭಾಗಗಳ ಶೈಕ್ಷಣಿಕ ಪುರೋಭಿವೃದ್ಧಿಗೆ ಹೆಚ್ಚಿನ ಗಮನವನ್ನು ನೀಡಲಾಗುವುದು. ಅವರಿಗೆ ಸಾಂವಿಧಾನಿಕವಾಗಿ ನೀಡಲಾಗಿರುವ ಹಕ್ಕುಗಳಾದ ಸ್ವಂತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಹಕ್ಕು ಹಾಗೂ ಅವರ ಭಾಷೆ ಮತ್ತು ಸಂಸ್ಕೃತಿಯನ್ನು ರಕ್ಷಿಸುವ ಬಗ್ಗೆ ಹೆಚ್ಚಿನ ಕಾಳಜಿ ವಹಿಸಲಾಗುವುದು''

ಮುಸ್ಲಿಮರು ಶೈಕ್ಷಣಿಕರಂಗದಲ್ಲಿ ಇತರ ಸಮುದಾಯಗಳಿಗಿಂತ ಬಹಳ ಹಿಂದುಳಿದಿದ್ದಾರೆ ಎಂಬುದು ಮೇಲಿನ ವಿವರಗಳಿಂದ ಬಹಳ ಸ್ಪಷ್ಟವಾಗಿ ತಿಳಿಯುತ್ತದೆ. ಅವರನ್ನು ಮೇಲೆತ್ತುವ ಎಲ್ಲ ಅಭಿವೃದ್ಧಿ ಕಾರ್ಯಗಳೂ ಜಾಣ್ಮೆ ಮತ್ತು ಸಾಮರ್ಥ್ಯವು ಅವರಲ್ಲಿ ಅಂಕುರಿಸದಿರುವುದರಿಂದಾಗಿ ವ್ಯರ್ಥವಾಗುತ್ತದೆ. ಮುಸ್ಲಿಮರ ಶೈಕ್ಷಣಿಕ ಅಭಿವೃದ್ಧಿಗಾಗಿ ಪರಿಹಾರೋಪಾಯಗಳನ್ನು ರೂಪಿಸುವಾಗ ಅವರನ್ನು ಶಿಕ್ಷಣದಿಂದ ದೂರ ಉಳಿಯುವಂತೆ ಮಾಡುವ ಅಂಶಗಳು ಯಾವುವು ಎಂಬುದನ್ನು ಕಂಡುಕೊಳ್ಳುವುದು ಅವಶ್ಯವಾಗಿದೆ. ಅದಕ್ಕಾಗಿ ಸಮಾಜದ ವಿವಿಧ ರಂಗಗಳಲ್ಲಿ ನಿರತರಾಗಿರುವ ಅನೇಕ ಪ್ರಜ್ಞಾವಂತರಿಂದ ಪ್ರಸ್ತುತ ವಿವರಗಳನ್ನು ಸಂಗ್ರಹಿಸಲಾಗಿದೆ.

ಮುಸ್ಲಿಮರ ಪ್ರಸಕ್ತ ಸ್ಥಿತಿಗತಿಗಳಿಗೆ ಮೂಲಕಾರಣವು ಆಧುನಿಕ ಶಿಕ್ಷಣದಿಂದ ಅವರು ವಂಚಿತರಾಗಿರುವುದಾಗಿದೆ. ದಾರಿದ್ರ್ಯದ ಅನುಸಂಕಟದಿಂದಾಗಿ ಅವರು ಆಧುನಿಕ ಶಿಕ್ಷಣವನ್ನು ತಮ್ಮ ಮಕ್ಕಳಿಗೆ ನೀಡುವಷ್ಟು ಸಮರ್ಥರಾಗಿಲ್ಲ. ತಮ್ಮ ಮಕ್ಕಳ ದುಡಿಮೆಯ ಹಣವನ್ನು ಅದೆಷ್ಟು ನಗಣ್ಯವಾಗಿದ್ದರೂ ಪಡೆಯಲು ಮುಸ್ಲಿಮ್ ಮಾತಾಪಿತರು ಆತುರರಾಗಿರುತ್ತಾರೆ. ಮಾತಾಪಿತರು ತಮ್ಮ ಮಕ್ಕಳನ್ನು ಕೌಟುಂಬಿಕ ಆದಾಯದ ಗಳಿಕೆಯಲ್ಲಿ ಪಾಲುದಾರರನ್ನಾಗಿಸ ಬಯಸುತ್ತಾರೆ. ಬೆಂಗಳೂರು ನಗರದ ಮುಸ್ಲಿಮರ ಪೈಕಿ ಬಹುಸಂಖ್ಯಾತ ಜನರು ಬಹಳ ಕಷ್ಟದಾಯಕ ಬದುಕನ್ನು ಸಾಗಿಸುತ್ತಿದ್ದಾರೆ. ಅನೇಕ ಕೇರಿಗಳಲ್ಲಿ ವಾಸಿಸುತ್ತಿರುವ ಅವರ ಬದುಕು ಕರುಣಾಜನಕವಾಗಿದೆ. ಅವರ ಮನೆಗಳ ಪೈಕಿ ಸುಮಾರು ಶೇ. 60ರಷ್ಟು ಮನೆಗಳ ಸ್ಥಿತಿಯು ದನದ ಕೊಟ್ಟಿಗೆಗಿಂತ ಉತ್ತಮವಿಲ್ಲ. ಹೆಚ್ಚಿನ ಮನೆಗಳು ಬಹಳ ಇಕ್ಕಟ್ಟಾಗಿದ್ದು ಪ್ರತಿ ಮನೆಯಲ್ಲಿಯೂ ಆರರಿಂದ ಎಂಟು ಕುಟುಂಬಗಳ ಜನರು ವಾಸಿಸುತ್ತಾರೆ. ವಿದ್ಯಾಭ್ಯಾಸದ ಗಂಧಗಾಳಿಯೂ ಸೋಂಕಿರದ ಈ ಕೇರಿಗಳಲ್ಲಿ ವಾಸಿಸುವ ಒಂದೇ ಕುಟುಂಬದ ಜನರ ಮಧ್ಯೆಯೂ ಆಗಾಗ ಉಚ್ಚಸ್ವರದಲ್ಲಿ ವಾದ ಪ್ರತಿವಾದಗಳು ನಡೆಯುತ್ತಲೇ ಇರುತ್ತವೆ. ಮಾತಾಪಿತರಿಗೆ ತಮ್ಮ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಎಳ್ಳಷ್ಟೂ ಕಾಳಜಿಯಿಲ್ಲ. ಮಕ್ಕಳು ಶಾಲೆಯಿಂದ ಮರಳಿದ ಬಳಿಕ ಒಂದೋ ತಂದೆಗೆ ಕೆಲಸದಲ್ಲಿ ನೆರವಾಗುತ್ತಾರೆ ಇಲ್ಲವೆ ಬೀದಿಯಲ್ಲಿ ಆಡುತ್ತಾರೆ. ಮಾತಾಪಿತರು ತಮ್ಮ ಮಕ್ಕಳ ಕಲಿಕೆಯ ಅಭಿವೃದ್ಧಿಯ ಬಗ್ಗೆ ಚಿಂತಿಸುವುದೇ ಇಲ್ಲ ಮತ್ತು ಮಕ್ಕಳನ್ನು ಕಲಿಯುವಂತೆ ಉಪದೇಶಿಸುವುದೂ

ಇಲ್ಲ. ಮಾತಾಪಿತರ ಕಡೆಗಣಿಸುವ ಪ್ರವೃತ್ತಿ ಮತ್ತು ನಿರಕ್ಷರತೆಯು ಅವರ ಮಕ್ಕಳು ವಿದ್ಯಾಭ್ಯಾಸದಲ್ಲಿ ಆಸಕ್ತಿ ತಳೆಯದಿರುವುದಕ್ಕೆ ನೇರ ಕಾರಣವಾಗಿದೆ. ಅವರು ಶಾಲೆಗಳಿಗೆ ಆಗಾಗ ಭೇಟಿನೀಡಿ ಮಕ್ಕಳ ಕಲಿಕೆಯ ಬಗ್ಗೆ ಅಧ್ಯಾಪಕರೊಂದಿಗೆ ಚರ್ಚಿಸುವುದಿಲ್ಲ. ಅವರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವುದರ ಉದ್ದೇಶವು ಮಕ್ಕಳು ಮನೆಯಲ್ಲಿ ತಂಟೆ ಮಾಡುತ್ತಾರೆ ಎಂಬ ಕಾರಣಕ್ಕಾಗಿ ಅಥವಾ ಸರಕಾರದ ವತಿಯಿಂದ ದೊರಕುವ ಕೆಲವು ಪ್ರಯೋಜನಗಳನ್ನು ಪಡೆಯುವುದಕ್ಕಾಗಿ ಮಾತ್ರವಾಗಿದೆ. ಇದರಿಂದಾಗಿ ಮಕ್ಕಳು ತಮಗೆ ನೀಡಲಾದ ಮನೆಗೆಲಸಗಳನ್ನು (Home work) ಮಾಡದೆ ಬೇಕಾಬಿಟ್ಟಿಯಾಗಿ ಶಾಲೆಗೆ ಬರುತ್ತಾರೆ. ಇಂತಹ ಮಕ್ಕಳನ್ನು ಕಲಿಸುವ ಕೆಲಸವು ಅಧ್ಯಾಪಕರಿಗೆ ಬಹಳ ತ್ರಾಸದಾಯಕವಾಗಿರುತ್ತದೆ. ಅಧ್ಯಾಪಕರ ತೀವ್ರ ಪ್ರಯತ್ನದ ಹೊರತಾಗಿಯೂ ಇಂತಹ ವಿದ್ಯಾರ್ಥಿಗಳು ಪ್ರಥಮ ತರಗತಿಯಲ್ಲೇ ಅನುತ್ತೀರ್ಣರಾಗಿ ತಮಗೆ ದೊರಕಿದ್ದ ಅಲ್ಪ ಸ್ವಲ್ಪ ಅಕ್ಷರ ಜ್ಞಾನವನ್ನೂ ಮರೆತು ಅನಕ್ಷರಸ್ಥರಾಗಿಯೇ ಉಳಿಯುತ್ತಾರೆ.

ಪ್ರಥಮ ತರಗತಿಯಿಂದ ನಾಲ್ಕನೇ ತರಗತಿಗೆ ಬರುವಾಗ ಅವರ ಸಂಖ್ಯೆಯು ಸುಮಾರು ಅರ್ಧದಷ್ಟು ಕಡಿಮೆಯಾಗಿರುವುದು ಕಂಡುಬರುತ್ತದೆ. ಮಕ್ಕಳ ಸಂಖ್ಯೆಯು ನಾಲ್ಕನೇ ತರಗತಿಯಾಗುವಾಗ ಅರ್ಧದಷ್ಟಾಗಲು ಎರಡು ಮುಖ್ಯ ಕಾರಣಗಳಿವೆ. ಮೊದಲನೆಯದು ಮನೆಯಲ್ಲಿ ಶೈಕ್ಷಣಿಕ ವಾತಾವರಣವಿಲ್ಲದಿರುವುದರ ಪರಿಣಾಮವಾಗಿ ಮಕ್ಕಳು ಕಲಿಕೆಯಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತಾರೆ. ಮನೆಯಲ್ಲಿನ ವಾತಾವರಣವು ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹನೀಯವಾಗಿರುವುದಿಲ್ಲ. ಮಕ್ಕಳ ಗಮನವು ಕ್ಷುಲ್ಲಕ ಕಾರಣಗಳಿಂದಾಗಿ ಬೇರೆ ಕಡೆಗೆ ತಿರುಗುತ್ತದೆ ಮತ್ತು ಮನೆಯಲ್ಲಿ ಅವರನ್ನು ಕಲಿಯುವಂತೆ ಮನವೊಲಿಸುವ ಪ್ರಯತ್ನವನ್ನು ಯಾರೂ ಮಾಡುವುದಿಲ್ಲ. ದೌರ್ಭಾಗ್ಯದಿಂದ ಕಲಿಕೆಗೆ ಸಂಬಂಧಿಸದ ಚಟುವಟಿಕೆಗಳಲ್ಲಿ ಮಕ್ಕಳು ಪಾಲ್ಗೊಳ್ಳುವುದನ್ನು ತಂದೆ ತಾಯಿಗಳು ಪ್ರೋತ್ಸಾಹಿಸುತ್ತಾರೆ. ಈ ಎಲ್ಲ ಕಾರಣಗಳಿಂದಾಗಿ ಮಕ್ಕಳು ಕಲಿಕೆಯಲ್ಲಿ ಹಿಂದುಳಿಯುತ್ತಾರೆ ಮತ್ತು ಕೊನೆಗೆ ಶಾಲೆಯನ್ನು ತೊರೆಯುತ್ತಾರೆ. ಎರಡನೆಯದಾಗಿ ಮಾತಾಪಿತರು ಮಕ್ಕಳನ್ನು ತಮ್ಮ ದುಡಿಮೆಯಲ್ಲಿ ಪಾಲುದಾರರಾಗಿಸುತ್ತಾರೆ ಮತ್ತು ಆ ಮೂಲಕ ಕುಟುಂಬದ ಆದಾಯವನ್ನು ಹೆಚ್ಚಿಸಬಯಸುತ್ತಾರೆ. ಅವರು ತಮ್ಮ ಮಕ್ಕಳನ್ನು ಕಲಿಯುವಂತೆ ಹೇಳುವುದಿಲ್ಲ. ಏಳನೇ ತರಗತಿಗೆ ಕಾಲಿರಿಸುವುದಕ್ಕೆ ಮುಂಚೆ ಶೇ.25ರಷ್ಟು ವಿದ್ಯಾರ್ಥಿಗಳ ಇನ್ನೊಂದು ಕಂತು ವಿದ್ಯಾಭ್ಯಾಸಕ್ಕೆ ತಿಲಾಂಜಲಿಯಿತ್ತು ಹೊರಬರುತ್ತದೆ. ಉಳಿದ ಶೇ. 20-25ರಷ್ಟು ವಿದ್ಯಾರ್ಥಿಗಳು ಮಾತ್ರ ಹೈಸ್ಕೂಲು ತರಗತಿಗಳಿಗೆ ಹೋಗುತ್ತಾರೆ. ಹೈಸ್ಕೂಲಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಪೈಕಿ ಕೇವಲ ಶೇ. 50ರಷ್ಟು ಮಾತ್ರ 10 ನೇ ತರಗತಿಯನ್ನು ತಲುಪುತ್ತಾರೆ ಎಂಬುದು ಬಹಳ ಸೋಜಿಗದ ವಿಷಯವಾಗಿದೆ.

ವಿದ್ಯಾಭ್ಯಾಸದ ಮಾಧ್ಯಮವೂ ಮುಸ್ಲಿಮ್ ಮಕ್ಕಳಿಗೆ ದೊಡ್ಡ ತೊಡಕಾಗಿ ಪರಿಣಮಿಸುತ್ತದೆ. ಈ ಪರಿಸ್ಥಿತಿಯು ನಗರಗಳಲ್ಲೂ ಗ್ರಾಮೀಣ ಪ್ರದೇಶಗಳಲ್ಲಿಯೂ ಒಂದೇ ಸವನೆ ಮುಸ್ಲಿಮ್ ಮಕ್ಕಳ ವಿದ್ಯಾಭ್ಯಾಸಕ್ಕೆ ತಡೆಯೊಡ್ಡುತ್ತದೆ.

ಅಸ್ಗರ್ ಅಲಿ ಇಂಜಿನಿಯರ್‌ರ ವರದಿಯಂತೆ ಶೇ. 80ಕ್ಕಿಂತಲೂ ಅಧಿಕ ಮುಸ್ಲಿಮರು ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ಕಡು ಬಡತನದಲ್ಲಿ ಜೀವಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಮುಸ್ಲಿಮರು ಭೂರಹಿತ ಕೃಷಿಕರಾಗಿದ್ದು ಆಧುನಿಕ ಕೃಷಿತಂತ್ರಜ್ಞಾನದ ಅಲ್ಪ ಸ್ವಲ್ಪ ಪ್ರಯೋಜನವನ್ನು ಪಡೆಯುವವರಾಗಿದ್ದಾರೆ. ನಗರ ಪ್ರದೇಶಗಳಲ್ಲಿ ವಾಸಿಸುವ ಮುಸ್ಲಿಮರು ಸಣ್ಣ ವ್ಯಾಪಾರಿಗಳು, ಮೆಕ್ಯಾನಿಕ್‌ಗಳು, ಕೂಲಿಕಾರ್ಮಿಕರು, ಸಹಾಯಕರು, ರಿಕ್ಷಾಚಾಲಕರು, ಮೀನುಗಾರರು, ಬೀಡಿಕಾರ್ಮಿಕರು, ಕಟುಕರು, ಮೇಸ್ತ್ರಿಗಳು, ಕಮ್ಮಾರರು ಹಾಗೂ ನೇಯ್ಗೆಗಾರರು, ತಮ್ಮ ಬಡತನದಿಂದಾಗಿ ಅವರು ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸುವಷ್ಟು ಆರ್ಥಿಕವಾಗಿ ಶಕ್ತರಲ್ಲ. ಇತ್ತೀಚೆಗೆ ಸರ್ದಾರ್ ಪಟೇಲ್ ಇನ್ಸಿಟಿಟ್ಯೂಟ್ ಫಾರ್ ಸೋಶಿಯಲ್ ಎಂಡ್ ಇಕಾನಾಮಿಕ್ ರಿಸರ್ಚ್, ಅಹ್ಮದಾಬಾದ್ ನಡೆಸಿದ ಸಮೀಕ್ಷೆಯು ಮಕ್ಕಳನ್ನು ಶಿಕ್ಷಣಕ್ಕೆ ಪ್ರೇರೇಪಿಸುವ ಅಥವಾ ಧೈರ್ಯಗುಂದಿಸುವ ಅಂಶಗಳ ಪೈಕಿ ಸಾಮಾಜಿಕ ಪರಿಸ್ಥಿತಿಯು ಅತಿ ಹೆಚ್ಚು ಪ್ರಭಾವಶಾಲಿ ಅಂಶವಾಗಿದೆ ಎಂದಿದೆ.

ಶಿಕ್ಷಣದ ಬಗೆಗಿನ ಅಜ್ಞಾನವು ಮುಸ್ಲಿಮರನ್ನು ತಮ್ಮ ಮಕ್ಕಳಿಗೆ ಆಧುನಿಕ ವಿದ್ಯಾಭ್ಯಾಸವನ್ನು ಕೊಡಿಸುವುದರಿಂದ ದೂರ ಉಳಿಸುತ್ತದೆ. ಅವರು ತಮ್ಮ ಆರ್ಥಿಕ ಕಾರಣಗಳಿಂದಾಗಿ ಕ್ಷಿಪ್ರವಾಗಿ ದೊರೆಯುವ ಸವಲತ್ತುಗಳಿಗೆ ಮಾರುಹೋಗುತ್ತಾರೆ. ತಮ್ಮ ಭಾವೀ ಜೀವನವನ್ನು ಶಿಕ್ಷಣವು ಉತ್ತಮಗೊಳಿಸುತ್ತದೆಂಬುದೇ ಹೆಚ್ಚಿನ ಮುಸ್ಲಿಮರಿಗೆ ತಿಳಿದಿಲ್ಲ. ಮುಸ್ಲಿಮರಲ್ಲಿ ಕಂಡುಬರುವ ಶಿಕ್ಷಣದ ಬಗೆಗಿನ ಈ ವೈರಾಗ್ಯಕ್ಕೆ ಅವರಲ್ಲಿ ಶಿಕ್ಷಿತರು ಮತ್ತು ಅಶಿಕ್ಷಿತರ ನಡುವೆ ಯಾವುದೇ ರೀತಿಯ ಸಂಬಂಧವಿಲ್ಲದಿರುವುದು ಒಂದು ಕಾರಣವಾಗಿದೆ. ಮುಸ್ಲಿಮರಲ್ಲಿ ಶಿಕ್ಷಿತ ವರ್ಗವು ಅಶಿಕ್ಷಿತ ಸಮೂಹದೊಂದಿಗೆ ಯಾವುದೇ ರೀತಿಯ ಸಂಪರ್ಕವಿಟ್ಟುಕೊಳ್ಳದಿರುವುದರ ಜೊತೆಗೆ ಶಿಕ್ಷಣವು ಒಂದು ಬಹುವೆಚ್ಚದ ಸಾಧನ ಮತ್ತು ಅದನ್ನು ಗಳಿಸಲು ಬಹಳ ಪರಿಶ್ರಮದ ಅಗತ್ಯವಿದೆಯೆಂಬ ಭಾವನೆಯನ್ನೂ ಅಶಿಕ್ಷಿತ ಸಮೂಹದಲ್ಲಿ ಬಿತ್ತಲು ಯತ್ನಿಸುತ್ತಾರೆ. ಮುಸ್ಲಿಮರಲ್ಲಿ ಬಹಳ ಅಲ್ಪ ಪ್ರಮಾಣದಲ್ಲಿರುವ ಶ್ರೀಮಂತರು ತಮ್ಮ ಸಮುದಾಯದ ಜನರ ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಯಾವುದೇ ರೀತಿಯ ಕಾಳಜಿಯನ್ನೂ ವಹಿಸುವುದಿಲ್ಲ.

ಮುಸ್ಲಿಮ್ ನಾಯಕರ ತಟಸ್ಥ ನಿಲುವೂ ಭಾರತದಲ್ಲಿ ಮುಸ್ಲಿಮರ ಶೈಕ್ಷಣಿಕ ಅವ್ಯವಸ್ಥೆಗೆ ಕಾರಣವಾಗಿದೆ. ಮುಸ್ಲಿಮ್ ಮುಖಂಡರ ಒಂದು ದೊಡ್ಡ ವಿಭಾಗವು ಮುಸ್ಲಿಮರ

ಯಾವುದೇ ನೈಜ ಸಮಸ್ಯೆಗಳ ಬಗ್ಗೆ ಕಾಳಜಿವಹಿಸದೆ ಅವರನ್ನು ಆಧುನಿಕ ಶಿಕ್ಷಣದಿಂದ ದೂರ ಉಳಿಯುವಂತೆ ಮಾಡುವ ಶಕ್ತಿಗಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ ಎಂಬುದು ಬಹಳ ಖೇದದ ಸಂಗತಿಯಾಗಿದೆ. ಮುಸ್ಲಿಮರ ಭಾವನಾತ್ಮಕ ವಿಷಯಗಳಾದ ಮುಸ್ಲಿಮ್ ಪರ್ಸನಲ್ ಲಾ, ಉರ್ದು ಭಾಷೆ, ಮಸೀದಿ ಮತ್ತು ದಫನ ಭೂಮಿಯಂತಹ ಪ್ರಶ್ನೆಗಳನ್ನೆತ್ತಿ ಜನಸಾಮಾನ್ಯರಲ್ಲಿ ಆ ಬಗ್ಗೆ ಭಯದ ವಾತಾವರಣವನ್ನು ಮುಸ್ಲಿಮ್ ಮುಖಂಡರು ನಿರ್ಮಿಸುತ್ತಿದ್ದಾರೆ. ಆ ಮೂಲಕ ತಮ್ಮ ನಾಯಕತ್ವವನ್ನು ಬಲಪಡಿಸುವ ಪ್ರಯತ್ನದಲ್ಲಿ ಅವರು ನಿರತರಾಗುತ್ತಾರೆ. ಅವರು ಮುಸ್ಲಿಮ್ ಸಮುದಾಯವನ್ನು ಕಾಡುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ನೇರವಾಗಿ ಎದುರಿಸುವಲ್ಲಿ ವಿಫಲರಾಗುತ್ತಾರೆ.

ಈ ವಿವರಗಳಿಂದ ಭಾರತದಲ್ಲಿ ಮುಸ್ಲಿಮರ ಶೈಕ್ಷಣಿಕ ಹಿನ್ನಡೆಯ ಕಾರಣಗಳನ್ನು ಹೀಗೆ ಹೇಳಬಹುದು. ಭೀಕರ ಬಡತನ, ಶಿಕ್ಷಣದ ಪ್ರಾಮುಖ್ಯತೆಯ ಬಗೆಗಿನ ಅಜ್ಞಾನ, ಸ್ವಯಂ ಸೇವಾ ಮನೋಭಾವದ ಕೊರತೆ, ಶಿಕ್ಷಣ ಮತ್ತು ಉದ್ಯೋಗಾವಕಾಶಗಳ ಬಗೆಗೆ ಸಮೂಹದಲ್ಲಿ ತಿಳುವಳಿಕೆ ಹುಟ್ಟಿಸದಿರುವುದು, ಶಿಕ್ಷಣವು ಒಂದು ದುಬಾರಿ ಕೆಲಸ ಎಂಬ ತಪ್ಪುತಿಳುವಳಿಕೆ ಹಾಗೂ ಪ್ರಚೋದನೆ ಮತ್ತು ಪ್ರೋತ್ಸಾಹ ಇಲ್ಲದಿರುವುದು.

ಮುಸ್ಲಿಮರನ್ನು ಶೈಕ್ಷಣಿಕವಾಗಿ ಹಿಂದುಳಿಸುವಂತಹ ಅಂಶಗಳನ್ನು ಗಮನದಲ್ಲಿಟ್ಟು ಅವರ ಪ್ರಸಕ್ತ ಶೈಕ್ಷಣಿಕ ಮಟ್ಟವನ್ನು ಸುಧಾರಿಸಲು ನಾವು ಪರಿಣಾಮಕಾರಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕಾಗಿದೆ. ಮುಸ್ಲಿಮರು ಏನು ಮಾಡಬೇಕಾಗಿದೆ? ಸರಕಾರದ ಕರ್ತವ್ಯವೇನು? ಯಾವೆಲ್ಲ ಅಂಶಗಳ ಕಡೆಗೆ ಕ್ಷಿಪ್ರವಾಗಿ ಗಮನ ಹರಿಸುವುದು ಅಗತ್ಯ? ಮುಸ್ಲಿಮ್ ಸಂಘಟನೆಗಳು ಯಾವ ಪಾತ್ರ ವಹಿಸಬೇಕು? ಯಾವ ರೀತಿಯಲ್ಲಿ ಇದಕ್ಕೆ ನಿಧಿ ಸಂಗ್ರಹಿಸಬೇಕು? ಹೇಗೆ ವಿವಿಧ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಿಸಬಹುದು? ಯಾರು ಈ ಕಾರ್ಯದ ನೇತೃತ್ವವಹಿಸಬೇಕು? ಶಿಕ್ಷಣ ತಜ್ಞರೊ, ರಾಜಕೀಯ ಮುಖಂಡರೊ, ಧಾರ್ಮಿಕ ನೇತಾರರೊ, ವೃತ್ತಿ ಪರರೊ, ನಿವೃತ್ತ ಜನರೊ, ಜನಸಾಮಾನ್ಯರೊ?

ಇವರಲ್ಲಿ ಪ್ರತಿಯೋರ್ವರಿಗೂ ಹೊಣೆಗಾರಿಕೆಯಿದೆ. ಇದು ಕೇವಲ ಮುಸ್ಲಿಮರ ಸಮಸ್ಯೆಯಲ್ಲ. ಇದೊಂದು ರಾಷ್ಟ್ರೀಯ ಸಮಸ್ಯೆಯಾಗಿದೆ. ಆದ್ದರಿಂದ ಮುಸ್ಲಿಮ್‌ಜನಸಮೂಹವನ್ನು ಶೈಕ್ಷಣಿಕ ಪ್ರಗತಿಯೆಡೆಗೆ ಮುಂದುವರಿಸುವುದು, ಅವರಲ್ಲಿ ಶೈಕ್ಷಣಿಕ ಜಾಗೃತಿಯನ್ನುಂಟು ಮಾಡುವುದು ಮತ್ತು ಅದಕ್ಕಾಗಿ ಸಾಂಘಿಕವಾಗಿ ಹೋರಾಡುವುದು ದೇಶದ ಪ್ರತಿಯೋರ್ವ ಅಕ್ಷರಸ್ಥ ಪ್ರಜೆಯ ಕರ್ತವ್ಯವಾಗಿದೆ. ವಿಶೇಷವಾಗಿ ಮುಸ್ಲಿಮರ ಬುದ್ಧಿಜೀವಿ ವರ್ಗವು ಈ ನಿಟ್ಟಿನಲ್ಲಿ ಬಹಳ ಪ್ರಮುಖ ಪಾತ್ರವಹಿಸಬೇಕಾಗಿದೆ. ಮುಸ್ಲಿಮ್ ಧಾರ್ಮಿಕ ನೇತಾರರು, ರಾಜಕೀಯ ಮುಖಂಡರು, ಸಮರ್ಥ ವ್ಯಕ್ತಿಗಳು ಮತ್ತು ಯುವಜನತೆಯ ಸುಸಂಘಟಿತ

ಪರಿಶ್ರಮವು ಇದಕ್ಕೆ ಅತಿ ಅವಶ್ಯವಾಗಿದೆ. ಸಾಮೂಹಿಕ ಚಿಂತನೆ ಮತ್ತು ಸೇವಾ ಮನೋವೃತ್ತಿಯು ಭಾರತೀಯ ಮುಸ್ಲಿಮರ ಶೈಕ್ಷಣಿಕ ಮಟ್ಟವನ್ನು ಸುಧಾರಿಸಲು ಅಗತ್ಯವಾಗಿದೆ. ಭಾರತೀಯ ಮುಸ್ಲಿಮರ ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ಸರಕಾರವೂ ಗಹನವಾಗಿ ಚಿಂತಿಸಬೇಕಾಗಿದೆ. ಸರಕಾರವು ತನ್ನ ಧೋರಣೆ, ಕಾರ್ಯಕ್ರಮ ಮತ್ತು ಸಾಮೀಪ್ಯಗಳ ಮೂಲಕ ಕ್ಷಿಪ್ರ ಬದಲಾವಣೆಗಳನ್ನು ತರಲು ಪ್ರಯತ್ನಿಸಬೇಕಾಗಿದೆ. ಒಟ್ಟಿನಲ್ಲಿ ವಿಶೇಷ ಆಸ್ಥೆ ಮತ್ತು ಮಾನಸಿಕ ಬದ್ಧತೆಯು ಅತೀ ಅಗತ್ಯವಾಗಿದೆ.

ಸರಕಾರ, ಮುಸ್ಲಿಮ್ ಸಂಘಟನೆಗಳು ಮತ್ತು ಮುಸ್ಲಿಮ್ ಸಮುದಾಯವು ಈ ನಿಟ್ಟಿನಲ್ಲಿ ಮಾಡಬಹುದಾದ ಕಾರ್ಯಗಳನ್ನು ಕೆಳಗೆ ನೀಡಲಾಗಿದೆ.

**ಸರಕಾರ ಏನು ಮಾಡಬೇಕು?**

1. ಮುಸ್ಲಿಮ್ ಸಂಘಸಂಸ್ಥೆಗಳನ್ನು ಶೈಕ್ಷಣಿಕ ಕೇಂದ್ರಗಳನ್ನು ಸ್ಥಾಪಿಸುವಂತೆ ಪ್ರೋತ್ಸಾಹಿಸಬೇಕು. ವಿಶೇಷವಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳನ್ನು ಸ್ಥಾಪಿಸುವಂತೆ ಪ್ರೇರೇಪಿಸಬೇಕು.
2. ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ದೀರ್ಘಕಾಲೀನ ಆರ್ಥಿಕ ನೆರವನ್ನು ಒದಗಿಸಬೇಕು.
3. ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ರೀತಿಯಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಬೇಕು.
4. ಶಿಕ್ಷಣ ಸಂಸ್ಥೆಗಳಲ್ಲಿ ಮುಸ್ಲಿಮ್ ವಿದ್ಯಾರ್ಥಿಗಳಿಗೆ ಕೆಲವು ನಿಶ್ಚಿತ ಶೇಕಡ ಸೀಟುಗಳನ್ನು ಕಾದಿರಿಸಬೇಕು. ಪರಿಶಿಷ್ಟ ಜಾತಿಗಳವರಿಗೆ ನೀಡುವ ಹಾಸ್ಟೆಲ್ ಸವಲತ್ತುಗಳನ್ನು ಒದಗಿಸಬೇಕು.

**ಮುಸ್ಲಿಮ್ ಸಂಘಟನೆಗಳ ಜವಾಬ್ದಾರಿಕೆಯೇನು?**

1. ಔದ್ಯೋಗಿಕ ಕೋರ್ಸ್‌ಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆಸಬೇಕು.
2. ಪ್ರತಿಯೊಂದು ಮೊಹಲ್ಲಾದಲ್ಲೂ ಪ್ರಾಥಮಿಕ ಶಾಲೆಯನ್ನು ತೆರೆಯಬೇಕು.
3. ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಕೋಚಿಂಗ್ ತರಗತಿಗಳನ್ನು ಏರ್ಪಡಿಸಬೇಕು.
4. ಪ್ರಾಥಮಿಕ ತರಗತಿಗಳಲ್ಲೇ ಅನುತ್ತೀರ್ಣರಾಗುವುದನ್ನು ತಡೆಯಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು.
5. ವಯಸ್ಕರ ಶಿಕ್ಷಣವನ್ನು ಏರ್ಪಡಿಸಬೇಕು.
6. ವೈದ್ಯಕೀಯ ಮತ್ತು ತಾಂತ್ರಿಕ ಪ್ರವೇಶ ಪರೀಕ್ಷೆಗಳನ್ನು ಎದುರಿಸಲು ಸಮರ್ಪಕವಾದ ತರಬೇತಿ ನೀಡಬೇಕು.
7. ಆರ್ಥಿಕ ಕಾರಣಗಳಿಂದಾಗಿ ವಿದ್ಯಾಭ್ಯಾಸವನ್ನು ಮೊಟಕುಗೊಳಿಸುವ-ವಿದ್ಯಾರ್ಥಿಗಳಿಗೆ

ನೆರವಾಗಲು ಸಾರ್ವಜನಿಕರಿಂದ ಹಣ ಸಂಗ್ರಹಿಸುವ ಮೂಲಕ ನಿಧಿಯೊಂದನ್ನು ಸ್ಥಾಪಿಸಬೇಕು.

8. ಉದ್ಯೋಗ ತರಬೇತಿಯಂತಹ ಶೈಕ್ಷಣಿಕ ಕಾರ್ಯಕ್ರಮಗಳನ್ನು ಅರೆಬಿಕ್ ಮದ್ರಸಾಗಳಲ್ಲಿ ಅವುಗಳ ಬಿಡುವಿನ ವೇಳೆಯಲ್ಲಿ ಏರ್ಪಡಿಸಬೇಕು.
9. ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಬೇಕು. ಅವರಿಗೆ ಹೊಲಿಗೆ, ನೇಯ್ಗೆ ಮತ್ತಿತರ ವಿಷಯಗಳಲ್ಲಿ ತರಬೇತಿ ನೀಡುವ ಕಾರ್ಯಕ್ರಮಗಳನ್ನು ಯೋಜಿಸಬೇಕು.
10. ಜಿಲ್ಲೆಯಲ್ಲಿ ಒಂದರಂತೆ ಮುಸ್ಲಿಮ್ ಹಾಸ್ಟೆಲ್ (ವಸತಿಗೃಹ) ಸ್ಥಾಪಿಸಬೇಕು.
11. ಶೈಕ್ಷಣಿಕ ಸವಲತ್ತುಗಳ ಬಗ್ಗೆ ಮತ್ತು ಉದ್ಯೋಗಾವಕಾಶಗಳ ಬಗ್ಗೆ ಮಾಹಿತಿಗಳನ್ನೊದಗಿಸಬೇಕು.

**ಸಮುದಾಯದ ಹೊಣೆಗಾರಿಕೆ ಏನು?**

1. ಶಿಕ್ಷಿತರು ಮತ್ತು ಅಶಿಕ್ಷಿತರ ಮಧ್ಯೆ ಸಂಪರ್ಕವೇರ್ಪಡುವ ಅವಕಾಶವನ್ನುಂಟು ಮಾಡಬೇಕು.
2. ಬೆಟರ್ಮೆಂಟ್ ಕಮಿಟಿಗಳನ್ನು ಸ್ಥಾಪಿಸಿ ಶಾಲೆಗೆ ಹೋಗುತ್ತಿರುವ ವಿದ್ಯಾರ್ಥಿಗಳ ಸಮೀಕ್ಷೆ ನಡೆಸಬೇಕು.
3. ಬೆಟರ್ಮೆಂಟ್ ಕಮಿಟಿಗಳ ಮೂಲಕ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯವನ್ನು ಒದಗಿಸಬೇಕು.
4. ವಕ್ಫ್ ಸೊತ್ತುಗಳನ್ನು ಶೈಕ್ಷಣಿಕ ಕಾರ್ಯಗಳಿಗಾಗಿ ಉಪಯೋಗಿಸಬೇಕು.

(ಕನ್ನಡಕ್ಕೆ: ತುಫೈಲ್, ಮಂಗಳೂರು.)

● ಎ. ಎಸ್. ಪುತ್ತಿಗೆ
ಬ್ರದರ್ಸ್ ಶೆಲ್ಟರ್,
ಮಿತ್ತಬೈಲು - 574 226 (ದ.ಕ).

# ಮುಸ್ಲಿಮರ ಶೈಕ್ಷಣಿಕ ಸಮಸ್ಯೆಗಳು:

# ಪತನಗಾಥೆ ಮತ್ತು ಉತ್ಥಾನಪಥ

ಶಿಕ್ಷಣ ಮತ್ತು ವಿಜ್ಞಾನ ಕ್ಷೇತ್ರದಲ್ಲಿ ಮುಸ್ಲಿಮರು ಜಗತ್ತಿನ ಅತ್ಯಂತ ಮುಂದುವರಿದ ಸಮುದಾಯವಾಗಿದ್ದ ಕಾಲವೊಂದಿತ್ತು. ಕ್ರಮೇಣ ಈ ಮಹಿಮೆ ಯುರೋಪಿಗೆ ವರ್ಗಾಯಿಸಲ್ಪಟ್ಟಿತು. ಸಮಾಜದ ನಾಯಕತ್ವವು ಬೇಜವಾಬ್ದಾರಿಯುತ ಸ್ವಾರ್ಥಿಗಳ ಕೈಗೆ ಹೋದಾಗ ಮತ್ತು ಜ್ಞಾನವಂತ ವರ್ಗವು ಜ್ಞಾನವನ್ನು ವ್ಯಾಪಿಸುವುದು ಬಿಟ್ಟು ಧರ್ಮಶಾಸ್ತ್ರ ಮತ್ತು ತತ್ವಶಾಸ್ತ್ರದ ಸೂಕ್ಷ್ಮ ಗೊಂದಲಮಯ ವಿಷಯಗಳಲ್ಲಿ ಕೇಶಾಗ್ರಖಂಡನದಲ್ಲಿ ನಿರತರಾದಾಗ, ಸಮಾಜದ ಸೂತ್ರಧಾರಿಗಳು ವಸಾಹತುಶಾಹಿಗಳ ಕೈಯಲ್ಲಿ ತಮ್ಮ ಸ್ವಾತಂತ್ರ್ಯವನ್ನು ಅಡವಿಟ್ಟು ಬಿಡುವಷ್ಟು ಭಟ್ಟಂಗಿತನ, ಹೇಡಿತನಗಳನ್ನು ಬೆಳೆಸಿಕೊಂಡಾಗ ಮತ್ತು ರಾಷ್ಟ್ರೀಯವಾದದ ಸಹಿತ ಎಲ್ಲ ಹೊಸ ಸಂಕುಚಿತವಾದಗಳಿಗೆ ತಮ್ಮನ್ನು ಮಾರಿಕೊಂಡು ವಿಚ್ಛಿದ್ರರಾದಾಗ - ಅವನತಿ ಸ್ವಾಭಾವಿಕ ಅಥವಾ ಅನಿವಾರ್ಯ ಆಗಿಬಿಟ್ಟಿತು. ಈ ರೀತಿ ಪತನದ ಮಾರ್ಗ ತುಳಿದ ಪರಿಣಾಮವಾಗಿಯೇ ಮುಸ್ಲಿಮ್ ಜಗತ್ತು ತನ್ನೆಲ್ಲಾ ಚೈತನ್ಯವನ್ನು ಕಳೆದುಕೊಂಡು 20ನೇ ಶತಮಾನದ ತೀವ್ರ ಪೈಪೋಟಿಯ ಜಗತ್ತಿನಲ್ಲಿ ಕೇವಲ ವೀಕ್ಷಕ ಸ್ಥಾನವನ್ನು ಅಲಂಕರಿಸಬೇಕಾಯಿತು.

ಇಂದು ಮುಸ್ಲಿಮರ ಮಟ್ಟಿಗೆ ಶೈಕ್ಷಣಿಕ ಹಿಂದುಳಿಕೆ ಒಂದು ಜಾಗತಿಕ ಪ್ರಕ್ರಿಯೆ. ಮುಸ್ಲಿಮರೇ ಆಳುತ್ತಿರುವ ಜಗತ್ತಿನ ಇತರ ಅನೇಕ ರಾಷ್ಟ್ರಗಳನ್ನು ಬಿಟ್ಟು ನಮ್ಮ ನಿಕಟ ನೆರೆಯಲ್ಲಿರುವ ಎರಡು ದೇಶಗಳನ್ನೇ ನೋಡಿ. ಯಾವುದೇ ''ಮುಸ್ಲಿಮ್ ವಿರೋಧಿ ಸಂಚಿನ'' ಅಥವಾ ಯಾವುದೇ ''ಯೋಜನಾ ಬದ್ಧ ದಮನ ನೀತಿ'' ಯ ಅನುಪಸ್ಥಿತಿಯಲ್ಲೂ

ಅಲ್ಲಿಯ ಮುಸ್ಲಿಮರು ಶಿಕ್ಷಣದಲ್ಲಿ ಭಾರತೀಯ ಮುಸ್ಲಿಮರಷ್ಟೇ ಹಿಂದೆ ಇರುವುದನ್ನು ಗಮನಿಸಬಹುದು.

ಭಾರತೀಯ ಮುಸ್ಲಿಮರು ಶಿಕ್ಷಣರಂಗದಲ್ಲಿ ಹಿಂದುಳಿದಿದ್ದರೆ ಅದೊಂದು ಹಠಾತ್ ಪ್ರಕ್ರಿಯೆ ಅಲ್ಲ, ಅವರ ಇಂದಿನ ನಿರಾಸಕ್ತಿಯ ಕೆಲವು ಬೇರುಗಳು ಇತಿಹಾಸದಲ್ಲಿವೆ. ನಮ್ಮ ದೇಶದ ಚರಿತ್ರೆಯ ಒಂದು ಗಣನೀಯ ಭಾಗ "ಮುಸ್ಲಿಮ್ ಆಳ್ವಿಕೆಯ ಕಾಲ" ಎಂದು ಗುರುತಿಸಲ್ಪಡುತ್ತದೆ. ಅದು ಹಾಗೆ ಕರೆಯಲ್ಪಡುವುದಕ್ಕೆ, ಆ ಕಾಲದಲ್ಲಿ ಕೆಲವು ಮುಸ್ಲಿಮ್ ವ್ಯಕ್ತಿಗಳು ಆಡಳಿತಗಾರರಾಗಿದ್ದರು ಎಂಬುದು ಮಾತ್ರ ಕಾರಣ. ನಿಜವಾಗಿ ಮುಸ್ಲಿಮರು ಒಂದು ವರ್ಗವೆಂಬ ನೆಲೆಯಲ್ಲಿ ಎಂದೂ ಈ ದೇಶದ ಆಡಳಿತಗಾರರಾಗಿರಲಿಲ್ಲ. ಅವರೆಂದೂ 'ಆಡಳಿತವರ್ಗ' ಆಗಿರಲಿಲ್ಲ. ಮುಸ್ಲಿಮ್ ದೊರೆಗಳೂ ಇತರೆಲ್ಲ ದೊರೆಗಳಂತೆ ಸ್ವತಃ ತಮ್ಮ ಸಿಂಹಾಸನದ ಭದ್ರತೆ ಮತ್ತು ಸಾಮ್ರಾಜ್ಯದ ವಿಸ್ತರಣೆಯಲ್ಲಿ ಆಸಕ್ತರಾಗಿದ್ದರು, ತಮ್ಮ ಪ್ರಜೆಗಳ ಶೈಕ್ಷಣಿಕ ಉದ್ಧಾರದ ಬಗ್ಗೆ ಅವರಲ್ಲಿ ಹೆಚ್ಚಿನವರು ವಿಶೇಷ ಕಾಳಜಿಯನ್ನೇನೂ ಪ್ರದರ್ಶಿಸಲಿಲ್ಲ. ಸರಕಾರೀ ಹುದ್ದೆಗಳಲ್ಲಿ ಅರ್ಹತೆಯ ಆಧಾರದಲ್ಲಿ ಎಲ್ಲ ಪ್ರಜೆಗಳಿಗೂ ಸಮಾನ ಅವಕಾಶ ಇದ್ದುದರಿಂದ ಮತ್ತು ಯಾವುದೇ 'ಕಪ್ಪು ಪಟ್ಟಿ' ಅಸ್ತಿತ್ವದಲ್ಲಿ ಇರಲಿಲ್ಲವಾದ್ದರಿಂದ ಶಿಕ್ಷಣದ ವಿಷಯದಲ್ಲಿ ಎಲ್ಲರಿಗೆ ಸಮಾನ ಉತ್ತೇಜನ ಇತ್ತೆನ್ನಬಹುದು. ಅಂದಿನ ಆರ್ಥಿಕ ಬವಣೆಗಳಲ್ಲೂ ಮುಸ್ಲಿಮರು ಸಮಾನ ಪಾಲುದಾರರಾಗಿದ್ದರು, ಜಮೀನ್ದಾರಿ ಪದ್ಧತಿಯಡಿಯಲ್ಲಿ ಹಿಂದೂ-ಮುಸ್ಲಿಮರಿಬ್ಬರೂ ಸಮಾನವಾಗಿ ನರಳಿದ್ದರು.

ಆದರೆ ಬ್ರಿಟಿಷ್ ಆಳ್ವಿಕೆ ಆರಂಭವಾದ ಬಳಿಕ ವಿಶೇಷತಃ 18ನೇ ಶತಮಾನದ ಉತ್ತರಾರ್ಧದಲ್ಲಿ ಮುಸ್ಲಿಮರು 'ಕಪ್ಪು ಪಟ್ಟಿ'ಗೆ ಸೇರಿಕೊಂಡರು. ಆಂಗ್ಲರ ವಿರುದ್ಧ ಬಂಡಾಯದ ಒಲವುಳ್ಳ ವರ್ಗ ಹಾಗೂ ಹಳೆಯ ದೊರೆಗಳಿಗೆ ನಿಷ್ಠೆ ಉಳಿಸಿಕೊಂಡಿರುವ ವರ್ಗ ಎಂಬ ನೆಲೆಯಲ್ಲಿ ಅವರು ಬ್ರಿಟಿಷರ ಕೋಪ-ತಾಪಗಳಿಗೆ ತುತ್ತಾದರು. ಅವರನ್ನು ದಮನಿಸುವ ನೀತಿ ಮುಖ್ಯವಾಗಿ ಬಂಗಾಳದಿಂದ ಆರಂಭವಾಯಿತು. ಅಲ್ಲಿ ಪ್ರಥಮವಾಗಿ ಮುಸ್ಲಿಮರನ್ನು ಆಡಳಿತ ಯಂತ್ರದಿಂದ ದೂರದಬ್ಬಲಾಯಿತು. ಪರ್ಶಿಯನ್ ಭಾಷೆಯನ್ನು ಕಿತ್ತೊಗೆದು ಅದರ ಸ್ಥಾನದಲ್ಲಿ ಆಂಗ್ಲ ಭಾಷೆಯನ್ನು ಆಡಳಿತ ಭಾಷೆಯಾಗಿ ಮಾಡಲಾಯಿತು. ಮುಸ್ಲಿಮ್ ಜಮೀನ್ದಾರರನ್ನು ಆರಿಸಿ ಅವರಿಂದ ಅವರ ಜಮೀನುಗಳನ್ನು ಕಿತ್ತುಕೊಳ್ಳಲಾಯಿತು. 19ನೇ ಶತಮಾನದ ಪೂರ್ವಾರ್ಧದಲ್ಲಿ ಬಂಗಾಳದೊಳಗೆ ಮುಸ್ಲಿಮ್ ನೇತೃತ್ವದಲ್ಲಿ ನಡೆದ ಬಂಡಾಯವನ್ನು ಕ್ರೂರವಾಗಿ ಹತ್ತಿಕ್ಕಿದ ಬಳಿಕವಂತೂ ಬ್ರಿಟಿಷರು ಮುಸ್ಲಿಮರ ವಿರುದ್ಧ ಒಂದು ಬಗೆಯ ಬೇಟೆಯನ್ನೇ ಆರಂಭಿಸಿದರು. ವಿವಿಧ ಮುಸ್ಲಿಮ್ ಶೈಕ್ಷಣಿಕ-ಧಾರ್ಮಿಕ ಸಂಸ್ಥೆಗಳಿಗೆ ಹಿಂದಿನ ದೊರೆಗಳು ನೀಡಿದ್ದ ತೆರಿಗೆ ರಹಿತ ಆಸ್ತಿಗಳನ್ನೆಲ್ಲಾ ವಶಪಡಿಸಿಕೊಳ್ಳುವ ಮೂಲಕ ಶಿಕ್ಷಣಕ್ಷೇತ್ರದಲ್ಲಿ ಮುಸ್ಲಿಮರಿಗೆ ಪ್ರಾಪ್ತವಿದ್ದ ಸ್ವಾಯತ್ತತೆ

ಯನ್ನು ಕೊನೆಗಾಣಿಸಿದರು. ಕ್ರಮೇಣ ಬ್ರಿಟಿಷರು ತಮ್ಮ ಅಧಿಕಾರವು ವಿಸ್ತರಿಸಿದಲ್ಲಿಗೆಲ್ಲಾ ತಮ್ಮ ಈ ದಮನ ನೀತಿಯನ್ನೂ ವಿಸ್ತರಿಸಿದರು. ಮುಸ್ಲಿಮರು ಪ್ರಧಾನ ಪಾತ್ರವಹಿಸಿದ್ದ 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಬಳಿಕವಂತೂ ಅವರು ಬಹುಕಾಲದ ವರೆಗೆ ದೇಶಾದ್ಯಂತ ಬ್ರಿಟಿಷರ ಅವಕೃಪೆಗೆ ತುತ್ತಾಗಿರಬೇಕಾಯಿತು.

ಬ್ರಿಟಿಷರ ಆಡಳಿತಾವಧಿಯು ಮುಸ್ಲಿಮರನ್ನು ಭಾರತದ ಇತರ ಜನಸಮುದಾಯಗಳಿಂದ ಬೇರ್ಪಡಿಸಿ ಅವರನ್ನು ಏಕಾಂತದ ಗೊಂಡಾರಣ್ಯಕ್ಕೆ ತಳ್ಳಿ ಬಿಡುವ ಅವಧಿಯೂ ಆಗಿತ್ತು. ಇದರಲ್ಲಿ ಬ್ರಿಟಿಷರು ಸಂಚುಗಳನ್ನು ಹೂಡುವ ಮೂಲಕ ಮತ್ತು ಕೆಲವು ಮೇಲ್ಜಾತಿಯ ವರ್ಗಗಳು ಈ ಸಂಚುಗಳನ್ನು ಪ್ರೋತ್ಸಾಹಿಸುವ ಮೂಲಕ ಪಾತ್ರವಹಿಸಿದರೆ ಮುಸ್ಲಿಮರು ಪೆದ್ದುಪೆದ್ದಾಗಿ ಆ ಸಂಚಿಗೆ ಕೊರಳೊಡ್ಡುವ ಮೂಲಕ ತಮ್ಮದೇ ಅವನತಿಯಲ್ಲಿ ಪಾತ್ರವಹಿಸಿದರು.

ಮುಸ್ಲಿಮರನ್ನು ಮೂಲೆ ಗುಂಪಾಗಿಸಲು ಬ್ರಿಟಿಷರು ಕೈಗೊಂಡ ಕೆಲವು ಪ್ರಮುಖ ಕ್ರಮಗಳೇನೆಂದರೆ:- 1. ಆ ತನಕ ಚಲಾವಣೆಯಲ್ಲಿದ್ದ ಮತ್ತು ಮುಸ್ಲಿಮರು ಗಣನೀಯ ಸಂಖ್ಯೆಯಲ್ಲಿ ಪ್ರವೀಣರಾಗಿದ್ದ ಪರ್ಶಿಯನ್, ಉರ್ದು ಭಾಷೆಗಳನ್ನು ನೇಪಥ್ಯಕ್ಕೆ ಕಳುಹಿಸಿ ಇಂಗ್ಲಿಷ್ ಭಾಷೆಯನ್ನು ಹೇರಿದ್ದು. (ಇಂದು ನಮ್ಮ ಕರ್ನಾಟಕ ಸರಕಾರ ಹಠಾತ್ತನೆ ಕನ್ನಡವನ್ನು ರದ್ದುಗೊಳಿಸಿ ತಮಿಳು ಭಾಷೆಯನ್ನೇ ಅಧಿಕೃತವೆಂದು ಮಾನ್ಯಮಾಡಿ, ಉದ್ಯೋಗ ಇತ್ಯಾದಿಗೆಲ್ಲಾ ತಮಿಳು ಪದವಿಯನ್ನು ನಿರ್ಬಂಧಗೊಳಿಸಿದರೆ ಉಂಟಾಗಬಹುದಾದ ಅನಾಹುತಕಾರಿ ಪರಿಣಾಮಗಳೇ ಅಂದಿನ ಹಠಾತ್ ಇಂಗ್ಲಿಷ್ ಹೇರಿಕೆಯಿಂದ ಉಂಟಾದುವು) 2. ಸರಕಾರದಿಂದ ಪೋಷಿತ ಶಾಲೆಗಳಲ್ಲಿ ಧಾರ್ಮಿಕ ವಿದ್ಯಾಭ್ಯಾಸವನ್ನು ರದ್ದುಗೊಳಿಸಲಾರಂಭಿಸಿದ್ದು. 3. ಒಡೆದು ಆಳುವ ನೀತಿಯ ಪ್ರಾಥಮಿಕ ಹಂತವಾಗಿ ಪಠ್ಯಪುಸ್ತಕಗಳಲ್ಲಿ ಮುಸ್ಲಿಮರ ವಿರುದ್ಧ ವಿದ್ವೇಷ ಬೆಳೆಸುವಂತಹ ಅಂಶಗಳನ್ನು ವ್ಯಾಪಕವಾಗಿ ಸೇರಿಸಲಾರಂಭಿಸಿದ್ದು. 4. ಉದ್ಯೋಗ ಕ್ಷೇತ್ರದಲ್ಲಿ, ಮುಸ್ಲಿಮರ ಪರಂಪರಾಗತ ಸಂಸ್ಥೆಗಳು, ನೀಡಿದ ಪದವಿಗಳಿಗೆ ಮನ್ನಣೆ ನಿರಾಕರಿಸಿ ಹೊಸ ಮಾನದಂಡಗಳನ್ನು ಅಧಿಕೃತಗೊಳಿಸಿದ್ದು.

ಒಂದು ಸಮುದಾಯವು ತನಗೆ ಪ್ರತಿಕೂಲವಾದ, ಅಪರಿಚಿತವಾದ ಹೊಸ ವಾಸ್ತವಿಕತೆಗಳನ್ನು ಎದುರಿಸುತ್ತಿರುವಾಗ ಅದಕ್ಕೆ ಭಾರೀ ದೂರದೃಷ್ಟಿಯುಳ್ಳ ವಿವೇಕ ಪೂರ್ಣ ಮತ್ತು ಧೈರ್ಯಶಾಲಿಯಾದ ನಾಯಕತ್ವದ - ಮತ್ತು ಆ ಮೂಲಕ ಮಾರ್ಗದರ್ಶನದ - ಅಗತ್ಯವಿರುತ್ತದೆ. ಬದಲಾದ ಪರಿಸ್ಥಿತಿಯ ಸವಾಲುಗಳನ್ನು ಎದುರಿಸಲು; ತನ್ನತನವನ್ನು ಪೂರ್ಣವಾಗಿ ಉಳಿಸಿಕೊಂಡು ತನ್ನ ವಿಕಾಸಕ್ಕೆ ಪೂರಕವಾಗುವ ರೀತಿಯಲ್ಲಿ ಹೊಸ ಸನ್ನಿವೇಶಕ್ಕೆ ಒಗ್ಗಿಕೊಂಡು ಮುನ್ನಡೆಯಲು ಸಮರ್ಥ ನೇತೃತ್ವ, ಸುಸಜ್ಜಿತ ಸಂಘಟನಾ ವ್ಯವಸ್ಥೆ ಮತ್ತು ಸೂಕ್ತ ಸಂಪರ್ಕ ವ್ಯವಸ್ಥೆ ಅನಿವಾರ್ಯವಾಗಿರುತ್ತದೆ. ದುರದೃಷ್ಟವಶಾತ್ ಇಂದಿನಂತೆ

ಅಂದುಕೂಡಾ ಅದೆಲ್ಲಾ ಮುಸ್ಲಿಮರಿಗೆ ರಾಷ್ಟ್ರಮಟ್ಟದಲ್ಲಿ ಲಭ್ಯವಿರಲಿಲ್ಲ. ಇದರ ಪರಿಣಾಮವಾಗಿ ಅಂದಿನ ಸನ್ನಿವೇಶದಲ್ಲಿ ಮುಸ್ಲಿಮರು, ಅಂತಿಮವಾಗಿ ತಮಗೇ ಮಾರಕವಾಗುವಂತಹ ಅಪ್ರಬುದ್ಧ ಧೋರಣೆಗಳನ್ನು ತಳೆದರು.

ಇಂಗ್ಲಿಷ್ ಭಾಷೆಯ ವಿಷಯವನ್ನೇ ತೆಗೆದುನೋಡಿ. ಇಂದು ಯಾವ ಭಾರತೀಯ ಮುಸಲ್ಮಾನನೂ ಈ ಭಾಷೆಯನ್ನು ದ್ವೇಷಿಸುವುದಿಲ್ಲ. ಕೆಲವೆಡೆಯಂತೂ ಒಳ್ಳೊಳ್ಳೆಯ ಮುಸಲ್ಮಾನರು ಪ್ರಾದೇಶಿಕ ಭಾಷೆಗಳಿಗಿಂತ ಇಂಗ್ಲಿಷ್‌ಗೆ ಆದ್ಯತೆ ಕೊಡುವುದುಂಟು. ಆದರೆ ಅಂದು? ಅಂದು ಇಂಗ್ಲಿಷ್ ಭಾಷೆ ಹೇರಲ್ಪಟ್ಟಾಗ ಮುಸಲ್ಮಾನರು ಅದನ್ನು ಬಹಿಷ್ಕರಿಸಬೇಕಾದುದು ತಮ್ಮ ಧಾರ್ಮಿಕ ಕರ್ತವ್ಯ ಎಂದು ಭಾವಿಸಿಕೊಂಡರು. ಇಂಗ್ಲಿಷ್ ಶಿಕ್ಷಣದ ಪರವಾಗಿ ಮಾತನಾಡಿದ ಮುಸಲ್ಮಾನರ (ಉದಾ:ಸರ್‌ಸಯ್ಯದ್) ಧರ್ಮನಿಷ್ಠೆಯನ್ನೇ ಪ್ರಶ್ನಿಸಿದರು.

ವಾಸ್ತವಿಕತೆಗಳು ಕಹಿಯಾಗಿವೆ ಎಂಬ ಕಾರಣಕ್ಕಾಗಿ ಅವುಗಳನ್ನು ಕುರುಡಾಗಿ ಬಹಿಷ್ಕರಿಸಿ ಬಿಡುವವರು ಅಂತಿಮವಾಗಿ ಕಣ್ತೆರೆದು ಅವುಗಳನ್ನು ಸ್ವೀಕರಿಸಲೇಬೇಕಾಗುತ್ತದೆ. ಆದರೆ ತೀರಾ ಅನಿವಾರ್ಯವೆಂದು ಅವರು ಒಲ್ಲದ ಮನಸ್ಸಿನಿಂದ ಅದನ್ನು ಸ್ವೀಕರಿಸಲು ಹೊರಡುವಾಗ ಆಗಲೇ ಸಮಯ ಮೀರಿರುತ್ತದೆ. ಮುಸ್ಲಿಮರು ಇಂಗ್ಲಿಷ್ ಭಾಷೆಯನ್ನು ಮತ್ತು ಆಧುನಿಕ ಶಿಕ್ಷಣವನ್ನು ಬಹಿಷ್ಕರಿಸಿದರು, ಸ್ವೀಕರಿಸಿದರು. ಆದರೆ ಇವೆರಡರ ನಡುವೆ ಸಮಯ ನಿಂತಿರಲಿಲ್ಲ.

ಬ್ರಿಟಿಷರನ್ನು ವಿರೋಧಿಸಿ ಅವರನ್ನು ದೇಶದಿಂದ ಓಡಿಸಬೇಕಾದುದು ಖಂಡಿತ ಅಗತ್ಯವಾಗಿತ್ತು. ಆದರೆ ಅವರ ಸಂಚುಗಳಿಗೆ ಕೇವಲ ಭಾವೋದ್ರಿಕ್ತ ಪ್ರತಿಕ್ರಿಯೆ ತೋರಿಸುವ ಮೂಲಕ ಹಾಗೆ ಮಾಡಲು ಸಾಧ್ಯವಿರಲಿಲ್ಲ. ಅಂದಿನ ಪರಿಸ್ಥಿತಿಯಲ್ಲಿ ಮುಸ್ಲಿಮರು, ಪರ್ಯಾಪ್ತವಾದ ಪರ್ಯಾಯ ವ್ಯವಸ್ಥೆಗಳನ್ನೆಲ್ಲಾ ಮಾಡಿ ಇಂಗ್ಲಿಷನ್ನು ಬಹಿಷ್ಕರಿಸಿದ್ದರೆ ಅಥವಾ ಇಂಗ್ಲಿಷನ್ನು ಸ್ವೀಕರಿಸಿಕೊಂಡು ಅದೇ ವೇಳೆ ತಮ್ಮ ಧಾರ್ಮಿಕ, ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಳ್ಳಲು ಬೇಕಾದ ಪರ್ಯಾಯ ಉಪಾಧಿಗಳು ಸ್ಥಾಪಿತವಾಗುವಂತೆ ನೋಡಿಕೊಂಡಿದ್ದರೆ ಅದೊಂದು ಪ್ರಬುದ್ಧ ಕ್ರಮ ಎನಿಸಿಕೊಳ್ಳುತ್ತಿತ್ತು. ಅದು ಬ್ರಿಟಿಷರ ಸಂಚಿಗೆ ಒಂದು ಸಮರ್ಥ ಪ್ರತಿವ್ಯೂಹ ಆಗುತ್ತಿತ್ತು. ಆದರೆ ಅದೇನೂ ಮಾಡದೆ ಬಂದುದನ್ನು ಬಹಿಷ್ಕರಿಸಿ, ಇದ್ದುದನ್ನು ಕಳೆದುಕೊಂಡು ಮುಸ್ಲಿಮರು ಸುಲಭವಾಗಿ ಕುರಿಗಳಾದರು. ಶಿಕ್ಷಣ, ಆಡಳಿತ ಮತ್ತು ಉದ್ಯೋಗದ ಕ್ಷೇತ್ರಗಳನ್ನು ಖಾಲಿ ಮಾಡಿ ಸಂಪೂರ್ಣವಾಗಿ ಮೇಲ್ಜಾತಿಯ ಕೆಲವು ಜಾಣರಿಗೆ ಬಿಟ್ಟು ಕೊಟ್ಟರು.

ಕೆಟ್ಟ ಅನುಭವಗಳಿಂದ ಪಾಠಕಲಿಯದವರಿಗೆ ಕೆಟ್ಟ ಅನುಭವಗಳೇ ಭಾಗ್ಯವಾಗಿ ಬಿಡುತ್ತವೆ. ಗುಲಾಮ ಭಾರತದ ಬಳಿಕ ಸ್ವತಂತ್ರ ಭಾರತದಲ್ಲಿ ಮುಸ್ಲಿಮರು

ಅನುಭವಿಸುತ್ತಿರುವ ಪರಿಸ್ಥಿತಿಯು ಅದನ್ನೇ ಸೂಚಿಸುತ್ತಿದೆ.

ಸ್ವತಂತ್ರ ಭಾರತದಲ್ಲಿಂದು ಮುಸ್ಲಿಮರ ಮುಂದೆ ಸಮಸ್ಯೆಗಳ ಸರಮಾಲೆಯೇ ಇದೆ. ಶೈಕ್ಷಣಿಕ ಹಿಂದುಳಿಯುವಿಕೆ ಆ ಪೈಕಿ ಒಂದು ಸಮಸ್ಯೆ ಮಾತ್ರ. ಸಮಾಜದ ಯಾವುದಾದರೂ ಒಂದು ಸಮಸ್ಯೆಯನ್ನು, ಆ ಸಮಾಜದ ಒಟ್ಟು ಅವಸ್ಥೆಯಿಂದ ಬೇರ್ಪಡಿಸಿ ಅರ್ಥವಿಸಿಕೊಳ್ಳಲು ಸಾಧ್ಯವಿಲ್ಲ. ಹಾಗೆಯೇ ಈ ಸಮಸ್ಯೆಗಳಿಗೆ ಮತ್ತು ಈ ಅವಸ್ಥೆಗೆ ಜನ್ಮ ನೀಡುವಲ್ಲಿ ಪಾತ್ರವಹಿಸಿದ ಬಾಹ್ಯಪ್ರಕ್ರಿಯೆಗಳನ್ನು ಅಂದರೆ ಅನ್ಯರ 'ಉದಾರ ಕೊಡುಗೆ'ಗಳನ್ನು ಕಡೆಗಣಿಸಲಿಕ್ಕೂ ಸಾಧ್ಯವಿಲ್ಲ. ಅದಕ್ಕೆಲ್ಲಾ ತನ್ನದೇ ಆದ ಮಹತ್ವ ಖಂಡಿತ ಇದೆ. ಆದರೆ ತನ್ನ ಅವಸ್ಥೆಗೆ ಅನ್ಯರನ್ನು ದೂಷಿಸುವುದರಲ್ಲೇ ಮಗ್ನವಾಗಿರುವ ತನಕ ಆ ಅವಸ್ಥೆಯಿಂದ ಹೊರ ಬರಲು ಯಾವ ಸಮುದಾಯಕ್ಕೂ ಸಾಧ್ಯವಾಗದು. ಸಮಸ್ಯೆಯನ್ನು ಬಗೆಹರಿಸಲು ನಿಜಕ್ಕೂ ಆಸಕ್ತರಾಗಿರುವವರು ಅದರ ಮೂಲಗಳನ್ನು ವಿಶ್ಲೇಷಿಸುವಾಗ ಅದರ ನಿರ್ಮಾಣದಲ್ಲಿ ತಾವು ನೀಡಿದ ಕೊಡುಗೆಗಳನ್ನು ಅಭ್ಯಸಿಸುವುದಕ್ಕೆ ಪ್ರಥಮ ಆದ್ಯತೆ ನೀಡಬೇಕು. ಏಕೆಂದರೆ ಅನ್ಯರು ತಪ್ಪಿತಸ್ಥರೆಂದು ಸಾಬೀತು ಪಡಿಸುವ ಮೂಲಕ ನಾವು ಸಾಧಿಸುವಂತಹದ್ದೇನೂ ಇಲ್ಲ. ಅನ್ಯರನ್ನು ಸರಿಪಡಿಸುವುದು ನಮ್ಮ ಕೈಯಲ್ಲಿಲ್ಲ. ಇತ್ತ ನಮ್ಮ ತಪ್ಪುಗಳು ನಮಗೆ ಮನವರಿಕೆಯಾದರೆ ನಾವು ನಮ್ಮನ್ನು ಸರಿಪಡಿಸಿಕೊಳ್ಳಲು ಮುಂದಾಗಬಹುದು. ಸದ್ಯ ನಮ್ಮ ಸಮಸ್ಯೆಯನ್ನು ಬಗೆಹರಿಸುವ ಪ್ರಾಯೋಗಿಕ ವಿಧಾನಕೂಡಾ ಇದುವೇ.

ಉಪಭೂಖಂಡದ ಸ್ವಾತಂತ್ರ್ಯ ಮತ್ತು ವಿಭಜನೆ ಎರಡೂ ಒಟ್ಟೊಟ್ಟಿಗೆ ಸಂಭವಿಸಿದವು. ಉಪಭೂಖಂಡ ಹೋಳಾದಾಗ ಮುಸ್ಲಿಮರೂ ಹೋಳಾದರು. ಈ ಪೈಕಿ ಅತಿದೊಡ್ಡ ದುರಂತಕ್ಕೆ ಒಳಗಾದುದು ಭಾರತೀಯ ಮುಸ್ಲಿಮರು. ಅವರು ಅನ್ನದ ಮುಂದೆ ಕುಳಿತು ಹಸಿದಿರಬೇಕಾಯಿತು. 47ರ ನಂತರ ಇತರೆಲ್ಲ ಭಾರತೀಯರ ಇತಿಹಾಸದ ಆರಂಭವು ಸ್ವಾತಂತ್ರ್ಯದ ಜೊತೆಗೆ ಜೋಡಿಸಲ್ಪಡುವಾಗ ಭಾರತೀಯ ಮುಸಲ್ಮಾನರ ಇತಿಹಾಸದ ಆರಂಭವನ್ನು ಮಾತ್ರ ವಿಭಜನೆಯ ಜೊತೆ ಜೋಡಿಸಲಾಯಿತು. ಅಂದು ಅವರ ವಿರುದ್ಧ ಎಬ್ಬಿಸಲಾದ ದ್ವೇಷದ ಬಿರುಗಾಳಿಯೆದುರು ಅವರಿಗೆ ತಮ್ಮ ಭೌತಿಕ ಅಸ್ತಿತ್ವವನ್ನು ಉಳಿಸಿಕೊಳ್ಳುವುದೇ ಒಂದು ದೊಡ್ಡ ಸವಾಲಾಗಿತ್ತು. ಇನ್ನು ತಮ್ಮ ಧಾರ್ಮಿಕ-ಸಾಂಸ್ಕೃತಿಕ ಅಸ್ತಿತ್ವದ ಬಗ್ಗೆ ಮಾತನಾಡಲು ಅಥವಾ ಸ್ವಾಭಿಮಾನ, ಆತ್ಮವಿಶ್ವಾಸ ಮತ್ತು ಪೈಪೋಟಿಯ ಫಲ ಇತ್ಯಾದಿಗಳ ಬಗ್ಗೆ ಆಲೋಚಿಸಲು ಕೂಡಾ ಆಗಿನ ಸನ್ನಿವೇಶವು ಅನುಕೂಲಕರವಾಗಿರಲಿಲ್ಲ. ಆಗ ಮತ್ತೆ ಮುಸ್ಲಿಮರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಭವಿಷ್ಯದ ಹಿತ-ಅಹಿತಗಳ ಬಗ್ಗೆ ಅಧಿಕಾರವಾಣಿಯಿಂದ ಅವರಿಗೆ ಮಾರ್ಗದರ್ಶನ ನೀಡಬಲ್ಲ ನಾಯಕತ್ವವಾಗಲಿ, ರಾಷ್ಟ್ರಮಟ್ಟದಲ್ಲಿ ಮುಸ್ಲಿಮರನ್ನು ಒಂದು ಅಭಿಪ್ರಾಯದಲ್ಲಿ ಒಗ್ಗೂಡಿಸಿ

ಅವರನ್ನು ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಸಾಗಿಸಲು ಅಥವಾ ಯಾವುದಾದರೂ ದೀರ್ಘಕಾಲೀನ ಯೋಜನೆಯೊಂದರ ಅನುಷ್ಠಾನಕ್ಕೆ ಅವರನ್ನು ತೊಡಗಿಸಲು ಬೇಕಾದ ಸಂಘಟನೆ ಮತ್ತು ಸಂಪರ್ಕ ವ್ಯವಸ್ಥೆಯಾಗಲೀ ಅಸ್ತಿತ್ವದಲ್ಲಿರಲಿಲ್ಲ. ಈ ರೀತಿ ಆಂಗ್ಲರ ಆಗಮನದ ವೇಳೆ ತಲೆ ಎತ್ತಿದ ಪರಿಸ್ಥಿತಿಯೇ ಮುಸ್ಲಿಮರ ಪಾಲಿಗೆ ಮತ್ತೆ ಹೆಡೆಬಿಚ್ಚಿತು.

19ನೇ ಶತಮಾನದ ವಿಶಾಲ ಭಾರತದ ಮುಸ್ಲಿಮರ ವರ್ತನೆ ಮತ್ತು 20ನೇ ಶತಮಾನದ ಸ್ವತಂತ್ರ ಭಾರತದ ಮುಸ್ಲಿಮರ ವರ್ತನೆಯ ಮಧ್ಯೆ ಹಲವು ಗಮನಾರ್ಹ ಸಾಮ್ಯಗಳಿವೆ.

ಉದಾ:- 1. ಬ್ರಿಟಿಷರು ಮುಸ್ಲಿಮರಲ್ಲಿ ಅನಾಥ ಪ್ರಜ್ಞೆಯನ್ನು ಮತ್ತು ಉಳಿದವರಿಗಿಂತ ತಾವು ಭಿನ್ನರೆಂಬ ಪ್ರಜ್ಞೆಯನ್ನು ಬೆಳೆಸಿ ಅವರನ್ನು ಏಕಾಂತಕ್ಕೆ ತಳ್ಳಬಯಸಿದ್ದರು. ಮುಸ್ಲಿಮರು ಕೂಡಾ ಬ್ರಿಟಿಷರ ಈ ಬಯಕೆ ಸುಲಭವಾಗಿ ಈಡೇರುವಂತೆಯೂ ವರ್ತಿಸಿದರು. ತಮ್ಮ ಇತಿಹಾಸವನ್ನು, ಅಳಿದ ಅಥವಾ ಸೋತ ಹಳೆಯ ಮುಸ್ಲಿಮ್ ರಾಜಮನೆತನಗಳಿಗೆ ಜೋಡಿಸಿ ತಾವು ಎಲ್ಲವನ್ನೂ ಕಳಕೊಂಡವರೆಂದು ಸ್ವತ: ಅವರೇ ನಂಬಲಾರಂಭಿಸಿದರು. ಇಂತಹ ನಂಬಿಕೆ ಪಲಾಯನವಾದಿಗಳಿಗೆ ಹರ್ಷಕೊಡುತ್ತದೆ. ಆದರೆ ಅದೇ ವೇಳೆ ಪತನದ ವೇಗವನ್ನೂ ಹೆಚ್ಚಿಸುತ್ತದೆ. ಭಾರತ ಸ್ವತಂತ್ರವಾದ ನಿಕಟೋತ್ತರ ದಿನಗಳಲ್ಲಿ ಭಾರತೀಯ ಮುಸ್ಲಿಮರು ವಿಭಜನೆಯ ಅಪರಾಧಿಗಳೆಂಬ ಘೋರ ಸುಳ್ಳು ವ್ಯಾಪಕ ಪ್ರಚಾರದಲ್ಲಿದ್ದಾಗ ಅದನ್ನು ಇತರೆಲ್ಲರಿಗಿಂತ ಹೆಚ್ಚಾಗಿ ಮುಸ್ಲಿಮರೇ ನಂಬಿಕೊಂಡರು. ಭಾರತ ಪ್ರಜಾಸತ್ತಾತ್ಮಕ ರಾಷ್ಟ್ರವೆಂದು ಘೋಷಿತವಾದ ಬಳಿಕವೂ, ಈ ದೇಶ ಎಷ್ಟು ಇತರರದೋ ಅಷ್ಟೇ ತಮ್ಮದು ಕೂಡಾ ಎಂದು ನಂಬಲು ಹಲವರಿಗೆ ಸಾಧ್ಯವಾಗಲಿಲ್ಲ. ಪ್ರಜಾಸತ್ತೆಯ ಮೂಲಕ ತಾವು ದೇಶದ ಸಮಾನ ಮಾಲಕರಾಗಿ ಬಿಟ್ಟ ಬಳಿಕವೂ ತಮ್ಮ ಭವಿಷ್ಯವನ್ನು ಬಿಟ್ಟು ದೇಶದ ಭವಿಷ್ಯದ ಜೊತೆ ಗುರುತಿಸಿಕೊಳ್ಳುವ ಆತ್ಮ ವಿಶ್ವಾಸವಾಗಲಿ ಮನೋವೈಶಾಲ್ಯವಾಗಲಿ ಅವರಲ್ಲಿ ಬೆಳೆಯಲಿಲ್ಲ.

ಮುಸ್ಲಿಮರನ್ನು ಭಾರತದ ದ್ವಿತೀಯ ದರ್ಜೆಯ ಪ್ರಜೆಗಳಾಗಿ ಮಾಡಬೇಕೆಂಬ ಅಮಾನುಷ ಹಾಗೂ ಅನಾಗರಿಕ ಗುರಿಯೊಂದಿಗೆ ಅಂದು ಸಕ್ರಿಯರಾಗಿದ್ದ (ಮತ್ತು ಈ ಗುರಿ ಸಾಧನೆಯ ಮಾರ್ಗದಲ್ಲೇ ಗಾಂಧೀಜಿಯನ್ನು ಕೊಂದ) ಶಕ್ತಿಗಳು ಇಂದು ಕೂಡಾ ಆ ತಮ್ಮ ಕನಸನ್ನು ಜೀವಂತವಾಗಿ ಉಳಿಸಿಕೊಂಡು ಪೋಷಿಸುತ್ತಿರುವುದಕ್ಕೆ, ಮುಸ್ಲಿಮರು ತಮ್ಮ ಮೇಲೆ ಹೇರಿಕೊಂಡಿರುವ ಪ್ರಸ್ತುತ ಅನಾಥ ಪ್ರಜ್ಞೆ ಕೂಡಾ ಒಂದು ಪ್ರಮುಖ ಪ್ರೇರಕವಾಗಿದೆ. ದೇಶದ ಮೇಲೆ ತಮಗೂ ಸಮಾನ ಸ್ವಾಮ್ಯ ಇದೆ ಎಂಬ ಆತ್ಮ ವಿಶ್ವಾಸ ಬೆಳೆಸಿಕೊಂಡು ಮುಸ್ಲಿಮರು ತಮ್ಮ ಸ್ವಘೋಷಿತ ಏಕಾಂತದ ಸೆರೆಯಿಂದ ಹೊರ ಬರುವ ತನಕ ಇಂತಹ ದುಷ್ಟಕನಸುಗಳು ಭಗ್ನಗೊಳ್ಳಲಾರವು. ಕೀಳರಿಮೆ

ವ್ಯಕ್ತಿಯಂತೆ ಸಮಾಜದ ಮಟ್ಟಿಗೆ ಒಂದು ತುಂಬಲಾಗದ ಭಾರವಾಗಿ ಪರಿಣಮಿಸುತ್ತದೆ. ತಲೆಯೆತ್ತಿ ಮುನ್ನಡೆಯ ಬಯಸುವವರು ಭಾರವನ್ನು ಕಿತ್ತೆಸೆಯಬೇಕು.

ಸುಳ್ಳೆಂಬ ದೇವರ ಭಕ್ತರು ಇಂದು 'ತುಷ್ಟೀಕರಣ, ತುಷ್ಟೀಕರಣ' ಎಂದು ಅರಚುತ್ತಿರುವುದು ಮುಸ್ಲಿಮರಲ್ಲಿ ಅಪರಾಧಿ ಮನೋಭಾವವನ್ನು ಹುಟ್ಟಿಸಲಿಕ್ಕಾಗಿ ಎಂಬುದನ್ನು ಸಮಾಜವು ಅರ್ಥ ಮಾಡಿಕೊಳ್ಳಬೇಕು. ಹಸಿದವನ ಮುಂದೆ 'ಇವನಿಗೆ ಹೊಟ್ಟೆ ತುಂಬಿದೆ' ಎಂದು ಯಾರಾದರೂ ಬೊಬ್ಬೆ ಹಾಕಿದೊಡನೆ ಅವನು ತನ್ನ ಹೊಟ್ಟೆ ನಿಜಕ್ಕೂ ತುಂಬಿದೆ ಎಂದು ನಂಬಬೇಕಾಗಿಲ್ಲ. ಈ ಶಕ್ತಿಗಳು ನಗ್ನ ಅನ್ಯಾಯಗಳಿಗಾಗಿ ನಿರಂತರ ಶ್ರಮಿಸಿ ಹೋರಾಡಿದಾಗ ಅವರಿಗೆ ಆ ಅನ್ಯಾಯಗಳು ದಕ್ಕುತ್ತವೆ. ಹೀಗಿರುತ್ತಾ ಮುಸ್ಲಿಮರು ತಮಗೆ ತಮ್ಮ ನ್ಯಾಯ ಬದ್ಧ ಹಕ್ಕುಗಳು, ಯಾರಾದರೂ ಅವುಗಳನ್ನು ಉದಾರವಾಗಿ ದಯಪಾಲಿಸುವ ಮೂಲಕ ಮಾತ್ರ ದಕ್ಕಬೇಕೆಂದು ಕುಳಿತರಾಗದು. 'ತುಷ್ಟೀಕರಣ ನಡೆಯುತ್ತಿದೆ' ಎಂಬ ಸುಳ್ಳು ಘಂಟಾ ಘೋಷವಾಗಿ ಸಾರಲ್ಪಡುತ್ತಿರುವಾಗ ''ಅನ್ಯಾಯ ಮತ್ತು ಮರ್ದನ ನಡೆಯುತ್ತಾ ಇದೆ'' ಎಂಬ ಸತ್ಯವನ್ನು ಅದಕ್ಕಿಂತ ನೂರುಪಾಲು ಜೋರಾಗಿ ಸಾರಬೇಕಾದುದು ಅನಿವಾರ್ಯವಾಗುತ್ತದೆ. ತಾವು ಆಳಲ್ಪಡುವವರು ಎಂಬ ಭ್ರಮೆ ತೊಲಗಿ ಆಡಳಿತಗಾರರೆಂಬ ಪ್ರಜ್ಞೆ ಬರುವ ತನಕ ಅನ್ಯಾಯಗಳ ವಿರುದ್ಧ ಸಿಡಿದೇಳುವ ಮತ್ತು ಅಗತ್ಯ ಬಿದ್ದಲ್ಲಿ ನ್ಯಾಯವನ್ನು ಕಿತ್ತುಕೊಳ್ಳುವ ಸಾಮರ್ಥ್ಯವೂ ಉಂಟಾಗುವುದಿಲ್ಲ.

2. ಮುಸ್ಲಿಮರು ಆಂಗ್ಲರ ಕಾಲದ ಆರಂಭದಲ್ಲಿ ಇಂಗ್ಲಿಷ್ ಭಾಷೆಯ ಬಗ್ಗೆ ತೋರಿದಂತಹ ಪೂರ್ವಗ್ರಹಗಳನ್ನೇ ಸ್ವಾತಂತ್ರ್ಯದ ನಂತರ ಹಿಂದಿ ಮತ್ತು ಇತರ ಪ್ರಾದೇಶಿಕ ಭಾಷೆಗಳ ಬಗ್ಗೆ ತೋರಿದರು. ಉತ್ತರ ಭಾರತದ ಮುಸ್ಲಿಮರು ಹಿಂದಿಯನ್ನು ತಿರಸ್ಕರಿಸಿದರೆ ದಕ್ಷಿಣ ಭಾರತದ ಮುಸ್ಲಿಮರು (ಕೇರಳದ ಹೊರತು) ತಮ್ಮಲ್ಲಿನ ಪ್ರಾದೇಶಿಕ ಭಾಷೆಗಳನ್ನು ತಿರಸ್ಕರಿಸಿದರು. ಅಂದು ಉರ್ದುವನ್ನು ರಕ್ಷಿಸುವ ಹೆಸರಲ್ಲಿ ತಾವು ತಿರಸ್ಕರಿಸಿದ್ದನ್ನೆಲ್ಲಾ ಇಂದು ಮುಸಲ್ಮಾನರು ಬಹಳ ತಡವಾಗಿ ಸ್ವೀಕರಿಸುತ್ತಿದ್ದಾರೆ. ಹಾಗೆ ಸ್ವೀಕರಿಸುವುದು ಅನಿವಾರ್ಯವೂ ಆಗಿದೆ. ಆದರೆ ಈ ಮಧ್ಯೆ ಎಷ್ಟು ಅವಕಾಶಗಳು ಕಳೆದುಹೋದುವು? ಈ ವಿಳಂಬದ ನೀತಿ ನಮ್ಮ ಶೈಕ್ಷಣಿಕ ಪ್ರಗತಿಯ ಮೇಲೆ ಎಂತೆಂತಹ ದೂರಗಾಮಿ ದುಷ್ಪರಿಣಾಮಗಳನ್ನು ಬೀರಿದೆ? ಅತ್ತ ಕೇರಳದವರಿಗೆ ಪ್ರಾದೇಶಿಕ ಭಾಷೆಯೇ ಮಾತೃ ಭಾಷೆ ಕೂಡಾ ಆಗಿದ್ದುದರಿಂದ ಅವರು ಪ್ರಾದೇಶಿಕ ಭಾಷೆಯನ್ನು ಸ್ವೀಕರಿಸಲು ತಡಮಾಡಲಿಲ್ಲ. ಅದರ ಫಲಿತಾಂಶ ನಮ್ಮ ಮುಂದಿದೆ. ಕೇರಳದ ಮುಸ್ಲಿಮರು ಶಿಕ್ಷಣದಲ್ಲಿ ದೇಶದ ಇತರೆಲ್ಲ ಭಾಗದ ಮುಸ್ಲಿಮರಿಗಿಂತ ಮುಂದಿದ್ದಾರೆ.

ಸರಕಾರ ನಡೆಸುವವರು ಪ್ರಾಮಾಣಿಕರಾಗಿದ್ದರೆ ಅವರು ಹಿಂದಿ ಭಾಷೆಯನ್ನು ಸಾಕಷ್ಟು

ಕಠಿಣಗೊಳಿಸಿ, ಮುಸ್ಲಿಮರಿಗೆ ಪರಿಚಿತವಾಗಿದ್ದ ಉರ್ದುವಿನಿಂದ ಅಥವಾ ಎಲ್ಲ ಭಾರತೀಯರ ನೆಚ್ಚಿನ ಭಾಷೆಯಾಗಿದ್ದ ಹಿಂದೀ-ಉರ್ದು ಮಿಶ್ರಿತ ಹಿಂದುಸ್ತಾನಿ ಭಾಷೆಗಳಿಂದ, ಇದನ್ನು ಸಾಧ್ಯವಿದ್ದಷ್ಟು ದೂರಗೊಳಿಸಿ ಸಂಸ್ಕೃತಮಯಗೊಳಿಸಿ ಹೇರುವ ಪ್ರಯತ್ನ ಮಾಡುತ್ತಿರಲಿಲ್ಲ. ಆದರೆ ಅವರು ಅಪ್ರಾಮಾಣಿಕರೆಂದು ಸಾಬೀತಾದರೆ ನಮಗಾಗುವ ಲಾಭವೇನು. ಒಂದೆಡೆ ಈ ಅಪ್ರಾಮಾಣಿಕತೆಯನ್ನು ಸೋಲಿಸಲಾಗದೆ ಇನ್ನೊಂದೆಡೆ ಅದನ್ನು ಸದುಪಯೋಗಪಡಿಸಿಕೊಳ್ಳಲಾಗದೆ ನಷ್ಟ ಅನುಭವಿಸಿದ್ದು ನಾವೇ ತಾನೇ?

ಪ್ರಾಥಮಿಕ ಶಿಕ್ಷಣವು ಮಾತೃಭಾಷೆಯ ಮಾಧ್ಯಮದಿಂದಲೇ ನೀಡಲ್ಪಡಬೇಕು ಎಂಬುದು ಸರ್ವಸಮ್ಮತ ತತ್ವ. ಆದ್ದರಿಂದ ಉರ್ದು ಮಾತೃ ಭಾಷೆಯ ಮುಸ್ಲಿಮರು ಉರ್ದು ಮಾಧ್ಯಮಕ್ಕೆ ಒತ್ತಾಯಪಡಿಸುವುದು ತೀರಾ ಸ್ವಾಭಾವಿಕ ಮತ್ತು ಬಹಳ ನ್ಯಾಯೋಚಿತ. ಆದರೆ ಹಲವೆಡೆ ಆಡಳಿತಗಾರರ ಪಕ್ಷಪಾತ ಅಥವಾ ಆ ಭಾಷೆಯ ವಿದ್ಯಾರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯರಿಲ್ಲ ಎಂಬಿತ್ಯಾದಿ ಕಾರಣಕ್ಕಾಗಿ ಈ ಹಕ್ಕು ನಿರಾಕರಿಸಲ್ಪಡುತ್ತದೆ. ಆಗ ಮಾತೃಭಾಷೆಗಿಂತ ಭಿನ್ನವಾದ ಬೇರೊಂದು ಮಾಧ್ಯಮದ ಬಗ್ಗೆಯೂ ಮಾತೃಭಾಷೆಯಷ್ಟೇ ಗೌರವ - ಉತ್ಸಾಹ ಉಳಿಸಿಕೊಂಡು ಶಿಕ್ಷಣ ಮುಂದುವರಿಸದಿದ್ದರೆ ನಷ್ಟವಾಗುವುದು ಯಾರಿಗೆ? ನಿಜವಾಗಿ ಒಂದೆಡೆ ತಮ್ಮ ನ್ಯಾಯಬದ್ಧ ಹಕ್ಕುಗಳಿಗಾಗಿ ದಣಿಯದೆ ಹೋರಾಟ ಮುಂದುವರಿಸಿ ಇನ್ನೊಂದೆಡೆ ಲಭ್ಯವಿರುವ ಸವಲತ್ತುಗಳನ್ನು ಪೂರ್ಣವಾಗಿ ಬಳಸಿಕೊಳ್ಳುವುದೇ ಜಾಣತನ.

3. ಧರ್ಮ ಮತ್ತು ಶಿಕ್ಷಣದ ಸಂಬಂಧದ ವಿಷಯದಲ್ಲಿ ಬಹುಶಃ ಭಾರತೀಯ ಸಮುದಾಯಗಳ ಪೈಕಿ ಅತಿ ಹೆಚ್ಚಿನ ಗೊಂದಲ ಕಂಡುಬರುವುದು ಮುಸ್ಲಿಮ್ ಸಮುದಾಯದಲ್ಲೇ. ವಿಜ್ಞಾನ, ಭಾಷೆಗಳು, ಗಣಿತ, ಇತಿಹಾಸ, ವೈದ್ಯಕೀಯ ಶಾಸ್ತ್ರ, ಖಗೋಳಶಾಸ್ತ್ರ, ರಸಾಯನ ಶಾಸ್ತ್ರ ಇತ್ಯಾದಿ ಮನುಕುಲಕ್ಕೆ ಉಪಯುಕ್ತವಾದ ಜ್ಞಾನದ ಎಲ್ಲ ಶಾಖೆಗಳನ್ನು ಇಸ್ಲಾಮ್ ಧರ್ಮ ಪ್ರೋತ್ಸಾಹಿಸುತ್ತದೆ. ಆದ್ದರಿಂದಲೇ ಮುಸ್ಲಿಮರು ಧರ್ಮಕ್ಕೆ ಅಥವಾ ಧರ್ಮದ ತಿರುಳಿಗೆ ಹೆಚ್ಚು ನಿಕಟರಾಗಿದ್ದ ಕಾಲಗಳಲ್ಲಿ ಈ ಎಲ್ಲ ಕ್ಷೇತ್ರಗಳಲ್ಲಿ ಜಗತ್ತಿನ ಇತರೆಲ್ಲ ಜನಾಂಗಗಳಿಗಿಂತ ಮುಂದಿದ್ದರು. ಈಗಲೂ ಮುಸ್ಲಿಮರ ಅಪಾರ ಗೌರವಕ್ಕೆ ಪಾತ್ರರಾದ ಹಳೆಯ ಕಾಲದ ಅನೇಕ ವಿದ್ವಾಂಸರು ಈ ಕ್ಷೇತ್ರಗಳಲ್ಲೂ ವಿದ್ವಾಂಸರಾಗಿದ್ದರು. ಪ್ರಸ್ತುತ ಕ್ಷೇತ್ರಗಳಿಗೆ ಸಂಬಂಧಿಸಿದ ಶಿಕ್ಷಣವನ್ನು ಮಸೀದಿ - ಮದ್ರಸಾಗಳಲ್ಲೇ ನೀಡಲಾಗುತ್ತಿತ್ತು. ಪ್ರಯೋಗಾಲಯಗಳು ಮದ್ರಸಾಗಳ ಭಾಗವಾಗಿರುತ್ತಿದ್ದುವು. ಆದರೆ ಆಂಗ್ಲರು ಭಾರತಕ್ಕೆ ಬಂದ ಕಾಲವು ಮುಸ್ಲಿಮ್ ಜಗತ್ತು ಧರ್ಮದ ತಿರುಳಿನಿಂದ ದೂರವಾಗಿ, ಧರ್ಮದ ಹೊರ ಚಿಪ್ಪಿಗೆ ಅಂಟಿಕೊಂಡು ಅದರ ಪರಿಣಾಮವಾಗಿ ಅವನತಿಯ ಹಾದಿ ಹಿಡಿದಿದ್ದ ಕಾಲವಾಗಿತ್ತು. ಕುರ್‌ಆನ್, ಹದೀಸ್ ಮತ್ತು ಕರ್ಮ

ಶಾಸ್ತ್ರವನ್ನು ಕಂಠಪಾಠ ಮಾಡುವುದೇ ಧಾರ್ಮಿಕ ಶಿಕ್ಷಣ, ಉಳಿದುದೆಲ್ಲಾ ಅಧಾರ್ಮಿಕ ಎಂಬ ವಿನಾಶಕಾರಿ ಸಂಕುಚಿತ ಮನೋಭಾವ ವ್ಯಾಪಕವಾಗಿತ್ತು. ಇಸ್ಲಾಮ್ ಧರ್ಮ ವೈಜ್ಞಾನಿಕ ಸಂಶೋಧನೆಯನ್ನು ಒಂದು ಆರಾಧನಾ ಕರ್ಮವೆಂದು ಪರಿಗಣಿಸುತ್ತದೆಂದು ಹೇಳಿದರೆ ಬೆಚ್ಚಿ ಬೀಳುವ ಸನ್ನಿವೇಶವಿತ್ತು. ಹೀಗಾಗಲು ಇದ್ದ ಹಲವು ಸಂಕೀರ್ಣ ಕಾರಣಗಳ ಪೈಕಿ ಒಂದು ಕಾರಣ ಶಿಕ್ಷಣದ ಈ ಎಲ್ಲ ಕ್ಷೇತ್ರಗಳಲ್ಲಿ ಮುಂದುವರಿದಿದ್ದ, ಆಂಗ್ಲರ ಸಂಸ್ಕೃತಿ. ಆ ಸಂಸ್ಕೃತಿಯ ಬಗ್ಗೆ ಇದ್ದ ತಾತ್ಸಾರ ಮತ್ತು ಭಯವು ಆ ಸಂಸ್ಕೃತಿಯ ವಕ್ತಾರರು ಪರಿಚಯಿಸುವ ಒಳ್ಳೆಯ ವಿಷಯಗಳನ್ನೂ ತಿರಸ್ಕರಿಸಿ ಬಿಡುವಷ್ಟು ಗಾಢವಾಗಿತ್ತು. ವೈದ್ಯ ಸುಂದರನಲ್ಲವೆಂದು ಅವನು ಕೊಡುವ ಔಷಧಿ ತಿರಸ್ಕರಿಸಿದರೆ ಹೇಗೆ? ಆಧುನಿಕ ವಿಜ್ಞಾನ ತಪ್ಪು ಕೈಗಳಲ್ಲಿ ನರಳುತ್ತಿರುವುದು ನಿಜ. ಆದರೆ ಆ ಕ್ಷೇತ್ರದಲ್ಲಿ ತಜ್ಞರಲ್ಲದವರಿಗೆ ಅದನ್ನು ಸರಿಯಾದ ಕೈಗಳಿಗೆ ತಲುಪಿಸಲು ಹೇಗೆ ಸಾಧ್ಯವಾದೀತು?

"ದೇವನಿಗೆ ಅವನ ಪಾಲು, ಸೀಝರ್‌ನಿಗೆ ಅವನ ಪಾಲು" ಎಂಬ, ಮೂಲತಃ ಕ್ರೈಸ್ತರು ಮಾಡಿದ ವಿಂಗಡನೆಗೆ ಕ್ರಮೇಣ ಮುಸ್ಲಿಮರು ತುತ್ತಾದರು. ಇಂದಿನ ಶಾಲೆಗಳನ್ನು ನೋಡಿ - ಅಲ್ಲಿ ಧರ್ಮದ ಗಂಧ ಗಾಳಿ ಇಲ್ಲ. ಮದ್ರಸಾಗಳಿಗೆ ಹೋಗಿ - ಅಲ್ಲಿ ಆಧುನಿಕ ಜ್ಞಾನದ ಗಂಧಗಾಳಿ ಇಲ್ಲ. ನಿಜವಾಗಿ ಶಿಕ್ಷಣದ ಧ್ಯೇಯ ಅಥವಾ ದಿಕ್ಕಿಗೆ ಸಂಬಂಧಿಸಿದ, ನಿರ್ಣಾಯಕವಾದ ಕೆಲವು ಸಂಕ್ಷಿಪ್ತ ತಿದ್ದುಪಡಿಗಳು ಇಂದು ಚಲಾವಣೆಯಲ್ಲಿರುವ ವಿವಿಧ ವಿಜ್ಞಾನ ಪಠ್ಯಪುಸ್ತಕಗಳನ್ನು ಇಸ್ಲಾಮೀ ಪುಸ್ತಕಗಳಾಗಿ ಮಾರ್ಪಡಿಸಬಲ್ಲುವು. ಹಾಗೆಯೇ ಜ್ಞಾನವೆಂದರೇನು ಮತ್ತು ಜ್ಞಾನದ ಕುರಿತು ಇಸ್ಲಾಮಿನ ದೃಷ್ಟಿಕೋನ ಏನು ಎಂಬ ಬಗ್ಗೆ ನಮ್ಮ ಮದ್ರಸಾಗಳ ಸಾರಥಿಗಳು ಸ್ವಲ್ಪ ಕಣ್ತೆರೆಯುವಂತಾದರೆ ಈ ಮದ್ರಸಾಗಳೇ ವಿಜ್ಞಾನಿಗಳನ್ನು ಹೊರಡಿಸಬಲ್ಲುವು.

ಜ್ಞಾನದ ವಿಷಯದಲ್ಲಿ ಇಸ್ಲಾಮ್ ಧರ್ಮವು ಲೌಕಿಕ - ಪಾರಲೌಕಿಕ ಎಂಬ ವಿಂಗಡನೆಯನ್ನು ಅಂಗೀಕರಿಸುವುದಿಲ್ಲ. ವಾಸ್ತವದಲ್ಲಿ ಇಂತಹ ವಿಂಗಡನೆ ಹುಟ್ಟಿನ ಆಧಾರದಲ್ಲಿ ಕಸುಬನ್ನು ನಿರ್ಧರಿಸಿ ಇತರ ಕಸುಬುಗಳನ್ನು ನಿಷೇಧಿಸುವ ಇಸ್ಲಾಮೇತರ ಪದ್ಧತಿಗಳಷ್ಟೇ ಅಸಂಬದ್ಧ.

ಇಂದು ಚಲಾವಣೆಯಲ್ಲಿರುವ ಶಿಕ್ಷಣ ಪದ್ಧತಿ ನಮ್ಮ ಮೆಚ್ಚುಗೆಯ ಪದ್ಧತಿಯಲ್ಲ. ಶಿಕ್ಷಣ ಪದ್ಧತಿ ಹೇಗಿರಬೇಕು ಎಂಬ ಬಗ್ಗೆ ನಮಗೆ ಅನೇಕ ಅಪೇಕ್ಷೆಗಳು ಇರುವುದು ನಿಜ. ಆದರೆ ಬಹಿಷ್ಕಾರದಿಂದ ಆ ಅಪೇಕ್ಷೆಗಳು ಈಡೇರುವುದಿಲ್ಲ. ಇರುವ ಪದ್ಧತಿಯಲ್ಲಿ ಆಸಕ್ತಿಯಿಂದ ಪಾಲ್ಗೊಳ್ಳುವುದು ಮಾತ್ರ ಅದರ ಸುಧಾರಣೆಗಿರುವ ಉಪಾಯ. ಪ್ರಚಲಿತ ಪದ್ಧತಿಯ ಬಗೆಗಿನ ತಾತ್ಸಾರದಿಂದಾಗಿ ಅವಿದ್ಯಾವಂತರ ಪೀಳಿಗೆಗಳು ನಿರ್ಮಾಣವಾದರೆ

ಪದ್ಧತಿ ಬದಲಾಗದು, ಬದಲಾಯಿಸಲು ಯಾರೂ ಉಳಿಯಲಾರರು.

ಭಾರತದಲ್ಲಿ ಮುಸ್ಲಿಮರು ಮಾತ್ರ ಅಲ್ಪ ಸಂಖ್ಯಾತರಲ್ಲ. ಸಿಖ್ಖರು ಮತ್ತು ಕ್ರೈಸ್ತರು ಭಾರತದಲ್ಲಿ ಮುಸ್ಲಿಮರಿಗಿಂತ ಹೆಚ್ಚು ಅಲ್ಪ ಸಂಖ್ಯಾತರು. ಆದರೆ ಶೈಕ್ಷಣಿಕವಾಗಿ ಅವರು ಮುಸ್ಲಿಮರಿಗಿಂತ ಮುಂದಿದ್ದಾರೆ. ಕ್ರೈಸ್ತರಂತೂ ಹಲವು ಬಹುಸಂಖ್ಯಾತ ವರ್ಗಗಳಿಗಿಂತ ಮುಂದಿದ್ದಾರೆ. ಅದಕ್ಕೆ ಅವರ ಆರ್ಥಿಕ ಬಲ ಮಾತ್ರ ಕಾರಣ ಎಂದು ಭಾವಿಸುವುದು ತಪ್ಪು. ಪಾದ್ರಿ - ಮಾದ್ರಿಗಳ ರೂಪದಲ್ಲಿ ಅವರೊಳಗೆ ಧಾರಾಳ ಸಂಖ್ಯೆಯಲ್ಲಿ ನಿಸ್ವಾರ್ಥವಾಗಿ ಕಠಿಣವಾಗಿ ದುಡಿಯುವ ಸ್ವಯಂಸೇವಕರಿದ್ದಾರೆ. ಮುಸ್ಲಿಮರಲ್ಲಿ ಅಂತಹ ಸ್ವಯಂಸೇವಕರು ಎಷ್ಟು ಮಂದಿ ಇದ್ದಾರೆ ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿದರೆ ಮುಸ್ಲಿಮರು ಶೈಕ್ಷಣಿಕವಾಗಿ ಇಷ್ಟು ಹಿಂದಿರುವುದೇಕೆ ಎಂಬ ಪ್ರಶ್ನೆಗೂ ಒಂದು ಪ್ರಧಾನ ಉತ್ತರ ಸಿಕ್ಕಿ ಬಿಡುತ್ತದೆ.

ಮುಸ್ಲಿಮರಲ್ಲಿ ಭಾಷಣಗಾರರಿದ್ದಾರೆ. ಪರಿಸ್ಥಿತಿಯ ಬಗ್ಗೆ ಪರಿಣಾಮಕಾರೀ 'ಶೋಕಗೀತೆ'ಗಳನ್ನು ಹಾಡುವವರಿದ್ದಾರೆ. ಆದರೆ ನಿಸ್ವಾರ್ಥವಾಗಿ, ನಿರಂತರವಾಗಿ ಸಮುದಾಯದ ಶ್ರೇಯಸ್ಸಿಗಾಗಿ ದುಡಿಯುವವರು ಮಾತ್ರ ಇಲ್ಲ. ಸಮಾಜ ಸೇವೆಯಲ್ಲಿ ತೊಡಗಲು ಸನ್ಯಾಸಿಗಳಾಗಬೇಕಾಗಿಲ್ಲ. ಇಸ್ಲಾಮ್‌ಧರ್ಮ ಸಂಸಾರಸ್ಥ ಸಮಾಜ ಸೇವಕರಿಗೆ ಜನ್ಮ ಕೊಡುತ್ತದೆ. ಇತಿಹಾಸದ ಅತಿದೊಡ್ಡ ಸಮಾಜ ಸೇವಕ - ಮುಹಮ್ಮದ್ (ಸ)ರು ಸಂಸಾರಸ್ಥರಾಗಿದ್ದರು. ಜನಸಾಮಾನ್ಯರ ಸುಖ ದುಃಖ ವಿಚಾರಿಸಲು ದುರ್ಬಲ ಹೊರೆ ಹೊರಲು, ಹೊಸಬರಿಗೆ ದಾರಿ ತೋರಿಸಲು, ರೋಗಿಗಳಿಗೆ ಶುಶ್ರೂಷೆ ಮಾಡಲು ಅವರ ಬಳಿ ಸಮಯವಿತ್ತು.

ಶಾಲೆಗಳಿಗೆ ದಾಖಲಾತಿಗೆ ಒಂದು ನಿರ್ದಿಷ್ಟ ಸಮಯವಿರುತ್ತದೆ. ಉದಾ: ಮೇ ಮತ್ತು ಜೂನ್ ತಿಂಗಳು. ಅನೇಕ ಮುಸ್ಲಿಮ್ ಹೆತ್ತವರಿಗೆ ಈ ತಿಂಗಳುಗಳು ಯಾವಾಗ ಬಂದು ಹೋಗುತ್ತವೆಂದು ತಿಳಿದಿರುವುದಿಲ್ಲ. ಪ್ರತಿಯೊಂದು ಊರಿನ ಕೆಲವು ಪ್ರಜ್ಞಾವಂತ ಮುಸ್ಲಿಮರು ಈ ತಿಂಗಳುಗಳಲ್ಲಿ ತಮ್ಮ ಪರಿಸರದ ಪ್ರತಿಯೊಂದು ಮನೆಗೆ ಹೋಗಿ ಅಲ್ಲಿ ಶಾಲೆಗೆ ಸೇರಿಸಲು ಅರ್ಹರಾದ ಮಕ್ಕಳು ಇದ್ದಾರೆಯೇ, ಅವರನ್ನು ಶಾಲೆ ತನಕ ಕೊಂಡೊಯ್ದು ದಾಖಲಾತಿ ಕೊಡಿಸಲು ಏನಾದರೂ ತೊಂದರೆಗಳಿವೆಯೇ ಎಂದು ನೋಡಿದರೆ, ಅನ್ಯಥಾ ಪ್ರಾಥಮಿಕ ಶಿಕ್ಷಣದಿಂದಲೂ ವಂಚಿತರಾಗಬಹುದಾದ ಅನೇಕರನ್ನು ಶಿಕ್ಷಿತರಾಗಿ ಮಾಡಿದಂತಾದೀತು. ಹಾಗೆಯೇ ಆಗಿಂದಾಗ ವಿದ್ಯಾರ್ಥಿಗಳನ್ನು, ಅವರ ಹೆತ್ತವರನ್ನು ಮತ್ತು ಶಿಕ್ಷಕರನ್ನು ಭೇಟಿಯಾಗುತ್ತಿದ್ದರೆ ಎಷ್ಟು ಮಂದಿ ಮಧ್ಯದಲ್ಲೇ ಶಿಕ್ಷಣ ನಿಲ್ಲಿಸುತ್ತಿದ್ದಾರೆ. ಶಾಲೆಗೆ ಹೋಗಿಯೂ ಅಶಿಕ್ಷಿತರಾಗುತ್ತಿದ್ದಾರೆ. ಎಷ್ಟು ಜನ ಮೂಲಭೂತ ಅಗತ್ಯಗಳಾದ ಪುಸ್ತಕ ಇತ್ಯಾದಿಗಳಿಂದ ವಂಚಿತರಾಗಿದ್ದಾರೆ ಎಂದು ತಿಳಿಯಬಹುದು ಮತ್ತು ಈ ಸಮಸ್ಯೆಗಳ ನಿವಾರಣೆಗೆ ತಕ್ಕ ಉಪಾಯಗಳನ್ನು ಮಾಡಬಹುದು.

ಸಲ್ಮಾನ್‌ರಶ್ದಿಯ ಪುಸ್ತಕ ಬಂದಾಗ ಭಾರತದ ಮುಸ್ಲಿಮರು ಅದರ ವಿರುದ್ಧ ದೇಶಾದ್ಯಂತ ಚಳುವಳಿ ನಡೆಸಿ ಅದು ನಿಷೇಧಿಸಲ್ಪಡುವಂತೆ ನೋಡಿಕೊಂಡರು. ಶಾಬಾನು ಕೇಸ್‌ನಲ್ಲಿ ಸುಪ್ರೀಮ್ ಕೋರ್ಟು 'ಮುಸ್ಲಿಮ್ ಪರ್ಸನಲ್‌ಲಾ'ದ ಒಂದು ಕ್ಷೀಣ ನರವನ್ನು ಬಳಸಿಕೊಂಡು 'ಪರ್ಸನಲ್‌ಲಾ'ದ ಉಲ್ಲಂಘನೆ ಮಾಡಿದಾಗ ಮುಸ್ಲಿಮರು ರಾಷ್ಟ್ರದಾದ್ಯಂತ ಹೋರಾಟ ಮಾಡಿ ಪಾರ್ಲಿಮೆಂಟ್‌ನಲ್ಲಿ ಈ ಕುರಿತು ತಿದ್ದುಪಡಿ ಮಸೂದೆಯನ್ನು ಜ್ಯಾರಿಗೊಳಿಸುವಲ್ಲಿ ಸಫಲರಾದರು. ಆದರೆ ಇವೆಲ್ಲಾ ಒಂದು ತುರ್ತು ಉದ್ದೇಶಕ್ಕಾಗಿ ನಡೆದ ತಾತ್ಕಾಲಿಕ ಹೋರಾಟಗಳು. ಅಂತಹ ಹೋರಾಟಗಳಲ್ಲಿ ಮುಸ್ಲಿಮರು ಪ್ರವೀಣರೆನ್ನಬಹುದು. ಶಿಕ್ಷಣ ಕ್ಷೇತ್ರದಲ್ಲಿ ಮುಸ್ಲಿಮರು ಮುಂದೆ ಬರಲು ಇಂತಹ ತಾತ್ಕಾಲಿಕ ಹೋರಾಟಗಳಿಂದ ಸಾಧ್ಯವಿಲ್ಲ. ಅದಕ್ಕೆ ತೀರಾ ಭಿನ್ನ ಬಗೆಯ ಯೋಜನೆಯ ಅಗತ್ಯವಿದೆ. ಈಗ ಮುಸ್ಲಿಮರು ಶೈಕ್ಷಣಿಕವಾಗಿ ಮುಂದುವರಿಯಬಲ್ಲರೇ ಎಂಬುದು ಅವರು ತೀರಾ ದೂರದಲ್ಲಿರುವ ಒಂದು ಗುರಿಯನ್ನು ಅರಸಿಕೊಂಡು ಆ ದಿಕ್ಕಿನಲ್ಲಿ ಎಷ್ಟು ಕಾಲ ಏಕಾಗ್ರಚಿತ್ತದಿಂದ ನಡೆಯಬಲ್ಲರು ಮತ್ತು ತಮ್ಮ ಹುರುಪನ್ನು ಎಷ್ಟು ಕಾಲ ಉಳಿಸಿಕೊಳ್ಳಬಲ್ಲರು ಎಂಬುದನ್ನು ಅವಲಂಬಿಸಿದೆ.

ಶೈಕ್ಷಣಿಕ ಅಭಿವೃದ್ಧಿಯಂತಹ ಭಾರೀ ಗಾತ್ರದ ಕೆಲಸವನ್ನು ಮುಸ್ಲಿಮರು ಪೂರ್ಣವಾಗಿ ತಮ್ಮ ತಲೆ ಮೇಲೆ ಹೊತ್ತುಕೊಳ್ಳಬೇಕಾದ ಅಗತ್ಯವೇನಿಲ್ಲ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಅಲ್ಪ ಸಂಖ್ಯಾತರಿಗೆಂದೇ ಇಟ್ಟಿರುವ ಅಸಂಖ್ಯ ಸವಲತ್ತುಗಳಿವೆ. ಆ ಸವಲತ್ತುಗಳು ಏನು ಎಂಬುದರ ಬಗ್ಗೆ ಮುಸ್ಲಿಮರು ಮಾಹಿತಿ ಸಂಗ್ರಹಿಸಬೇಕು. ಮಣಿಪಾಲ ಈ ದೇಶದ ಪ್ರಮುಖ ಶೈಕ್ಷಣಿಕ ಕೇಂದ್ರಗಳಲ್ಲಿ ಒಂದೆಂದು ಪರಿಗಣಿಸಲ್ಪಡುತ್ತದೆ. ಇಲ್ಲಿಯ ಶೈಕ್ಷಣಿಕ ಕೇಂದ್ರಗಳ ಸ್ಥಾಪನೆ ಸುಲಭವಾದದ್ದು ಮಾನ್ಯ ಪೈಗಳು, ತಾವು ಭಾಷಾ ಅಲ್ಪ ಸಂಖ್ಯಾತರೆಂಬುದನ್ನು ಮನಗಂಡು ಭಾಷಾ ಅಲ್ಪ ಸಂಖ್ಯಾತರಿಗೆ ಲಭ್ಯವಿರುವ ಸರಕಾರೀ ರಿಯಾಯ್ತಿಗಳನ್ನು ಬಳಸಿಕೊಂಡಿದ್ದುದರಿಂದಲೇ. ಕೆಲವು ಸಮಾನ ಮನಸ್ಕ ವ್ಯಕ್ತಿಗಳು ಸೇರಿ ಕ್ರಮಬದ್ಧವಾಗಿ ಪ್ರಯತ್ನಿಸಿದರೆ ಹೊಸಬೇಡಿಕೆಗಳೇನನ್ನೂ ಮಂಡಿಸದೆ, ಈಗಾಗಲೇ ಇರುವ ಹಕ್ಕುಗಳನ್ನೇ ಸದುಪಯೋಗ ಪಡಿಸಿಕೊಂಡರೆ ಈ ಕ್ಷೇತ್ರದಲ್ಲಿ ಈಗಲೂ ಅದ್ಭುತ ಸಾಧನೆಗಳನ್ನು ಮಾಡಲು ಅವಕಾಶವಿದೆ. ನಿಸ್ವಾರ್ಥ ಸಮಾಜ ಸೇವೆಯ ಸ್ಫೂರ್ತಿಯುಳ್ಳ, ಈ ಸ್ಫೂರ್ತಿಯನ್ನು ದೀರ್ಘಕಾಲ ಉಳಿಸಿಕೊಳ್ಳಬಲ್ಲ, ತಮ್ಮ ಹಕ್ಕು ಮತ್ತು ಕರ್ತವ್ಯಗಳ ಗಾಢ ಪ್ರಜ್ಞೆ ಇರುವ ಮತ್ತು ತಮಗೆ ಬೇಕಾದುದನ್ನು ಗಳಿಸಿಕೊಳ್ಳುವ ಛಲವುಳ್ಳ ಜನರು ಧಾರಾಳ ಸಂಖ್ಯೆಯಲ್ಲಿ ಇರುವ ಸಮುದಾಯ ಮಾತ್ರ ಈ ಅವಕಾಶವನ್ನು ಉಪಯೋಗಿಸಿಕೊಳ್ಳಬಲ್ಲುದು.

ಇತರ ಕೆಲವು ಸಮುದಾಯಗಳಂತೆ ಮುಸ್ಲಿಮರು ಕೂಡಾ ಶಿಕ್ಷಣವನ್ನು ನೇರವಾಗಿ

ಆರ್ಥಿಕ ಲಾಭ ನಷ್ಟಗಳಿಗೆ ಜೋಡಿಸಿ ನೋಡುವ ಪ್ರವೃತ್ತಿಯಿಂದ ಮುಕ್ತರಲ್ಲ. "ಕಲಿತು ಏನಾಗಬೇಕಾಗಿದೆ? ಕಲಿತವರ ಅವಸ್ಥೆ ಕಾಣುವುದಿಲ್ಲವೇ ? ಈ ವಯಸ್ಸಿನಲ್ಲಿ ಕಸುಬೇನೂ ಕಲಿಸದಿದ್ದರೆ ಅತ್ತ ಕಸುಬೂ ಇಲ್ಲ ಇತ್ತ ಉದ್ಯೋಗವೂ ಇಲ್ಲ. ವಿದ್ಯಾವಂತ ನಿರುದ್ಯೋಗಿಯನ್ನು ಸಾಕುವುದಕ್ಕಿಂತ ಅವಿದ್ಯಾವಂತ ನಿರುದ್ಯೋಗಿಯನ್ನು ಸಾಕುವುದು ಸುಲಭ..." ಇತ್ಯಾದಿ ಗೊಣಗಾಟಗಳು ಮುಸ್ಲಿಮ್ ಸಮಾಜದಲ್ಲೂ ಸಾಮಾನ್ಯವಾಗಿ ಬಿಟ್ಟಿವೆ. ನಿಜವಾಗಿ ವಿದ್ಯಾವಂತರ ನಿರುದ್ಯೋಗದ ಸಮಸ್ಯೆ ಕೇವಲ ಮುಸ್ಲಿಮರ ಸಮಸ್ಯೆ ಅಲ್ಲ. ಇನ್ನು ಉದ್ಯೋಗದ ಕ್ಷೇತ್ರದಲ್ಲಿ ಮುಸ್ಲಿಮರ ವಿರುದ್ಧ ಪಕ್ಷಪಾತ ನಡೆಯುತ್ತಿದೆ ಎಂಬ ಆರೋಪ ನಿಜ. ಆದರೆ ಅದೊಂದು ಪ್ರತ್ಯೇಕ ಯೋಜನೆಯನ್ನು, ಹೋರಾಟವನ್ನು, ಬಯಸುವ ಒಂದು ಭಿನ್ನ ಸಮಸ್ಯೆ. ಮುಸ್ಲಿಮರಿಗೆ ಶಿಕ್ಷಣದ ಅಗತ್ಯ ಇರುವುದು ಕೇವಲ ಉದ್ಯೋಗಕ್ಕಾಗಿ ಅಲ್ಲ. ಭಾರತೀಯ ಮುಸ್ಲಿಮರ ಆರ್ಥಿಕ ಸ್ಥಿತಿ ಮಾತ್ರವಲ್ಲದೆ ಅವರ ಒಟ್ಟು ಅವಸ್ಥೆಗೂ ಅವರ ಸಮಗ್ರ ಭವಿಷ್ಯಕ್ಕೂ ಶಿಕ್ಷಣದೊಂದಿಗೆ ಸಂಬಂಧವಿದೆ. ಇಂದು ಸಮುದಾಯದ ಮುಂದೆ ಇರುವ ಅಸಂಖ್ಯ ಸವಾಲುಗಳನ್ನು ಎದುರಿಸಲು ಸುಶಿಕ್ಷಿತ ಸಮುದಾಯಕ್ಕೆ ಮಾತ್ರ ಸಾಧ್ಯ. ಶಿಕ್ಷಣ ಪಡೆದವರೆಲ್ಲಾ ತಮ್ಮ ಶಿಕ್ಷಣಕ್ಕೆ ಸಂಬಂಧಿಸಿದ ಉದ್ಯೋಗಗಳನ್ನೇ ಅವಲಂಬಿಸಬೇಕಾಗಿಲ್ಲ. ಹಾಗೆ ಅವಲಂಬಿಸುವುದಿದ್ದರೂ ಇದು ಉದ್ಯೋಗ ಪ್ರಧಾನ ಶಿಕ್ಷಣ ವ್ಯವಸ್ಥೆ ಮತ್ತು ಸೂಕ್ತವಾದ ಕ್ಯಾರಿಯರ್ ಗೈಡೆನ್ಸ್ ಸೆಲ್‌ಗಳ ಮೂಲಕ ಬಗೆಹರಿಸಬೇಕಾದ ಸಮಸ್ಯೆಯೇ ಹೊರತು ಶಿಕ್ಷಣವನ್ನು ಕಡೆಗಣಿಸಿ ಬಗೆಹರಿಸುವ ಸಮಸ್ಯೆ ಅಲ್ಲ.

ಮುಸ್ಲಿಮರ ಶೈಕ್ಷಣಿಕ ಪ್ರಗತಿಯ ನಿಟ್ಟಿನಲ್ಲಿ ನಡೆಯುವ ಯಾವುದೇ ಪ್ರಯತ್ನವು ಅವರ ಸರ್ವಾಂಗೀಣ ಪ್ರಗತಿಗೆ ಇರುವ ಸಮಗ್ರ ಕಾರ್ಯಕ್ರಮದ ಒಂದು ಅಂಗವಾಗಿರಬೇಕು. ಅವರ ರಾಜಕೀಯ ಸ್ಥಿತಿ, ಸಾಮಾಜಿಕ ಸ್ಥಿತಿ, ಸಾಮಾನ್ಯ ವರ್ತನೆ, ಧರ್ಮದ ಬಗ್ಗೆ ಅವರ ಕಲ್ಪನೆ, ಐತಿಹಾಸಿಕವಾಗಿ ಅವರ ವಿವಿಧ ನಡವಳಿಕೆಗಳಲ್ಲಿ ಆಗಿರುವ ಪರಿವರ್ತನೆಗಳು ಇತ್ಯಾದಿಗಳನ್ನೆಲ್ಲಾ ನಿರ್ಲಕ್ಷಿಸಿ ಈ ಒಂದು ಕ್ಷೇತ್ರದಲ್ಲಿ ಮಾತ್ರ ಸುಧಾರಣೆ ತರ ಬಯಸುವುದು ತಪ್ಪು. "ಮಸೀದಿ ಕಟ್ಟುವುದು ಒಂದು ಧಾರ್ಮಿಕ ಪುಣ್ಯಕಾರ್ಯ ಆದರೆ ಶಾಲೆ ಕಟ್ಟುವುದು ಒಂದು ಶುದ್ಧ ಲೌಕಿಕ ಕ್ರಿಯೆ" ಎಂದು ನಂಬುವವರು ಆ ನಂಬಿಕೆಯನ್ನು ಉಳಿಸಿಕೊಳ್ಳುವ ತನಕ ಧರ್ಮ ಅಥವಾ ಶಿಕ್ಷಣ ಎರಡರಲ್ಲಿ ಒಂದನ್ನು ತೊರೆಯಲೇ ಬೇಕಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಪಾಪ - ಪುಣ್ಯ ಮತ್ತು ಲೋಕ - ಪರಲೋಕಗಳ ಬಗ್ಗೆ ಇಸ್ಲಾಮಿನ ದೃಷ್ಟಿಕೋನ ಏನೆಂಬುದನ್ನು ಅವರಿಗೆ ಮನಗಾಣಿಸಿ, ಪ್ರಸ್ತುತ ಮೂಢನಂಬಿಕೆಯನ್ನು ತೊಲಗಿಸಿ, ಎರಡು ಭಿನ್ನ ಸ್ತರಗಳಲ್ಲಿ ಮಸೀದಿ ನಿರ್ಮಾಣ ಮತ್ತು ಶಾಲೆ ನಿರ್ಮಾಣ ಎರಡೂ ಸಮಾನ ಬಗೆಯ ಪುಣ್ಯ ಕಾರ್ಯಗಳಾಗಬಲ್ಲವು ಎಂಬುದನ್ನು

ಮನವರಿಕೆ ಮಾಡಿಸುವುದು ಅನಿವಾರ್ಯವಾಗಿದೆ. ಆಗ ಮಾತ್ರ ಅವರು ಸಂತೃಪ್ತಿಯೊಂದಿಗೆ ಧರ್ಮ - ಶಿಕ್ಷಣ ಎರಡನ್ನೂ ಒಂದೆಂದು ಅಪ್ಪಿಕೊಳ್ಳಬಲ್ಲರು.

ತಮ್ಮ ತೀವ್ರ ಬಡತನದಿಂದಾಗಿ ಆರೇಳು ವರ್ಷಗಳ ತಮ್ಮ ಮಗ ಅಥವಾ ಮಗಳನ್ನು ಯಾರಾದರೂ ಮನೆಯಾಳಾಗಿ ಅಥವಾ ಇತರ ವಿಧದಲ್ಲಿ ಕೆಲಸಕ್ಕೆ ಸೇರಿಸಿ 'ಅವರಿಗೆ ಊಟ ಬಡಿಸಿದರೆ ಸಾಕು' ಅಥವಾ 'ತಿಂಗಳಿಗೆ ನಮಗೆ ನೂರು ರೂಪಾಯಿ ಕೊಟ್ಟರೆ ಸಾಕು' ಎಂದು ಕೈ ತೊಳೆಯುವ ತಂದೆ ತಾಯಿಯರು ಮುಸ್ಲಿಮ್ ಸಮಾಜದಲ್ಲಿ ಸಾಕಷ್ಟಿದ್ದಾರೆ. ಹಾಗೆಯೇ ಶಿಕ್ಷಣದ ಮಹತ್ವವೆಲ್ಲಾ ತಿಳಿದಿದ್ದೂ ತೀವ್ರ ಆರ್ಥಿಕ ಅಗತ್ಯಗಳಿಗಾಗಿ ತಮ್ಮ ಮಕ್ಕಳನ್ನು ಆರು-ಏಳು ಕ್ಲಾಸುಗಳಿಂದ ಶಾಲೆ ಬಿಡಿಸಿ ಗ್ಯಾರೇಜು, ವರ್ಕ್‌ಶಾಪು ಇತ್ಯಾದಿಗಳಿಗೆ ಸೇರಿಸುವವರೂ ಧಾರಾಳ ಇದ್ದಾರೆ. ಇಂತಹವರ ಸಮಸ್ಯೆಯನ್ನು ಉಪನ್ಯಾಸಗಳನ್ನು ನೀಡಿ ಬಗೆಹರಿಸುವಂತಿಲ್ಲ. ಅದಕ್ಕೆ ಗಟ್ಟಿಯಾದ ಆರ್ಥಿಕ ಯೋಜನೆಗಳು ಮತ್ತು ಅವುಗಳನ್ನು ಅನುಷ್ಠಾನಿಸಬಲ್ಲವರು ಅನಿವಾರ್ಯವಾಗುತ್ತಾರೆ.

ಅಶಿಕ್ಷಿತ ಪೀಳಿಗೆಗಳು ಅಶಿಕ್ಷಿತ ಪೀಳಿಗೆಗಳಿಗೇ ಜನ್ಮ ನೀಡುತ್ತವೆ. ಆದ್ದರಿಂದ ಮುಂದಿನ ಪೀಳಿಗೆಯನ್ನು ಶಿಕ್ಷಿತಗೊಳಿಸಲು, ಇಂದಿನ ಪೀಳಿಗೆಯಲ್ಲಿ ಜಾಗೃತಿಯುಂಟು ಮಾಡಬೇಕಾದುದು ಅತ್ಯಗತ್ಯ. ಶೈಕ್ಷಣಿಕ ಹಿಂದುಳಿಕೆಯ ಪರಮಾವಧಿ ನೋಡಬೇಕಿದ್ದರೆ ಮುಸ್ಲಿಮ್ ಹೆಣ್ಮಕ್ಕಳ ಶೈಕ್ಷಣಿಕ ಮಟ್ಟ ನೋಡಬೇಕು. ಹೆಣ್ಣು ಸಮಾಜದ ಅರ್ಧ ಭಾಗ ಮಾತ್ರ ಅಲ್ಲ. ಆಕೆ ಮುಂದಿನ ಪೀಳಿಗೆಯ ತಾಯಿಯೂ ಹೌದು. ಅಶಿಕ್ಷಿತ ತಾಯಿ ಅಶಿಕ್ಷಿತರ ತಾಯಿಯಾಗಬಲ್ಲಳು. ತನ್ನ ಅರ್ಧ ಭಾಗವನ್ನು, ತನ್ನ ಮಾತೆಯನ್ನು ಅಜ್ಞಾನದ ಕತ್ತಲಲ್ಲಿ ಕಟ್ಟಿಡುವ ಸಮಾಜ ಬೆಳಕನ್ನು ಪಡೆಯಲಾರದು. ಹೆಣ್ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮುಸ್ಲಿಮರ ವರ್ತನೆಯಲ್ಲಿ ಕೆಲವು ಅಂಶಗಳು ಬಹಳ ಗಮನಾರ್ಹವಾಗಿವೆ.

ಮೊದಲನೆಯದಾಗಿ ಶಿಕ್ಷಣವನ್ನು ಉದ್ಯೋಗಕ್ಕೆ ಗಂಟು ಹಾಕುವ ಮನೋವೃತ್ತಿ. ಕುಟುಂಬ ಜೀವನದಲ್ಲಿ ಇಸ್ಲಾಮ್ ಧರ್ಮವು ಮಾಡಿರುವ ಕಾರ್ಯ ವಿಂಗಡನೆಯ ಪ್ರಕಾರ ಧನ ಸಂಪಾದನೆ ಗಂಡಿನ ಹೊಣೆಗಾರಿಕೆ, ಹೆಣ್ಣಿನದಲ್ಲ. ಶಿಕ್ಷಣದ ಉದ್ದೇಶ ಉದ್ಯೋಗ ಅಥವಾ ಧನ ಸಂಪಾದನೆ ಮಾತ್ರ ಎಂದು ಬಗೆಯುವವರು ಹೆಣ್ಣು ಉದ್ಯೋಗ ಮಾಡಬೇಕಾಗಿಲ್ಲವೆಂದ ಮೇಲೆ ಆಕೆಗೆ ಶಿಕ್ಷಣವೇಕೆ ಎಂದು ತರ್ಕಿಸುವುದು ಸಹಜ. ಇಲ್ಲಿ ಶಿಕ್ಷಣವು ವಸ್ತುಶಃ ಅಪೇಕ್ಷಣೀಯವೆಂಬ ಮತ್ತು ಇಸ್ಲಾಮ್ ಧರ್ಮವು ಹೆಣ್ಣಿಗೆ ವಹಿಸಿಕೊಟ್ಟಿರುವಂತಹ ಕುಟುಂಬ ರಂಗದ ಸಂರಕ್ಷಣೆ ಮತ್ತು ಭಾವೀ ಪೀಳಿಗೆಯ ತರಬೇತಿಯ ಕಾರ್ಯವನ್ನು ಶಿಕ್ಷಿತ ಹೆಣ್ಣು ಮಾತ್ರ ಸಮರ್ಥವಾಗಿ ನಿರ್ವಹಿಸಬಲ್ಲಳೆಂಬ ಅಂಶವನ್ನು ಅವರಿಗೆ ಮನವರಿಕೆ ಮಾಡಿಸಬೇಕಾದ ಅಗತ್ಯವಿದೆ. ಹಾಗೆಯೇ ಸಮಾಜದಲ್ಲಿ ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳಲ್ಲಿ ಮಹಿಳೆಯರ ಅಗತ್ಯ ಮತ್ತು ಸಮಸ್ಯೆಗಳ ಒಂದು

ವಿಶಾಲ ಕ್ಷೇತ್ರವೇ ಇದೆ. ಆ ಕ್ಷೇತ್ರಕ್ಕೆ ಸುಶಿಕ್ಷಿತ ಮಹಿಳೆಯರದೇ ಅಗತ್ಯವಿದೆ ಎಂಬುದನ್ನೂ ಅವರಿಗೆ ಮನಗಾಣಿಸಬೇಕು.

ಎರಡನೆಯದಾಗಿ ಮಹಿಳೆಯರ ಶಿಕ್ಷಣದ ಬಗ್ಗೆ ಧರ್ಮದ ನಿಲುವೇನು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇಸ್ಲಾಮ್ ಧರ್ಮ ಮಹಿಳೆಯರ ಶಿಕ್ಷಣಕ್ಕೆ ತುಂಬು ಪ್ರೋತ್ಸಾಹ ನೀಡುತ್ತದೆಂಬುದು ಪ್ರತಿಯೊಬ್ಬ ಪ್ರಜ್ಞಾವಂತ ಮುಸ್ಲಿಮನಿಗೆ ತಿಳಿದಿದೆ. ಈ ಕುರಿತು ಈಗಿನ್ನೂ ಮೌಢ್ಯದಲ್ಲಿರುವವರಿಗೆ ಈ ಪ್ರಜ್ಞೆ ಹರಡಬೇಕು.

ಮೂರನೆಯದಾಗಿ ಮುಸ್ಲಿಮರಿಗೆ ತಮ್ಮ ಹೆಣ್ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿ ಕೆಲವು ಪ್ರಾಯೋಗಿಕ ಸಮಸ್ಯೆಗಳಿವೆ. ಸಮಾಜದಲ್ಲಿರುವ ಹೆಚ್ಚಿನ ಶಾಲೆಗಳಲ್ಲಿ ಹುಡುಗ - ಹುಡುಗಿಯರು ಜೊತೆ ಜೊತೆಯಾಗಿ ಕಲಿಯುವಂತಹ ಮಿಶ್ರ ವ್ಯವಸ್ಥೆ ಇದೆ. ಸುಮಾರು ಏಳನೇ ತರಗತಿಯವರೆಗೆ ಇಂತಹ ಶಾಲೆಗಳಿಗೆ ಹೆಣ್ಮಕ್ಕಳನ್ನು ಕಳುಹಿಸುವುದಕ್ಕೆ ಹೆತ್ತವರು ಅಳುಕುವುದಿಲ್ಲ. ಆದರೆ ಆ ಬಳಿಕ ಹೆಣ್ಣು ಬೆಳೆಯ ತೊಡಗಿದಂತೆ ಆತಂಕ ಆರಂಭವಾಗುತ್ತದೆ. ಹಾಗೆ ನೋಡಿದರೆ ಕೇವಲ ಮುಸ್ಲಿಮರಲ್ಲಿ ಮಾತ್ರವಲ್ಲ, ಮಾನ - ಮರ್ಯಾದೆ, ನೈತಿಕತೆ ಇತ್ಯಾದಿಗಳ ಬಗ್ಗೆ ಕಳಕಳಿಯುಳ್ಳ ಪ್ರತಿಯೊಬ್ಬ ಹೆತ್ತವರಿಗೂ ಮಿಶ್ರಶಾಲೆಗಳ ಬಗ್ಗೆ ಇಂತಹ ಆತಂಕಗಳು ಇದ್ದೇ ಇರುತ್ತವೆ. ಮುಸ್ಲಿಮರು ಈ ವಿಷಯದಲ್ಲಿ ಪರಂಪರಾಗತವಾಗಿ ಹೆಚ್ಚು ಸಂವೇದನೆಯುಳ್ಳವರಾಗಿದ್ದಾರೆ. ಸಾಲದ್ದಕ್ಕೆ ಇಂದಿನ ಸಮಾಜದ ನೈತಿಕ ಮಟ್ಟವು ಅವರ ಆತಂಕಗಳಿಗೆ ಸಾಕಷ್ಟು ಸಮರ್ಥನೆಯನ್ನೂ ಒದಗಿಸುತ್ತದೆ. ''ಆದಷ್ಟು ಬೇಗ ಹುಡುಗಿಗೆ ಮದುವೆ ಮಾಡಿಸಿ ಕೈ ತೊಳೆದು ಕೊಳ್ಳುವ'' ಆತುರದಲ್ಲಿ 10ನೇ ತರಗತಿ ಮುಗಿದೊಡನೆ ಹುಡುಗಿಗೆ ಶಾಲೆ ಬಿಡಿಸಿ 'ವರ ಬೇಟೆ' ಆರಂಭಿಸುವುದು ಮುಸ್ಲಿಮರಲ್ಲಿ ಸಾಮಾನ್ಯವಾಗಿದೆ. ಇಲ್ಲಿ ಹದಿನೆಂಟಕ್ಕೆ ಮುಂಚೆ ವಿವಾಹ ಮಾಡಿಸುವುದು ಕಾನೂನು ರೀತ್ಯಾ ಅಪರಾಧ ಮತ್ತು ಹೆಣ್ಣಿನ ಶರೀರ, ಮನಸ್ಸು ಹಾಗೂ ಆಕೆಯ ಭವಿಷ್ಯದ ಮೇಲೆ ಈ ಶೀಘ್ರ ವಿವಾಹವು ಬಹಳ ದುಷ್ಪರಿಣಾಮಗಳನ್ನು ಬೀರುತ್ತದೆ ಎಂಬ ಅಂಶಗಳನ್ನು ಅವರಿಗೆ ತಿಳಿಸಬೇಕಾಗುತ್ತದೆ. ವಿವಾಹ ಮತ್ತು ತದನಂತರದ ಕೌಟುಂಬಿಕ ಹೊಣೆಗಾರಿಕೆಗಳಿಗೆ ಹೆಣ್ಣು ಮಗಳನ್ನು ಮಾನಸಿಕವಾಗಿ ಸನ್ನದ್ಧಗೊಳಿಸದೆ, ತರಬೇತಿ ನೀಡದೆ ಅವಳನ್ನು ವಿವಾಹಿತಗೊಳಿಸುವುದರಿಂದ ಆಗಬಹುದಾದ ಅನಾಹುತಗಳ ಬಗ್ಗೆ ಅವರಲ್ಲಿ ಜಾಗೃತಿ ಮೂಡಿಸಬೇಕಾಗುತ್ತದೆ.

ಮುಸ್ಲಿಮರ ಪೈಕಿ ತಮ್ಮ ಹೆಣ್ಣು ಮಕ್ಕಳನ್ನು ಕಾಲೇಜಿಗೆ ಕಳುಹಿಸುವವರು ತೀರಾ ನಗಣ್ಯ ಸಂಖ್ಯೆಯ ಕೆಲವು ಮಂದಿ ಮಾತ್ರ. ಸಾಮಾನ್ಯ ಸ್ಥಿತಿಯಲ್ಲಿ ಯಾರೂ ತಮ್ಮ ಮಕ್ಕಳನ್ನು ಸಂದೇಹದ ದೃಷ್ಟಿಯಿಂದ ನೋಡುವುದಿಲ್ಲ. ಆದರೆ ಸಮಾಜದ ವಾಸ್ತವಿಕತೆಗಳ ಹಿನ್ನೆಲೆಯಲ್ಲಿ ಹೆತ್ತವರಿಗೆ ಕಾಲೇಜಿಗೆ ಹೋಗುವ ತಮ್ಮ ಮಗಳ ಚಾರಿತ್ರ್ಯದ ಬಗ್ಗೆ

ಆತಂಕಗಳಿರುವುದು ಸ್ವಾಭಾವಿಕ. ಇಲ್ಲಿ ನಮ್ಮ ಮುಂದೆ ಸಮಾಜದ ನೈತಿಕ ಮಟ್ಟವನ್ನು ಸುಧಾರಿಸಬೇಕೆಂಬ ತೀರಾಕಷ್ಟದ ಆದರೂ ತುರ್ತಿನ ಸವಾಲು ಬಂದು ನಿಲ್ಲುತ್ತದೆ. ಹೆಣ್ಮಕ್ಕಳಿಗೆ ಪ್ರತ್ಯೇಕ ಶಾಲೆ ಮತ್ತು ಕಾಲೇಜುಗಳನ್ನು ತೆರೆಯುವುದರಿಂದ ಮುಸ್ಲಿಮ್ ಹೆತ್ತವರಿಗೆ ಮಾತ್ರವಲ್ಲದೆ ನೈತಿಕವಾಗಿ ಹೆಚ್ಚು ಸಂವೇದನಾ ಶೀಲರಾದ ಎಲ್ಲ ಹೆತ್ತವರಿಗೂ ತಮ್ಮ ಹೆಣ್ಮಕ್ಕಳ ಶಿಕ್ಷಣ ಮುಂದುವರಿಸಲು ಒಂದು ದೊಡ್ಡ ಪ್ರೇರಣೆ ಸಿಕ್ಕಂತಾದೀತು. ಇನ್ನು ಮುಸ್ಲಿಮರನ್ನು ಕೇಂದ್ರವಾಗಿಟ್ಟು ಹೇಳುವುದಾದರೆ ಅವರಿಗೆ ಸಾಮಾಜಿಕ ಸ್ಥಿತಿಗಿಂತ ಮಿಗಿಲಾಗಿ, ವೈಯಕ್ತಿಕವಾಗಿ ತಮ್ಮ ಮಗಳು ಪರ್ದಾದ ನಿಬಂಧನೆಯನ್ನು ಪಾಲಿಸಬೇಕು ಎಂಬ ಬಯಕೆ ಮತ್ತು ಕಾಲೇಜುಗಳಲ್ಲಿ ಆಕೆ ಅದನ್ನು ಪಾಲಿಸಲಾರಳು ಎಂಬ ಭೀತಿ ಇರುತ್ತದೆ. ಹೆಣ್ಮಕ್ಕಳಿಗಾಗಿಯೇ ಇರುವ ಕಾಲೇಜುಗಳ ಬಗ್ಗೆ ಇಂತಹ ಆತಂಕ ವಿಶೇಷವಾಗಿ ಇರುವುದಿಲ್ಲ. ಆದ್ದರಿಂದ ಪ್ರತ್ಯೇಕ ಮಹಿಳಾ ಶಾಲೆ - ಕಾಲೇಜುಗಳ ಸ್ಥಾಪನೆಗೆ ಶ್ರಮಿಸಬೇಕು. ಇದು ನೈತಿಕ ದೃಷ್ಟಿಯಿಂದ ಎಷ್ಟು ಹೆಣ್ಮಕ್ಕಳ ಅಗತ್ಯವೋ ಅಷ್ಟೇ ಗಂಡು ಮಕ್ಕಳ ಅಗತ್ಯವೂ ಹೌದು. ಇನ್ನು ಪರ್ದಾದ ಕುರಿತು ಹೇಳುವುದಾದರೆ ಅದರ ಸ್ವರೂಪದ ಬಗ್ಗೆ ಧರ್ಮದಲ್ಲಿರುವ ಯಾವ ರಿಯಾಯ್ತಿಯನ್ನೂ ಗಣನೆಗೆ ತೆಗೆದುಕೊಳ್ಳದೆ ಅದರ ಅತ್ಯಂತ ಕ್ಲಿಷ್ಟ ಹಾಗೂ ಅಪ್ರಾಯೋಗಿಕ ರೂಪವನ್ನು ಮಾತ್ರ ಅಂಗೀಕರಿಸುವ ವಿಪರೀತವಾದಿ ಮನೋಭಾವವನ್ನು ಬೆಳೆಸಿಕೊಂಡ ಅನೇಕರು ಸಮಾಜದಲ್ಲಿ ಕಾಣಸುತ್ತಾರೆ. ಇವರಲ್ಲಿ ಹೆಚ್ಚಿನವರ ನಿಲುವು ಈ ವಿಷಯದಲ್ಲಿ ಸಾಕಷ್ಟು ಅಧ್ಯಯನ ನಡೆಸಿದ ಬಳಿಕ ರೂಪುಗೊಂಡದ್ದಲ್ಲ. ಇತರೆಲ್ಲ ಧಾರ್ಮಿಕ ವಿಷಯಗಳಂತೆ ಈ ವಿಷಯದಲ್ಲೂ ಪುರೋಹಿತ ಸ್ವರೂಪಿ ವಿದ್ವಾಂಸರನ್ನೇ ಕುರುಡಾಗಿ ಅನುಕರಿಸಲಾಗಿದೆ. ಧರ್ಮದೊಂದಿಗಾಗಲಿ ವಿವೇಕದೊಂದಿಗಾಗಲಿ ಸಾಮಾಜಿಕ ವಾಸ್ತವಿಕತೆಗಳೊಂದಿಗಾಗಲಿ ಇವರ ವಿಪರೀತ ನಿಲುವು ಹೆಚ್ಚು ಸಾಮೀಪ್ಯ ಹೊಂದಿಲ್ಲ. ಈ ವಿಷಯದಲ್ಲಿ ಕೇರಳದ ಮುಸ್ಲಿಮರಿಂದ ನಾವು ಕಲಿಯಬೇಕಾದದ್ದು ಧಾರಾಳ ಇದೆ. ಅವರು ಪರ್ದಾ ಮತ್ತು ಬುರ್ಖಾದ ವ್ಯತ್ಯಾಸವನ್ನು ಚೆನ್ನಾಗಿ ಅರಿತಿದ್ದಾರೆ. ಕೇರಳದಲ್ಲಿ ಮಹಿಳೆಯರಿಗಾಗಿಯೇ ಇರುವ ಧಾರ್ಮಿಕ ಹಿನ್ನೆಲೆಯ ಕಾಲೇಜಿನ ವಿದ್ಯಾರ್ಥಿನಿಗಳಾಗಲಿ ಶಿಕ್ಷಕಿಯರಾಗಲಿ ಬುರ್ಖಾ ಧರಿಸುವುದಿಲ್ಲ. ಸಾಮಾನ್ಯ ಬಳಕೆಯ ಉಡುಗೆಗಳ ವಿನ್ಯಾಸದಲ್ಲೇ ತುಸು ಸುಧಾರಣೆಗಳನ್ನು ಮಾಡಿ ಇಸ್ಲಾಮೀ ''ಹಿಜಾಬ್'' (ಪೂರ್ಣವಸ್ತ್ರ) ನ ಬೇಡಿಕೆಯನ್ನು ಈಡೇರಿಸಿಕೊಳ್ಳುತ್ತಾರೆ. ರವಿಕೆ ಎದೆಯ ಕೆಳಗೆ ಕೊನೆಗೊಳ್ಳುವ ಬದಲು ಸೊಂಟದವರೆಗೆ ಹರಡುವಷ್ಟು ನೀಳವಾಗಿರುತ್ತದೆ. ರವಿಕೆಯ ತೋಳುಗಳು ಹಸ್ತದವರೆಗೆ ಉದ್ದವಾಗಿರುತ್ತವೆ. ಬೂಟಿನೊಳಗೆ ಕಾಲುಚೀಲ ಧರಿಸಿಕೊಳ್ಳು ತ್ತಾರೆ. ಮುಖ ಬಿಟ್ಟು ಸ್ಕಾರ್ಫ್ ಧರಿಸಿಕೊಳ್ಳುತ್ತಾರೆ. ಎಲ್ಲ ಅವಶ್ಯಕ ಚಟುವಟಿಕೆಗಳಿಗೆ ಅನುಕೂಲಕರವಾದ ಈ ಉಡುಗೆ ಇಸ್ಲಾಮಿಗೆ ವಿರುದ್ಧವೆಂದು ಅಲ್ಲಿಯ ವಿದ್ವಾಂಸರು ತಕರಾರು ಎಬ್ಬಿಸಿಲ್ಲ. ಇರಾನ್‌ನಲ್ಲಿ ಶಾ ರೆಝಾ ಪೆಹ್ಲವೀಯ ನಿರಂಕುಶಾಧಿಕಾರದ ವಿರುದ್ಧ

ಉಗ್ರ ಹೋರಾಟ ನಡೆಸಿ ಆತನನ್ನು ಬಡಿದೋಡಿಸಿ ಇಸ್ಲಾಮೀ ಕ್ರಾಂತಿ ತರುವಲ್ಲಿ ಇರಾನ್‌ನ ಮಹಿಳೆಯರು ನಿರ್ಣಾಯಕ ಪಾತ್ರ ವಹಿಸಿದ್ದರು. ಅವರ ಉಡುಗೆ ಕೂಡಾ ಇದಕ್ಕಿಂತ ಭಿನ್ನವಲ್ಲ. ಇಂತಹ ಉಡುಪು ಜನಪ್ರಿಯವಾದರೆ ಅದು ಕೂಡಾ ಮುಸ್ಲಿಮ್ ಮಹಿಳೆಯರ ಶಿಕ್ಷಣಕ್ಕೆ ಪೂರಕವಾಗಿರುತ್ತದೆ.

ಇಂತಹ ಪ್ರಾಯೋಗಿಕ ಉಡುಗೆ ಕೂಡಾ ಸಮಾಜದ ಇತರ ಮಹಿಳೆಯರಿಗೆ ಹೆಚ್ಚು ಪರಿಚಿತವಿಲ್ಲವಾದ್ದರಿಂದ ಈ ಉಡುಗೆಯಲ್ಲಿ ಕಾಲೇಜಿಗೆ ಹೋಗುವ ವಿದ್ಯಾರ್ಥಿನಿ ಕೆಲವು ಮುಗ್ಧ ಮತ್ತು ಕೆಲವು ಚುಚ್ಚುವ ಪ್ರಶ್ನೆಗಳನ್ನು ಎದುರಿಸಬೇಕಾದೀತು. ಆತ್ಮ ಗೌರವ ಉಳಿಸಿಕೊಂಡು ಆ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ನೀಡಲು ಮುಸ್ಲಿಮ್ ಹೆಣ್ಣು ಸಮರ್ಥಳಾಗಬೇಕಿದ್ದರೆ ಆಕೆ ಉಡುಪನ್ನು ಬಲವಂತದ ಬದಲು ಸ್ವ ಇಚ್ಛೆಯಿಂದ ಧರಿಸಿಕೊಂಡಿರಬೇಕು ಮತ್ತು ಇಸ್ಲಾಮ್ ಧರ್ಮವು ಸ್ತ್ರೀ - ಪುರುಷರಿಗೆ ಉಡುಗೆಗೆ ಸಂಬಂಧಿಸಿದಂತೆ ನೀಡಿರುವ ಆದೇಶಗಳ ಹಿನ್ನೆಲೆ ಮತ್ತು ಅವುಗಳ ನೈತಿಕ ಹಾಗೂ ಸಾಮಾಜಿಕ ಔಚಿತ್ಯವು ಆಕೆಗೆ ತಿಳಿದಿರಬೇಕು. ಈ ಬಗ್ಗೆ ಆಕೆಗೆ ಮಾಹಿತಿ - ತರಬೇತಿ ನೀಡಬೇಕಾದುದು ಹೆತ್ತವರ ಮತ್ತು ಮುಸ್ಲಿಮ್ ಸಾಮಾಜಿಕ ಕಾರ್ಯಕರ್ತೆಯರ ಕರ್ತವ್ಯ (''ಮುಸ್ಲಿಮ್ ಸಾಮಾಜಿಕ ಕಾರ್ಯಕರ್ತೆಯರು'' ಎಂಬುದು ಸದ್ಯ ಬೆಚ್ಚಿ ಬೀಳಿಸುವಂತಹ ಪದ. ಸಮಾಜ ಬೆಳಗಬೇಕಿದ್ದರೆ ಅಲ್ಲಲ್ಲಿ ಅಂತಹವರ ದಂಡೊಂದು ಇರಬೇಕಾದುದು ಅನಿವಾರ್ಯ)

ಕೊನೆಯದಾಗಿ, ಮುಸ್ಲಿಮ್ ವಿದ್ಯಾರ್ಥಿಗಳು ಎದುರಿಸುವ ಕೆಲವು ಮಾನಸಿಕ ಹಿಂಸೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾದುದೂ ಅಗತ್ಯ. ಒಬ್ಬ ಸಾಮಾನ್ಯ, ಎಳೆಯ ಮುಸ್ಲಿಮ್ ವಿದ್ಯಾರ್ಥಿ ತನ್ನನ್ನು ಮುಸ್ಲಿಮ್ ವಿದ್ಯಾರ್ಥಿ ಎಂದು ಗುರುತಿಸಿಕೊಳ್ಳುವುದು ತಾನು ಮುಸ್ಲಿಮ್ ಕುಟುಂಬದಲ್ಲಿ ಜನಿಸಿದ ಕಾರಣಕ್ಕೆ ಮಾತ್ರವೇ ಹೊರತು ತನ್ನ ಯಾವುದಾದರೂ ಪ್ರಜ್ಞಾಪೂರ್ವಕ ತೀರ್ಮಾನದ ಫಲವಾಗಿ ಅಲ್ಲ. ತನ್ನದು ಎಂಬ ಒಂದೇ ಕಾರಣಕ್ಕೆ ತನ್ನ ಧರ್ಮ ಇತರರ ಧರ್ಮಗಳಿಗಿಂತ ಶ್ರೇಷ್ಠವೆಂದು ಆತ ನಂಬುತ್ತಾನೆ. ಸೀಮಿತ ಜ್ಞಾನ ಮತ್ತು ಅನುಭವದ ಈ ಮುಗ್ಧ ಹುಡುಗ (ಅಥವಾ ಹುಡುಗಿ) ತನ್ನಷ್ಟೇ ಪರಿಮಿತ ಅನುಭವ ಮತ್ತು ತಿಳುವಳಿಕೆ ಇರುವ ತನ್ನಂತೆಯೇ ಮುಗ್ಧರಾದ ತನ್ನ ಕೆಲವು ಸಹಪಾಠಿಗಳಿಂದ ಕೆಲವು ಅರೋಚಕ ವಿಷಯಗಳನ್ನು ಕೇಳುತ್ತಾನೆ. ಮುಸ್ಲಿಮ್ ಹುಡುಗರು ಮುಂಜಿ ಮಾಡಿಕೊಳ್ಳುವುದೇಕೆ? ಮೂತ್ರಶಂಕೆಯ ಬಳಿಕ ಶುದ್ಧೀಕರಣವೇಕೆ? ಮಸೀದಿಯಲ್ಲಿ ನಿತ್ಯ ಅರಚಾಡುವುದೇಕೆ?.. ಹೆಂಗಸರು ಬುರ್ಖಾ ಹಾಕಿ ಗೂಬೆಗಳಂತೆ ಕಾಣುವುದೇಕೆ? ಪುರುಷರು ಆಡಿನಂತಹ ಗಡ್ಡ ಬೆಳೆಸುವುದೇಕೆ?.. ಹೀಗೆ ಮುಂದುವರಿಯುವ ಪ್ರಶ್ನೆಗಳ ಈ ಸರಮಾಲೆ ವಿದ್ಯಾರ್ಥಿಯ ತರಗತಿಯನ್ನವಲಂಬಿಸಿ ಬದಲಾಗುತ್ತಾ ಇರುತ್ತದೆ.

ಮುಸ್ಲಿಮ್ ಎಂಬ ಪದಕ್ಕೆ ಪರ್ಯಾಯವಾಗಿ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಅಡ್ಡನಾಮಗಳೂ ಪ್ರಯೋಗಿಸಲ್ಪಡುತ್ತವೆ. ಆ ಅಡ್ಡನಾಮಗಳಿಂದಲೇ ಹುಡುಗರನ್ನು ಕರೆಯುವವರೂ ಇದ್ದಾರೆ. ಕೆಲವು ಗಟ್ಟಿರಟ್ಟೆಯ, ಚೂಪುನಾಲಗೆಯ ಹುಡುಗರು ಇದಕ್ಕೆಲ್ಲಾ ಅದೇ ಮಟ್ಟದ ಉತ್ತರ ಕೊಟ್ಟು ಬದುಕಿಕೊಳ್ಳುತ್ತಾರೆ. ಆದರೆ ಇತರರು ಪೆಚ್ಚಾಗುತ್ತಾರೆ. ತಾವು ಮುಸ್ಲಿಮರಾಗಿ 'ಹುಟ್ಟಿದ' ಬಗ್ಗೆ ಕೊರಗಲಾರಂಭಿಸುತ್ತಾರೆ. ಶಿಕ್ಷಕರ ಅಥವಾ ಹೆತ್ತವರ ಗಮನಕ್ಕೆ ಬರದ ಈ ದುರಂತದಲ್ಲಿ ನೋಯಿಸುವವರು ಮತ್ತು ನೊಂದವರು ಇಬ್ಬರೂ ಸಮಾನ ಬಗೆಯ ಅಮಾಯಕರಾಗಿರುತ್ತಾರೆ. ಆದರೆ ನೊಂದ ಬಾಲಕನ ಭವಿಷ್ಯದ ಮೇಲೆ ಈ ಬಗೆಯ ಮಾನಸಿಕ ಹಿಂಸೆ ಬೀರಬಹುದಾದ ಪರಿಣಾಮಗಳನ್ನು ಖಂಡಿತ ಕಡೆಗಣಿಸಲು ಸಾಧ್ಯವಿಲ್ಲ. ಇನ್ನು ಪಠ್ಯಪುಸ್ತಕಗಳಲ್ಲೇ ಅವನ ಧರ್ಮ ಅಥವಾ ಅವನದೆನ್ನಲಾಗುವ ಇತಿಹಾಸದ ಬಗ್ಗೆ ಅವಹೇಳನಕಾರಿ ಹೇಳಿಕೆಗಳು ಇದ್ದರೆ ಅಥವಾ ಇದನ್ನು ಮೀರಿ ಸ್ವತಃ ಶಿಕ್ಷಕರೇ ಚುಚ್ಚುವ ಕೆಲಸ ಮಾಡಿದರೆ ಆಗಂತೂ ಪರಿಸ್ಥಿತಿ ಅತ್ಯಂತ ಅಪಾಯಕರವಾಗುತ್ತದೆ.

ಕೆಲವು ಶಾಲೆಗಳಲ್ಲಾದರೂ ಖಚಿತವಾಗಿ ಕಂಡುಬರುವ ಈ ವಾತಾವರಣ ದೇಶದ ಒಟ್ಟು ಸಾಮಾಜಿಕ ಅವಸ್ಥೆಯ ಒಂದು ಲಘುವಾದ ಪ್ರತಿಬಿಂಬ ಮಾತ್ರ. ನಮ್ಮ ಬಹುಧರ್ಮೀಯ ಸಮಾಜದಲ್ಲಿ ಪರಸ್ಪರರ ಧರ್ಮಗಳ ಬಗ್ಗೆ ಜನರ ಧೋರಣೆಗಳು ಆಮೂಲಾಗ್ರವಾಗಿ ಬದಲಾಗದೆ ಈ ಸ್ಥಿತಿ ಬದಲಾಗದು. ಆದರೆ ಆ ಕ್ಲಿಷ್ಟ ಕಾರ್ಯದಲ್ಲಿ ನಿರತರಾಗಿರುತ್ತಲೇ ಪ್ರಸ್ತುತ ಗಂಭೀರ ಸಮಸ್ಯೆಯ ನಿವಾರಣೋಪಾಯಗಳ ಕುರಿತು ತುರ್ತಾಗಿ ಆಲೋಚಿಸಬೇಕಾದ ಅಗತ್ಯವಿದೆ. ಮಕ್ಕಳನ್ನು ಮಾನಸಿಕವಾಗಿ ಪಕ್ವಗೊಳಿಸಿ, ಇಂತಹ ನಿರೀಕ್ಷಿತ ಪ್ರಹಾರಗಳನ್ನು ಸಂಯಮದಿಂದ ಘನತೆಯೊಂದಿಗೆ ಎದುರಿಸಲು ಅವರನ್ನು ಬೌದ್ಧಿಕವಾಗಿ ಸಜ್ಜುಗೊಳಿಸುವ ಕಾರ್ಯಕ್ಕೆ ಮನೆಯಷ್ಟು ಪ್ರಶಸ್ತ ಸ್ಥಳ ಬೇರಿಲ್ಲ. ಹೆತ್ತವರು ತಮ್ಮ ಮಕ್ಕಳ ಶಾರೀರಿಕ ಆರೋಗ್ಯದಷ್ಟೇ ಅವರ ಬೌದ್ಧಿಕ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಬೇಕು.

ತಮಿಳ್ನಾಡಿನ ಉಮರಾಬಾದ್ ಗ್ರಾಮದಲ್ಲಿರುವ ಮದ್ರಸಾವೊಂದರಲ್ಲಿ ಪ್ರತಿವರ್ಷ ಬೇಸಿಗೆ ರಜೆಯ ವೇಳೆ ವಿವಿಧೆಡೆ ಶಾಲೆ- ಕಾಲೇಜುಗಳಲ್ಲಿ ಕಲಿಯುವ ಮುಸ್ಲಿಮ್ ವಿದ್ಯಾರ್ಥಿಗಳಿಗಾಗಿ "ಸಮ್ಮರ್ ಕ್ಯಾಂಪ್‌ಗಳು" ನಡೆಯುತ್ತವೆ. ಈ ಕ್ಯಾಂಪ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಇಸ್ಲಾಮಿನ ಕುರಿತು ಅತ್ಯಗತ್ಯವಾದ ಮಾಹಿತಿಗಳನ್ನು ಒದಗಿಸುವ ಜೊತೆ ಇಂತಹ ಸನ್ನಿವೇಶಗಳನ್ನು ಎದುರಿಸುವುದಕ್ಕೂ ಪರೋಕ್ಷವಾಗಿ ಅವರನ್ನು ಸನ್ನದ್ಧಗೊಳಿಸಲಾಗುತ್ತದೆ. ಪ್ರಜ್ಞಾವಂತ, ವಿದ್ಯಾವಂತ ಮುಸ್ಲಿಮರು ಎಲ್ಲ ನಗರಗಳಲ್ಲೂ ಇಂತಹ ಕ್ಯಾಂಪ್‌ಗಳನ್ನು ಏರ್ಪಡಿಸಿದರೆ ಅದು ದೂರಗಾಮೀ ಸತ್ಫಲಗಳನ್ನು ನೀಡಬಹುದು.

ಶಿಕ್ಷಣ ಕ್ಷೇತ್ರದ ತಮ್ಮ ಇಂದಿನ ಶೋಚನೀಯ ಅವಸ್ಥೆಯು ಪೂರ್ಣ ದೀವಾಳಿತನಕ್ಕೆ ತಲುಪುವ ಮುನ್ನ ಮುಸ್ಲಿಮರು ಕೈಗೊಳ್ಳಲೇ ಬೇಕಾದ ಕ್ರಮಗಳ ಪೈಕಿ ಕೆಲವು ಇಲ್ಲಿವೆ

- ಪ್ರತಿಯೊಂದು ಪ್ರದೇಶದಲ್ಲೂ ಮುಸ್ಲಿಮರ ಶೈಕ್ಷಣಿಕ ಪ್ರಗತಿಯ ಬಗ್ಗೆ ಪ್ರಾಮಾಣಿಕ ಕಳಕಳಿಯುಳ್ಳಂತಹ ಸಮಾನ ಮನಸ್ಕ ವ್ಯಕ್ತಿಗಳು ಈ ಉದ್ದೇಶಕ್ಕಾಗಿ ಗ್ರಾಮ, ನಗರ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ಸಂಘಟಿತರಾಗುವುದು. ಈ ಸಮಾನ ಧ್ಯೇಯಕ್ಕಾಗಿ ವಿವಿಧ ಮುಸ್ಲಿಮ್ ಸಂಘ ಸಂಸ್ಥೆಗಳು ಸಂಯುಕ್ತ ವೇದಿಕೆ ರಚಿಸುವುದು.

- ಸಮುದಾಯದ ಶೈಕ್ಷಣಿಕ ಜಾಗೃತಿ ಮತ್ತು ಅಭಿವೃದ್ಧಿಗಾಗಿ ಕೆಲಸ ಮಾಡಲು ತಯಾರಿರುವ ಕಾರ್ಯಕರ್ತರ ಮತ್ತು ಕಾರ್ಯಕರ್ತೆಯರ ಗುಂಪುಗಳನ್ನು ನಿರ್ಮಿಸಿ ಅವರಿಗೆ ಸಮೀಕ್ಷೆ, ಯೋಜನೆ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದ ವೈಚಾರಿಕ ಹಾಗೂ ಪ್ರಾಯೋಗಿಕ ತರಬೇತಿ ನೀಡಿ ಕೆಲಸಕ್ಕೆ ಹಚ್ಚುವುದು.

- ಪ್ರತಿಯೊಂದು ಜಿಲ್ಲೆಯಲ್ಲಿ ಎರಡು ವರ್ಷಗಳಿಗೊಮ್ಮೆ ಒಂದು ಪ್ರದೇಶವನ್ನು ವಿಶೇಷವಾಗಿ ಗುರಿಯಾಗಿಟ್ಟು ಅಲ್ಲಿಯ ಮುಸ್ಲಿಮರ ಶೈಕ್ಷಣಿಕ ಅಭಿವೃದ್ಧಿಗೆ ವಿಶೇಷ ಗಮನ ಕೇಂದ್ರೀಕರಿಸಿ ಕೆಲಸ ಮಾಡುವುದು. ಇದಕ್ಕೆ ಇಂತಹ ಚಟುವಟಿಕೆಯಲ್ಲಿ ಆಸಕ್ತಿಯುಳ್ಳ ಮತ್ತು ಅನುಭವಸ್ಥರಾದ ಒಂದಿಬ್ಬರನ್ನಾದರೂ ಪೂರ್ಣಾವಧಿ ಕಾರ್ಯಕರ್ತರಾಗಿ ನೇಮಿಸಿ ಈ ಸೇವೆಗೆ ತೊಡಗಿಸುವುದು.

- ಮಸೀದಿಗಳನ್ನು, ಮುಸ್ಲಿಮರಲ್ಲಿ ಶೈಕ್ಷಣಿಕ ಜಾಗೃತಿ ಹುಟ್ಟಿಸುವ ವೇದಿಕೆಯಾಗಿ ಬಳಸುವುದು. ಉದಾ: ಶುಕ್ರವಾರದ ಸಭೆಯಲ್ಲಿ ಮತ್ತು ಪ್ರವಚನಗಳಲ್ಲಿ ಶೈಕ್ಷಣಿಕ ಸಮಸ್ಯೆಗಳ ಕಡೆಗೆ ಜನರ ಗಮನ ಸೆಳೆಯುವುದು ಹಾಗೂ ಅವರಲ್ಲಿ ಶಿಕ್ಷಣದ ಬಗ್ಗೆ ಉತ್ಸಾಹ ಮತ್ತು ಪೈಪೋಟಿಯ ಛಲವನ್ನು ತುಂಬುವುದು. ಮಸೀದಿಯ ನೋಟಿಸ್ ಬೋರ್ಡ್‌ಗಳಲ್ಲಿ ಶಿಕ್ಷಣ ಸಂಬಂಧಿ ಪ್ರಕಟನೆಗಳನ್ನು ಸೇರಿಸುವುದು. ಮಸೀದಿಯ ಕಮಿಟಿಗಳ ಸಭೆಗಳಲ್ಲಿ ಸ್ಥಳೀಯ ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕೆ ತೆಗೆದು ಕೊಳ್ಳಬೇಕಾದ ಕ್ರಮಗಳನ್ನು ತೀರ್ಮಾನಿಸುವುದು.

- ಮದ್ರಸಾಗಳ ವೇಳಾ ಪಟ್ಟಿಯು ಮಕ್ಕಳ ಶಾಲಾ ವೇಳಾ ಪಟ್ಟಿಯ ಜೊತೆ ಘರ್ಷಿಸದಂತೆ ಹಾಗೂ ಅವರ ಹೋಮ್‌ವರ್ಕ್ ಇತ್ಯಾದಿ ಚಟುಟಿಕೆಗಳಿಗೆ ತಡೆಯಾಗದಂತೆ ನೋಡಿಕೊಳ್ಳುವುದು. ಮದ್ರಸಗಳಲ್ಲಿ ಶಾಲಾ ಮಕ್ಕಳಿಗೆ ಆದಷ್ಟು ಕಡಿಮೆ ಸಮಯದಲ್ಲಿ ಗರಿಷ್ಠ ಪ್ರಮಾಣದಲ್ಲಿ ಧರ್ಮದ ಮೂಲಭೂತ ಅಂಶಗಳನ್ನೆಲ್ಲಾ ಕಲಿಸುವಂತೆ ಪಠ್ಯಪುಸ್ತಕ ಮತ್ತು ಬೋಧನಾಕ್ರಮವನ್ನು ಸುಧಾರಿಸುವುದು. ಹೊರಗಿನ ವಾತಾವರಣದಲ್ಲಿ ಮಕ್ಕಳ ಮನಸ್ಸಿನಲ್ಲಿ ಉಂಟಾಗುವ ಸಂದೇಹ, ಆತಂಕ, ಕೀಳರಿಮೆ ಇತ್ಯಾದಿಗಳನ್ನು

ಬಹಳ ಯುಕ್ತಿ ಪೂರ್ಣವಾಗಿ ನಿವಾರಿಸುವುದು.

- ಮದ್ರಸಾದ ಕಟ್ಟಡಗಳನ್ನು ಬಿಡುವಿನ ಸಮಯಗಳಲ್ಲಿ ವಯಸ್ಕರ ಶಿಕ್ಷಣ ಮಹಿಳಾ ಶಿಕ್ಷಣ ಇತ್ಯಾದಿಗಳಿಗಾಗಿ ಬಳಸಿಕೊಳ್ಳುವುದು.

- ಧರ್ಮದ ಬಗೆಗಿನ ದುರ್ವ್ಯಾಖ್ಯಾನಗಳು ಮತ್ತು ಮೂಢನಂಬಿಕೆಗಳು ಶಿಕ್ಷಣಕ್ಕೆ, ವಿಶೇಷತಃ ಹೆಣ್ಮಕ್ಕಳ ಶಿಕ್ಷಣಕ್ಕೆ ಅಡ್ಡಿಯಾಗದಂತಾಗಲು, ಸಂಬಂಧ ಪಟ್ಟ ಧಾರ್ಮಿಕ ವಿಷಯಗಳ ಬಗ್ಗೆ ಮುಕ್ತ ಜಿಜ್ಞಾಸೆ ನಡೆದು ಸಮಾಜವು ಒಂದು ತೀರ್ಮಾನಕ್ಕೆ ತಲುಪಲು ಬೇಕಾದ ಕ್ರಮಗಳನ್ನು ಕೈಗೊಳ್ಳುವುದು.

- ಮಸೀದಿಯಂತೆ ಶಾಲೆ ಕೂಡಾ ಸಮುದಾಯದ ಅಗತ್ಯ ಹಾಗೂ ಧಾರ್ಮಿಕ ಶಿಕ್ಷಣದಂತೆಯೇ ಸಾಮಾನ್ಯ ಶಿಕ್ಷಣ ಕೂಡಾ ಗೌರವಾರ್ಹ ಮತ್ತು ಅವಶ್ಯಕ ಎಂಬ ತಿಳುವಳಿಕೆ ಮೂಡಿಸಲು ಶ್ರಮಿಸುವುದು.

- ಸಮಾಜ ಸೇವಾ ಚಟುವಟಿಕೆಗಳು ಕೇವಲ ಬಡ ಹೆಣ್ಮಕ್ಕಳನ್ನು ವಿವಾಹ ಮಾಡಿಸುವ ಮತ್ತು ಉಚಿತ ಸಾಮೂಹಿಕ ಸುನ್ನತ್ ಕಾರ್ಯಕ್ರಮಗಳನ್ನು ಏರ್ಪಡಿಸುವ ಸಂಕುಚಿತ ಮಿತಿಗಳನ್ನು ಮೀರಿ ಬಡ ವಿದ್ಯಾರ್ಥಿಗಳಿಗೆ ಪುಸ್ತಕ ಮತ್ತು ಶಾಲಾಶುಲ್ಕವನ್ನು ಒದಗಿಸುವ, ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ನೀಡುವ ಸ್ಪರ್ಧಾ ಮನೋಭಾವ ಬೆಳೆಸಲಿಕ್ಕಾಗಿ - ವಿಶೇಷ ಸಾಧನೆ ಮಾಡುವ ವಿದ್ಯಾರ್ಥಿಗಳಿಗೆ ಆಕರ್ಷಕ ಬಹುಮಾನಗಳನ್ನು ಘೋಷಿಸುವ ಏರ್ಪಾಡು ಮಾಡುವುದು.

- ಧಾರ್ಮಿಕ ಮತ್ತು ಸಾಮುದಾಯಿಕವಾದ ಸೂಕ್ಷ್ಮ ಭಾವನೆಗಳಿಗೆ ಧಕ್ಕೆ ತರುವ ಅಂಶಗಳು ಪಠ್ಯಪುಸ್ತಕದಲ್ಲಿದ್ದರೆ ಅವು ಒಟ್ಟು ಶಿಕ್ಷಣ ಕ್ಷೇತ್ರದ ಬಗ್ಗೆಯೇ ತಾತ್ಸಾರ ಬೆಳೆಯಲು ಕಾರಣವಾಗುವುದರಿಂದ ಪಠ್ಯ ಪುಸ್ತಕಗಳನ್ನು ಅಂತಹ ಅಂಶಗಳಿಂದ ಮುಕ್ತಗೊಳಿಸುವ ಬಗ್ಗೆ ಯೋಜನಾ ಬದ್ಧವಾಗಿ ಕಾರ್ಯವೆಸಗಬೇಕು.

- ಶಾಲೆ ಕಾಲೇಜುಗಳ ಪರೀಕ್ಷೆ ಆರಂಭವಾಗುವುದಕ್ಕೆ ಮುಂಚೆ ಅಧ್ಯಯನಕ್ಕಾಗಿ ನೀಡಲಾಗುವ ರಜೆಯ ದಿನಗಳಲ್ಲಿ ಮುಸ್ಲಿಮ್ ವಿದ್ಯಾರ್ಥಿಗಳಿಗಾಗಿ ವಿಶೇಷ ಕೋಚಿಂಗ್ ಕ್ಲಾಸ್‌ಗಳನ್ನು ಏರ್ಪಡಿಸುವುದು.

- ಈಗಾಗಲೇ ಅಸ್ತಿತ್ವದಲ್ಲಿರುವ ಮುಸ್ಲಿಮ್ ಶಿಕ್ಷಣ ಸಂಸ್ಥೆಗಳನ್ನು ಬಲಪಡಿಸುವ, ವಿಸ್ತರಿಸುವ ಮತ್ತು ಅವುಗಳ ಗುಣಮಟ್ಟವನ್ನು ಸುಧಾರಿಸುವ ಪ್ರಯತ್ನದ ಜೊತೆಗೇ ಹೊಸ, ಅದರಲ್ಲೂ ವಿಶೇಷವಾಗಿ ವೃತ್ತಿಪರ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಲು ಪ್ರಯತ್ನಿಸುವುದು.

- ಮುಸ್ಲಿಮರ ಶಿಕ್ಷಣದ ಬಗ್ಗೆ ಮುಸ್ಲಿಮರಷ್ಟೇ ಪ್ರಾಮಾಣಿಕ ಕಾಳಜಿಯುಳ್ಳ

ಮುಸ್ಲಿಮೇತರರು ಶಿಕ್ಷಕ ವರ್ಗದಲ್ಲೂ, ಅಧಿಕಾರಿ ವರ್ಗದಲ್ಲೂ, ರಾಜಕಾರಣಿಗಳಲ್ಲೂ, ಜನಸಾಮಾನ್ಯರಲ್ಲೂ ಧಾರಾಳ ಸಂಖ್ಯೆಯಲ್ಲಿದ್ದಾರೆಂಬುದನ್ನು ಗಮನದಲ್ಲಿಟ್ಟುಕೊಂಡು ಅಂತಹವರನ್ನು ತಮ್ಮ ಶ್ರಮದಲ್ಲಿ ಪಾಲುಗೊಳಿಸಿ ಅವರಿಂದ ಗರಿಷ್ಠ ಸಹಕಾರ ಪಡೆಯುವುದು.

- ಪ್ರತಿವರ್ಷ ಶೈಕ್ಷಣಿಕ ಜಾಗೃತಿ ಸಪ್ತಾಹಗಳನ್ನು ಏರ್ಪಡಿಸಿ, ಪ್ರತಿಯೊಂದು ಮುಸ್ಲಿಮ್ ಕುಟುಂಬವನ್ನು ಸಂಪರ್ಕಿಸಿ ಶಾಲೆಗೆ ಸೇರಲು ಅರ್ಹರಾದ ಮಕ್ಕಳು ಮನೆಯಲ್ಲಿ ಉಳಿಯದಂತೆ, ಮಧ್ಯೆ ಶಾಲೆ ಬಿಟ್ಟವರು ಮತ್ತೆ ಶಾಲೆ ಸೇರುವಂತೆ ನೋಡಿಕೊಳ್ಳುವುದು.

- ಸರಕಾರದ ವತಿಯಿಂದ ಅಥವಾ ಇತರ ಸಂಘ ಸಂಸ್ಥೆಗಳ ವತಿಯಿಂದ ಶೈಕ್ಷಣಿಕ ಜಾಗೃತಿ ಅಥವಾ ಸುಧಾರಣೆಯ ನಿಟ್ಟಿನಲ್ಲಿ ನಡೆಯುವ ಉಪಯುಕ್ತ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸಿ ಸಹಕರಿಸುವುದು.

- ಕೇಂದ್ರ ಅಲ್ಪ ಸಂಖ್ಯಾತ ಆಯೋಗ ಮತ್ತು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಅಲ್ಪ ಸಂಖ್ಯಾತರ ನಿರ್ದಿಷ್ಟ ಸಮಸ್ಯೆಗಳ ಅಧ್ಯಯನಕ್ಕೆ ನೇಮಿಸಿದ ವಿವಿಧ ಸಮಿತಿ ಮತ್ತು ಆಯೋಗಗಳ ಶಿಫಾರಸ್ಸುಗಳನ್ನು ಸರಿಯಾಗಿ ಅಭ್ಯಸಿಸಿ ಆ ಪೈಕಿ ಈ ರಂಗಕ್ಕೆ ಸಂಬಂಧಿಸಿದ ಸೂಕ್ತ ಶಿಫಾರಸುಗಳ ಶೀಘ್ರ ಅನುಷ್ಠಾನಕ್ಕೆ ಸರಕಾರದ ಮೇಲೆ ಒತ್ತಡ ತರುವುದು. ಸರಕಾರ ನೀಡುವ ಆಶ್ವಾಸನೆಗಳು, ಆಯೋಗಗಳ ನೇಮಕಾತಿ, ಮಸೂದೆಗಳ ಅಂಗೀಕಾರ, ಚುನಾವಣಾ ಪ್ರಣಾಳಿಕೆಗಳಲ್ಲಿ ನೀಡಲಾದ ಭರವಸೆಗಳು ಇವೆಲ್ಲಾ ಕೇವಲ ಕಣ್ಣಿಗೆ ಮಣ್ಣೆರಚುವ ಸಾಧನಗಳಾಗದಂತೆ ನೋಡಿಕೊಳ್ಳುವುದು.

- ಸರಕಾರದಿಂದ ಈಗಾಗಲೇ ಘೋಷಿತವಾಗಿರುವ ವಿವಿಧ ಸೌಲಭ್ಯಗಳು ಮತ್ತು ಸಂವಿಧಾನದತ್ತ ಮೂಲಭೂತ ಹಕ್ಕುಗಳ ಸಹಿತ ವಿಭಿನ್ನ ಹಕ್ಕುಗಳ ಬಗ್ಗೆ ಮಾಹಿತಿ ಸಂಗ್ರಹಿಸಿಟ್ಟು ಸಮುದಾಯವು ಅವುಗಳಿಂದ ಗರಿಷ್ಠ ಪ್ರಯೋಜನ ಪಡೆಯುವಂತೆ ನೋಡಿಕೊಳ್ಳುವುದು.

''ಖಂಡಿತವಾಗಿಯೂ ಒಂದು ಸಮುದಾಯವು ಸ್ವತಃ ತನ್ನನ್ನು ಬದಲಾಯಿಸಿಕೊಳ್ಳುವ ತನಕ ಅಲ್ಲಾಹನು ಅದನ್ನು ಬದಲಿಸುವುದಿಲ್ಲ'' - ಪವಿತ್ರ ಕುರ್‌ಆನ್.

------

● ಪಿ .ಎಸ್. ಶ್ರೀಧರ ಮೂರ್ತಿ
ನ್ಯಾಯವಾದಿ,
25, ಬಸವನ ಗುಡಿ,
ಮಹಾತ್ಮಾ ಗಾಂಧಿ ರಸ್ತೆ, ಬೆಂಗಳೂರು.

# ಮೀಸಲಾತಿ ಹಿನ್ನೆಲೆಯಲ್ಲಿ ಮುಸ್ಲಿಮರ ಶೈಕ್ಷಣಿಕ ಸಮಸ್ಯೆಗಳು

''ನಮ್ಮದು ಜಾತ್ಯಾತೀತ ಸಮಾಜವಾದಿ ಪ್ರಜಾಪ್ರಭುತ್ವ; ಇಲ್ಲಿ ಜಾತಿ ಮತಗಳ ಮಾತೇಕೆ? ಪ್ರತಿ ಹುದ್ದೆಗೂ ವ್ಯಕ್ತಿಯ ಅರ್ಹತೆ ಮತ್ತು ಪ್ರತಿಭೆಗಳನ್ನಾಧರಿಸಿ ನೇಮಕ ಮಾಡುವುದು ಸೂಕ್ತ.'' ಈ ಮಾತು ಕೇಳಲಿಕ್ಕೂ, ಹೇಳಲಿಕ್ಕೂ ಚೆನ್ನು; ಬಾಯಿಗೆ ರುಚಿ; ಕಿವಿಗೆ ಆಪ್ಯಾಯಮಾನ. ಇದರಿಂದ ವ್ಯವಹಾರದಲ್ಲಿ ಅವರವರ ಜಾತಿ ಬಾಂಧವರಿಗೆ ಹುದ್ದೆಗಳನ್ನು ಹಂಚಲಡ್ಡಿ ಇಲ್ಲ. ನೆಹರೂರವರು ಪ್ರಧಾನಿಯಾಗಿದ್ದಾಗ ಕೇಂದ್ರ ಮಂತ್ರಿಮಂಡಲದಲ್ಲಿ ಶೇ.75 ರಷ್ಟು ಮಂದಿ ಉತ್ತರ ಪ್ರದೇಶದವರೇ ಇದ್ದರು. (ಕುಲ್‌ದೀಪ್ ನಯ್ಯರ್‌ರವರ ''ಇಂಡಿಯ - ದಿ ಕ್ರಿಟಿಕಲ್ ಇಯರ್ಸ್'' ಪುಸ್ತಕ ನೋಡಿ) ಪ್ರಾಯಶಃ ಅರ್ಹತೆ, ಪ್ರತಿಭೆ ಎಲ್ಲವೂ ಆ ಪ್ರಾಂತ್ಯದಲ್ಲೇ ಇತ್ತೇನೋ. ರಾಜೀವ್ ಗಾಂಧಿ ಮಂತ್ರಿಮಂಡಲದಲ್ಲಿ ಶೇ. 60 ರಷ್ಟು ಮಂದಿ ಬ್ರಾಹ್ಮಣರೇ ಇದ್ದರು. ಕೇಂದ್ರ ಮತ್ತು ರಾಜ್ಯಗಳ ಬಹುತೇಕ ಇಲಾಖೆಗಳ ಪಾಡೂ ಇಷ್ಟೇ. ಕರ್ನಾಟಕ ರಾಜ್ಯದ ಅಕೌಂಟೆಂಟ್ ಜನರಲ್ ಆಫೀಸಿನಲ್ಲಿ ಹಲವು ಸಹಸ್ರ ಹುದ್ದೆಗಳಿದ್ದು ಇತ್ತೀಚಿನವರೆಗೆ ಅವೆಲ್ಲ ತಮಿಳು ಬ್ರಾಹ್ಮಣರ ಗುತ್ತಿಗೆಯಾಗಿತ್ತು. ಅಷ್ಟೇಕೆ? ಇಂಡಿಯನ್ ಆಡಿಟ್ ಅಂಡ್ ಅಕೌಂಟ್ಸ್ ಸರ್ವಿಸ್ (ಐ.ಎ.ಎ.ಎಸ್) ಎಂಬ ಸಂಸ್ಥೆಗೆ, ಇಂಡಿಯನ್ ಅಯ್ಯರ್ಸ್ ಅಂಡ್ ಅಯ್ಯಂಗಾರ್ಸ್ ಸರ್ವಿಸ್ ಎಂಬ ಅಡ್ಡ ಹೆಸರಿತ್ತು. ಟೆಲಿಫೋನ್ ಸಂಪರ್ಕ ಇಲಾಖೆಯಲ್ಲಿ ತಮಿಳು ಬ್ರಾಹ್ಮಣರು ಅಧಿಕ ಸಂಖ್ಯೆಯಲ್ಲಿದ್ದಾರೆ. ಬೆಂಗಳೂರಿನ

ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಕೇಂದ್ರ ಸರಕಾರದ್ದು) ಮಲೆಯಾಳಿಗಳ ಪೋಷಕ ಸಂಸ್ಥೆ. ಅಂತೆಯೇ ಇಂಡಿಯನ್ ಟೆಲಿಫೋನ್ ಇಂಡಸ್ಟ್ರಿ ತಮಿಳರದು; ಹಿಂದೂಸ್ತಾನ್ ಮಿಷಿನ್ ಟೂಲ್ಸ್ (ಹೆಚ್.ಎಂ.ಟಿ) ಮತ್ತು ಮೋಟಾರ್ ಇಂಡಸ್ಟ್ರೀಸ್ ಕಂಪೆನಿ (ಮೈಕೋ) ಒಕ್ಕಲಿಗರದು. ಇವೆಲ್ಲ, ಅರ್ಹತೆ ಪ್ರತಿಭೆ ವಾದದ ಪರಿಣಾಮ.

ಹಿಂದೆ ಮೈಸೂರಿನಲ್ಲಿ ಕೃಷ್ಣರಾಜ ಒಡೆಯರು ಮಹಾರಾಜರಾಗಿದ್ದು ಸರ್.ಎಮ್. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ, ಸರ್ಕಾರಿ ಹುದ್ದೆಗಳಲ್ಲಿ ಬಹುತೇಕ ಬ್ರಾಹ್ಮಣರೇ ಇದ್ದಾರೆಂಬ ದೂರಿನಿಂದಾಗಿ, ಎಲ್ಲ ಕೋಮುಗಳವರಿಗೂ ಪ್ರಾತಿನಿಧ್ಯ ದೊರಕಿಸುವ ಉದ್ದೇಶದಿಂದ ಆಂಗ್ಲ ಅಧಿಕಾರಿ ಮಿಲ್ಲರ್ ಎಂಬುವರ ಅಧ್ಯಕ್ಷತೆಯಲ್ಲಿ ಒಂದು ಆಯೋಗ ರಚಿತವಾಯಿತು. ಅದು ಮಿಲ್ಲರ್ ಕಮಿಟಿ ಎಂದೇ ಪ್ರಸಿದ್ಧಿಯಾಯಿತು. ಆದರ ವರದಿ ಪ್ರಕಾರ ಒಂದು '' ಕೇಂದ್ರ ನೇಮಕಾತಿ ಮಂಡಲಿ'' (ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡ್) ಅಸ್ತಿತ್ವಕ್ಕೆ ಬಂತು. ಇದಕ್ಕೆ ಸಿ. ಆರ್. ಬಿ. ಎಂದು ರೂಢಿಯಲ್ಲಿ ಹೆಸರಾಯಿತು. ಇದರಿಂದ ಇನ್ನು ಮುಂದೆ ತಮಗೆ ಸಲೀಸಾಗಿ ಕೆಲಸ ಸಿಗದೆಂಬ ಭಯ ಬ್ರಾಹ್ಮಣರಲ್ಲಿ ಆವರಿಸಿ, ಸಿ.ಆರ್.ಬಿ. ಯನ್ನು ಕಂಪ್ಲೀಟ್ ರೂಯಿನೇಷನ್ ಆಫ್ ಬ್ರಾಹ್ಮಿನ್ಸ್ ಎಂದು ವ್ಯಾಖ್ಯಾನಿಸಿದರು. ತಮ್ಮವರಲ್ಲದವರಿಗೆ ಉದ್ಯೋಗ ಸಿಗಬಹುದಾದ ಯಾವುದೇ ವ್ಯವಸ್ಥೆಯನ್ನು ಮೇಲ್ಜಾತಿಯ ಜನ ಎಲ್ಲಾ ಕಾಲದಲ್ಲೂ ವಿರೋಧಿಸಿದ್ದಾರೆ.

ಮೇಲು ಕೀಳು ಎಂಬ ದುರ್ಭಾವನೆಗೆ ಧರ್ಮದ ಲೇಪವಿರುವುದರಿಂದ ಸಮಾನತೆಯನ್ನೇ ಸಾರ್ವಭೌಮ ಮೌಲ್ಯವಾಗಿಟ್ಟುಕೊಂಡ ಇಸ್ಲಾಮ್ ಧರ್ಮದ ಬಗ್ಗೆ ಭಯವೂ ದ್ವೇಷವೂ ಮನುಸ್ಮೃತಿಯ ಮನೋಧರ್ಮದವರಿಗೆ ಇದ್ದಲ್ಲಿ ಆಶ್ಚರ್ಯವಿಲ್ಲ. ದಲಿತರನ್ನು ಚಂಡಾಲರೆಂದು ಕರೆದಂತೆಯೇ ಈ ಇಡೀ ಸಾಮಾಜಿಕ ವ್ಯವಸ್ಥೆಗೆ ಆಗಂತುಕರಾದ ಹೊಸಬರನ್ನು ಇವರು ಮ್ಲೇಚ್ಛರೆಂದು ಕರೆದರು. ಇವರ ದೃಷ್ಟಿಯಲ್ಲಿ ಮುಸ್ಲಿಮರು ಮ್ಲೇಚ್ಛರು. ಅಂತೆಯೇ ಇವರ ಕಣ್ಣಿಗೆ ಬಿದ್ದ ಹೊಸಬರೆಲ್ಲರೂ - ಯುರೋಪಿಯನ್ನರು, ಕ್ರೈಸ್ತರು, ಇತ್ಯಾದಿ - ಮ್ಲೇಚ್ಛರೇ.

**ಮುಸ್ಲಿಮರ ಬಗ್ಗೆ ದ್ವೇಷಕ್ಕೆ ಕಾರಣ:** ಸವರ್ಣೀಯರಲ್ಲಿನ ಮೊದಲ ಮೂರು ವರ್ಣಗಳವರು, ಎಂದರೆ ಮೇಲ್ಜಾತಿಯವರು ಇಸ್ಲಾಮ್‌ನ ಬಗ್ಗೆ ಅನಾದರ ತಾತ್ಸಾರ ಭಾವನೆಗಳನ್ನು ರೂಢಿಸುವಲ್ಲಿ ಪಾತ್ರ ವಹಿಸಿದರು. ಏಕೆಂದರೆ ಇಸ್ಲಾಮ್ ಒತ್ತಿ ಹೇಳುವ ಸಮಾನತೆ ಸೋದರತೆಯ ಮೌಲ್ಯಗಳಿಗೆ ಶೂದ್ರರೂ ದಲಿತರೂ ಆಕರ್ಷಿತರಾದಲ್ಲಿ ತಮ್ಮ ಹಿತಾಸಕ್ತಿಗೆ ಭಂಗ ಬರುವುದೆಂಬ ಭಯ ಅವರಲ್ಲಿತ್ತು; ಈಗಲೂ ಈ ಭಯವಿದ್ದೇ ಇದೆ. ಶೂದ್ರರು ಮೊದಲೇ ವಿದ್ಯೆ, ಚಿಂತನಶೀಲತೆಗಳಿಂದ ವಂಚಿತರಾಗಿದ್ದರು. ಜತೆಗೆ ಪಾಪ - ಪುಣ್ಯಗಳ ಕಲ್ಪನೆ ಭಾವನೆಗಳನ್ನು ಚಾಣಾಕ್ಷತನದಿಂದ ಶೋಷಿಸಿ, ಸಾಂಸ್ಕೃತಿಕ ದಾಸ್ಯವನ್ನೂ, ಮಾನಸಿಕ

ಅಡಿಯಾಳುತನವನ್ನೂ ಸ್ವೇಚ್ಛಾನುಸಂಧಾನವನ್ನು ಶೂದ್ರರಲ್ಲಿ ಮೇಲ್ಜಾತಿಗಳವರು ರೂಢಿಸಿದರು. ಇವೆಲ್ಲದರ ಪರಿಣಾಮವೆಂದರೆ, ಮುಸ್ಲಿಮರು ಎಂದೊಡನೆ, ಪರಕೀಯರು; ಹೊರದೇಶದ ಧರ್ಮಾನುಯಾಯಿಗಳು; ದೇವಸ್ಥಾನ ಕೆಡವಿದವರು; ನಮ್ಮೊಡನೆ ಪೈಪೋಟಿ ನಡೆಸುವವರು; ಮಡಿಮೈಲಿಗೆ ಇಲ್ಲದವರು; ನಮ್ಮ ಜೀವನಪದ್ಧತಿ, ಸಂಸ್ಕೃತಿಗಳನ್ನು ಕೆಡಿಸಿಬಿಡುವ ಉದ್ದೇಶ ಉಳ್ಳವರು; ವಿದೇಶಿ ಆಕ್ರಮಣಕಾರರು ಎಂಬ ಭಾವನೆಗಳು ಶೂದ್ರರಲ್ಲಿ ಮೂಡುವಂತೆ ಮಾಡಿದರು. ದೇಶದ ಜನಸಂಖ್ಯೆಯ ಶೇ. 15ರಷ್ಟು ಮಾತ್ರವೇ ಮೇಲ್ಜಾತಿಯವರಿದ್ದು, ಶೇ. 40ರಷ್ಟು ಮಂದಿ ವಿವಿಧ ಶೂದ್ರ ಪಂಗಡಗಳಿಗೆ ಸೇರಿದವರಿದ್ದಾರೆ. ಶಿಕ್ಷಣ, ಉದ್ಯೋಗ, ರಾಜಕೀಯ ಕ್ಷೇತ್ರಗಳಲ್ಲಿ ಮುಸ್ಲಿಮರು ವಂಚಿತರಾಗಿರುವುದಕ್ಕೂ ವಿನಾಕಾರಣ ಕೋಮುಗಲಭೆಗಳು ತಲೆದೋರುವುದಕ್ಕೂ ಇದೇ ಕಾರಣ. ಶಾಲೆಯಲ್ಲಿ ಬೋಧಿಸುವ ಉಪಾಧ್ಯಾಯರು, ಪಠ್ಯಕ್ರಮವನ್ನು ತಯಾರಿಸುವ ರೀತಿ, ಪತ್ರಿಕೆಗಳಲ್ಲಿನ ಲೇಖನಗಳು, ಸುದ್ದಿ, ಪ್ರಸಾರದಲ್ಲಿ ಕಾಪಟ್ಯ ಹೀಗೆ ಅನೇಕ ಸ್ತರಗಳಲ್ಲಿ ಮುಸ್ಲಿಮರಿಗೆ ಅನ್ಯಾಯವಾಗುತ್ತಿರುವುದಕ್ಕೂ ಇದೇ ಕಾರಣ.

ದಲಿತರಲ್ಲಿ ವಿದ್ಯೆ ಹರಡುತ್ತಿದೆ. ವಸ್ತುನಿಷ್ಠ ಇತಿಹಾಸಕಾರರ ಮತ್ತು ಹಿಂದೂ ಮನಃಪ್ರವೃತ್ತಿಯ ದೋಷಗಳನ್ನರಿತಿರುವವರ ವಿಚಾರಗಳಿಂದಾಗಿ ಮುಸ್ಲಿಮರ ಬಗ್ಗೆ ಅನಾದರವನ್ನು ರೂಢಿಸಬೇಕೆಂಬುವವರು ಇದುವರೆಗೆ ವಿಫಲರಾಗಿದ್ದಾರೆ. ಆದರೆ ತಮ್ಮ ಬಗ್ಗೆ ಸದಭಿಪ್ರಾಯವನ್ನು ದೇಶದಲ್ಲಿ ಹರಡುವಲ್ಲಿ ಮುಸ್ಲಿಮರು ತಮ್ಮ ನಿಷ್ಕ್ರಿಯತೆಯಿಂದ ವಿಫಲರಾಗುತ್ತಿದ್ದಾರೆ. ವಿಚಾರಗಳ ಪ್ರಚಾರ ಕ್ಷೇತ್ರದಲ್ಲಿ ಮುಸ್ಲಿಮರು ವಿಫಲರಾಗಿರುವುದಷ್ಟೇ ಅಲ್ಲ; ಹಿಂದೂ ಕೋಮುವಾದಿಗಳ ವಿಚಾರಗಳನ್ನು ಹೊತ್ತು ತಿರುಗುವ ಚಿಂತಾಜನಕ ಸ್ಥಿತಿಗೂ ಕೆಲವು ಮುಸ್ಲಿಮರು ಮುಟ್ಟಿದ್ದಾರೆ.

**ಮುಸ್ಲಿಮರಲ್ಲಿನ ಎರಡು ಪ್ರವೃತ್ತಿಗಳು :** ನಮ್ಮ ಹಿಂದಿನವರು ಬಹಳ ತಪ್ಪುಗಳನ್ನು ಮಾಡಿದ್ದಾರೆ; ಆದ್ದರಿಂದ ನಾವು ಹಿಂದುಗಳ ಮನ ಒಲಿಸಿಕೊಳ್ಳಬೇಕು; ಎಷ್ಟಾದರೂ ಇದು ಹಿಂದುಗಳ ದೇಶ; ನಾವು ಕುಗ್ಗಿ ಬಗ್ಗಿ ನಡೆದುಕೊಳ್ಳಬೇಕು ಮುಂತಾದ ವಿಚಾರಗಳು ಮುಸ್ಲಿಮರಲ್ಲಿ ವಿದ್ಯಾವಂತರು, ಪ್ರಗತಿಶೀಲರು ಎನಿಸಿಕೊಂಡವರಲ್ಲಿ ಈಗೀಗ ಮಾನ್ಯತೆ ಪಡೆಯುತ್ತಿದೆ. ಇದನ್ನು ಕ್ಷಮಾಯಾಚಕ ಪ್ರವೃತ್ತಿ ಎನ್ನಬಹುದು. ಇತಿಹಾಸವನ್ನು ತಿರುಚಿ ವ್ಯಾಖ್ಯಾನ ಮಾಡುತ್ತಿರುವ ಕೋಮುವಾದಿ ಹಾಗೂ ಮೇಲ್ಜಾತಿ ಹಿಂದು ಸಂಘಟನೆಗಳ ಪಿತೂರಿಯ ಫಲವಾಗಿ ನಮ್ಮ ಬಗ್ಗೆ ಸಲ್ಲದ ಅನಾದರ ಬೆಳೆಯುತ್ತಿದೆ; ನಮ್ಮದು ಸ್ಪಷ್ಟವೂ, ಪ್ರಬುದ್ಧವೂ, ಸಮರ್ಪಕವೂ ಆದ ಧಾರ್ಮಿಕ, ನೈತಿಕ ಹಾಗೂ ಸಾಮಾಜಿಕ ವ್ಯವಸ್ಥೆ; ನಾವು ಯಾರಿಗೂ ತಲೆತಗ್ಗಿಸಬೇಕಾದ್ದಿಲ್ಲ; ನಾವು ಎಲ್ಲರೊಡನೆ ಸ್ನೇಹ ಬಯಸುತ್ತೇವೆ; ಆದರೆ ಸಮಾನ ಮನ್ನಣೆ, ಗೌರವಗಳ ಆಧಾರದ ಮೇಲೆ ಮಾತ್ರವೇ

ಸೌಹಾರ್ದ ಸಾಧ್ಯ; ಈ ರೀತಿಯ ವಿಚಾರಗಳುಳ್ಳ ಮುಸ್ಲಿಮರನ್ನು ಸ್ವಾಭಿಮಾನಿ ಪ್ರವೃತ್ತಿಯುಳ್ಳವರೆನ್ನಬಹುದು.

(ಅ) ದೇಶದ ಪತ್ರಿಕೋದ್ಯಮವು ಹಿಂದೂ ಮೇಲ್ಜಾತಿಯವರ ಒಡೆತನ ಮತ್ತು ಹಿಡಿತದಲ್ಲಿದೆ. ದೇಶದಲ್ಲಿನ ಯಾವುದೇ ಪ್ರಮುಖ ದಿನಪತ್ರಿಕೆಯಲ್ಲಿ ಅಂಬೇಡ್ಕರ್ ಶತಮಾನೋತ್ಸವ ಸಂದರ್ಭದಲ್ಲಿ ಲೇಖನಗಳು ಪ್ರಕಟವಾಗಲಿಲ್ಲ.

(ಆ) ಮುಸ್ಲಿಮರನ್ನು ಬಗ್ಗು ಬಡಿಯಬೇಕು; ಬ್ರಾಹ್ಮಣ ಮಠಾಧಿಪತಿಗಳ ಮರ್ಜಿ ಆಶೀರ್ವಾದಗಳ ಮೂಲಕ ಆಡಳಿತ ನಡೆಯಬೇಕು ಎಂಬ ಆದರ್ಶಗಳುಳ್ಳ ಆರೆಸ್ಸೆಸ್ ವಿಚಾರಗಳನ್ನು ಹೊತ್ತ ಜನ ಸರ್ಕಾರಿ ಹುದ್ದೆಗಳಲ್ಲಿ ಸಾಕಷ್ಟು ಮಂದಿ ಇದ್ದಾರೆ. ಇಂಥವರ ಪಟ್ಟಿಯೊಂದನ್ನು ಸರ್ಕಾರ ತಯಾರಿಸುತ್ತಿರುವುದಾಗಿ ಕೇಂದ್ರ ಕಾನೂನು ಮಂತ್ರಿ ಡಾ॥ ಸುಬ್ರಹ್ಮಣ್ಯ ಸ್ವಾಮಿ ನೀಡಿದ ಹೇಳಿಕೆಯನ್ನಿಲ್ಲಿ ಸ್ಮರಿಸಬಹುದು (ಡೆಕ್ಕನ್ ಹೆರಾಲ್ಡ್; ಮೇ - 16-1991)

(ಇ) ದಲಿತರು ಮತ್ತು ಗುಡ್ಡಗಾಡಿನ ಜನ. (SC & ST) ದೇಶದ ಜನಸಂಖ್ಯೆಯ ಶೇ. 30ರಷ್ಟಿದ್ದಾರೆ. ಅಗಸ, ಬೇಡ, ಬೆಸ್ತ, ನೆಯ್ಗೆ ಮುಂತಾದ ಹಿಂದುಳಿದ ಕೋಮುಗಳ ಜನಸಂಖ್ಯೆ ಶೇ. 15ರಷ್ಟಿದೆ. ಈ ಶೇ. 45 ರಷ್ಟು ಜನ ಲೆಕ್ಕಕ್ಕಷ್ಟೇ ಹಿಂದುಗಳೇ ಹೊರತು, ಹಿಂದೂ ಸಂಸ್ಕೃತಿಗೂ, ಈ ಜನಾಂಗಗಳಿಗೂ ಯಾವ ಸಂಬಂಧವೂ ಇಲ್ಲ. ಆದರೆ ಈ ವ್ಯತ್ಯಾಸವನ್ನು ಗುರುತಿಸದೆ ಇವರೆಲ್ಲರನ್ನೂ ಕಟ್ಟಾ ಹಿಂದುಗಳೆಂದೇ ಮುಸ್ಲಿಮರು ಪರಿಗಣಿಸುತ್ತಾ ಬಂದಿದ್ದಾರೆ. ಈ ಮುಸ್ಲಿಮ್ ವರ್ತನೆ ಆರೆಸ್ಸೆಸ್ ಅಥವಾ ಹಿಂದು ಕೋಮುವಾದಿ ಉದ್ದೇಶಕ್ಕೆ ಅನುಕೂಲವಾಗಿದೆ. ಏಕರೂಪ ಸಿವಿಲ್ ಶಾಸನ, ಬಾಬರಿ ಮಸೀದಿ, ಉರ್ದುಭಾಷೆಯ ಸ್ಥಾನಮಾನ ಈ ಎಲ್ಲ ಚರ್ಚೆಗಳಲ್ಲೂ ಮುಸ್ಲಿಮ್ ವಿರೋಧಿ ನಿಲುವನ್ನು ಮೇಲ್ಜಾತಿ ಹಿಂದುಗಳು ತಳೆದಿದ್ದಾರೆಯೇ ಹೊರತು ಈ ಮೇಲ್ಕಂಡ ಶೇ. 45 ಜನಸಂಖ್ಯೆಯುಳ್ಳ ಜನಾಂಗಗಳಲ್ಲ.

**ಮುಸ್ಲಿಮರಲ್ಲಿ ಜಿಜ್ಞಾಸೆಯ ಅಭಾವ:** ಈ ಮೂರು ಕಾರಣಗಳಿಂದಾಗಿ ಕ್ಷಮಾಯಾಚಕ ಪ್ರವೃತ್ತಿಯನ್ನು ರೂಢಿಸಿಕೊಳ್ಳುತ್ತಿರುವ ಮುಸ್ಲಿಮರಿಗೆ ಗೌರವ ಮನ್ನಣೆಗಳು ಸಿಗುತ್ತಿವೆ; ಸ್ವಾಭಿಮಾನಿ ಪ್ರವೃತ್ತಿಯುಳ್ಳವರು ತೆಗಳಿಕೆ, ತಾತ್ಸಾರಗಳಿಗೆ ಗುರಿಯಾಗಿದ್ದಾರೆ. ಎರಡನೆಯದಾಗಿ ಮುಸ್ಲಿಮ್ ಹಿತಾಸಕ್ತಿಗಳಿಗೆ ಸಂಬಂಧಿಸಿದ ಯಾವುದೇ ಚರ್ಚೆಯಲ್ಲಿ (ಉದಾ: ಸಮಾನ ಸಿವಿಲ್ ಕೋಡ್) ಹಿಂದು ಕೋಮುವಾದಿಗಳು ಕೂಗೆಬ್ಬಿಸುತ್ತಾರೆ. ಆ ಕೂಗಿಗೆ (ಸ್ಲೋಗನ್) ಪ್ರತಿಯಾಗಿ 'ಇದು ಕೂಡದು' ಎಂಬ - ನಕಾರಾತ್ಮಕ ಧೋರಣೆಯನ್ನು ಮುಸ್ಲಿಮರು ತಳೆಯುತ್ತಾರೆ. ಈ ಎಲ್ಲ ಸಂದರ್ಭಗಳಲ್ಲೂ ತಮ್ಮ ಸಾಂಸ್ಕೃತಿಕ ವೈಶಿಷ್ಟ್ಯತೆಯ ರಕ್ಷಣೆಗೆ ಸಂವಿಧಾನ ರಕ್ಷಣೆ ನೀಡಿದೆ ಎಂಬುದೇ ಮುಸ್ಲಿಮರ ಪ್ರಮುಖ ವಾದವಾಗಿದೆ.

ಸಂವಿಧಾನದ ಎಷ್ಟೋ ವಿಧಿಗಳು ತಿದ್ದುಪಡಿಯಾಗಿವೆ. ಮುಂದೆಯೂ ತಿದ್ದುಪಡಿ ಆಗಬಹುದು. ಸಂವಿಧಾನವೇನೇ ಹೇಳಲಿ, ತಮ್ಮ ಸಂಸ್ಕೃತಿ, ಕಾನೂನು ಇತ್ಯಾದಿಗಳು ಅತ್ಯಂತ ಪ್ರಬುದ್ಧ ಮತ್ತು ಸಮರ್ಪಕವಾದುವು ಎಂಬ ಕಾರಣಕ್ಕಾಗಿ ಅವು ರಕ್ಷಣೆ, ಮನ್ನಣೆಗಳಿಗೆ ಅರ್ಹತೆ ಪಡೆದಿದೆ ಎನ್ನುವ ಪಾಸಿಟಿವ್ ಧೋರಣೆ ತಳೆಯಲು ಮುಸ್ಲಿಮರು ಅಂಜುತ್ತಿದ್ದಾರೇನೋ ಎನಿಸುತ್ತದೆ. ಒಟ್ಟಿನಲ್ಲಿ ಇಂಥ ಪ್ರತಿಕೂಲ ವೈಚಾರಿಕ ವಾತಾವರಣವನ್ನು ನಿರ್ಮಿಸುವಲ್ಲಿ ಮೇಲ್ಜಾತಿಯ ಹಿಂದೂ ಕೋಮುವಾದಿಗಳು ಯಶಸ್ವಿಯಾಗಿದ್ದಾರೆ ಎನಿಸುತ್ತದೆ.

ಕೇವಲ ಲೆಕ್ಕಕ್ಕೆ ಹಿಂದುಗಳೆನಿಸಿದ ಶೇ 45 ಜನಸಂಖ್ಯೆಯುಳ್ಳ ಜನಾಂಗಗಳನ್ನು ಮುಸ್ಲಿಮರು ಏನೆಂದು ಭಾವಿಸಿದ್ದಾರೋ ನನಗೆ ತಿಳಿಯದು. ಬರೇ ಪುರೋಹಿತಶಾಹಿ ಹಿಂದುಗಳನ್ನೇ ಈ ಎಲ್ಲ ಬೇರೆ ಬೇರೆ ಜನಾಂಗಗಳ ಪ್ರತಿನಿಧಿಗಳೆಂಬಂತೆ ಪರಿಗಣಿಸಿ ಈ ಮೇಲ್ಜಾತಿಯವರೊಡನೆ ಮಾತ್ರವೇ ಸೌಹಾರ್ದಕ್ಕೆ ಹಾತೊರೆಯುವ ಪ್ರವೃತ್ತಿ ಮುಸ್ಲಿಮರಲ್ಲಿ ಬೇರೂರಿದೆ. ಹಿಂದುಗಳಲ್ಲದ ದಲಿತರು ಮತ್ತು ಗುಡ್ಡಗಾಡು ಜನಾಂಗಗಳ ಬಗ್ಗೆ ಮುಸ್ಲಿಮ್ ಧೋರಣೆ ಏನು? ಅವರನ್ನು ಹಿಂದುಗಳೆಂದೇ ಕರೆಯುವ ಮೂಲಕ ಅವರನ್ನು ತಮ್ಮಿಂದ ದೂರೀಕರಿಸುತ್ತ - ಎಂದರೆ ಅವರನ್ನು ಹಿಂದು ಮೇಲ್ಜಾತಿಗಳವರ ಪಿತೂರಿಗೆ ಒಳಪಡಿಸುತ್ತ - ತಮ್ಮ ಹಿತಕ್ಕೆ ತಾವೇ ಧಕ್ಕೆ ತಂದುಕೊಳ್ಳುವ ನೀತಿಯನ್ನು ಮುಸ್ಲಿಮರು ಅನುಸರಿಸುತ್ತಿರುವಂತಿದೆ. ಒಟ್ಟಿನಲ್ಲಿ ಸ್ವಾಭಿಮಾನಿ ಪ್ರವೃತ್ತಿಯುಳ್ಳ ಮುಸ್ಲಿಮರು, ಮುಸ್ಲಿಮ್ ಜನಾಂಗದಲ್ಲಿ ಒಂದು ಅಲ್ಪ ಸಂಖ್ಯಾಕರಾಗಿ ಮೂಲೆ ಗುಂಪಾಗಿದ್ದಾರೆ. ಈ ಪರಿಸ್ಥಿತಿಯನ್ನೆದುರಿಸಲು ಯುಕ್ತಿ (ಸ್ಟ್ರಾಟಜಿ ) ಏನು ? ಎಂಬ ಪ್ರಶ್ನೆಗೆ ಉತ್ತರವಿದ್ದಂತಿಲ್ಲ. ಅಷ್ಟೇ ಅಲ್ಲ; ಮುಸ್ಲಿಮರನ್ನು ಈ ಪ್ರಶ್ನೆ ಬಾಧಿಸುತ್ತಿಲ್ಲವೇನೋ ಎನಿಸುತ್ತದೆ. ಮುಸ್ಲಿಮರಿಗೆ ಸಂಬಂಧಿಸಿದಂತೆ ಶಿಕ್ಷಣ, ಉದ್ದಿಮೆಗಳು, ಉದ್ಯೋಗಾವಕಾಶ, ರಾಜಕೀಯ ಪ್ರಾತಿನಿಧ್ಯ - ಹೀಗೆ ಪಲವು ಕ್ಷೇತ್ರಗಳನ್ನು ಕುರಿತ ಪ್ರಶ್ನೆಗಳಿವೆ. ಆದರೆ ಈ ಮೂಲಭೂತ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸದೆಯೇ ಉಳಿದ ಪ್ರಶ್ನೆಗಳನ್ನು ಚರ್ಚಿಸುವುದು ವ್ಯರ್ಥ.

**ಶಿಕ್ಷಣ ರಂಗ ಪುರೋಹಿತಶಾಹಿಯ ಅಂಕುಶದಲ್ಲಿ :** ಪಶ್ಚಿಮ ಜಗತ್ತಿನಲ್ಲಿ ರಿನೇಸಾನ್ಸ್ ಕಾಲಕ್ಕೆ ಮುಂಚೆ ಇಡೀ ವಿದ್ಯಾಭ್ಯಾಸದ ವ್ಯವಸ್ಥೆಯೇ ಕ್ರಿಶ್ಚಿಯನ್ ಪುರೋಹಿತಶಾಹಿಯ ಹಿಡಿತದಲ್ಲಿತ್ತು. ಇಗ್ನೇಶಿಯಸ್ ಲಯೋಲಾ, ಗೆಲಿಲಿಯೋ ಮುಂತಾದವರು ಅನುಭವಿಸಿದ ದೌರ್ಜನ್ಯದಿಂದ ಒಂದು ಪ್ರಮುಖ ಅಂಶ ಸಾಬೀತಾಗುತ್ತದೆ. ಅದೇನೆಂದರೆ, ಪುರೋಹಿತಶಾಹಿ ಮತ್ತು ಪಟ್ಟಭದ್ರಹಿತಾಸಕ್ತಿಗಳು ತಮ್ಮ ಸ್ವಾರ್ಥಕ್ಕೆ ಅಡ್ಡ ಬರಬಹುದಾದ ಯಾವುದೇ ಜ್ಞಾನ ಪ್ರಸಾರವನ್ನು ದ್ವೇಷಿಸುತ್ತಾರೆ. ಚರಿತ್ರೆ, ಭೂಗೋಳ, ಗಣಿತ, ಭಾಷೆಗಳ ಅಧ್ಯಯನ, ಕಲೆಗಳು, ಭೌತಶಾಸ್ತ್ರ, ವೈದ್ಯಕೀಯ ಮುಂತಾದ ವಿಷಯಗಳ ಅಧ್ಯಯನವನ್ನು ಚರ್ಚ್

ಅಥವಾ ಕ್ರೈಸ್ತ ಪುರೋಹಿತ ಶಾಹಿಯಿಂದ ಬೇರ್ಪಡಿಸಿ ವಿದ್ಯಾಭ್ಯಾಸವನ್ನು ಸೆಕ್ಯುಲರ್‌ಗೊಳಿಸಲು ಅನೇಕ ಸ್ವಾತಂತ್ರ್ಯ ಪ್ರೇಮಿ ಚಿಂತಕರು ಶ್ರಮಿಸಿದರು. ಮಾರ್ಟಿನ್ ಲೂಥರ್ ಅಂಥ ಒಬ್ಬ ಪ್ರಮುಖ ವಿಚಾರವಾದಿ. ದೊರೆಗಳೂ ಸರ್ಕಾರಗಳೂ ಚರ್ಚಿನ ಹಿಡಿತದಲ್ಲಿದ್ದುದರಿಂದ ವಿದ್ಯಾಭ್ಯಾಸವನ್ನು ಸರ್ಕಾರದ ಹಿಡಿತದಿಂದಲೂ ಮುಕ್ತಗೊಳಿಸಬೇಕು ಎಂಬ ವಿಚಾರ ಹೊರಟಿತ್ತು. ಈ ಬಗ್ಗೆ ದೀರ್ಘ ವೈಚಾರಿಕ ಚಳವಳಿ ನಡೆದು, ಅದು ಸಫಲವಾಗಿ ಶಿಕ್ಷಣ ವ್ಯವಸ್ಥೆಗೆ ಸ್ವಾಯತ್ತತೆ (ಅಟಾನಮಿ) ಸಿಕ್ಕಿತು. ಆದರೆ ಭಾರತ ತದ್ವಿರುದ್ಧ ದಿಕ್ಕಿನಲ್ಲಿ ನಡೆದಿದೆ. ಪತ್ರಿಕೋದ್ಯಮ, ಸಮೂಹ ಮಾಧ್ಯಮ ಮತ್ತು ಶಿಕ್ಷಣ, ಅವುಗಳ ಸೆಕ್ಯುಲರ್ ಸ್ವರೂಪವನ್ನೂ, ಸ್ವಾಯತ್ತತೆಯನ್ನೂ ಕಳೆದುಕೊಳ್ಳುತ್ತ ದಿನೇ ದಿನೇ ಪುರೋಹಿತಶಾಹಿಯ ಪ್ರಭಾವಕ್ಕೊಳಗಾಗುತ್ತಿದೆ.

ಸೆಕ್ಯುಲರಿಸಮ್‌ನ ನೆರಳಿನಲ್ಲಿ, ಸ್ವಾಯತ್ತತೆ ಎಂಬ ಬೇಲಿಯ ರಕ್ಷಣೆಯಲ್ಲಿ ಶಿಕ್ಷಣವೆಂಬ ಹೂದೋಟವನ್ನು ಬೆಳೆಸುವ ಅಗತ್ಯವನ್ನು ಅಲಿಘರ್ ಮತ್ತು ದೇವಬಂದ್ ವೈಚಾರಿಕ ಆಂದೋಲನಗಳ ನೇತೃತ್ವ ವಹಿಸಿದ್ದ ಸರ್ ಸಯ್ಯದ್ ಅಹ್ಮದ್‌ಖಾನರೂ, ಮೌಲಾನ ಖಾಸಿಮ್ ನಾನೋಥವಿಯವರೂ ಕಳೆದ ಶತಮಾನದಲ್ಲೇ ಮನಗಂಡಿದ್ದರು. ಗಣಿತ, ಇತಿಹಾಸ, ವಿಜ್ಞಾನಗಳ ಶಿಕ್ಷಣದ ಅಗತ್ಯವನ್ನು ಸರ್ ಸಯ್ಯದ್ ಅವರೂ, ಶುದ್ಧ ಇಸ್ಲಾಮ್ ಧರ್ಮ ಕುರಿತ ಜ್ಞಾನ ಪ್ರಸಾರದ ಅಗತ್ಯವನ್ನು ಮೌಲಾನಾ ಖಾಸಿಮ್ ಅವರೂ ಒತ್ತಿ ಹೇಳಿದರು. ಈ ಇಬ್ಬಗೆಯ ಶಿಕ್ಷಣದ ಕೊರತೆಯುಂಟಾದಲ್ಲಿ ಮುಸ್ಲಿಮರು ಪ್ರಾಪಂಚಿಕವಾಗಿಯೂ, ನೈತಿಕವಾಗಿಯೂ ದಿಕ್ಕುಗೆಟ್ಟವರಾಗುವರೆಂದು ಈ ಇಬ್ಬರು ಮಹನೀಯರ ಚಿಂತನೆಯಾಗಿತ್ತು.

ಯಾವ ಪರಿಸ್ಥಿತಿ ತಲೆದೋರಬಹುದೆಂದು ಇವರು ಶಂಕಿಸಿದ್ದರೋ ಅಂಥ ಪರಿಸ್ಥಿತಿ ಈಚೆಗೆ ಅಲ್ಬೇನಿಯಾದಲ್ಲಿ ತಲೆದೋರಿತು. ನಲವತ್ತು ವರ್ಷಗಳ ಧರ್ಮವಿಮುಖ ಸರ್ಕಾರದ ಪರಿಣಾಮವಾಗಿ, ಈಜಿಪ್ಟಿನ ಮುಸ್ಲಿಮ್ ಮೇಧಾವಿಯೊಬ್ಬರು ಅಲ್ಲಿ ಒಂದು ಮಸೀದಿಯನ್ನು ತೆರೆದಾಗ ನಮಾಜು ಮಾಡಬಲ್ಲ ಒಬ್ಬ ಮುಸ್ಲಿಮನೂ ಕಂಡುಬರಲಿಲ್ಲ. ಅಷ್ಟೇ ಅಲ್ಲ; ಶೇ 60 ಜನಸಂಖ್ಯೆ ಮುಸ್ಲಿಮರಿರುವ ಈ ದೇಶದಲ್ಲಿ ಇಸ್ಲಾಮ್‌ನ ಪ್ರಥಮ ಪಾಠವೆನಿಸಿದ ಕಲಿಮಾವನ್ನೂ ತಿಳಿಯದ ಅನೇಕ ಮುಸ್ಲಿಮರಿದ್ದಾರೆ. ಸರ್‌ಸಯ್ಯದ್ ಮತ್ತು ಮೌಲಾನಾ ಖಾಸಿಮರ ವೈಚಾರಿಕ ಆಂದೋಲನ ಆಗ ಮುಸ್ಲಿಮರಲ್ಲಿ ಎಂಥ ಪ್ರಜ್ಞೆಯನ್ನು ಮೂಡಿಸಿತೆಂದರೆ, ಮುಸ್ಲಿಮರ ವಿಶ್ವಾಸ ಗಳಿಸಲು ಕಲ್ಕತ್ತೆಯ ಫೋರ್ಟ್ ವಿಲಿಯಮ್‌ನಲ್ಲಿ ಬ್ರಿಟಿಷ್ ಸರ್ಕಾರ ಒಂದು ಇಸ್ಲಾಮಿಕ್ ಮದರಸವನ್ನು ಆರಂಭಿಸಿತು.

ಹೀಗೆ ಹಲವು ವಿಚಾರಗಳ ಮತ್ತು ಸಂದರ್ಭಗಳ ಒತ್ತಡಕ್ಕೆ ಮಣಿದು ಬ್ರಿಟಿಷ್ ಸರ್ಕಾರ ತನ್ನ ಶಿಕ್ಷಣ ನೀತಿಯನ್ನು ರೂಪಿಸಿತು. ಲಾರ್ಡ್ ಮೆಕಾಲೆ ಎಂಬಾತನು ರೂಪಿಸಿದ

ಶಿಕ್ಷಣ ನೀತಿ ಮತ್ತು ಅದರಲ್ಲಿನ ಪಠ್ಯ ವಿಷಯಗಳನ್ನು ಪರಿಶೀಲಿಸಿದ ಬ್ರಿಟಿಷ್ ಪಾರ್ಲಿಮೆಂಟಿನ ಕೆಲವು ಸದಸ್ಯರು ಅವನನ್ನು ತರಾಟೆಗೆ ತೆಗೆದುಕೊಂಡರು. ಈ ರೀತಿಯ ಪಠ್ಯ ವಿಷಯಗಳನ್ನು ಭಾರತೀಯರಿಗೆ ಬೋಧಿಸಿದಲ್ಲಿ ಅವರಲ್ಲಿ ಐಕ್ಯತೆ ವೈಚಾರಿಕತೆಗಳು ಬೇರೂರಿ ಮುಂದೊಂದು ದಿನ ಸ್ವಾತಂತ್ರ್ಯ ಬೇಕೆನ್ನುವರು ಎಂಬ ಆಕ್ಷೇಪಣೆಗೆ ಮೆಕಾಲೆ ಈ ರೀತಿ ಉತ್ತರಿಸಿದ: ''ಅಂಥ ದಿನವೊಂದು ನನ್ನ ಶಿಕ್ಷಣ ನೀತಿಯ ಪರಿಣಾಮವಾಗಿ ಬಂದಲ್ಲಿ ಅದನ್ನು ಬ್ರಿಟಿಷ್ ಇತಿಹಾಸದಲ್ಲಿನ ಸುವರ್ಣದ ದಿನಗಳಲ್ಲೊಂದೆಂದು ಭಾವಿಸುತ್ತೇನೆ''. ವಿಚಾರ (ಚಿಂತನ) ಸ್ವಾತಂತ್ರ್ಯ ಮತ್ತು ಪ್ರಕಟನ ಸ್ವಾತಂತ್ರ್ಯಗಳನ್ನು ಸಾರ್ವಜನಿಕ ಮೌಲ್ಯಗಳನ್ನಾಗಿ ಗುರುತಿಸಲು ಮತ್ತು ಶಿಕ್ಷಣ ಸ್ವಾಯತ್ತತೆಯನ್ನು ಮನ್ನಿಸಲು ಬ್ರಿಟನ್ನಿನ ಚಿಂತನಶೀಲ ಶಿಕ್ಷಣ ತಜ್ಞರು ಪುರೋಹಿತಶಾಹಿ ಮತ್ತು ಸರ್ಕಾರದ ಯಜಮಾನಿಕೆಯನ್ನು ಧಿಕ್ಕರಿಸಿ ಶ್ರಮಿಸಿದ್ದರು. ಈ ಮೌಲ್ಯಗಳನ್ನು ಮೈಗೂಡಿಸಿಕೊಂಡವರಿಂದ ಭಾರತದ ಸಂವಿಧಾನ ರಚಿತವಾದುದರಿಂದಲೇ ಶಿಕ್ಷಣ ಸೆಕ್ಯುಲರ್ ಮತ್ತು ಸ್ವಾಯತ್ತವಾಗಿರಬೇಕೆಂಬ ಮಾತಿಗೆ ಮನ್ನಣೆ ಉಳಿದಿದೆ.

ಮುಸ್ಲಿಮರಲ್ಲಿನ ದೋಷಗಳು : ಮುಸ್ಲಿಮ್ ವಿರೋಧಿ ಮುಖ್ಯ ಮಂತ್ರಿಗಳು ಮತ್ತು ಅಧಿಕಾರಿ ವರ್ಗದ ನೀತಿಗಳಿಂದಾಗಿ ಅಲಿಘರ್ ಮುಸ್ಲಿಮ್ ವಿಶ್ವವಿದ್ಯಾನಿಲಯವನ್ನೊಳಗೊಂಡು, ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ದೆಹಲಿ ಈ ಪ್ರದೇಶಗಳಲ್ಲಿನ ಮುಸ್ಲಿಮ್ ವಿದ್ಯಾ ಸಂಸ್ಥೆಗಳು ಶಿಥಿಲಗೊಂಡು ನಿಸ್ತೇಜವಾದುವು.

ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ನೀತಿಯನ್ನು ಹಳೇ ಮೈಸೂರಿನಲ್ಲಿ ಆಗಿನ ಮಹಾರಾಜರಾದ ಕೃಷ್ಣರಾಜ ಒಡೆಯರೂ ಹೈದರಾಬಾದ್ ಸಂಸ್ಥಾನದಲ್ಲಿ ನಿಜಾಮರೂ ಪಾಲಿಸಿಕೊಂಡು ಬಂದರು. ಮೊದಲು ಬ್ರಾಹ್ಮಣರು, ನಂತರ ಲಿಂಗಾಯಿತರು ಅವರ ನಂತರ ಒಕ್ಕಲಿಗರು, ಕ್ರಿಶ್ಚಿಯನ್ನರು, ಮುಸ್ಲಿಮರು, ಈಚೀಚೆಗೆ ದಲಿತರು ಸಿಖ್ಖರು ಸಹ ಶಿಕ್ಷಣ ಸಂಸ್ಥೆಗಳನ್ನಾರಂಭಿಸಿದರು. ಇದರಿಂದ ಭಿನ್ನ ಭಿನ್ನ ಜನಾಂಗಗಳ ನಡುವೆ ಒಂದು ರೀತಿಯ ಆರೋಗ್ಯಕರ ಪೈಪೋಟಿ ಏರ್ಪಟ್ಟಿತು. ಹೀಗಾಗಿ ಈಗ ಮುಸ್ಲಿಮರ ಉಸ್ತುವಾರಿಯಲ್ಲಿರುವ ಕೆಲವು ಇಂಜಿನಿಯರಿಂಗ್, ಮೆಡಿಕಲ್ ಮುಂತಾದ ಕಾಲೇಜುಗಳೂ ಪಾಲಿಟೆಕ್ನಿಕ್‌ಗಳೂ ಇವೆ.

ಬೇರೆ ಬೇರೆ ಜನಾಂಗಗಳು ನಡೆಸುತ್ತಿರುವ ವಿದ್ಯಾಸಂಸ್ಥೆಗಳ ಉದ್ದೇಶ, ಆಯಾ ಜನಾಂಗದವರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು ಮತ್ತು ವಿದ್ಯಾರ್ಜನೆಯ ಸೌಲಭ್ಯವನ್ನೊದಗಿಸುವುದೂ ಆಗಿದೆ. ಆದರೆ ಮುಸ್ಲಿಮ್ ಶಿಕ್ಷಣ ಸಂಸ್ಥೆಗಳು ಈ ತೆರನಾದ ಉದ್ದೇಶಗಳಿಗೆ ಆದ್ಯತೆ ನೀಡದೆ ವ್ಯಾಪಾರಿ ಸೂತ್ರಗಳನ್ನನುಸರಿಸುತ್ತಿವೆ; ಕಮರ್ಷಿಯಲ್ ಸಂಸ್ಥೆಗಳಂತೆ ನಡೆಸಲ್ಪಡುತ್ತಿವೆ ಎಂಬ ದೂರು ಆಗಾಗ್ಗೆ ಬರುತ್ತಿದೆ. ಅಲ್ಪ ಸಂಖ್ಯಾತ

ಶಿಕ್ಷಣ ಸಂಸ್ಥೆಗಳ ಆಡಳಿತದಲ್ಲಿ ಸರ್ಕಾರ ಕೈಹಾಕತಕ್ಕದ್ದಲ್ಲ ಎಂಬ ಸಂವಿಧಾನದತ್ತ ರಕ್ಷಣೆ ಪಡೆದು ದ್ರವ್ಯ ಸಂಪಾದನೆಯಲ್ಲಿ ತೊಡಗಿರುವ ಈ ಮುಸ್ಲಿಮ್ ಶಿಕ್ಷಣ ಸಂಸ್ಥೆಗಳು - ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆ ಎನಿಸಿಕೊಳ್ಳಬೇಕೆಂದರೆ, ಅಂಥ ಸಂಸ್ಥೆ, ಸಂಬಂಧಪಟ್ಟ ಅಲ್ಪ ಸಂಖ್ಯಾತ ಕೋಮಿನವರಿಗೆ ತಮ್ಮ ವಿದ್ಯಾಲಯಗಳಲ್ಲಿ ಶೇ 50ರಷ್ಟು ಸೀಟುಗಳನ್ನಾದರೂ ಕೊಟ್ಟಿರಬೇಕು ಎಂದು ವಿಧಿಸುವ ಸರ್ಕಾರಿ ಸುತ್ತೋಲೆಯನ್ನು ವಿರೋಧಿಸಿದುವು. ಸರ್ಕಾರಿ ಸುತ್ತೋಲೆ ಈ ಕೋಮಿನವರ ಕ್ಷೇಮಕ್ಕಾಗಿಯೇ ಹೊರಡಿಸಿದ್ದುದಾಗಿತ್ತಲ್ಲವೆ? ಹಣಕಾಸಿನ ಕೊರತೆಯಿದೆ; ನಮ್ಮ ಕಾಲೇಜುಗಳಲ್ಲಿನ ಸೀಟುಗಳನ್ನು ಡೊನೇಶನ್ ಆಧಾರದ ಮೇಲೆ ವಿತರಿಸದೆ ಬೇರೆ ಉಪಾಯವಿಲ್ಲ; ಮುಂತಾದ ಅಸಂಬದ್ಧವಾದಗಳನ್ನು ಮುಸ್ಲಿಮ್ ಶಿಕ್ಷಣ ಸಂಸ್ಥೆಗಳು ಮುಂದಿಟ್ಟವು. ಈ ಸಂಸ್ಥೆಗಳ ಆಡಳಿತ ವರ್ಗ ತಮ್ಮ ನಿಜವಾದ ಸಮಸ್ಯೆಗಳೇನೆಂದು ಮುಸ್ಲಿಮ್ ಜನಾಂಗದ ಎದುರು ಮಂಡಿಸಿ ಚರ್ಚಿಸಲೇ ಇಲ್ಲ. ಬದಲಿಗೆ ತಮ್ಮ ಬಿಕ್ಕಟ್ಟನ್ನು ಸರ್ಕಾರಿ ಅಧಿಕಾರಿಗಳ ಬಳಿಗೆ ಇಲ್ಲವೆ ಕೋರ್ಟಿಗೆ ಕೊಂಡೊಯ್ಯುವ ಪ್ರವೃತ್ತಿ ಬೆಳೆಯುತ್ತಿದೆ. ಅಲ್ಪ ಸಂಖ್ಯಾತರ ಶಿಕ್ಷಣ ಸಂಸ್ಥೆಗಳಿಗೆ ರಕ್ಷಣೆ ಎಂದರೆ ಅವುಗಳ ಅಸಮರ್ಪಕ ಆಡಳಿತ ರಕ್ಷಣೆಯಲ್ಲ ಎಂಬ ಧೋರಣೆ ಪದೇ ಪದೇ ನ್ಯಾಯಾಧೀಶರುಗಳಿಂದ ಪ್ರಕಟವಾಗುತ್ತಿದೆ. ಇದು ಎಲ್ಲ ಪ್ರಬುದ್ಧ ಮುಸ್ಲಿಮರೂ ಚಿಂತಿಸಬೇಕಾದ ಪ್ರಶ್ನೆ.

**ಉರ್ದು ಪ್ರಾಥಮಿಕ ಶಾಲೆಗಳು :** ಮೊದಲಿನಿಂದ ಇದ್ದ ಉರ್ದು ಪ್ರೈಮರಿ ಶಾಲೆಗಳಲ್ಲದೆ ಹೊಸದಾಗಿ ಉರ್ದು ಪ್ರೈಮರಿ ಶಾಲೆಗಳನ್ನು ಸರ್ಕಾರ ತೆರೆಯುತ್ತಿದೆ. ಆದರೆ ಕನ್ನಡ, ತಮಿಳು, ತೆಲುಗು ಮುಂತಾದ ಇತರ ಭಾಷಾ ಪ್ರೈಮರಿ ಶಾಲೆಗಳಲ್ಲಿನ ಪಠ್ಯ ವಿಷಯಗಳ ಮತ್ತು ಬೋಧನಾ ಗುಣಮಟ್ಟಕ್ಕೆ ಹೋಲಿಸಿದರೆ ಉರ್ದು ಪ್ರೈಮರಿ ಶಾಲೆಗಳ ಗುಣಮಟ್ಟ ತೀರ ಕಡಿಮೆಯದಾಗಿದೆ. ಈ ಶಾಲೆಗಳಲ್ಲಿನ ವಿದ್ಯಾರ್ಥಿಗಳೂ , ಅಧ್ಯಾಪಕರೂ ಮುಸ್ಲಿಮರೇ ಎಂದ ಮೇಲೆ ಈ ಶಾಲೆಗಳ ದುಸ್ಥಿತಿಯ ಬಗ್ಗೆ ಯಾರನ್ನು ದೂರಲು ಸಾಧ್ಯ? ಬಡವರೂ ಅನಕ್ಷರಸ್ಥರೂ ಆದ ತಂದೆ ತಾಯಿಯರು ಮಾತ್ರವೇ ಮಕ್ಕಳನ್ನು ಉರ್ದು ಪ್ರೈಮರಿ ಶಾಲೆಗಳಿಗೆ ಸೇರಿಸುತ್ತಾರೆ; ವಿದ್ಯಾವಂತರು ಮತ್ತು ಅನುಕೂಲಸ್ಥರು ತಮ್ಮ ಮಕ್ಕಳನ್ನು ಇಂಗ್ಲಿಷ್ ಶಾಲೆಗೆ ಸೇರಿಸುತ್ತಾರೆಂದು ಉರ್ದು ಶಾಲೆಗಳಲ್ಲಿನ ಅಧ್ಯಾಪಕರು ವಿವರಣೆಯನ್ನೇನೋ ನೀಡುತ್ತಾರೆ. ಈ ಮಾತಿನಲ್ಲಿ ಸ್ವಲ್ಪ ಸತ್ಯವಿದೆ; ಆದರೆ ಈ ಮಾತು ಕನ್ನಡ, ತೆಲುಗು, ತಮಿಳು ಕುಟುಂಬಗಳಿಗೂ ಅನ್ವಯಿಸುತ್ತದೆಯಲ್ಲವೆ? ಈ ಭಾಷೆಗಳ ಪ್ರೈಮರಿ ಸ್ಕೂಲುಗಳಿಗಿಂತ ಅತಿ ಕೀಳಾದ ಸ್ಥಿತಿಗೆ ಉರ್ದು ಶಾಲೆಗಳು ಮಾತ್ರವೇ ಏಕೆ ಇಳಿಯಿತು? ಮರಾಠಿ, ರಜಪೂತ ಮತ್ತು ಸಿಂಧಿ ಕುಟುಂಬಗಳಲ್ಲಿ ಹಲವರು ಉರ್ದುವನ್ನು ರೂಢಿಸಿಕೊಂಡಿದ್ದು ಅವರ್ಯಾರೂ ಉರ್ದುವನ್ನು ಕೈಬಿಟ್ಟು ಆಂಗ್ಲಶಾಲೆಗಳಿಗೆ ಜೋತುಬಿದ್ದಿಲ್ಲ. ಉರ್ದುವನ್ನು ಕಡೆಗಣಿಸುತ್ತಿರುವವರು ಮುಸ್ಲಿಮರೇ ಎಂದು ಈ ಬಗ್ಗೆ ಸಮೀಕ್ಷೆ ನಡೆಸಿದವರು

ಹೇಳುತ್ತಾರೆ. ಕರ್ನಾಟಕದಲ್ಲಿ ಉರ್ದು ಬಹು ಮಟ್ಟಿಗೆ ಮುಸ್ಲಿಮರ ಬಾಷೆ ಆಗಿದೆ ಎಂಬುದನ್ನು ಗಮನಿಸಿದಾಗ, ಉರ್ದು ಪ್ರೈಮರಿ ಶಾಲೆಗಳಲ್ಲಿನ ಕೀಳುಮಟ್ಟದ ಬೋಧನೆ ಮತ್ತು ಕೆಳದರ್ಜೆ ಪಠ್ಯಪುಸ್ತಕಗಳಿಗೆ ಮುಸ್ಲಿಮರ ಅಸಡ್ಡೆ ನಿರಾಸಕ್ತಿಗಳೇ ಕಾರಣವೆನ್ನದೆ ವಿಧಿಯಿಲ್ಲ.

ವಯಸ್ಕರಿಗಾಗಿ ಜ್ಞಾನ ಪ್ರಸಾರ : ವಿದ್ಯಾರ್ಥಿ ಜೀವನವನ್ನು ಮುಗಿಸಿ ಉದ್ಯೋಗ, ವ್ಯಾಪಾರ ಅಥವಾ ವೃತ್ತಿಗಳಲ್ಲಿ ತೊಡಗಿಸಿಕೊಂಡೊಡನೆ ಶಿಕ್ಷಣ ಅಥವ ವಿದ್ಯಾರ್ಜನೆ ಮುಕ್ತಾಯವಾಗುವುದಿಲ್ಲ ಮತ್ತು ಆಗಬಾರದು. ಪುಸ್ತಕಗಳು, ವೃತ್ತ ಪತ್ರಿಕೆಗಳು, ರೇಡಿಯೋ, ಟಿ.ವಿ., ಸಿನಿಮಾ ಮಾಧ್ಯಮಗಳ ಮೂಲಕ ಜ್ಞಾನಾರ್ಜನೆ ಮುಂದುವರಿಯುತ್ತದೆ. ಇದೊಂದು ಬಗೆಯ ವಯಸ್ಕರ ಶಿಕ್ಷಣ. ವಯಸ್ಕರನ್ನು ದೃಷ್ಟಿಯಲ್ಲಿಟ್ಟುಕೊಂಡು ಜ್ಞಾನಪ್ರಸಾರ ಮಾಡುತ್ತಿರಬೇಕಾಗುತ್ತದೆ. ಇಲ್ಲದಿದ್ದರೆ ವಯಸ್ಕರು ಸಾಂಸ್ಕೃತಿಕವಾಗಿ ಬಡವಾಗುತ್ತಾರೆ. ಪ್ರತಿ ಶುಕ್ರವಾರವೂ ಮಸೀದಿಯಲ್ಲಿ ಸಭೆ ಸೇರಿ ಪ್ರಾಜ್ಞರಿಂದ ಉಪನ್ಯಾಸ ಏರ್ಪಡಿಸುವ ಪರಂಪರೆ ಅತ್ಯಂತ ಪರಿಣಾಮಕಾರಿ ವಯಸ್ಕರ ಶಿಕ್ಷಣ. ಈ ಅಮೂಲ್ಯವೂ ಅಗ್ಗವೂ ಆದ ಪದ್ಧತಿಯಿಂದ ಮುಸ್ಲಿಮ್ ಸಮಾಜ ಕಳೆದ ಹದಿನಾಲ್ಕು ಶತಮಾನಗಳಿಂದ ಜೀವಂತವಾಗಿ ಉಳಿದಿದೆ.

ಈ ಅರ್ಥದಲ್ಲಿ ವಯಸ್ಕರ ಶಿಕ್ಷಣದ ಪ್ರಾಮುಖ್ಯತೆಯನ್ನು ಚೆನ್ನಾಗಿ ಮನಗಂಡಿದ್ದವರೆಂದರೆ ತಬ್ಲೀಗಿ ಜಮಾತ್‌ನ ಮೌಲಾನ ಜಕಾರಿಯ ಮತ್ತು ಜಮಾಅತೆ ಇಸ್ಲಾಮಿನ ಮೌಲಾನ ಮೌದೂದಿಯವರು. ಪುಸ್ತಕಗಳು, ಹಸ್ತಪತ್ರಿಕೆಗಳು, ಚರ್ಚಾಕೂಟಗಳು, ಉಪನ್ಯಾಸಗಳು - ಹೀಗೆ ಎಲ್ಲ ಮಾರ್ಗಗಳಲ್ಲೂ ವಯಸ್ಕರ ಶಿಕ್ಷಣವನ್ನು ಹರಡಲು ಈ ಇಬ್ಬರು ಮಹಾಶಯರು ಶ್ರಮಿಸಿದರು. ವಿಶ್ವವಿದ್ಯಾಲಯಗಳಿಂದ ಪದವೀಧರರೆನಿಸಿಕೊಂಡ ''ಸುಶಿಕ್ಷಿತ'' ಮುಸ್ಲಿಮರು ಈ ನಿಟ್ಟಿನಲ್ಲಿ ವಿಫಲರಾಗಿದ್ದಾರೆಂಬುದನ್ನು ಗಮನಿಸಬೇಕು. ಈ ವರ್ಗದ ಮುಸ್ಲಿಮರಿಂದ ಯಾವುದೇ ಆಂದೋಲನ ನಡೆಯಲಿಲ್ಲ; ಯಾವುದೇ ಸಂಸ್ಥೆ ರೂಪುಗೊಳ್ಳಲಿಲ್ಲ. ಅಷ್ಟೇ ಅಲ್ಲ ಇವರ ಧೋರಣೆಯಿಂದಾಗಿ ಹಿಂದಿನ ಪೀಳಿಗೆಯ ಪ್ರಾಜ್ಞರು ಸ್ಥಾಪಿಸಿ ಬೆಳೆಸಿದ ಆಲಿಘರ್ ಮುಸ್ಲಿಮ್ ವಿಶ್ವವಿದ್ಯಾನಿಲಯ ಮುಂತಾದ ಸಂಸ್ಥೆಗಳು ಕ್ಷೀಣಿಸಿದುವು. ವಿದ್ಯಾವಂತರಲ್ಲಿ ಜ್ಞಾನ ಇರುತ್ತದೆ. ಡಿಗ್ರಿವಂತರಲ್ಲಿ ತಮಗೆ ಜ್ಞಾನವಿದೆ ಎಂಬ ಭ್ರಮೆ ಇರುತ್ತದೆ. ಡಿಗ್ರಿವಂತ ಮುಸ್ಲಿಮರನ್ನು ವಯಸ್ಕರ ಶಿಕ್ಷಣಕ್ಕೊಳಪಡಿಸಿ ವಿದ್ಯಾವಂತ ಮತ್ತು ಕರ್ತವ್ಯ ಶೀಲ ಮುಸ್ಲಿಮರನ್ನಾಗಿ ಸುಧಾರಿಸಬೇಕಾಗಿದೆ. ಆದರೆ ಇಷ್ಟೇ ಸಾಲದು. ಇಸ್ಲಾಮ್ ಕುರಿತ ಜ್ಞಾನ ಪ್ರಸಾರ ಸಾಕಷ್ಟು ಆಗುತ್ತಿದೆ. ಆದರೆ ಮುಸ್ಲಿಮ್ ಹಿತಾಸಕ್ತಿಗಳನ್ನು ಕುರಿತ ವಿಚಾರಗಳ ಪ್ರಸಾರ ಆಗುತ್ತಿಲ್ಲ. ರಾಜಕೀಯ ಪ್ರಜ್ಞೆ, ಹಿಂದೂ ಸಮಾಜದೊಳಗಣ ಆಂತರಿಕ ವೈರುಧ್ಯಗಳ ತಿಳುವಳಿಕೆ, ದೇಶದ ವಿಭಜನೆ

ಕುರಿತಂತೆ ಇತಿಹಾಸದ ವಸ್ತುನಿಷ್ಠ ವಿಶ್ಲೇಷಣೆ, ಇಸ್ಲಾಮ್ ಮತ್ತು ಮುಸ್ಲಿಮರ ಬಗ್ಗೆ ದ್ವೇಷವನ್ನು ಕ್ರಮಬದ್ಧವಾಗಿ ಹರಡುತ್ತಿರುವ ಶಕ್ತಿಗಳನ್ನು ಕುರಿತು ತಿಳುವಳಿಕೆ ಮುಂತಾದ ವಿಚಾರಗಳನ್ನು ವಿಶ್ಲೇಷಿಸಿ ವಿವರಿಸುವ ಸಾಮರ್ಥ್ಯವನ್ನು ಮುಸ್ಲಿಮ್ ಯುವಜನಾಂಗದಲ್ಲಿ ಉಂಟುಮಾಡುವ ಬಗ್ಗೆ ಪ್ರಯತ್ನ ನಡೆಯಬೇಕು.

ವಿದ್ಯಾರ್ಜನೆ - ಎಂದರೆ ಮೆಡಿಕಲ್, ಇಂಜಿನಿಯರಿಂಗ್ ಮುಂತಾದ ವಿಭಾಗಗಳು - ಇಲ್ಲಿಯಾಗಲಿ, ಸರ್ಕಾರಿ ಹುದ್ದೆಗಳಲ್ಲಾಗಲಿ, ಉದ್ದಿಮೆಗಳನ್ನು ನಡೆಸುವುದರಲ್ಲಾಗಲಿ, ದೇಶದ ಜನಸಂಖ್ಯೆಯಲ್ಲಿ ಮುಸ್ಲಿಮರು ಯಾವ ಪ್ರಮಾಣದಲ್ಲಿದ್ದಾರೋ, ಆ ಪ್ರಮಾಣದಲ್ಲಿ ಇಲ್ಲವೆಂಬುದು ಅಂಕಿ ಅಂಶಗಳಿಂದ ವ್ಯಕ್ತವಾಗುತ್ತದೆ.

ಇಸ್ಲಾಮಿನ ವಿಶಿಷ್ಟ ಮೌಲ್ಯಗಳನ್ನು ಪ್ರತಿಧ್ವನಿಸುವ ಶಬ್ದಗಳಾಗಲಿ ನುಡಿಗಟ್ಟುಗಳಾಗಲಿ ಉರ್ದು (ಮತ್ತು ಸ್ವಲ್ಪಮಟ್ಟಿಗೆ ಇಂಗ್ಲಿಷ್) ಭಾಷೆಯನ್ನುಳಿದು ಬೇರೆ ಭಾರತೀಯ ಭಾಷೆಗಳಲ್ಲಿ ಸಿಗುವುದಿಲ್ಲ. ಮುಸ್ಲಿಮೇತರರೂ ಉರ್ದುಭಾಷೆಯನ್ನು ಬಳಸುತ್ತಾರೆಂಬ ಮಾತು ಬೇರೆ. ಆದರೆ ಉರ್ದುಭಾಷೆಯನ್ನು ಕಡೆಗಣಿಸುವುದರಿಂದ ನಷ್ಟವಾಗುವುದು ಮುಸ್ಲಿಮರಿಗೆ ಮಾತ್ರವೇ.

ಉತ್ತರ ಭಾರತದ ಜನಸಾಮಾನ್ಯರಿಗೆಲ್ಲ ತಿಳಿಯುವ ಭಾಷೆ ಉರ್ದು. ಹಿಂದೂಸ್ತಾನಿ, ಉರ್ದುವಿನ ಇನ್ನೊಂದು ರೂಪವಷ್ಟೆ. ನಾಗರಿಲಿಪಿಯಲ್ಲಿ ಬರೆದ ಉರ್ದು ಭಾಷೆಯೇ ಹಿಂದುಸ್ತಾನಿ ಎನ್ನಬಹುದು. ಹಿಂದಿ ಭಾಷೆಯನ್ನು ದೇಶದ ಆಡಳಿತ ಭಾಷೆ ಎಂದು ಸಾರುವ ಮೂಲಕ ಒಂದು ಪಿತೂರಿಯೇ ನಡೆಯಿತು. ಈಗಲಂತೂ ಹಿಂದಿಯಲ್ಲಿನ ಉರ್ದು ಮತ್ತು ಹಿಂದೂಸ್ತಾನಿ ಪದಗಳ ಬದಲಿಗೆ ಸಂಸ್ಕೃತ ಪದಗಳನ್ನು ಬಳಸಲಾಗುತ್ತಿದೆ. ಸೂಕ್ಷ್ಮವಾಗಿ ಹೇಳಬೇಕೆಂದರೆ ಈ ದೇಶದ ಜನಾಂಗಗಳನ್ನು ಹಿಂದೂಕರಣಗೊಳಿಸುವ ಮತ್ತು ದೇಶದ ಸಂಸ್ಕೃತಿಗಳನ್ನು ಸಂಸ್ಕೃತ ಭಾಷೆಗೆ ಅಧೀನಪಡಿಸುವ ಒಂದು ಪಿತೂರಿ ನಡೆದಿದೆ.

ಈ ದಿನಗಳಲ್ಲಿ ಮತ್ತು ಭವಿಷ್ಯದಲ್ಲಿ ಇಂಗ್ಲಿಷಿನ ಸ್ಥಾನಮಾನವನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಹಿಂದಿ-ಇಂಗ್ಲಿಷ್, ಈ ವಿವಾದದಲ್ಲಿ ಇಂಗ್ಲಿಷ್ ಪರ ಇರುವುದೇ ಮುತ್ಸದ್ದಿತನ ಎಂಬುದನ್ನು ಮುಸ್ಲಿಮರು ಅರಿತುಕೊಳ್ಳಬೇಕು.

ಶಾಸನಸಭೆಗಳಲ್ಲಿ ದಲಿತರಿಗೆ ಮೀಸಲಾತಿ ಇರಬೇಕೆಂಬ ಬ್ರಿಟಿಷ್ ಸರ್ಕಾರದ ಘೋಷಣೆ ವಿರುದ್ಧ 1930ರಲ್ಲಿ ಗಾಂಧೀಜಿ ಪ್ರತಿಭಟಿಸಿದ್ದು ಕೊನೆಗೆ ಆಗ ಆದ ಪೂನಾ ಒಪ್ಪಂದದ ಪರಿಣಾಮದಿಂದಾಗಿ ಹುದ್ದೆಗಳಲ್ಲೂ ದಲಿತರಿಗೆ ಮೀಸಲಾತಿಯನ್ನು ಸಂವಿಧಾನದಲ್ಲಿ ಘೋಷಿಸಬೇಕಾಯಿತು. ಮುಸ್ಲಿಮರ ಜನಸಂಖ್ಯೆಗನುಗುಣವಾಗಿ ಶಾಸನ ಸಭೆ ಸಂಸತ್‌ಗಳಲ್ಲಿ

ಮತ್ತು ಹುದ್ದೆಗಳಲ್ಲಿ ಮುಸ್ಲಿಮರಿಗೆ ಮೀಸಲಾತಿಯ ಅಗತ್ಯವಿದೆ ಎಂದು ಮಹ್ಮದಾಲಿ ಜಿನ್ನಾರವರು ಪ್ರತಿಪಾದಿಸಿದಾಗ ಪ್ರಬಲ ವಿರೋಧ ಬಂತು. ಈ ಲೇಖನದಲ್ಲಿ ಈ ಮೊದಲೇ ಚರ್ಚಿಸಿರುವ ಕಾರಣಗಳಿಂದಾಗಿ, ಮುಸ್ಲಿಮ್ ಹಿತಾಸಕ್ತಿಯನ್ನು ಅದು ಎಷ್ಟೇ ನ್ಯಾಯ ಸಮ್ಮತವಾದುದಾಗಿರಲಿ, ವಿರೋಧಿಸುವುನ್ನೇ ದೇಶಭಕ್ತಿ ಎಂದು ಹಿಂದೂ ಪುರೋಹಿತಶಾಹಿ ಬೊಬ್ಬೆ ಇಟ್ಟಿತು. ಶೂದ್ರರು ಪುರೋಹಿತಶಾಹಿಯ ಗುಲಾಮರಂತೆ ವರ್ತಿಸಿದರು. ಇದರ ಪರಿಣಾಮ, ದೇಶ ವಿಭಜನೆ. ದಲಿತರಲ್ಲದ ಆದರೆ ವಂಚಿತರಾದ ಜನಾಂಗಗಳಿಗೆ ಮೀಸಲಾತಿಯನ್ನು ಯಾವ ರೀತಿ ವಿಸ್ತರಿಸಬೇಕೆಂದು ಸರ್ಕಾರಕ್ಕೆ ಸೂಚಿಸಲು ಆಯೋಗ ರಚನೆಯಾಗಬೇಕೆಂದು ಸಂವಿಧಾನ ನಿರ್ದೇಶಿಸುತ್ತದೆ. ಆ ಮೇರೆಗೆ ಮಂಡಲ್ ಆಯೋಗ, ವರದಿಗಳು [illegible]ವು. ಕೆಲವು ರಾಜ್ಯ ಸರ್ಕಾರಗಳೂ ಹಿಂದುಳಿದ ಜನಾಂಗಗಳ ಮೀಸಲಾತಿ ಕುರಿತು ಆಯೋಗಗಳನ್ನು ರಚಿಸಿ ವರದಿಗಳು ಬಂದು ಆ ಬಗ್ಗೆ ಚರ್ಚೆ, ವಿವಾದಗಳಾಗಿವೆ. ಈ ಎಲ್ಲ ಸಂದರ್ಭಗಳನ್ನೂ ಮುಸ್ಲಿಮರು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಬಹುದಾಗಿತ್ತು. ಆದರೆ ಸಾಕಷ್ಟು ಉಪಯೋಗಿಸಿಕೊಳ್ಳಲಿಲ್ಲ.

ಒಂದು ಜನಾಂಗ ನಂಬಿ ಪಾಲಿಸುತ್ತಿರುವ ಧರ್ಮ ಅತ್ಯುತ್ಕೃಷ್ಟವಾದುದಾಗಿರಬಹುದು; ಆದರೆ ಜನಾಂಗದ ಯಶಸ್ಸು ಅದರ ಕ್ರಿಯಾಶೀಲತೆ, ಸೃಜನಶೀಲತೆ, ಐಕ್ಯತೆ, ಮತ್ತು ಮುತ್ಸದ್ದಿತನ ಇವುಗಳನ್ನವಲಂಬಿಸಿರುತ್ತದೆ.

- - - - - -

● ಎನ್. ಇಸ್ಮಾಈಲ್
ಪ್ರಾಚಾರ್ಯರು,
ಬದ್ರಿಯಾ ಪದವಿ ಪೂರ್ವ ಕಾಲೇಜು,
ಮಂಗಳೂರು - 575 001.

# ಶೈಕ್ಷಣಿಕ ಅವಕಾಶಗಳು ಮತ್ತು ಮುಸ್ಲಿಮರು - ಒಂದು ಚಿಂತನೆ.

ಭಾರತಕ್ಕೆ ವಿದೇಶಿಯರು ಬರುವ ಮೊದಲು ಭಾರತವನ್ನು ಹಲವು ರಾಜವಂಶಗಳು ಆಳುತ್ತಿದ್ದುವು. ಆ ಕಾಲದಲ್ಲಿ ಜನರಿಗೆ ಪ್ರಜಾ ಸರಕಾರದ ಅರಿವಿರಲಿಲ್ಲ. ಶಿಕ್ಷಣಕ್ಕೆ ಮಹತ್ವವಿದ್ದಿದ್ದರೂ ಪ್ರಜೆಗಳೆಲ್ಲಾ ಶಿಕ್ಷಿತರಾಗಿರಲಿಲ್ಲ. ಜನರನ್ನು ಶಿಕ್ಷಿತರನ್ನಾಗಿ ಮಾಡುವುದು ರಾಜರುಗಳಿಗೆ ಬೇಕಾಗಿರಲಿಲ್ಲ. ಅಶಿಕ್ಷಿತರಾಗಿರುವ ಜನರ ನಾಡಿನಲ್ಲಿ ರಾಜವಂಶಗಳು ಶಾಂತಿಯುತವಾಗಿ ರಾಜ್ಯಭಾರ ಮಾಡುತ್ತಿದ್ದರು ಎಂಬ ಮಾತು ಪೂರ್ಣ ಸಮ್ಮತಾರ್ಹವಲ್ಲವಾದರೂ, ಈ ಮಾತಿನಲ್ಲಿ ಸತ್ಯದಂಶಗಳು ಕೆಲವಾದರೂ ಇವೆ. ಕೆಲವೇ ಕೆಲವು ರಾಜವಂಶಗಳು ಭಾರತ ದೇಶವನ್ನು ತುಂಡು ತುಂಡುಗಳನ್ನಾಗಿ ಮಾಡಿ ಆಳುತ್ತಿದ್ದವು. ಆಗ ದಕ್ಷಿಣ ಭಾರತ, ಉತ್ತರ ಭಾರತ ಎಂಬ ಭೇದಭಾವ ದಟ್ಟವಾಗಿತ್ತು. ಹೆಚ್ಚಿನ ರಾಜರು ಪರಮತ ಸಹಿಷ್ಣುಗಳಾಗಿದ್ದರು. ಮತ-ಪಂಥಗಳ ವೈಷಮ್ಯ ಕಡಿಮೆ ಇದ್ದ ಆ ಕಾಲದಲ್ಲೂ ನೆಮ್ಮದಿ ಇತ್ತು. ಉತ್ತರ ಭಾರತದ ರಾಜವಂಶಗಳಲ್ಲಿ ಮೊಗಲರು ಮತ್ತು ಡೆಲ್ಲಿ ಸುಲ್ತಾನರು ಮುಖ್ಯರಾಗಿದ್ದರೆ, ದಕ್ಷಿಣ ಭಾರತದಲ್ಲಿ ಹೈದರಾಬಾದ್ ನಿಜಾಮರು, ಬಹುಮನಿ ಸುಲ್ತಾನರು ಮತ್ತು ಮೈಸೂರಿನ ಹೈದರಾಲಿ ಮತ್ತು ಟಿಪ್ಪು - ಇವರುಗಳು ಮುಖ್ಯರಾಗಿದ್ದರು. ಇವರಲ್ಲಿ ಹೆಚ್ಚಿನ ರಾಜರು ಪರಮತ. ಸಹಿಷ್ಣುಗಳಾಗಿದ್ದು, ಧಾರ್ಮಿಕ ಹಾಗೂ ಲೌಕಿಕ ಶಿಕ್ಷಣಕ್ಕೆ ಪ್ರಾಮುಖ್ಯವನ್ನು ಕೊಟ್ಟಿದ್ದರೂ - ಲೌಕಿಕ ಶಿಕ್ಷಣದಲ್ಲಿ ಮಹತ್ತರವಾದ ಪ್ರಗತಿ ಸಾಧಿಸಲಾಗದಿರುವುದು ಖೇದದ ವಿಷಯ. ಮುಸ್ಲಿಮ್ ರಾಜವಂಶಗಳು ಭಾರತವನ್ನು

ಆಳುತ್ತಿದ್ದಾಗ ಶಿಕ್ಷಣದ ಅಪೇಕ್ಷಣೀಯ ಪ್ರಗತಿ ಸಾಧಿತವಾಗಲಿಲ್ಲ ಎಂಬುದು ಇತಿಹಾಸ ಸತ್ಯವಾದರೆ, ಅನಂತರದ ದಿನಗಳಲ್ಲಿಯೂ ಮುಸ್ಲಿಮರು ಶಿಕ್ಷಣದ ಕಡೆಗೆ ಹೆಚ್ಚು ಗಮನ ಹರಿಸದಿದ್ದುದು ಕೂಡಾ ಸತ್ಯದ ಸಂಗತಿಯಾಗಿದೆ.

ಭಾರತಕ್ಕೆ ವಿದೇಶಿಯರ ಆಗಮನವಾದ ಆರಂಭದಲ್ಲಿ ಸಾಕಷ್ಟು ಸುಲಿಗೆಯನ್ನೇ ಮಾಡಿದ್ದರು. ನಮ್ಮ ಕೆಲವು ಅಧಿಕಾರಶಾಹಿ ಜನರು ವಿದೇಶಿಯರ ಕೈಗೊಂಬೆಗಳಾದರೆ, ಕೆಲವು ಶಿಕ್ಷಿತ ಜನರು, ಅವರಲ್ಲಿ ಕಾರಕೂನಿಗಳಾಗಿದ್ದರು. ಇಲ್ಲಿ ರಾಷ್ಟ್ರೀಯ ಭಾವನೆಗಳಿಗಾಗಲೀ, ಶೈಕ್ಷಣಿಕ ಸುಧಾರಣೆಗಳಿಗಾಗಲೀ ಅವಕಾಶವಿರಲಿಲ್ಲ. ನಮ್ಮನ್ನು ತುಂಡು ತುಂಡು ಮಾಡಿ ಆಳುವುದು ವಿದೇಶಿಯರಿಗೆ ಬೇಕಾಗಿತ್ತು. ಹಿಂದುಗಳ ವಿರುದ್ಧ ಮುಸ್ಲಿಮರನ್ನು ಎತ್ತಿ ಕಟ್ಟಿದ ಬ್ರಿಟಿಷರು ಆರಂಭದಲ್ಲಿ ಧಾರ್ಮಿಕ ವೈಷಮ್ಯ ಭಾವನೆಯಿಂದ ದೇಶವನ್ನು ವಿಭಜಿಸಲು ಯತ್ನಿಸಿದರೆ, ಕ್ರಮೇಣ ಪ್ರಾದೇಶಿಕ ಭಾವನೆಯಿಂದ ದೇಶವನ್ನು ಹೋಳು ಮಾಡಿದರು - ಒಟ್ಟಿನಲ್ಲಿ ಇಡೀ ಭರತ ಖಂಡದ ಮೇಲೆ, ತಮ್ಮ ಪ್ರಭುತ್ವವನ್ನು ಸಾಧಿಸಿದರು.

ಬ್ರಿಟಿಷರ ಕಾಲದಲ್ಲಿ ಅಗಾಧವಾದ ನಷ್ಟವನ್ನು ಅನುಭವಿಸಿದ ಮುಸ್ಲಿಮರು, ಯಾವುದೇ ಕ್ಷೇತ್ರದಲ್ಲಿ ಮುಂದುವರಿಯಲು ಸಾಧ್ಯವಿರಲಿಲ್ಲ. ಸ್ವಾತಂತ್ರ್ಯ ಹೋರಾಟದುದ್ದಕ್ಕೂ ಭಾರತೀಯ ಮುಸ್ಲಿಮರು, ಅಬುಲ್ ಕಲಾಂ ಆಜಾದ್ ಮೊದಲಾದ ಧೀಮಂತ ನಾಯಕರ ಹಿರಿತನದಲ್ಲಿ ಕ್ರಿಯಾಶೀಲರಾಗಿ ಭಾಗವಹಿಸಿದ್ದರು. ಮಹಾತ್ಮಾ ಗಾಂಧೀಜಿಯವರು ಮುಸ್ಲಿಮರ ರಾಷ್ಟ್ರ ಪ್ರಜ್ಞೆಯ ಕುರಿತು ಅಲ್ಲಲ್ಲಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು. ಹಿಂದು ಮುಸ್ಲಿಂ ಎಂಬ ಭೇದಭಾವವನ್ನು ಮರೆತು, ದೇಶಕ್ಕಾಗಿ ಹೋರಾಡಿದ ಭಾರತದ ಜನತೆ, ಸ್ವಾತಂತ್ರ್ಯವನ್ನು ಪಡೆಯುವ ಸಂದರ್ಭದಲ್ಲಿ ಅಖಂಡ ಭರತ ಖಂಡದ ವಿಭಜನೆಯನ್ನು ಕಾಣುವಂತಾದದ್ದು ನಮ್ಮ ದುರಂತ ಅಲ್ಲವೇ?

ಮುಸ್ಲಿಮರು ಪಾಕಿಸ್ತಾನದಲ್ಲೂ, ಹಿಂದುಗಳು ಹಿಂದೂಸ್ಥಾನದಲ್ಲೂ ಹಂಚಿಹೋದರು ಎಂಬ ಮಾತು ಸತ್ಯವಲ್ಲ. ಏಕೆಂದರೆ 'ಹಿಂದೂಸ್ತಾನ' ಎಂಬುದಾಗಿ ಕರೆಯಲ್ಪಟ್ಟ ವಿಭಜಿತ ಭಾರತದಲ್ಲಿದ್ದ ಮುಸ್ಲಿಮರು ಯಾವ ಕಾರಣಕ್ಕೂ ತಮ್ಮ ತಾಯ್ನೆಲವನ್ನು ಬಿಡಲು ತಯಾರಿರಲಿಲ್ಲ. ಅದೇ ರೀತಿ ಪಾಕಿಸ್ತಾನದಲ್ಲಿದ್ದ ಹಿಂದುಗಳು ಅವರ ತಾಯ್ನೆಲವನ್ನು ಬಿಡಲು ತಯಾರಿರಲಿಲ್ಲ. ಆದ್ದರಿಂದ, ಸ್ವತಂತ್ರ ಭಾರತದಲ್ಲಿ ಅಲ್ಪಸಂಖ್ಯಾತ ಮುಸ್ಲಿಮರಿಗೆ ಪ್ರತ್ಯೇಕವಾದ ಸ್ಥಾನಮಾನಗಳನ್ನು ಸಂವಿಧಾನದ ಚೌಕಟ್ಟಿನಲ್ಲೇ ವ್ಯವಸ್ಥೆಗೊಳಿಸಲಾಗಿದೆ. ಭಾರತೀಯರಿಗೆ ಕಡ್ಡಾಯ ಸಾರ್ವತ್ರಿಕ ಶಿಕ್ಷಣವೆನ್ನುವುದು ಸಂವಿಧಾನದತ್ತವಾದ ಅಂಶವಾಗಿರುತ್ತದೆ. ಈ ಸಂದರ್ಭದಲ್ಲಿ, ಮುಸ್ಲಿಮರು ಶಿಕ್ಷಣದತ್ತ ಒಲವು ತೋರಿಸದೆ ಇದ್ದುದು ಬಹಳ ಖೇದದ ಸಂಗತಿಯಾಗಿರುತ್ತದೆ. ಶಿಕ್ಷಣವಿಲ್ಲದೆ ಒಂದು ಸಮುದಾಯ ಪ್ರಗತಿಯನ್ನು

ಸಾಧಿಸಲಾರದು ಎಂಬ ಮಾತನ್ನು ನೆನಪಿಸಿದರೆ, ಮುಸ್ಲಿಮರು ಏತಕ್ಕೆ ಪ್ರಗತಿಯನ್ನು ಸಾಧಿಸಲಿಲ್ಲ ಎಂಬ ಪ್ರಶ್ನೆಗೆ ಸುಲಭದಲ್ಲಿ ಉತ್ತರ ಸಿಗುತ್ತದೆ.

ನಮ್ಮ ದೇಶದ ಅಲ್ಪಸಂಖ್ಯಾತ ಮುಸ್ಲಿಮರು ಸಂವಿಧಾನಬದ್ಧವಾದ ಅವಕಾಶಗಳನ್ನು ಸದುಪಯೋಗ ಪಡಿಸುವಲ್ಲಿ ಸಂಪೂರ್ಣ ಸೋತಿದ್ದಾರೆ. ಇದಕ್ಕೆ ವಸ್ತುನಿಷ್ಠವಾದ ಹಲವು ಕಾರಣಗಳಿವೆ. ಇದನ್ನು ಚರ್ಚಿಸುವುದೇ ಪ್ರಕೃತ ಲೇಖನದ ಮುಖ್ಯ ಉದ್ದೇಶವಾಗಿರುತ್ತದೆ.

ಶಿಕ್ಷಣವಿಲ್ಲದೆ ಯಾವುದೇ ಒಂದು ಸಮುದಾಯದ ಪ್ರಗತಿ ಅಸಾಧ್ಯ ಎಂಬುದನ್ನು ಒಪ್ಪಿಕೊಳ್ಳಲೇ ಬೇಕಾಗಿದೆ. ಮುಸ್ಲಿಮರು ಪ್ರಗತಿಯನ್ನು ಸಾಧಿಸದಿರಲು ಸಮುದಾಯದ ಅವಿದ್ಯೆಯೇ ಕಾರಣ. ಇಡೀ ಕರ್ನಾಟಕದಲ್ಲಿ, ಮುಸ್ಲಿಮರ ಆರ್ಥಿಕ ಸ್ಥಿತಿ ತುಂಬಾ ಖೇದಕರವಾದುದು. ಕರ್ನಾಟಕದ ಮುಸ್ಲಿಮರು ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದವರು. ಇದಕ್ಕೆ ಮುಖ್ಯವಾದ ಹಲವು ಕಾರಣಗಳಿವೆ. ಸಂವಿಧಾನದತ್ತವಾದ ಅವಕಾಶಗಳನ್ನು ಸದುಪಯೋಗ ಪಡಿಸುವಲ್ಲಿ ನಮ್ಮ ಮುಸ್ಲಿಮರು ಅಜ್ಞಾನಿಗಳಾಗಿರುವುದು ಮತ್ತು ಮೈಗಳ್ಳರಾಗಿ ಆಲಸೀ ಜೀವನವನ್ನು ನಡೆಸುತ್ತಿರುವುದು, ಧಾರ್ಮಿಕ ಹಾಗೂ ರಾಜಕೀಯ ನಾಯಕರೆಂದೆನಿಸಿಕೊಂಡಿರುವವರ ಆಟದ ಗೊಂಬೆಗಳಾಗಿರುವುದು - ಇವೆಲ್ಲವನ್ನೂ ಅನುಭವಿಸುತ್ತಾ ಬಂದಿರುವ ಮುಸ್ಲಿಮರು ಬೌದ್ಧಿಕವಾಗಿ ದಿವಾಳಿ ಹಂತ ತಲುಪಿರುತ್ತಾರೆ. ಈ ದಿವಾಳಿ ಹಂತದಿಂದ ಮುಸ್ಲಿಮರು ಮೇಲೇರುವುದರ ಕುರಿತು ಪ್ರಜ್ಞಾವಂತರೆಲ್ಲ ಚಿಂತಿಸಬೇಕಾಗಿದೆ.

ಭಾರತದ ಸಂವಿಧಾನದಲ್ಲಿ ಅಲ್ಪಸಂಖ್ಯಾತ ಮುಸ್ಲಿಮರಿಗೆ ಪ್ರತ್ಯೇಕವಾದ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಅವಕಾಶಗಳಿವೆ. ಶೈಕ್ಷಣಿಕ ಕ್ಷೇತ್ರದಲ್ಲಿ ಹೆಚ್ಚಿನ ರಾಜ್ಯ ಸರಕಾರಗಳು ಇದರ ಕುರಿತು ಕಾಳಜಿ ವಹಿಸಲಿಲ್ಲ. ಆದರೆ ಕೇರಳ ಸರಕಾರ ಮಾತ್ರ ಮುಸ್ಲಿಮರಿಗೆ ಶೇಕಡಾ 15ಮೀಸಲಾತಿ ವ್ಯವಸ್ಥೆ ಮಾಡಿದ್ದು, ಆ ರಾಜ್ಯ ಸಂಪೂರ್ಣ ಸಾಕ್ಷರತಾ ರಾಜ್ಯವಾಗಿದೆ. ಆರ್ಥಿಕ ಸಂಪನ್ಮೂಲ ಕಮ್ಮಿಯಿರುವ ಕೇರಳ ರಾಜ್ಯ ಇಂದು ಪೂರ್ಣ ಸಾಕ್ಷರತಾ ರಾಜ್ಯವಾಗಿರುವುದು ಜನರ ಪ್ರಯತ್ನ ಮತ್ತು ಸರಕಾರದ ಪ್ರೋತ್ಸಾಹದಿಂದ ಎಂಬುದನ್ನು ಗಮನಿಸಬೇಕಾಗಿದೆ.

ದಿವಂಗತ ದೇವರಾಜ ಅರಸುರವರು ಮುಖ್ಯಮಂತ್ರಿಯಾಗಿದ್ದಾಗ ಹಾವನೂರ ಆಯೋಗವನ್ನು ರಚಿಸಿ, ಹಿಂದುಳಿದವರನ್ನು ಗುರುತಿಸಲಾಯಿತು. ಹಾವನೂರ ಆಯೋಗದ ವರದಿ ಪ್ರಕಾರ ಮುಸ್ಲಿಮರ ಹಿಂದುಳಿದಿರುವಿಕೆಯನ್ನು ಗುರುತಿಸಿ, ಶೇಕಡಾ 6ರಷ್ಟು ಮೀಸಲಾತಿಯನ್ನಿಡಲಾಯಿತಾದರೂ, ಅದರದೇ ಆದ ಕೆಲವೊಂದು ಸಂವಿಧಾನಾತ್ಮಕ ತೊಡಕುಗಳಿಂದಾಗಿ, ಅದು ಜಾರಿಗೆ ಬರಲಿಲ್ಲ. ಅನಂತರದ ರಾಜ್ಯ ಸರಕಾರಗಳು ಆ ಕುರಿತು ಕಾಳಜಿ ವಹಿಸಲಿಲ್ಲ. ಇಂದು ಧಾರ್ಮಿಕ ಅಲ್ಪ ಸಂಖ್ಯಾತರು, ಭಾಷಾ

ಅಲ್ಪ ಸಂಖ್ಯಾತರು, ಹೀಗೆ ವಿಭಾಗಗಳಿವೆ. ಮುಸ್ಲಿಮರು, ಕ್ರೈಸ್ತರು, ಸಿಖ್ಖರು, ಬೌದ್ಧರು, ಜೈನರು - ಹೀಗೆ ಧಾರ್ಮಿಕ ಅಲ್ಪಸಂಖ್ಯಾತ ವಿಭಾಗವಾದರೆ, ತುಳು, ಕೊಂಕಣಿ, ಉರ್ದು, ಮರಾಠಿ ಹೀಗೆ ಭಾಷಾ ಅಲ್ಪಸಂಖ್ಯಾತ ವಿಭಾಗವಾಗುತ್ತದೆ. ಇಲ್ಲಿ ಕ್ರೈಸ್ತರು, ರಾಷ್ಟ್ರೀಯ ಮಟ್ಟದಲ್ಲಿ ಅಲ್ಪ ಸಂಖ್ಯಾತರೆಂಬ ಸರ್ಟಿಫಿಕೇಟನ್ನು ಪಡೆದು, ಸಂವಿಧಾನದ ಅವಕಾಶಗಳನ್ನು ಗಿಟ್ಟಿಸಿಕೊಂಡಿರುತ್ತಾರೆ. ಸಿಕ್ಕರು, ಬೌದ್ಧರು, ಜೈನರು ಆಯಾಯ ರಾಜ್ಯಮಟ್ಟದಲ್ಲಿ ಆ ಅವಕಾಶಗಳನ್ನು ಪಡೆಯುತ್ತಿದ್ದಾರೆ. ತುಳು, ಕೊಂಕಣಿ, - ಹೀಗೆ ಭಾಷಾ ಅಲ್ಪ ಸಂಖ್ಯಾತ ಘೋಷಣಾ ಪತ್ರವನ್ನು ನಮ್ಮ ರಾಜ್ಯದಲ್ಲೂ ಪಡೆಯಲಾಗಿದೆ. ಆಶ್ಚರ್ಯವೆಂದರೆ, ಮುಸ್ಲಿಮ್ - ಧಾರ್ಮಿಕ ಅಲ್ಪಸಂಖ್ಯಾತ ಮತ್ತು ಉರ್ದು ಭಾಷಾ ಅಲ್ಪಸಂಖ್ಯಾತ ಘೋಷಣಾ ಪತ್ರಗಳನ್ನು ಪಡೆಯುವಲ್ಲಿ ನಮ್ಮ ರಾಜ್ಯದ ಬಹುತೇಕ ಜಿಲ್ಲೆಗಳ ಶಿಕ್ಷಣ ಸಂಸ್ಥೆಗಳು ಸೋತಿವೆ. ಇದಕ್ಕೆ ಕೆಲವು ಕಾರಣಗಳಿರಬಹುದು - ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕರ ಕಡಿಮೆ ಪ್ರಯತ್ನ, ನಿರ್ದಿಷ್ಟ ಸಮುದಾಯದ ನಾಯಕರುಗಳ ಸ್ವಾರ್ಥ ಹಾಗೂ ಉನ್ನತ ಅಧಿಕಾರಿ ವರ್ಗಗಳ ಅನಾಗರಿಕ ಕೋಮು ಭಾವನೆ ಮತ್ತು ಅವರ ಭ್ರಷ್ಟ ನಿಲುವು. ಈ ಹಿನ್ನೆಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲಾ ಮುಸ್ಲಿಮರ ಶಿಕ್ಷಣದ ಮಟ್ಟವನ್ನು ನಾವು ತೂಗಬೇಕಾಗಿದೆ. ಕೇರಳ ರಾಜ್ಯದ ಕಾಸರಗೋಡು ಜಿಲ್ಲೆ ಮತ್ತು ನಮ್ಮ ದಕ್ಷಿಣ ಕನ್ನಡ ಜಿಲ್ಲೆ - 'ಹಿಂದಿನ ತುಳುನಾಡು' ಇಲ್ಲಿಯ ಬಹುತೇಕ ಮುಸ್ಲಿಮರನ್ನು ಬ್ಯಾರಿಗಳೆಂದೇ ಕರೆಯುವುದು ವಾಡಿಕೆಯಾಗಿತ್ತು. ಬ್ಯಾರಿಯೆಂಬ ಪದವು 'ಬೇಹಾರಿ' ಎಂದರೆ 'ವ್ಯಾಪಾರಿ' ಎಂಬ ಪದದಿಂದಾಗಿ ಬಂದುದಾಗಿದೆ. ತುಳುನಾಡಿನ ಕರಾವಳಿ ಪ್ರದೇಶದಲ್ಲಿ ವಾಸಿಸುತ್ತಿದ್ದ ಮುಸ್ಲಿಮರು ವ್ಯಾಪಾರವನ್ನು ತಮ್ಮ ಜೀವನೋಪಾಯವನ್ನಾಗಿ ಮಾಡಿದ್ದರು. ತುಳು ನಾಡನ್ನು ಆಳುತ್ತಿದ್ದ ಹಿಂದಿನ ಜೈನ ರಾಜರು ಈ ವ್ಯಾಪಾರಿಗಳಿಗೆ ಪ್ರತ್ಯೇಕವಾದ ಸ್ಥಾನಮಾನವನ್ನು ಕೊಡುತ್ತಿದ್ದರು. ಮೂಲತ: ವ್ಯಾಪಾರಿ ವೃತ್ತಿಯ ಈ ಮುಸ್ಲಿಮರನ್ನು ಬ್ಯಾರಿಗಳೆಂದೇ ಕರೆಯಲಾಗುತ್ತಿತ್ತು. ತಮ್ಮ ಹೆಸರುಗಳೊಂದಿಗೇ 'ಬ್ಯಾರಿ' ಪದವನ್ನು ಸೇರಿಸುವುದು ಅಂದು ಗೌರವದ ಸಂಗತಿಯಾಗಿತ್ತು. ಇವರಿಗೆ, ತಮ್ಮದೇ ಆದ ಭಾಷೆ ಹಾಗೂ ಸಂಸ್ಕೃತಿ ಇತ್ತು. ಕ್ರಮೇಣ, ಕೇರಳದ ಮುಸ್ಲಿಂ ಬಹುಸಂಖ್ಯಾತ ಮಲಬಾರಿಗಳ ಪ್ರಭಾವಕ್ಕೆ ಸಿಲುಕಿ ತುಳುನಾಡಿನ ಬ್ಯಾರಿಗಳು, ತಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಮರೆಯುತ್ತಾ ಬಂದಿರುವುದು ಇತಿಹಾಸದ ಸತ್ಯ. ಪರಿಣಾಮವಾಗಿ 'ಬ್ಯಾರಿ' ಎಂಬ ಪದವನ್ನು ಬಳಸಲೂ ನಮ್ಮ ಜನ ಹಿಂಜರಿಯಲು ಶುರು ಮಾಡಿದರು. ಇದು ಸರಿಯಲ್ಲ. ಒಂದು ಸಮುದಾಯದ ಭಾಷೆ, ಸಂಸ್ಕೃತಿ ಅದರದೇ ಆದ ಮಹತ್ವವನ್ನು ಕಾಯ್ದುಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಇಂದು ರಾಜ್ಯಮಟ್ಟದ 'ಬ್ಯಾರಿ' ಸಂಘಟನೆಯೊಂದು ಬೆಂಗಳೂರಿನಲ್ಲಿ ರೂಪು ತಾಳಿದೆ. ಇದರ ಮೂಲಕ ಬ್ಯಾರಿ ಭಾಷೆ ಮತ್ತು ಸಂಸ್ಕೃತಿ ಏಳಿಗೆಗೆ ಸಹಕಾರ ದೊರೆತೀತೋ ಏನೋ - ನೋಡಬೇಕಾಗಿದೆ.

"ಬ್ಯಾರಿ" ಸಮುದಾಯವೊಂದಿತ್ತು ಎಂಬ ಅಂಶ ಇಂದಿನ ನಮ್ಮ ಆಡಳಿತಗಾರರಿಗೆ ಗೊತ್ತಿದೆಯೇ? ಗೊತ್ತಿಲ್ಲವೇ? ಗೊತ್ತಿರುತ್ತಿದ್ದರೆ, ಅದರ ಪ್ರಗತಿಗಾಗಿ ನಮ್ಮ ಆಡಳಿತಗಾರರು ಪ್ರಯತ್ನಿಸಿಲ್ಲ ಏಕೆ? ಗೊತ್ತಿಲ್ಲವಾದರೆ, ಅದರ ಕುರಿತು ತಿಳಿದುಕೊಳ್ಳುವ ಪ್ರಯತ್ನಕ್ಕಾದರೂ ತೊಡಗುತ್ತಾರೆಯೇ? ಇವುಗಳು ನಮ್ಮ ಆಡಳಿತಗಾರರ ಮುಂದಿರುವ ಗಮನಿಸಬೇಕಾದ ಅಂಶಗಳಾಗುತ್ತವೆ. ಮೂಲತ: ಅದೇ ಸಮುದಾಯದವರಾಗಿರುವ ತುಳುನಾಡಿನ ಮುಸ್ಲಿಮರು ಈ ಕುರಿತು ಯೋಚಿಸಬೇಕಾದುದು ಅಗತ್ಯವಾಗಿದೆ. ಕೊಂಕಣಿ ಮಾತಾಡುವವರು ಹೇಗೆ ತಮ್ಮ ಗುರುತನ್ನು (Identity) ಸಂವಿಧಾನಬದ್ಧವಾಗಿ ಉಳಿಸಿಕೊಂಡು, ಸರಕಾರದಿಂದ ಸಕಲ ಸವಲತ್ತುಗಳನ್ನು ಪಡೆಯುತ್ತಿದ್ದಾರೋ, ಅದೇ ರೀತಿ ಈ ಬ್ಯಾರಿ ಸಮುದಾಯದವರು ಕೂಡಾ ತಮ್ಮ ಗುರುತನ್ನು (Identity) ಉಳಿಸಿಕೊಂಡು ಸರಕಾರದ ಸವಲತ್ತುಗಳನ್ನು ಪಡೆಯಬೇಕಾಗಿದೆ.

ಒಂದು ನಾಡಿನ ಭಾಷೆ ಮತ್ತು ಸಂಸ್ಕೃತಿಯ ಉಳಿವು, ಆ ದೇಶದ ಭಾಷೆ ಮತ್ತು ಸಂಸ್ಕೃತಿಯ ಉಳಿವಿಗೆ ಪೂರಕವಾಗುತ್ತದೆಂಬುದನ್ನು ಒಪ್ಪಬೇಕಾಗಿದೆ. ಅದೇ ರೀತಿ ಒಂದು ಧರ್ಮದ ಸಾಂಸ್ಕೃತಿಕ ಪ್ರಗತಿ, ಇನ್ನೊಂದು ಧರ್ಮದ ಸಾಂಸ್ಕೃತಿಕ ಪ್ರಗತಿಗೆ ಪೂರಕವಾಗಬೇಕಾಗಿದೆ. ಇಸ್ಲಾಮ್ ಧರ್ಮದ ಸಾಂಸ್ಕೃತಿಕ ಜ್ಞಾನವನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ನಾವಿಂದು ತಿಳಿದುಕೊಳ್ಳಬೇಕಾಗಿದೆ. ಆಗ ಧಾರ್ಮಿಕ ವೈಷಮ್ಯಗಳಿಗೆ ಖಂಡಿತಾ ಅವಕಾಶಗಳಿರಲಾರವು. ಈ ನಿಟ್ಟಿನಲ್ಲಿ ಪ್ರಾಮಾಣಿಕ ಭಾರತೀಯ ಮುಸಲ್ಮಾನರಾಗಿ ನಾವಿಂದು ಚರ್ಚಿಸಬೇಕಾಗಿದೆ.

ಬಹುಸಂಖ್ಯಾತರೊಂದಿಗೆ ಅಲ್ಪಸಂಖ್ಯಾತರು ಬದುಕುತ್ತಿರುವ ಸಾಮಾಜಿಕ ಸ್ಥಿತಿಯಲ್ಲಿ ಭಾರತೀಯ ಮುಸ್ಲಿಮರು ಕ್ರಿಯಾಶೀಲರಾಗಬೇಕಾಗಿದೆ. ಅಲ್ಪಸಂಖ್ಯಾತರು ಮೊದಲು ಶಿಕ್ಷಿತರಾಗಬೇಕಾಗಿದೆ. ಸರಕಾರದ ಸವಲತ್ತುಗಳನ್ನು ಪಡೆಯುವುದರೊಂದಿಗೆ, ಸಮುದಾಯದ ಗಣ್ಯರ ಪ್ರಯತ್ನ ಕೂಡಾ ಅಗತ್ಯವಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲಾ ಮಟ್ಟದಲ್ಲಿ ಮುಸ್ಲಿಮರ ಸಾಕ್ಷರತೆಯ ಕುರಿತು ಗಮನ ಹರಿಸುವುದು ಅಗತ್ಯ. ಸಂಪೂರ್ಣ ಸಾಕ್ಷರತಾ ಆಂದೋಲನದ ಪ್ರಕ್ರಿಯೆಗಳು ನಮ್ಮ ಜಿಲ್ಲೆಯಲ್ಲಿ ಕೊನೆಯ ಹಂತದಲ್ಲಿದೆ. ಕಳೆದ ಅಕ್ಟೋಬರ್ ತಿಂಗಳಿನಲ್ಲಿ ಅನಕ್ಷರಸ್ಥರನ್ನು ಗುರುತಿಸಲು ಜನಗಣತಿ ಕಾರ್ಯ ಜರುಗಿತು. ಈ ಕಾರ್ಯದಲ್ಲಿ ನಾವು ಹಲವು ವಿದ್ಯಾರ್ಥಿಗಳು ಹಾಗೂ ಶಿಕ್ಷಕರೊಂದಿಗೆ ಭಾಗವಹಿಸಿದ ಅನುಭವದ ಹಿನ್ನೆಲೆಯಲ್ಲಿ ಒಂದೆರಡು ಮಾತುಗಳನ್ನು ಇಲ್ಲಿ ಹೇಳಲೇಬೇಕು. ಮಂಗಳೂರು ನಗರದಲ್ಲಿ ಬಹಳಷ್ಟು ಅನಕ್ಷರಸ್ಥರಿದ್ದಾರೆ ನಿಜ. ಅವರನ್ನು ಗುರುತಿಸಿ, ಪಾಠ ಹೇಳುವ ಕಾರ್ಯವನ್ನು ನಮ್ಮ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದರು. ಆದರೆ ಈ ಕಾರ್ಯದಲ್ಲಿ ನಮ್ಮ ಬಹುತೇಕ ಮುಸ್ಲಿಮ್ ತಾಯಂದಿರು ಭಾಗವಹಿಸಲು ನಿರಾಕರಿಸಿರುತ್ತಾರೆ. 'ಇನ್ನು

ಕಲಿತು ಏನಾಗಬೇಕಾಗಿದೆ '- ಎಂಬ ಅಭಿಪ್ರಾಯ ಅವರದು - ಇಲ್ಲಿ ಮುಖ್ಯವಾದೊಂದು ಅಂಶ ಅಡಕವಾಗಿದೆ. ನಮ್ಮ ಜನರು, ಮದರಸ ಹಾಗೂ ದರ್ಸ್ ಶಿಕ್ಷಣಕ್ಕೆ ಮಹತ್ವವನ್ನು ಕೊಡುತ್ತಿರುವಂತೆ, ನಮ್ಮ ಬದುಕಿನ ಶಿಕ್ಷಣಕ್ಕೆ ಗಮನಕೊಡದಿರುವುದು. ಒಂದು ಕಾಲದಲ್ಲಿ ಲೌಕಿಕ ಶಿಕ್ಷಣವು ಹರಾಮ್ (ನಿಷೇಧ) ಎಂಬುದಾಗಿ ಘೋಷಿಸಿದ ನಮ್ಮ ಧಾರ್ಮಿಕ ನಾಯಕರು ಹಾಗೂ ಇತರ ಪಟ್ಟಭದ್ರರು, ತಮ್ಮ ಸ್ವಾರ್ಥವನ್ನು ಸಾಧಿಸಿದರು. ಅಂದು ಬಿತ್ತಿದ ವಿಷಬೀಜ ಇಂದು ಕೂಡಾ ಮುಸ್ಲಿಮ್ ಹಿರಿಯರಲ್ಲಿ ದೊಡ್ಡ ಮರವಾಗಿ ಬೆಳೆಯುತ್ತಿದೆ. ಇದನ್ನು ಕೆಡವಿಹಾಕಲು ನಾವಿಂದು ಸಜ್ಜಾಗಬೇಕಾಗಿದೆ. ಬೆಂಗಳೂರು, ಉತ್ತರ ಕನ್ನಡ, ಧಾರವಾಡ, ಮೈಸೂರು ಮೊದಲಾದೆಡೆಗಳಲ್ಲಿ ಉರ್ದು ಮಾತೃಭಾಷೆಯಾಗಿ ರುವ ಮುಸ್ಲಿಮರೊಂದಿಗೆ ಮತ್ತು ಮಲಯಾಳಂ ಮಾತೃಭಾಷೆಯಾಗಿರುವ ಮಲಬಾರಿ ಮುಸ್ಲಿಮರೊಂದಿಗೆ, ಕರಾವಳಿ ಪ್ರದೇಶದ ಬ್ಯಾರಿಗಳನ್ನು ಹೋಲಿಸಿದರೆ, ಇಲ್ಲಿಯ ಮುಸ್ಲಿಮರ ಬೌದ್ಧಿಕ ಮಟ್ಟ ಬಹಳ ಮಟ್ಟಿಗೆ ಕುಸಿದಿದೆ. ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಪ್ರದೇಶವಾಗಿರುವ ಮಂಗಳೂರು ವ್ಯಾಪಾರಿ ಕೇಂದ್ರ ಕೂಡಾ. ಇಲ್ಲಿ ಏಳೆಂಟು ಭಾಷೆಗಳನ್ನಾಡುವ ಜನರಿದ್ದಾರೆ. ಇಲ್ಲಿಯ ಮುಸ್ಲಿಮರು ಹಲವು ಭಾಷೆಗಳಲ್ಲಿ ಪ್ರಭುತ್ವವನ್ನು ಪಡೆದಿರುತ್ತಾರೆ. ಅದೇ ರೀತಿ ಕೆಲವೇ ಜನ ಮುಸ್ಲಿಮರಲ್ಲಿ ಸಾಕಷ್ಟು ಸಂಪತ್ತು ಕೂಡಾ ಇದೆ. ಸರಕಾರಕ್ಕೆ ಅತ್ಯಂತ ಹೆಚ್ಚು ತೆರಿಗೆ ಪಾವತಿ ಮಾಡುವ ಪ್ರತಿಷ್ಠಿತ ಮುಸ್ಲಿಮರೂ ಮಂಗಳೂರಿನಲ್ಲಿದ್ದಾರೆ. ಆದರೂ ಮಂಗಳೂರಿನ ಮುಸ್ಲಿಮರು ಶಿಕ್ಷಣ ರಂಗದಲ್ಲಿ ತುಂಬಾ ಹಿಂದುಳಿದಿರುತ್ತಾರೆ. ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತತೆ, ಎರಡೂ ಅವಕಾಶಗಳನ್ನು ಪಡೆಯಬಹುದಾಗಿ ರುವ ದಕ್ಷಿಣ ಕನ್ನಡ ಜಿಲ್ಲಾ ಮುಸ್ಲಿಮರು ಶಿಕ್ಷಣ ರಂಗದಲ್ಲಿ ಕ್ರಾಂತಿಯನ್ನೇ ಮಾಡಬಹುದಾಗಿದೆ.

ದಕ್ಷಿಣ ಕನ್ನಡ ಜಿಲ್ಲೆ ಶಿಕ್ಷಣ ಕ್ಷೇತ್ರದಲ್ಲಿ ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿದೆ. ಇಲ್ಲಿ ವಿವಿಧ ಜಾತಿ, ಧರ್ಮ, ಭಾಷೆಯ ಜನರು ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸಿರುತ್ತಾರೆ. ಹಾಗೆಯೇ ವಸ್ತುನಿಷ್ಠವಾದ ಶಿಕ್ಷಣವನ್ನೂ ಕೊಡುತ್ತಿದ್ದಾರೆ. ಈ ನೆಲೆಯಲ್ಲಿ ಮಣಿಪಾಲದ ಪೈ ಕುಟುಂಬಿಕರು ಹಾಗೂ ಧರ್ಮಸ್ಥಳದ ಹೆಗಡೆಯವರು, ಇವರುಗಳ ಸಾಧನೆ ನಿಜಕ್ಕೂ ಶ್ಲಾಘನೀಯವಾದುದು. ಸರಕಾರದಿಂದ ದೊರಕುತ್ತಿರುವ ಅಲ್ಪಸಂಖ್ಯಾತತೆಯ ಸಕಲ ಸವಲತ್ತುಗಳೊಂದಿಗೆ, ಗಮನಾರ್ಹವಾದ ಸ್ವಪ್ರಯತ್ನ ಕೂಡಾ ನಡೆಯುತ್ತಿದೆ. ಇದೇ ರೀತಿ ಕಾಲೇಜು ಶಿಕ್ಷಣವನ್ನು ಕೊಡುತ್ತಿರುವ ಏಕಮಾತ್ರ ಮುಸ್ಲಿಮ್ ವಿದ್ಯಾ ಸಂಸ್ಥೆ - ಮುಸ್ಲಿಮ್ ಎಜ್ಯುಕೇಶನಲ್ ಎಸೋಸಿಯೇಶನ್, ಮಹತ್ವದ ಸಾಧನೆಯನ್ನು ನಿರ್ವಹಿಸುತ್ತಿರುವಲ್ಲಿ ಸಂಸ್ಥೆಯ ಅಧ್ಯಕ್ಷರಾಗಿರುವ ಬಿ. ಅಹ್ಮದ್ ಹಾಜಿ ಹಾಗೂ ಸಂಚಾಲಕರಾಗಿರುವ ಪ್ರೊಫೆಸರ್. ಪಿ.ಸಿ.ಎಂ. ಕುಂಞಯವರುಗಳ ಪಾತ್ರವನ್ನು ಗುರುತಿಸಬಹು

ದಾಗಿದೆ. ಆದರೂ, ಮುಸ್ಲಿಮ್ ಸಮುದಾಯಕ್ಕೆ ಸರಕಾರದಿಂದ ಸಂವಿಧಾನಾತ್ಮಕವಾಗಿ ಕೊಡಮಾಡಿರುವ ಸವಲತ್ತುಗಳು ಇಂದು ಕೂಡಾ ಸದರಿ ಸಂಸ್ಥೆಗೆ ದೊರಕುತ್ತಿಲ್ಲ. ಇದು ವಿಷಾದದ ಮಾತು. ಆದುದರಿಂದ, ಇತರ ಧಾರ್ಮಿಕ ಮತ್ತು ಭಾಷಾ ಅಲ್ಪ ಸಂಖ್ಯಾತರೊಂದಿಗೆ ಮುಸ್ಲಿಮ್ ಸಮುದಾಯವನ್ನು ಹೋಲಿಸಿದರೆ, ಮುಸ್ಲಿಮರ ಸಾಧನೆ ಏನೂ ಸಾಲದು.

ಇಂದು ನಮ್ಮ ಜಿಲ್ಲೆಯಲ್ಲಿ, ಕೆಲವು ಮಂದಿ ಮುಸ್ಲಿಮರು ಶಿಕ್ಷಿತರಾಗಿರುತ್ತಾರೆ. ಶಾಲಾ ಕಾಲೇಜು, ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಾಪಕರಿದ್ದಾರೆ. ಸರಕಾರಿ ಹಾಗೂ ಖಾಸಗಿ ವಲಯಗಳಲ್ಲಿ ವೈದ್ಯರು, ನ್ಯಾಯವಾದಿಗಳು, ಇಂಜಿನಿಯರುಗಳು - ಹೀಗೆ ವಿವಿಧ ರಂಗಗಳಲ್ಲಿ ಮುಸ್ಲಿಮ್ ಶಿಕ್ಷಿತರು ಇದ್ದಾರೆ. ಆದರೆ ಒಟ್ಟು ಸಮುದಾಯದ ಜನ ಸಂಖ್ಯೆಯೊಂದಿಗೆ ಹೋಲಿಸಿದರೆ, ಇದು ಬಹಳ ಕಮ್ಮಿಯಾಗಿರುತ್ತದೆ. ಕಡುಬಡವರಾಗಿರುವ ಬಹುತೇಕ ಮುಸ್ಲಿಮ್ ಜನರಿಗೆ ಶಿಕ್ಷಣ ದೊರಕಬೇಕಾಗಿದೆ. ಸಮುದಾಯದ ಪ್ರತಿ ಸದಸ್ಯನು ಕೂಡಾ ಶಿಕ್ಷಿತನಾಗಬೇಕು ಎಂದು ಪ್ರತಿಯೊಬ್ಬನ ಪ್ರತಿಜ್ಞಾ ವಾಕ್ಯವಾಗಬೇಕಾಗಿದೆ. ಆಗ ಮಾತ್ರ ಮುಸ್ಲಿಮ್ ಸಮುದಾಯದವರು ಇತರರೊಂದಿಗೆ ಆರೋಗ್ಯಕರವಾದ ಸ್ಪರ್ಧೆಯನ್ನು ಮಾಡಬಹುದು.

ಶಿಕ್ಷಣವೆಂದರೆ ಕೇವಲ ಪುಸ್ತಕದ ಬದನೆಕಾಯಿಯಾಗಬಾರದು. ಇದನ್ನು ಮೊದಲು ತಿಳಿಯಬೇಕಾದವರು ಮುಸ್ಲಿಮರು. ಕಲೆ, ಸಾಹಿತ್ಯ, ಸಂಸ್ಕೃತಿ, ವಿಜ್ಞಾನ, ಕ್ರೀಡೆ ಇವುಗಳೆಲ್ಲಾ ಶಿಕ್ಷಣದ ಮುಖ್ಯ ಅಂಗವಾಗಿರಬೇಕು. ಪುರಾಣಗಳ ಪಾತ್ರಗಳನ್ನು ಚಿತ್ರಗಳ ಮೂಲಕ ಪಠ್ಯಪುಸ್ತಕಗಳಲ್ಲಿ ಅಳವಡಿಸಿ, ಮುಗ್ಧ ಮಕ್ಕಳ ಎಳೆಯ ಮನಸ್ಸಿನಲ್ಲಿ ಇಲ್ಲ ಸಲ್ಲದ ಭಾವನೆಗಳನ್ನು ಮೂಡಿಸುವ ನಮ್ಮ ಶಿಕ್ಷಣ ಪದ್ಧತಿ ರದ್ದಾಗಬೇಕಾಗಿದೆ. ಪ್ರಕೃತಿ ದತ್ತವಾದ ಕಲೆ, ಸಾಹಿತ್ಯ, ಸಂಸ್ಕೃತಿ, ವಿಜ್ಞಾನ, ಕ್ರೀಡೆ - ಇವುಗಳಿಂದಾಗಿ ಶಿಕ್ಷಣ ವಸ್ತುನಿಷ್ಠವಾಗಿ, ಕ್ರಿಯಾಶೀಲವಾಗಬೇಕಾಗಿದೆ.

ಕಲೆ, ಸಾಹಿತ್ಯ, ಸಂಸ್ಕೃತಿ, ಭಾಷೆ - ಇವುಗಳ ಕುರಿತಾದ ಮಾತುಗಳು ಬಂದಾಗ, ಇಲ್ಲಿ ಮುಸ್ಲಿಮರ ನೆಲೆ ಬೆಲೆಯನ್ನು ಗುರುತಿಸಬೇಕಾಗಿದೆ. ನಮ್ಮ ಕರ್ನಾಟಕದಲ್ಲಿ ಬಹಳ ಮುಸ್ಲಿಮ್ ಸಾಹಿತಿಗಳಿದ್ದಾರೆ, ಕಲಾವಿದರಿದ್ದಾರೆ. ಆದರೆ, ಉದ್ದೇಶಿತ ಮೌಲ್ಯಗಳು ಪ್ರತಿಪಾದನೆಗೊಳ್ಳುತ್ತಿಲ್ಲ. ರಾಜ್ಯ ಸರಕಾರದ ಕೆಲವೊಂದು ಅಕಾಡೆಮಿಗಳು ಈ ನೆಲೆಯಲ್ಲಿ ಪ್ರಯತ್ನಿಸುವುದು ಸಾಲದು. ಕನ್ನಡ ಸಾಹಿತ್ಯ ಅಕಾಡೆಮಿ, ಉರ್ದು ಅಕಾಡೆಮಿ, ನಾಟಕ ಅಕಾಡೆಮಿ, ಯಕ್ಷಗಾನ ಅಕಾಡೆಮಿ - ಇವುಗಳಲ್ಲಿ ಮುಸ್ಲಿಮರ ಪಾತ್ರ ಜನಸಂಖ್ಯೆಗೆ ಹೋಲಿಸಿದರೆ, ಬಹಳ ಕಡಿಮೆ. ಸಮುದಾಯದಿಂದ ಒಬ್ಬ ಲೇಖಕ ಹೊರಬರುತ್ತಿರುವುದಕ್ಕೆ ಸಮುದಾಯದ ಪ್ರತಿಯೊಬ್ಬನೂ ಹೆಮ್ಮೆ ಪಡಬೇಕಾಗಿರುವ ಬದಲು, ಆತನನ್ನು ಧರ್ಮ ವಿರೋಧಿ ಎಂಬ ಪಟ್ಟಿಯೊಂದಿಗೆ ಗುರುತಿಸುತ್ತಿರುವುದು - ವಿರೋಧಾಭಾಸದ ಒಂದು

ಮುಖವಾದರೆ, ಸಮುದಾಯದ ಲೇಖಕನೊಬ್ಬಾತ, ಸಮುದಾಯದ ಸಾಂಸ್ಕೃತಿಕ ಬದುಕನ್ನು ತೆರೆದು ಇಡೀ ನಾಡಿಗೇ ತೋರಿಸುವುದರ ಬದಲು, ಆತನ ಸಮುದಾಯದ ಹುಳುಕುಗಳನ್ನು ಮಾತ್ರ ಗುರುತಿಸಲು ಪ್ರಯತ್ನಿಸುವುದು ಇನ್ನೊಂದು ವಿರೋಧಾಭಾಸವಾಗಿರುತ್ತದೆ. ಇಲ್ಲಿ ಮುಸ್ಲಿಮ್ ಜನಾಂಗ ಸಮಾಜದೊಂದಿಗೆ ಹೊಸ ಎಚ್ಚರದಿಂದ ಸ್ಪಂದಿಸಬೇಕಾಗಿದೆ.

ಇತರ ಸಮುದಾಯಗಳೊಂದಿಗೆ, ಮಾನವೀಯವಾಗಿ ಬೆರೆಯಲು ಮತ್ತು ಅವರಷ್ಟೇ ಪ್ರಗತಿಯನ್ನು ಸಾಧಿಸಲು ಮುಸ್ಲಿಮರು ಶಿಕ್ಷಿತರಾಗುವುದೊಂದೇ ದಾರಿ. ಬಹಳ ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವುದಾದರೆ, ಕರ್ನಾಟಕದ ಮುಸ್ಲಿಮರು ಶೈಕ್ಷಣಿಕ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರಿಗಿಂತ ಹಿಂದುಳಿದಿರುತ್ತಾರೆ. ಆದುದರಿಂದ, ಮುಸ್ಲಿಮರು ಶೈಕ್ಷಣಿಕ ಕ್ರಾಂತಿಗಾಗಿ ಸಜ್ಜಾಗಬೇಕಾಗಿದೆ. ಧಾರ್ಮಿಕ ಹಾಗೂ ಸಾಂಸ್ಕೃತಿಕ - ಇಸ್ಲಾಮೀ ಸಂಘ ಸಂಸ್ಥೆಗಳು ಇಲ್ಲಿ ದುಡಿಯಬೇಕಾಗಿದೆ. ಹಲವು ಹತ್ತು ಪಂಥ ಪಂಗಡಗಳನ್ನು ಮರೆತು ಪ್ರಾಮಾಣಿಕವಾಗಿ ಚಿಂತಿಸಬೇಕಾಗಿದೆ. ಕ್ಷೇತ್ರ ಕಾರ್ಯನಿಮಿತ್ತ ಕಳೆದ ವರ್ಷ ನಾನೊಂದು ಹಳ್ಳಿ ಪ್ರದೇಶಕ್ಕೆ ಹೋಗಿದ್ದೆ. ಅಲ್ಲಿ ಕಂಡ ಅನುಭವದ ವಿವರ ಈ ರೀತಿಯಲ್ಲಿದೆ.

| | |
|---|---|
| ಒಟ್ಟು ಜನಸಂಖ್ಯೆ - ಸುಮಾರು - | 13800 |
| ಮುಸ್ಲಿಮರ ಸಂಖ್ಯೆ - | 5000 |
| ಪ್ರಾಥಮಿಕ ಶಾಲೆ ಓದಿದ ಮುಸ್ಲಿಮರು | 200 |
| ಎಸ್.ಎಸ್.ಎಲ್.ಸಿ. ಓದಿದವರು | 25 |
| ಪದವಿ ಓದಿದವರು - | 10 |
| ಎಂ.ಬಿ.ಬಿ.ಎಸ್. - | 1 |
| ಸ್ನಾತಕೋತ್ತರ - | - |
| ಬ್ಯಾಂಕ್ ಉದ್ಯೋಗಿಗಳು - | 1 |
| ಸರಕಾರಿ ಉದ್ಯೋಗ ಪಡೆದವರು - | 1 |
| ಅರೆ ಸರಕಾರಿ ಉದ್ಯೋಗಿಗಳು - | 2 |
| ವಿದೇಶದಲ್ಲಿರುವವರು - | 1 |
| ಕೃಷಿ ಕುಟುಂಬದ ಸದಸ್ಯರು - | 200 |
| ವ್ಯಾಪಾರಿ ಕುಟುಂಬದವರು - | 300 |

ಉಳಿದವರೆಲ್ಲಾ ಕೂಲಿ ಕೆಲಸಗಾರರು ಮತ್ತು ಬೀಡಿ ಕಾರ್ಮಿಕರು. ಶೇಕಡಾ 95ರಷ್ಟು ಮಹಿಳೆಯರು ಅನಕ್ಷರಸ್ಥರು; ಒಟ್ಟಿನಲ್ಲಿ ಹೀಗೆ ಬದುಕುತ್ತಿದ್ದಾರೆ. ಇದೊಂದು ಪ್ರಾತಿನಿಧಿಕ ಉದಾಹರಣೆ ಅಷ್ಟೇ. ಜಿಲ್ಲೆಯ ಬಹುತೇಕ ಗ್ರಾಮಗಳ ಸ್ಥಿತಿ ಕೂಡಾ ಇದೇ ರೀತಿಯಾಗಿದೆ ಎಂದರೆ ಅಚ್ಚರಿ ಪಡಬೇಕಾಗಿಲ್ಲ. ಇದೇ ಕಾರಣಕ್ಕಿರಬಹುದು - ಭಾರತದ ಮುಸ್ಲಿಮರು ಇತರರ ಕಣ್ಣಿನಲ್ಲಿ ಎರಡನೆಯ ದರ್ಜೆಯ ನಾಗರಿಕರಾಗಿ ಬದುಕುತ್ತಿರುವುದು. ಮುಸ್ಲಿಮರನ್ನು

ಎರಡನೆಯ ದರ್ಜೆಯ ನಾಗರಿಕರನ್ನಾಗಿ ಕಾಣುತ್ತಿರುವ ಇತರರ ಕುರಿತು ಒಂದೆರಡು ಮಾತುಗಳು ಅಗತ್ಯ. ಮುಸ್ಲಿಮರು ಭಾರತದ ಪ್ರಜೆಗಳು. ಅವರಿಗೆ ಸಹ ಎಲ್ಲರಂತೆ ಬದುಕುವ ಹಕ್ಕಿದೆ. ಅದೇ ರೀತಿ ಭಾರತೀಯರಾಗಿ ನಿರ್ವಹಿಸಬೇಕಾಗಿರುವ ಕರ್ತವ್ಯಗಳಿವೆ. ಇಂದು ಮುಸ್ಲಿಮರಲ್ಲಿ ಶಿಕ್ಷಣ ಮತ್ತು ಆರ್ಥಿಕ ಸಂಪತ್ತು ಕಡಿಮೆಯಿರುವುದು ಸಹಜ. ಆದರೆ ರಾಷ್ಟ್ರೀಯ ಭಾವನೆ ಮಾನವೀಯ ಮನಸ್ಸು ಹಾಗೂ ಪ್ರೀತಿಯ ಸ್ಪಂದನ - ಇವುಗಳಿಗೆ ಕೊರತೆಯಿಲ್ಲ. ಇದನ್ನು ಪ್ರತಿಯೊಬ್ಬ ಭಾರತೀಯ ಪ್ರಜೆಯೂ ತಿಳಿಯಬೇಕಾಗಿದೆ.

ಮುಸ್ಲಿಮರು ಶಿಕ್ಷಿತರಾಗಲೇಬೇಕು. ಇದು ಸಮುದಾಯದ ಧ್ಯೇಯ ವಾಕ್ಯವಾಗಬೇಕಾಗಿದೆ. ವೈಯಕ್ತಿಕ ನೆಲೆಯಲ್ಲಿ ಒಂದೆರೆಡು ಸೂಚನೆಗಳನ್ನು ಗಮನಿಸೋಣ. ಜಿಲ್ಲಾ ಮಟ್ಟದಲ್ಲಿ ಅವಿದ್ಯಾವಂತ ಮುಸ್ಲಿಮರ ಜನಗಣತಿ ಮಾಡಬೇಕಾಗಿದೆ. ಈ ಕೆಲಸ ಪ್ರಾಮಾಣಿಕ ಮತ್ತು ವೈಜ್ಞಾನಿಕ ತಳಹದಿಯಲ್ಲಿ ನಡೆಯಬೇಕು. ಜಿಲ್ಲೆಯ ಶ್ರೀಮಂತ ಮುಸ್ಲಿಮರು, ರಾಜಕೀಯ ಮುಂದಾಳುಗಳು, ಶಿಕ್ಷಣತಜ್ಞರು, ಸಾಂಸ್ಕೃತಿಕ ಸಂಘ ಸಂಸ್ಥೆಗಳು - ಇಲ್ಲಿ ದುಡಿಯಬೇಕಾಗಿದೆ. ಧಾರ್ಮಿಕ ವ್ಯಕ್ತಿಗಳು ಹಾಗೂ ಸಂಸ್ಥೆಗಳು ಸ್ವಾರ್ಥವನ್ನು ತೊರೆದು, ಸಮುದಾಯದ ಜನರ ಲೌಕಿಕ ಶಿಕ್ಷಣದತ್ತ ಒಲವು ತೋರಿಸಬೇಕಾಗಿದೆ. ಸರಕಾರ ಅಥವಾ ಸಾಂಸ್ಕೃತಿಕ ಸಂಸ್ಥೆಗಳು ಸಾರ್ವತ್ರಿಕ ಶಿಕ್ಷಣದ ಕುರಿತು ಕಡ್ಡಾಯವಾದ ಕಾನೂನನ್ನು ವಿಧಿಸುವುದರೊಂದಿಗೆ, ಧಾರ್ಮಿಕ ನೇತಾರರು ಶಿಕ್ಷಣದ ಕುರಿತು ಬಿಚ್ಚು ಮನಸ್ಸಿನಲ್ಲಿ ಒಲವು ತೋರಿಸುವುದು ಮಹತ್ವದ ಬೆಳವಣಿಗೆಯಾಗಬಹುದು.

ಮುಸ್ಲಿಮ್ ಸಮುದಾಯದ ಮನೋಭೂಮಿಕ ಶಿಕ್ಷಣಕ್ಕಾಗಿ ತಯಾರಾಗಿ ನಿಂತಾಗ ನಾಯಕರು ನಿರ್ವಹಿಸಬೇಕಾದ ಕೆಲವೊಂದು ಕಾರ್ಯಗಳನ್ನು ಅವಲೋಕಿಸೋಣ. ನಾಡಿನ ಮುಸ್ಲಿಮ್ ಜನರಿಗೆ ಕಡ್ಡಾಯ ಶಿಕ್ಷಣವನ್ನೊದಗಿಸಬೇಕು. ಕೇಂದ್ರ ಹಾಗೂ ರಾಜ್ಯ ಸರಕಾರಗಳಿಂದ ಸಂವಿಧಾನಾತ್ಮಕವಾಗಿ ಲಭ್ಯವಿರುವ ಅವಕಾಶಗಳನ್ನು ಪೂರ್ಣ ಪ್ರಮಾಣದಲ್ಲಿ ಬಡ ಮುಸ್ಲಿಮರಿಗೊದಗಿಸಬೇಕು. ಸರಕಾರಗಳ ಸವಲತ್ತುಗಳು ಮಾತ್ರ ಸಾಕಾಗಲಾರದು - ಅಂತಹ ಸಂದರ್ಭಗಳಲ್ಲಿ ಶ್ರೀಮಂತ ಮುಸ್ಲಿಮರು, ಪ್ರತಿ ಹಳ್ಳಿಯಲ್ಲಿ ಒಂದಾದರೂ ಶಾಲೆಯನ್ನು ತೆರೆಯಲು ಪ್ರಯತ್ನಿಸಬೇಕು. ಆಗ ಶಿಕ್ಷಿತ ಮುಸ್ಲಿಮ್ ಯುವಕರು ಪ್ರತಿಫಲಾಪೇಕ್ಷೆ ರಹಿತವಾದ ಪ್ರಾಮಾಣಿಕ ಸೇವೆಗೆ ತಯಾರಿರಬೇಕಾಗುತ್ತದೆ. ಶ್ರೀಮಂತ ಮುಸ್ಲಿಮರ ಆರ್ಥಿಕ ಸಂಪನ್ಮೂಲ ಹಾಗೂ ಶಿಕ್ಷಿತ ಮುಸ್ಲಿಮರ ಮಾನವ ಸಂಪನ್ಮೂಲ - ಇವುಗಳಿಂದಾಗಿ, ಸಮುದಾಯದ ಪ್ರತಿಯೊಬ್ಬ ಮುಸ್ಲಿಮನೂ ಶಿಕ್ಷಿತನಾಗುತ್ತಾನೆ. ಸ್ತ್ರೀ ವಿದ್ಯಾಭ್ಯಾಸ ಇಂದು ಅನಿವಾರ್ಯವಾದ ಅಂಶವಾಗಿರುತ್ತದೆ. ಸ್ತ್ರೀ ಶಿಕ್ಷಣದ ಕುರಿತಾದ ಎರಡನೆಯ ದರ್ಜೆಯ ನೋಟ ಮುಸ್ಲಿಮ್ ಸಮುದಾಯದಿಂದ ಮಾಯವಾಗಬೇಕು. ಒಬ್ಬಾಕೆ ಸ್ತ್ರೀ ಶಿಕ್ಷಿತಳಾದರೆ ಒಂದು ಸಮುದಾಯ ಶಿಕ್ಷಿತವಾದಂತೆ ಎಂಬ ಮಾತಿನ

ಮಹತ್ವವನ್ನು ಮುಸ್ಲಿಮ್ ಸಮುದಾಯ ಕೂಡಲೇ ಅರಿಯಬೇಕಾಗಿರುವ ಅನಿವಾರ್ಯತೆಯಿದೆ.

ಕಳೆದ ಅವಿದ್ಯೆಯ ದಿನಗಳನ್ನು ಮರೆತು, ಬರುವ ನಾಳೆಗಳಿಗಾಗಿ ಯುದ್ಧೋಪಾದಿಯಲ್ಲಿ ತಯಾರಾಗಬೇಕು. ಶಿಕ್ಷಣದಿಂದಾಗಿ ಬದುಕು ಎಂಬ ಧ್ಯೇಯ ನಮ್ಮದಾಗಬೇಕು. ನಾಡಿನ ಮುಸ್ಲಿಮರು ಶಿಕ್ಷಿತರಾದರೆ, ಸರಕಾರಿ ಮತ್ತು ಖಾಸಗಿ ರಂಗಗಳಲ್ಲಿ ಅವರು ದುಡಿಯುವುದು ಸಾಧ್ಯವಾಗುತ್ತದೆ. ಆ ದುಡಿಮೆಯಿಂದಾಗಿ ಅವರು ಪ್ರಬುದ್ಧರಾಗುತ್ತಾರೆ, ಎಚ್ಚರಗೊಳ್ಳುತ್ತಾರೆ. ಎಚ್ಚೆತ್ತ ಮುಸ್ಲಿಮರು ರಾಷ್ಟ್ರೀಯ ವಾಹಿನಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಮುಸ್ಲಿಮರಿಗೆ ಇತರರ ಕರುಣೆ, ಸಹಾನುಭೂತಿ ಬೇಕಾಗಿಲ್ಲ. ಅವರಿಗೆ ಬೇಕಾಗಿರುವುದು - ವಸ್ತುನಿಷ್ಠವಾದ ಪ್ರಾಮಾಣಿಕ ಶಿಕ್ಷಣವನ್ನು ಪಡೆಯುವ ಅವಕಾಶಗಳು. ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಲು, ಸ್ವಾರ್ಥರಹಿತವಾದ ಮಾರ್ಗದರ್ಶನ. ಮುಂದಿನ ದಿನಗಳಲ್ಲಿ ಇವುಗಳು ದೊರಕುವಂತಾಗಬೇಕು. ಆಗ ಮಾತ್ರ ಮುಸ್ಲಿಮರು ಪ್ರೀತಿಯಿಂದ, ಸೌಜನ್ಯದಿಂದ, ನೆಮ್ಮದಿಯಿಂದ ಬದುಕಲು ಸಾಧ್ಯವಾಗಬಹುದು.

— — — — — —

● ಇಸ್ಮಾಕ್ ಅಗ್ನಾಡಿ
ಕನ್ನಡ ವಿಭಾಗ,
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳ ಗಂಗೋತ್ರಿ, ಮಂಗಳೂರು ದ.ಕ. 574199.

# ಶಿಕ್ಷಣ-ಕೆಲವು ಸಾಂಸ್ಕೃತಿಕ ಅಪಕಲ್ಪನೆಗಳು

'ವಿದ್ಯಾವಂತರು ಅಪಾಯಕಾರಿಗಳು' - ಭಾರತೀಯ ಸಂದರ್ಭದಲ್ಲಿ ಅಕ್ಷರ ಸಂಸ್ಕೃತಿಯ ಮಂದಿ ಅನಕ್ಷರ ಸಂಸ್ಕೃತಿಯ ಮೇಲೆ ನಡೆಸುವ ದೌರ್ಜನ್ಯವನ್ನು ಲಕ್ಷಿಸಿದರೆ ಬಹುಶಃ ಇದು ಹೆಚ್ಚು ಅರ್ಥಪೂರ್ಣ ಹೇಳಿಕೆಯಾಗುವುದು. ಮುಸ್ಲಿಮ್ ಸಮಾಜದೊಳಗಿನ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಬಹು ಸಂಸ್ಕೃತಿಯ ಈ ನಾಡಿನಲ್ಲಿ ಮುಸ್ಲಿಮ್ ಜನಾಂಗ ಇನ್ನೂ ಶೈಕ್ಷಣಿಕವಾಗಿ ಒಂದು ಸ್ಥಾನವನ್ನು ಪಡೆದಿಲ್ಲ. ಅಜ್ಞಾನ, ಅನಕ್ಷರತೆ, ಬಡತನ, ನಿರುದ್ಯೋಗ ಮೊದಲಾದ ಸಮಸ್ಯೆಗಳು ಹೆಚ್ಚಾಗಿ ಈ ವರ್ಗಕ್ಕೇ ಹೆಚ್ಚು ಅನ್ವಯವಾದಂತಿವೆ.

ಕಾಲಾನುಕಾಲದ ಈ ಸ್ಥಿರ ಅಸ್ತಿತ್ವಕ್ಕೆ ಆಂತರಿಕ ಹಾಗೂ ಬಾಹ್ಯ ಒತ್ತಡ, ನಿರ್ಬಂಧ, ಸಂಕುಚಿತತೆಗಳು ಕಾರಣವಾಗಿರಬಹುದು. ಆಧುನಿಕ ಶಿಕ್ಷಣದ ಪ್ರಯೋಜನ ಪಡೆಯುವಲ್ಲಿ ಈ ವರ್ಗ ಸೋತಿದೆ ಎನ್ನುವುದಕ್ಕಿಂತಲೂ ಶಿಕ್ಷಣವನ್ನು ಪಡೆಯಲು ಪ್ರಯತ್ನಿಸಿಯೇ ಇಲ್ಲ ಎನ್ನುವಂತಾಗಿದೆ. ಇದರ ಹಿನ್ನೆಲೆಯ ಕುರಿತು ಯೋಚಿಸಿದಾಗ ಶಿಕ್ಷಣಕ್ಕೆ ಹತ್ತಿರವಾಗುವ ಅಥವಾ ದೂರವಾಗುವ ಇಂದಿನ ಮುಸ್ಲಿಮ್ ಸಮಾಜದ ಮನಸ್ಥಿತಿಯ ಬಗ್ಗೆ ಜಿಜ್ಞಾಸೆ ಮೂಡುತ್ತದೆ. ಶಿಕ್ಷಣದ ಕುರಿತಾದ ಇವರ ದೃಷ್ಟಿಕೋನ ಹೇಗೆ ಪ್ರಗತಿಯ ಬಾಗಿಲುಗಳ ಶಾಶ್ವತ ಮುಚ್ಚಲ್ಪಟ್ಟ ಸ್ಥಿತಿಯನ್ನು ಕಾಯ್ದುಕೊಳ್ಳುತ್ತದೆಯೆಂಬ ಅರಿವು ಉಂಟಾಗುತ್ತದೆ. ಸಾಂಸ್ಕೃತಿಕ ಪ್ರತ್ಯೇಕತೆಯೂ ಹೇಗೆ ಬಾಹ್ಯ ಕುಮ್ಮಕ್ಕುಗಳನ್ನು ಜೀವಂತವಾಗಿರಿಸುತ್ತವೆ ಎಂಬುದರ ಬಗ್ಗೆಯೂ ಇಲ್ಲಿ ಗಮನ ಹರಿಸಲಾಗಿದೆ.

ಶಿಕ್ಷಣವು ಉಳ್ಳವರ ಪಾಲಾಗುತ್ತಿದೆ ಎಂಬುದು ಈಗೀಗ ಕೇಳುತ್ತಿರುವ ಒಂದು

ಮಾತು. ಇಂದಿನ ಶಿಕ್ಷಣ ಕ್ರಮ ಸಾಕಷ್ಟು ವ್ಯಾಪಾರಿ ಕೌಶಲ್ಯ, ರಾಜಕೀಯ ಬುದ್ಧಿಮತ್ತೆ, ಭಾರವಾದ ಹಣದ ಗಂಟು ಇವನ್ನು ಬಯಸುವುದಂತೂ ನಿಜ. ಇದು ಒಟ್ಟು ವ್ಯವಸ್ಥೆಯ ಕುರಿತಾಗಿ ಇರುವ ಆರೋಪ.

ಶೈಕ್ಷಣಿಕ ರಂಗದಲ್ಲಿ ಮುಸ್ಲಿಮರ ಹಿನ್ನಡೆಯ ಕುರಿತು ವಿವೇಚಿಸುವ ಮೊದಲು ಶಿಕ್ಷಣ ಎಂಬುದು ಈ ಸಮಾಜದಲ್ಲಿ ಹೇಗೆ ಪರಿಗಣಿತವಾಗಿದೆ ಎಂಬುದನ್ನು ಸ್ಥೂಲವಾಗಿ ನೋಡಬೇಕಾಗುತ್ತದೆ. ಮುಖ್ಯವಾಗಿ ಧಾರ್ಮಿಕ ಮತ್ತು ಭೌತಿಕ ನೋಟಗಳೆರಡರಲ್ಲಿ ಈ ಅಸಮತೋಲನ ಅಡಗಿದೆ. ಆಧ್ಯಾತ್ಮಿಕ ಶಿಕ್ಷಣ ಮತ್ತು ಲೌಕಿಕ ಶಿಕ್ಷಣ ಈ ಎರಡು ಕೋನಗಳ ಹಿಂದಿನ ಕಣ್ಣುಗಳು ಪರಸ್ಪರ ನೇರವಾಗಿ ಕೀಲಿಸಿಕೊಳ್ಳದಿರುವುದು ಇಲ್ಲಿ ಗಮನಿಸಬೇಕಾದ ಅಂಶ. ಈ ಎರಡು ವಿಭಿನ್ನ ದೃಷ್ಟಿಗಳು ಒಂದಕ್ಕೊಂದು ವಿರುದ್ಧ ಗತಿಯಲ್ಲಿ ಸಾಗುವುದರ ಪರಿಣಾಮ ಶಿಕ್ಷಣದಲ್ಲಿ ಸಂತೃಪ್ತತೆ ಸಾಧ್ಯವಾಗದಿರುವುದು.

ಇಲ್ಲಿ ನಾನು ಧಾರ್ಮಿಕ ಅಥವಾ ಆಧ್ಯಾತ್ಮಿಕ, ಭೌತಿಕ ಅಥವಾ ಲೌಕಿಕ ಎಂಬ ಪದಗಳ ಅರ್ಥಗಳ ಹಿನ್ನೆಲೆಯಲ್ಲಿ ಚರ್ಚಿಸುತ್ತಿಲ್ಲ. ಧಾರ್ಮಿಕ ಎಂದು ನೀಡಲಾಗುವ ಶಿಕ್ಷಣದಲ್ಲಿ ಲೌಕಿಕ ವಿಚಾರಗಳು ಅಡಕವಾಗಿರಬಹುದು. ವ್ಯಕ್ತಿ ಆಚಾರಗಳ ಕುರಿತಾಗಿ, ಸಂಸ್ಕಾರಯುತ ನಡವಳಿಕೆಗಳ ಕುರಿತಾಗಿ ವಿವರಗಳನ್ನೊಳಗೊಂಡಿರಬಹುದು. ಹಾಗೆಯೇ ಭೌತಿಕ ಎನ್ನುವ ಶಿಕ್ಷಣದಲ್ಲೂ ವಿಚಾರಪೂರ್ಣ ಆಲೋಚನೆಗಳಿರಬಹುದು; ಇಲ್ಲಿ ಪಾರಮಾರ್ಥಿಕತೆ ಕಡೆಗೆ ಏಕಮುಖ ನಿರ್ದೇಶನವಿರದೆ ಸ್ವಾತಂತ್ರ್ಯಯುಕ್ತವಾದ ವಿಮರ್ಶೆಯಿರುತ್ತದೆ.

ಧಾರ್ಮಿಕವೇ ಇರಲಿ ಭೌತಿಕವೇ ಇರಲಿ ಎರಡೂ ವಿಧ ಶಿಕ್ಷಣದಿಂದ ಬೌದ್ಧಿಕ ಬೆಳವಣಿಗೆ, ವಿಚಾರ ಶೀಲತೆ ಆಯಾಮಟ್ಟದಲ್ಲಿ ಸಾಧಿತವಾಗುತ್ತವೆ ಎಂಬುದು ನಿಜ ಸಂಗತಿ. ಆದ್ದರಿಂದ ಈ ಎರಡೂ ನೆಲೆಯಲ್ಲಿ ಕಂಡುಬರುವ ಆರೋಗ್ಯಪೂರ್ಣತೆಯನ್ನು ಪಕ್ಷಪಾತವಿಲ್ಲದೆ ನೋಡುವ ದೃಷ್ಟಿ ನಮಗಿರಬೇಕಾಗುತ್ತದೆ. ಹಾಗಾದಾಗ ಮಾತ್ರ, ನಾವು ನಿರೀಕ್ಷಿಸುವ ಶಿಕ್ಷಣಕ್ಕೆ ಉತ್ತೇಜನಕಾರಿ ವಲಯವನ್ನು ಕಾಯ್ದುಕೊಂಡಂತಾಗುತ್ತದೆ.

ಶಿಕ್ಷಣದ ಕುರಿತು ಈಗೀಗ ಯೋಚಿಸತೊಡಗಿರುವ ನಾವು ಮುಸ್ಲಿಮ್ ಸಮಾಜದ ಮೂಲಭೂತ ಕೊರತೆಯನ್ನು ಗಮನಿಸಬೇಕು. ಅದು - ಈ ಸಮಾಜ ತಾನೇ ಒಂದು ವಲಯ ನಿರ್ಮಿಸಿಕೊಂಡು ಅದರೊಳಗೆ ಇದ್ದು ಬಿಡಬಯಸುವುದು. ಈ ಒಂದು ಬದ್ಧ ಸ್ಥಿತಿ ಶಿಕ್ಷಣ ಎಂತಲ್ಲ; ಎಲ್ಲಾ ಸಾಮಾಜಿಕ ಪ್ರಗತಿಗೂ ಮಾರಕವಾದುದು. ಅತ್ಯಂತ ಸ್ವತಂತ್ರ ಮತ್ತು ಮುಕ್ತವಾತಾವರಣವನ್ನು ಶಿಕ್ಷಣವು ಬಯಸುವುದರಿಂದ ಪರಿಮಿತಿಯೊಳಗೆ ವ್ಯವಹರಿಸಲಿಚ್ಛಿಸುವ ಸಮುದಾಯಕ್ಕೆ ಎಟಕಲಾರದಾಗುತ್ತದೆ. ಸಾಮಾಜಿಕ ಬೆರೆಯುವಿಕೆಗೆ ತಡೆಯಾಗುವ ಈ ಆವರಣಕ್ಕೆ ದಾರಿ ಕೊರೆಯುವ ಪ್ರಾಥಮಿಕ ಕಾರ್ಯವಿಂದು

ನಡೆಯಬೇಕಾಗಿದೆ.

ಸ್ತ್ರೀ ಶಿಕ್ಷಣಕ್ಕೆ ನೀಡಲಾಗುವ ಅಪ್ರಾಮುಖ್ಯತೆಯನ್ನು ನಾನು ಅತಿಮುಖ್ಯ ಎಡವಟ್ಟು ಎಂದು ಭಾವಿಸುತ್ತೇನೆ. ಇದನ್ನು ಶಾಸ್ತ್ರಬದ್ಧವಾಗಿ ತಡೆಯಲಾಗುತ್ತಿದೆ ಎಂದು ನನ್ನ ಆಕ್ಷೇಪವಲ್ಲ. ಒಂದಂತೂ ಸತ್ಯ. ಸ್ತ್ರೀ ಶಿಕ್ಷಣಕ್ಕೆ ಪ್ರಾಮುಖ್ಯತೆ ಕೊಡುತ್ತಿಲ್ಲ ಎಂಬುದು. ಮುಸ್ಲಿಮ್ ಹುಡುಗಿಯರು ಹೈಸ್ಕೂಲು ಮೆಟ್ಟಿಲು ಹತ್ತುವುದನ್ನು ಅತ್ಯಂತ ಜಾಗರೂಕತೆಯಿಂದ ತಡೆಯಲಾಗುತ್ತದೆ. ಮುಖ್ಯವಾಗಿ ಶಾಫಿ ಪಂಗಡ ಈ ಕಟ್ಟುಬದ್ಧತೆಯನ್ನು ಶ್ರದ್ಧೆಯಿಂದ ಪಾಲಿಸುತ್ತದೆ. ಸಮಾಧಾನದ ಸಂಗತಿಯೆಂದರೆ ಹನಫಿ ಗುಂಪಿನಲ್ಲಿ ಹುಡುಗಿಯರಿಗೆ ಹೆಚ್ಚು ಕಡಿಮೆ ಪುರುಷ ಸಮಾನವಾಗಿ ವಿದ್ಯಾಭ್ಯಾಸ ಪಡೆಯಲು ಅವಕಾಶ ಕಲ್ಪಿಸಲಾಗುತ್ತದೆ. ಪುರುಷ ವಿದ್ಯೆಗಿಂತ ಒಬ್ಬಳು ವಿದ್ಯಾವಂತ ಮಹಿಳೆ ಪ್ರಧಾನವಾಗುಳ್ಳ ಕುಟುಂಬದ ರಚನೆ ಎಷ್ಟು ಆರೋಗ್ಯಪೂರ್ಣವಾದುದು ಎಂಬುದನ್ನು ಮನಗಂಡರೆ ಸ್ತ್ರೀ ಶಿಕ್ಷಣದ ಮಹತ್ವ ಅರಿವಾಗುವುದು.

ಪ್ರಸ್ತುತ ನಿಶ್ಚಲ ಸಮಾಜ ರೂಪಿಸಿದ ಹೆಣ್ಣು ಗಂಡುಗಳ ವಿದ್ಯಾಭ್ಯಾಸ ಕುರಿತಾದ ದೃಷ್ಟಿಕೋನ, ಒಲವು ವಿರೋಧಗಳು ಒಂದು ಕೌಟುಂಬಿಕ ವ್ಯವಸ್ಥೆಯಲ್ಲಿ ಮಗುವಿನ ಶಿಕ್ಷಣದ ವೇಳೆ ಅನಿಶ್ಚಿತತೆ ತರುತ್ತದೆ. ಗಂಡ ತೋರಿಸುವ ಒಲವು, ಹೆಂಡತಿ ಮಾಡುವ ವಿರೋಧ ಸಂಘರ್ಷಕ್ಕೆ ನಾಂದಿಯಾಗಿ ಓಂದಿದ್ದ ಶಿಕ್ಷಣ ಸಾಧ್ಯತೆಯನ್ನು ಕಡಿಮೆಗೊಳಿಸಬಹುದು. ಆದ್ದರಿಂದ ಒಂದು ಕುಟುಂಬದ ಮಕ್ಕಳಿಗೆ ಶಿಕ್ಷಣದ ಅವಕಾಶ ಪ್ರಾಪ್ತವಾಗಲು ತಂದೆ ಮತ್ತು ತಾಯಿಯ ಸಮಾನ ಧೋರಣೆಯ ಸಹಕಾರ ಬೇಕು.

ಮಗ ಅಥವಾ ಮಗಳಿಗೆ ವಿದ್ಯಾರ್ಥಿ ಸ್ಥಾನ ನೀಡಲು ಹುಡುಗ - ಹುಡುಗಿ ಭೇದವೇ ಮಾನದಂಡವಾದಾಗ ಪರಂಪರಾಗತ ಪಕ್ಷಪಾತೀತನ ಮುಂದುವರಿಸಿದಂತಾಗುತ್ತದೆ. ಮಕ್ಕಳ ಪ್ರೌಢ ಹಂತದಲ್ಲಿ ಮನೆಯ ಹೊರಗಿನ ನಡವಳಿಕೆಗೆ ಸಮಾಜದ ಸಾಮಾನ್ಯ ಕಟ್ಟಳೆಗಳು ಅನ್ವಯವಾಗುವಂತಿದ್ದರೆ ಸಾಕಾಗುತ್ತದೆ. ಉಳಿದಂತೆ ಪ್ರಕೃತಿದತ್ತ ತಿಳಿವಳಿಕೆ ವರ್ತನೆಯನ್ನು ನಿರ್ಧರಿಸುತ್ತದೆ. ಆದರೆ ಇಂದು ಈ ವಲಯದಲ್ಲಿ ಹೆಣೆಯಲ್ಪಟ್ಟ ಸಾಂಪ್ರದಾಯಿಕ ವಿಧಿಗಳು 'ಒಬ್ಬನ' ವ್ಯಕ್ತಿತ್ವವನ್ನು ಎತ್ತರಿಸುವಂತಿದ್ದರೆ 'ಒಬ್ಬಳ' ದ್ದನ್ನು ಮುರುಟಿಸುವಂತಿವೆ. ಕಟ್ಟುಬದ್ಧತೆಗಳ ನಿಯಮಿತ ಪಾಲನೆ ಸಾಮಾಜಿಕ ಜೀವನದಲ್ಲಿ ಪ್ರತ್ಯೇಕತೆ ತರುತ್ತದೆ; ಮುಕ್ತ ಬೆರೆಯುವಿಕೆಗೆ ತಡೆಯೊಡ್ಡುತ್ತವೆ. ಶಾಲೆಯೆಂಬ ವ್ಯವಸ್ಥೆಯಲ್ಲಂತೂ ಇದು ಅನಾಥ ಭಾವನೆಗೆ ಎಡೆ ನೀಡಿ ಶಾಲೆಗಿಂತ ಮನೆಯ ಬದುಕಿನೆಡೆಗೆ ಎಳೆಯಲ್ಪಡುತ್ತದೆ.

ಸಾಂಪ್ರದಾಯಿಕ ನೆಲೆ ಮುಸ್ಲಿಮರಿಗೆ ಖಾಯಂ ಆಗಿರಲು ಮತ್ತು ಸಾಮಾಜಿಕ ಬೆರೆಯುವಿಕೆ ಸಾಧ್ಯವಾಗದಿರಲು ಆಂತರಿಕ ದೋಷಗಳು ಮಾತ್ರ ಕಾರಣವಾಗಿರದೆ ಬಾಹ್ಯ

ವಿಷಮತೆಗಳು ಕಾರಣವಾಗಿರಬಹುದು. ಮನೆಮೆಟ್ಟಿಲು ಇಳಿಯುವಲ್ಲಿಂದ ಮೊದಲ್ಗೊಂಡು ಮನೆ ಸೇರುವ ತನಕ ಕ್ಷುದ್ರ ನೋಟಗಳಿಗೆ ಒಳಗಾಗಬೇಕಾದ ಸನ್ನಿವೇಶ ಇಂದು ಇದೆ. ಬೀದಿ, ಪಟ್ಟಣ, ಶಾಲೆ, ಮೈದಾನಗಳಲ್ಲಿ ಈ ಅನುಭವ ಎದುರಾಗುತ್ತದೆ. ತರಗತಿಯ ಕೋಣೆಯೊಳಗೇ ಇತಿಹಾಸದ ವಿಕೃತ ಪಾಠ ಬೋಧಿಸಲ್ಪಡುತ್ತದೆ. ಮಧ್ಯಯುಗದ ಮುಸ್ಲಿಮರ ಆಳ್ವಿಕೆಯನ್ನು ಪರಕೀಯರ ಆಳ್ವಿಕೆ ಎನ್ನಲಾಗುತ್ತದೆ. ಆದ್ದರಿಂದ ಇಂದಿಗೂ ಮುಸ್ಲಿಮರನ್ನು 'ಪರಕೀಯತೆ' ಯ ಲೇಬಲ್‌ನೊಂದಿಗೆಯೇ ಗುರುತಿಸಲಾಗುತ್ತದೆ.

ರಾಷ್ಟ್ರೀಯತಾವಾದಿ ಇತಿಹಾಸಕಾರರು ರಚಿಸಿದ ಭಾರತದ ಕಥೆ ಎಷ್ಟು ನಿರ್ಧರಿತ ಫಲ ನೀಡುತ್ತಿದೆಯೆಂದರೆ ಗಜ್ನಿ ಮಹಮ್ಮದ್ ದೇವಾಲಯ ಲೂಟಿಗೈದುದು ಧಾರ್ಮಿಕ ಕಾರಣಕ್ಕಾಗಿಯೇ ಎಂಬರ್ಥವನ್ನು ತಲೆಕೊರೆದು ತುರುಕಿಸುತ್ತಿದೆ. ಪ್ರತಿಷ್ಠೆಯ ಗಳಿಕೆ, ಸಂಪತ್ತು ಸಂಗ್ರಹಣೆಯ ಉದ್ದೇಶ ಅಂದಿನದು ಎಂಬ ಸತ್ಯ ಗೌಣವಾಗಿದೆ. ಇಲ್ಲಿ ಈ ಪ್ರಸ್ತಾಪ ಇತಿಹಾಸದ ಹುಳುಕುಗಳನ್ನು ತೋರಿಸುವುದಕ್ಕಾಗಿ ಅಲ್ಲ. ಇತಿಹಾಸ ಓದುವವರ ಹಾಗೂ ವಿದ್ಯಾರ್ಥಿಗಳ ಮೇಲೆ ಇದುಂಟು ಮಾಡುವ ಕೆಟ್ಟ ಪರಿಣಾಮ ತಾರತಮ್ಯ ಭಾವನೆಗಳನ್ನು ಹೇಗೆ ಪೋಷಿಸುತ್ತವೆ ಎಂಬುದರತ್ತ ಗಮನ ಹರಿಸುವುದು ಇಲ್ಲಿಯ ಉದ್ದೇಶ.

ಒಂದು ಜನಾಂಗಕ್ಕೆ ಶಾಶ್ವತ ಕೊಳಕನ್ನು ಅಂಟಿಸುವಲ್ಲಿ ಸಮಾಜದ ಕೆಟ್ಟದೃಷ್ಟಿ ಹೇಗೆ ಕೆಲಸ ಮಾಡುತ್ತದೆಂಬುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಎಂದೋ ನಡೆದ ಅಪ್ರಿಯ ಘಟನೆಗಳು ಒಂದು ಸಮುದಾಯಕ್ಕೆ ಸೇರಿದವರಿಂದ ನಡೆದದ್ದಿದ್ದರೆ ಕಾಲಕಾಲಕ್ಕೂ ಆ ಸಮುದಾಯವನ್ನು ಆ ಕೃತ್ಯಗಳಿಗೆ ಜವಾಬ್ದಾರರನ್ನಾಗಿಸುವುದು; ಪೂರ್ವಜರ ದೋಷಗಳನ್ನು ಮುಂದಿನ ಪರಂಪರೆಗೆ ಶಾಶ್ವತವಾಗಿ ತಗಲಿಸಿ ಬಿಡುವುದು ಇಲ್ಲಿಯ ಜಾಯಮಾನ. ಒಂದು ಸಮಾಜ ವ್ಯವಸ್ಥೆಯಲ್ಲಿ ಸಾಮೂಹಿಕತೆಯನ್ನು ಛಿದ್ರಗೊಳಿಸಲು ಮತ್ತು ಪ್ರತ್ಯೇಕತೆಯನ್ನು ಸೃಷ್ಟಿಸಲು ಅನುಕೂಲಕರ ದುರುದ್ದೇಶ ಪೂರಿತ ಮನಸ್ಥಿತಿ ಇದು. ಮುಸ್ಲಿಮ್ ಜನಾಂಗದ ಮೇಲೆ ಅಂಟಿಸಿದ ಕೊಳೆ ಇಂದಿರಾಗಾಂಧಿ ಹತ್ಯೆ ಸಂದರ್ಭದಲ್ಲಿ ಇಡೀ ಸಿಖ್ ಜನತೆ ಮೇಲೆ ಸೇಡಿನ ಭಾವ ತೋರ್ಪಡಿಸಿದ್ದಕ್ಕಿಂತ ಭಿನ್ನವಾದ ಸಂಗತಿಯಲ್ಲ.

ಬಾಹ್ಯ ತಡೆಗಳೇನಿದ್ದರೂ ಪರಿಹಾರಾತ್ಮಕ ಗುಣಗಳುಳ್ಳವು. ಆದರೆ ಮುಸ್ಲಿಮ್ ಸಂಸ್ಕೃತಿಯ ಒಳಗಡೆ ಇರುವ ಭ್ರಮಾತ್ಮಕ ನಿರ್ಬಂಧಗಳು, ಸಾಂಪ್ರದಾಯಿಕ ಕಟ್ಟುಪಾಡುಗಳು, ಜಿಗುಟುತನ - ಇವನ್ನು ದೂರವಾಗಿಸುವ ಕನಸು ಸುಲಭದಲ್ಲಿ ಸಾಧಿತವಾಗದು.

ಪರಿಸರ, ಸಾಮಾಜಿಕ ಆಗುಹೋಗುಗಳು, ರಾಜಕೀಯ ವಿದ್ಯಮಾನಗಳು, ಆಡಳಿತ ಕಲ್ಪನೆ, ಸರಕಾರದ ವ್ಯವಸ್ಥೆ - ಮುಂತಾದುವುಗಳನ್ನು ಅರಿತರಷ್ಟೇ ಶಿಕ್ಷಣ ಕ್ಷೇತ್ರದಲ್ಲಿ ಸುಗಮ ವ್ಯವಹಾರ ಸಾಧ್ಯವಾಗುವುದು ಎಂಬುದನ್ನು ಮೊದಲು ಅರಿತುಕೊಳ್ಳಬೇಕು.

ಇಲ್ಲಿ ಒಂದು ಪ್ರಶ್ನೆ ಸಹಜವಾಗಿ ಏಳುವುದು- '' ಮೂಲದಲ್ಲೇ ಈ ಪ್ರಜ್ಞೆ, ಪರಿಜ್ಞಾನ ಬರಲು ಶಿಕ್ಷಣವಿದ್ದಿರಬೇಕಲ್ಲವೇ? '' ಎಂಬುದು. ಆದರೆ ರಾಜಕೀಯ ತಿಳಿಯಲು ರಾಜಕೀಯ ಶಾಸ್ತ್ರವನ್ನೋ, ಆರ್ಥಿಕತೆ ತಿಳಿಯಲು ಅರ್ಥಶಾಸ್ತ್ರವನ್ನೋ ಓದಿರಬೇಕೆಂಬುದಿಲ್ಲ ಎನ್ನುವುದಕ್ಕೆ ಪ್ರಸ್ತುತ ಸಾಮಾಜಿಕ ಸನ್ನಿವೇಶವೇ ಸಾಕ್ಷಿ.

ಅಕ್ಷರವಿಲ್ಲದವರು ಕೇವಲ ಅನಕ್ಷರಸ್ಥರು ಮಾತ್ರ. ಬುದ್ಧಿ ಶೂನ್ಯರಲ್ಲ. ವಿವೇಕ ಹೀನರಲ್ಲ. ದುಡಿದುಣ್ಣುವ ಎಲ್ಲರೂ ವಿದ್ಯಾವಂತರೆ. ತರಗತಿ ಶಿಕ್ಷಣ ಎಟಕಿಲ್ಲವೆಂಬ ಕಾರಣಕ್ಕೆ ತಮ್ಮ ಮುಂದಿನ ಪೀಳಿಗೆಯನ್ನು ಶಿಕ್ಷಣ ಕ್ರಮಕ್ಕೆ ಒಳಪಡಿಸುವ, ಜ್ಞಾನಕೇಂದ್ರಗಳಲ್ಲಿ ಪಳಗಿಸುವ ಬೌದ್ಧಿಕ ಸಾಮರ್ಥ್ಯ, ಅರಿವು ಇಲ್ಲದವರೆಂದು ಭಾವಿಸಬೇಕಾಗಿಲ್ಲ. ಸಮೂಹ ಮಾಧ್ಯಮಗಳು ಇಂಥ ವರ್ಗಕ್ಕೆ ಅವಕಾಶಗಳನ್ನು ಪರಿಚಯಿಸುವ, ವಿಸ್ತರಿಸುವ ಯಾವತ್ತೂ ಸಾಧ್ಯತೆಗಳನ್ನು ಒದಗಿಸುತ್ತಿವೆ. ಈಗಿರುವ ಕನಿಷ್ಟ ತೊಡಕು ಶಿಕ್ಷಣದ ಕುರಿತು ಖಚಿತ ನಿಲುವು ಇಲ್ಲದೇ ಇರುವುದು. ಈಗಾಗಲೇ ವಿದ್ಯಾವಂತರಾದವರು, ಯುವ ಶಿಕ್ಷಿತರು ಈ ಪ್ರಚೋದಕ ವರ್ಗದಲ್ಲಿ ಅರಿವು ಜಾಗೃತಿ ಮೂಡಿಸಬೇಕಾದ ಅಗತ್ಯವಿದೆ. ಸಂಘಟನೆ ಮತ್ತು ಮಾರ್ಗದರ್ಶನದಿಂದ ಈ ಪ್ರಯತ್ನ ಸಾಗಬೇಕಾಗಿದೆ. ಒಮ್ಮೆ ಈ ಅವಶ್ಯಕತೆಯು ಅನಿವಾರ್ಯವೆಂಬ ಅರಿವು ಮೂಡಿತಾದರೆ ಪೂರಕ ಬೇಡಿಕೆಗಳು ತಾನೇ ತಾನಾಗಿ ಈಡೇರುವುದು.

ಪ್ರಾದೇಶಿಕವಾಗಿ ನೋಡುವುದಾದರೆ ದಕ್ಷಿಣ ಕನ್ನಡದ ಮುಸ್ಲಿಮರು ಮಕ್ಕಳಿಗೆ ಶಿಕ್ಷಣ ನೀಡುವ ವಿಚಾರದಲ್ಲಿ ತುಂಬಾ ಸಡಿಲಧೋರಣೆ ತಳೆದವರು. ಈ ಕುರಿತಾದ ಅವರ ನಿರ್ಲಕ್ಷ್ಯ ಮಕ್ಕಳಿಗೆ ಗತಿ ಕಾಣಿಸುತ್ತದೆ. ಒಟ್ಟು ಕಾರಣಗಳ ಕುರಿತು ಯೋಚಿಸಿದಾಗ ಈ ವರ್ಗದಲ್ಲಿರುವ 'ತೀರಾ ಭಾವುಕವಾದ ಧಾರ್ಮಿಕತೆ' ಜನರ ವಿಚಾರಶೀಲ ಮನೋಭಾವಕ್ಕೆ ಕಡಿವಾಣ ಹಾಕಿದೆ ಎಂದು ಕಾಣುತ್ತದೆ. ಹೀಗೆ ವ್ಯಕ್ತಿತ್ವ ಮೂಡುತ್ತದೆ ಮತ್ತು ಸಮಾಜದಲ್ಲಿ ಜನಾಂಗದ ಸ್ಥಾನ ನಿರ್ಧಾರವಾಗುತ್ತವೆ.

ಈ ಪ್ರದೇಶದ ಮುಸ್ಲಿಮ್ ಮುಖಂಡರು, ಮದ್ರಸಾಗಳಲ್ಲಿ ಕಲಿಸುವ ಶಿಕ್ಷಕರು, ಇವರನ್ನು ನೋಡಿಕೊಳ್ಳುವ ಆಡಳಿತ ವರ್ಗ ಎಲ್ಲರೂ ಬಹುತೇಕ ಸಂಪ್ರದಾಯ ಶರಣರು. ಆದರೆ ಇವರು ಶಾಲಾ ಶಿಕ್ಷಣಕ್ಕೆ ಸಮಾನ ಗೌರವ, ಪ್ರೋತ್ಸಾಹ ನೀಡುವವರೂ ಆಗಿದ್ದರೆ ಚೆನ್ನ. ಬದಲಾಗಿ ಆ ವಿಭಾಗವೇ ಜನತೆಯನ್ನು ನಿರ್ಲಕ್ಷಿಸಿದರೆ ಹೇಗೆ ?

ಮಕ್ಕಳು ಚಿಕ್ಕಂದಿನಲ್ಲಿ ಮದ್ರಸಾಗಳಲ್ಲಿ ಪಡೆಯುವ ಅನುಭವವೊಂದಿದೆ. ಇಲ್ಲಿ ಶಿಕ್ಷಕರದು ಪ್ರಧಾನ ಪಾತ್ರ. ಶಾಲಾ ಶಿಕ್ಷಣವನ್ನು ತಮ್ಮದಕ್ಕೆ ಹೋಲಿಸಿ, ಧಾರ್ಮಿಕ ಲೌಕಿಕ ಸಂಬಂಧಗಳನ್ನು ತಾಳೆ ನೋಡಿ ಶಾಲೆ ಬೇರೆಯವರಿಗೆ ಇರುವಂಥದ್ದು, ನಮಗೆ ಸಂಬಂಧಿಸದ್ದು ಎಂಬ ಭಾವನೆ ಮೂಡಿಸುವುದು. ಆರಂಭದಲ್ಲಿ ಮಕ್ಕಳ ಈ ಬ್ರೈನ್‌ವಾಷ್ ಕೆಲಸ ಸದ್ದಿಲ್ಲದೆ ಹಲವೆಡೆ ನಡೆಯುವುದು ಸಾಮಾನ್ಯ. ಶಾಲಾ ಶಿಕ್ಷಣದ ಬಗ್ಗೆ ಮಕ್ಕಳಿಗೆ

ಇರಬಹುದಾದ ಒಲವು ಶಿಥಿಲವಾಗುತ್ತಾ ಬರುವುದು ಹೀಗೆ. ಕೊನೆಗೆ ಅಶಿಕ್ಷಿತ ತಂದೆ ತಾಯಿಗಳ ಸ್ಥಾನವೇ ಮಕ್ಕಳಿಗೂ ಖಾಯಂ ಆಗುತ್ತದೆ.

ಇತ್ತ ಮದ್ರಸಾ ಶಿಕ್ಷಣ ಕೂಡಾ ಮಕ್ಕಳನ್ನು ಮುಂದೆ ಸ್ವತಂತ್ರ ಆಲೋಚನೆಗೆ ಹಚ್ಚುವಷ್ಟು ವ್ಯವಸ್ಥಿತವಾಗಿಲ್ಲ. ಮುಖ್ಯವಾಗಿ ಈ ವಿದ್ಯಾಭ್ಯಾಸ ವ್ಯವಸ್ಥೆಯ ನಿರ್ವಹಣೆ, ನಿಯಂತ್ರಣಕ್ಕೆ ನಮ್ಮ ರಾಜ್ಯದಲ್ಲೇ ಸಮರ್ಥವಾದ ಸ್ಥಳೀಯ ಶಿಕ್ಷಣ ಕೇಂದ್ರ ಇಲ್ಲ. ಈ ವರೆಗೆ 'ಸಮಸ್ತ ಕೇರಳ ವಿದ್ಯಾಭ್ಯಾಸ ಬೋರ್ಡ್' ಆದೇಶದನ್ವಯ ಸಾಗಿದೆ ಈ ವ್ಯವಸ್ಥೆ.

ಮಾಧ್ಯಮವೂ ಅಷ್ಟೆ. ಮದ್ರಸಾಗಳಲ್ಲಿ ಕೇರಳ ಮಲಯಾಳಂ ಭಾಷೆಯೇ ಮಾಧ್ಯಮವಾಗಿದೆ. ಪಠ್ಯಪುಸ್ತಕಗಳ ಲಿಪಿ ಅರೆಬಿಕ್ ಆಗಿದ್ದರೆ ಬಳಸುವ ಭಾಷೆ ಮಲಯಾಳಂ. ಇಲ್ಲಿಯ ಆಡು ಭಾಷೆಯಾದ ಬ್ಯಾರಿ ಭಾಷೆಗೆ ಮದ್ರಸಾದ ಒಳಗಡೆ ಸ್ಥಾನವೇ ಇಲ್ಲ. ಸ್ಥಳೀಯ ಭಾಷೆಯ ಅರಿವಿರುವ ಇದೇ ಪ್ರದೇಶದ ಶಿಕ್ಷಕರೂ ಕೂಡಾ ಮಕ್ಕಳಲ್ಲಿ ಮಲಯಾಳಂ ಬಿಟ್ಟು ವ್ಯವಹರಿಸುವುದಿಲ್ಲ. ಪ್ರಾದೇಶಿಕ ಭಾಷೆಯಾದ ಕನ್ನಡ ಜನರಿಗೆ ತಿಳಿದಿರಬೇಕು, ಮಕ್ಕಳಿಗೆ ಕಲಿಸಬೇಕು ಎಂಬ ಬೋಧವೇ ಆಡಳಿತ ಮಂಡಳಿಯವರಿಗೆ ಇಲ್ಲ. ಮದ್ರಸಾಗಳಲ್ಲಿ ಕನ್ನಡ ಭಾಷೆ ಬಳಕೆ ಬಗ್ಗೆ ಇತ್ತೀಚೆಗೆ ಪತ್ರಿಕೆಗಳಲ್ಲಿ ಜನದನಿ ಕಾಣಿಸಿಕೊಂಡಾಗ ಏನೋ ಅಪ್ರಿಯವಾದದ್ದನ್ನು ಕಾಣುತ್ತಿದ್ದೇವೆ. ಕೇಳಬಾರದ್ದನ್ನು ಕೇಳುತ್ತಿದ್ದೇವೆ ಎಂಬಂತೆ ಜನರ ಪ್ರತಿಕ್ರಿಯೆ ಕಂಡು ಬಂತು. ಇಲ್ಲಿ ವ್ಯಕ್ತವಾಗುವ ಅಂಶ, ಯಾವತ್ತೂ ಪರಂಪರಾಗತ ಪಾತ್ರವನ್ನು ಎತ್ತರಿಸಿಕೊಳ್ಳಲು ಸಹಾಯಕವಾಗುವ ಸಲಹೆಗಳನ್ನುಕಡಿಮೆ ಪಕ್ಷ ಕೇಳಿಸಿಕೊಳ್ಳುವ ಸಹನೆಯೂ ಇಲ್ಲದವರು ಹೇಗೆ ಹೊಸ ವಿದ್ಯಾಭ್ಯಾಸದ ಕಡೆಗೆ ಗಮನಹರಿಸಿಯಾರು? ಮತ್ತು ಮಕ್ಕಳನ್ನು ಅದರತ್ತ ಮುಖಮಾಡಿಸಿ ಯಾರು? ಭಾಷೆಯ ಕುರಿತಾದ ಮಡಿವಂತಿಕೆ, ಮಲಯಾಳಂ ಅರೆಬಿಕ್ ಅಲ್ಲದವು ಅಪವಿತ್ರವೆಂದು ಭಾವಿಸುವುದು ಎಂದರೆ ನನ್ನ ದೃಷ್ಟಿಯಲ್ಲಿ ಬದ್ಧ ಸ್ಥಿತಿಯನ್ನು ಕಾಯ್ದುಕೊಳ್ಳುವುದು; ಹೊರ ಜಗತ್ತನ್ನು ಕೂಪದೊಳಗೇ ಸೀಮಿತಗೊಳಿಸುವುದು.

ಧರ್ಮ ಹಾಗೂ ಶಿಕ್ಷಣ ಸಂಬಂಧೀ ಶೋಷಣೆಗಳು ಪ್ರತೀ ವರ್ಗದಲ್ಲೂ ಕಾಣಿಸುವಂಥದ್ದೇ. ಮುಸ್ಲಿಮ್ ಸಂಸ್ಕೃತಿಯಲ್ಲೂ ಈ ಆಂತರಿಕ ಶೋಷಣೆ ಕೆಟ್ಟ ಪರಿಣಾಮವನ್ನು ಬೀರುತ್ತಿದೆ. ಧಾರ್ಮಿಕವಾಗಿ ಶಿಕ್ಷಣ ಪಡೆದ ವರ್ಗ ಅಶಿಕ್ಷಿತ, ಮುಗ್ಧ ಜನರ ಭಾವನೆಗಳಿಗೆ ಸೊಪ್ಪು ಹಾಕಿ ತಮ್ಮ ಕೆಲಸ ಸಾಧಿಸಿಕೊಳ್ಳುವುದು ಈ ದೌರ್ಜನ್ಯದ ಸ್ವರೂಪ. ಇಂದು ನಡೆಯುತ್ತಿರುವ ಬಹುತೇಕ ಧಾರ್ಮಿಕ ಪ್ರವಚನ ಕಾರ್ಯಕ್ರಮಗಳಲ್ಲಿ ಕಂಡುಕೊಳ್ಳಬಹುದಾದ ಅಂಶವಿದು. ಹೆತ್ತವರಿಗೆ ಪ್ರಿಯವಾಗುವ ಧಾರ್ಮಿಕ ಶಿಕ್ಷಣಕ್ಕೆ ವಿಶೇಷ ಒಲವು ತೋರಿಸುವುದು ಮತ್ತು ಕಾಲೇಜು ಶಿಕ್ಷಣಕ್ಕೆ ವಿರೋಧ ಸೂಚಿಸುವುದು.

- ಈ ರೀತಿಯ ವಾಕ್ಪ್ರವಾಹದ ಹಿಂದಿನ ಉದ್ದೇಶ ಪ್ರಶಂಸೆ, ಪ್ರತಿಷ್ಠೆ, ಗೌರವಧನ ನಿರೀಕ್ಷಿಸುವುದು.

ಬಹುತೇಕ ಮತ ಪ್ರವಚನ ಕಾರ್ಯಕ್ರಮಗಳು, ಧಾರ್ಮಿಕ ಸಮಾವೇಶಗಳು ಸುಧಾರಿತ ಜೀವನಕ್ರಮಗಳ ಕುರಿತಾದ ಮಾಹಿತಿಗಳನ್ನಾಗಲೀ, ಪ್ರಸ್ತುತ ಸಮಸ್ಯೆಗಳ ಸನ್ನಿವೇಶಗಳ ಪರಿಹಾರಕ್ಕೆ ಸೂಚನೆಗಳನ್ನಾಗಲೀ ನೀಡುವುದಿಲ್ಲ. ಬದಲಾಗಿ ಶತಮಾನಗಳ ಹಿಂದೆ ನಡೆದುಹೋದ ಧರ್ಮರಕ್ಷಣೆ ಕಾರ್ಯ, ಹುತಾತ್ಮರ ಭಕ್ತಿಗಾಥೆ, ಹೋರಾಟದ ರೋಚಕ ಕಥೆಗಳನ್ನು ಹೇಳಿ ಕೇಳುಗರನ್ನು ತಲೆದೂಗಿಸಿ ಮುಂದಿನ ಕಾರ್ಯಕ್ರಮಕ್ಕೆ ತನ್ನದೇ ದೀರ್ಘ ಉಪನ್ಯಾಸ ನಿಗದಿಗೆ ಪರೋಕ್ಷ ಪ್ರೇರಣೆ ನೀಡುತ್ತಾರೆ. ಸಂಪಾದನೆಯಿಂದ ಸಂತೃಪ್ತಿಗೊಳ್ಳದ ಜನರಿವರು. ದುವಾ, ಆಶೀರ್ವಾದ ನಿರೀಕ್ಷೆಯ ಕೊಡುಗೈ ಗಂಟು ತಮ್ಮದಾಗಿಸಿಕೊಳ್ಳಲು ಮುಖವಾಡಗಳ ಹಿಂದೆ ಮುಖ ಮುಚ್ಚುವ ಮಂದಿ.

ಧರ್ಮದೊಳಗಡೆ ನಡೆಯುವ ಆಂತರಿಕ ಶೋಷಣೆಯ ಒಂದು ಮುಖ ಇದಾದರೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಒಟ್ಟು ಇರುವಿಕೆಯನ್ನೇ ಪ್ರಶ್ನೆ ಮಾಡುವ ಕಾಲ ಇದು. ರಾಜಕೀಯದ ನೆಪದಲ್ಲಿ ಈ ಪ್ರವೃತ್ತಿ ಒಂದು ಆಂದೋಲನ ರೂಪದಲ್ಲಿ ನಮ್ಮ ಮುಂದಿದೆ. ಸಾಂವಿಧಾನಿಕವಾಗಿ ಸ್ಥಾನವಿರದ ವಕ್ರದೃಷ್ಟಿಗೆ ಪ್ರತಿದೃಷ್ಟಿ ಹಾಯಿಸದೆ, ಪ್ರತಿಭಟನೆ ಮೂಲಕ ಶಕ್ತಿ ವ್ಯಯಿಸದೆ ಮೂಲಭೂತವಾಗಿ ಅವಶ್ಯವಿರುವ ಬೌದ್ಧಿಕ ಸಾಧನೆಗಾಗಿ, ಶೈಕ್ಷಣಿಕ ಹಕ್ಕುಗಳಿಗಾಗಿ ಹೋರಾಟ ನಡೆಸಬೇಕು. ಲಭ್ಯವಿರುವ ಅನುಕೂಲಗಳನ್ನು ಸದುಪಯೋಗಿಸಿಕೊಂಡು ಶೈಕ್ಷಣಿಕ ಪ್ರಗತಿ ಸಾಧಿಸುವುದರೊಂದಿಗೆ ಸಾಮಾಜಿಕ ಸ್ಥಾನ ಎತ್ತರಿಸಿಕೊಳ್ಳಬಹುದು.

ಎಟಕಿದಷ್ಟರಲ್ಲೇ ಕೈಯಾಡಿಸಿ ದಕ್ಕಿಸಿಕೊಳ್ಳುತ್ತಾ ಸಾಧಿಸಿಯೇವೆನ್ನುವುದು ಅವಿವೇಕತನ. ಸಾಂಸ್ಕೃತಿಕ ಭೇದವೇ ಹೊರ ಜಗತ್ತನ್ನು ಅಪರಿಚಿತಗೊಳಿಸುವಂತಿದ್ದರೆ ಯಾವತ್ತೂ ಸೌಲಭ್ಯಗಳು ನಿಲುಕಲಾರದಾಗುತ್ತವೆ. ಶಿಕ್ಷಣ ನಿರೀಕ್ಷೆಯ ಆಕಾಂಕ್ಷೆಯ ಸಂದರ್ಭದಲ್ಲಂತೂ ಗಹನವಾಗಿ ಗ್ರಹಿಸಬೇಕಾದ ಸಂಗತಿಯಿದು.

— — — — — —

● ಡಾ. ಪುರುಷೋತ್ತಮ ಬಿಳಿಮಲೆ
ಕನ್ನಡ ಉಪನ್ಯಾಸಕ,
ಮಂಗಳೂರು ವಿಶ್ವ ವಿದ್ಯಾನಿಲಯ,
ಮಂಗಳ ಗಂಗೋತ್ರಿ, 575 199 (ದ.ಕ.).

# ಭಾರತೀಯ ಶಿಕ್ಷಣ ಪದ್ಧತಿ ಮತ್ತು ಮುಸ್ಲಿಮರು

ಭಾರತೀಯ ವಿದ್ಯಾಭ್ಯಾಸ ಪದ್ಧತಿಯು ಮೂಲತಃ ಧಾರ್ಮಿಕವಾದುದು. ಈ ಶಿಕ್ಷಣ ಪದ್ಧತಿಯು ಮಾನವನ ಗುರಿಯನ್ನು ಆತ್ಮಜ್ಞಾನ ಅಥವಾ ಮೋಕ್ಷ ಸಾಧನೆಯತ್ತ ನಿರ್ದಿಷ್ಟಗೊಳಿಸುತ್ತದೆ. ವಿದ್ಯಾಭ್ಯಾಸ ಎನ್ನುವುದು ಈ ಆತ್ಮಜ್ಞಾನವನ್ನು ಪಡೆಯಲು ಒಂದು ಸಾಧನ ಅಷ್ಟೆ. ಹಾಗಾಗಿಯೇ ಇಲ್ಲಿ 'ಪರಾವಿದ್ಯೆ'ಯ ಬಗೆಗೆ ಒಲವು - ಅಭಿಮಾನ ಹೆಚ್ಚು. ಛಾಂದೋಗ್ಯ ಉಪನಿಷತ್ತಿನಲ್ಲಿ ತಂದೆಯೊಬ್ಬನು ಮಗನನ್ನು ಹೀಗೆ ಪ್ರಶ್ನಿಸುತ್ತಾನೆ - ''ಮನುಷ್ಯರು ಹುಟ್ಟುವ ಬಗೆ ಯಾವುದು? ಸಾವಿನ ಬಳಿಕ ಅವರೆಲ್ಲಿಗೆ ಹೋಗುತ್ತಾರೆ? ಇದು ತಿಳಿಯದಿದ್ದರೆ ನೀನು ವಿದ್ಯೆ ಕಲಿತು ಏನು ಪ್ರಯೋಜನ?'' ಕಠೋಪನಿಷತ್ತಿನ ಪ್ರಖ್ಯಾತವಾದ ನಚಿಕೇತನ ಉಪಾಖ್ಯಾನದಲ್ಲಿ ಯಮನು ನಚಿಕೇತನಿಗೆ ಲೌಕಿಕವಾದ ಅನೇಕ ಆಸೆಗಳನ್ನು ತೋರಿಸುತ್ತಾನೆ ಮತ್ತು ಕೊನೆಗೆ ಹೇಳುತ್ತಾನೆ - ''ಎರಡು ಮಾರ್ಗಗಳಿವೆ. ಒಂದು ಶ್ರೇಯೋಮಾರ್ಗ, ಮತ್ತೊಂದು ಪ್ರೇಯೋಮಾರ್ಗ. ಶ್ರೇಯಸ್ಸನ್ನು ವಿವೇಕಿಗಳು ಬಯಸುತ್ತಾರೆ. ಮೂರ್ಖರು ಪ್ರೇಯಸ್ಸನ್ನು ಬಯಸುತ್ತಾರೆ''. ಹಿಂದೆ ಹೇಳಿದ ಪರಾ ವಿದ್ಯೆಯ ಫಲ ಶ್ರೇಯಸ್ಸು. ಲೌಕಿಕ ಜ್ಞಾನವನ್ನು ವಿವರಿಸುವ ಅಪರಾ ವಿದ್ಯೆಯ ಪರಿಣಾಮ ಪ್ರೇಯಸ್ಸು - ಅದನ್ನು ಮೂರ್ಖರು ಮಾತ್ರ ಬಯಸುತ್ತಾರೆ.

ಈ ಹಿನ್ನೆಲೆಯಲ್ಲಿ ವಿದ್ಯಾದಾನವು ನಡೆಯುತ್ತಿದ್ದ ಸ್ಥಳಗಳೆಂದರೆ-

(1) ಅಗ್ರಹಾರ

(2) ದೇವಸ್ಥಾನ ಅಥವಾ ಮಠ

(3) ಬ್ರಹ್ಮಪುರಿ ಮತ್ತು

(4) ಘಟಿಕಾ ಸ್ಥಾನ

ಇದರಲ್ಲಿ ಅಗ್ರಹಾರಗಳು ಬ್ರಾಹ್ಮಣರ ಒಡೆತನಕ್ಕೆ ಸೇರಿತ್ತು. ಬ್ರಹ್ಮಪುರಿಗಳು ಪಟ್ಟಣಗಳ ಭಾಗವಾಗಿದ್ದು ಅಲ್ಲಿ ಬ್ರಾಹ್ಮಣರೇ ವಾಸಿಸುತ್ತಿದ್ದರು. ದೇವಸ್ಥಾನ ಮತ್ತು ಮಠಗಳ ಒಡೆತನವೂ ಅವರಿಗೇ ಸೇರಿತ್ತು. ಘಟಿಕಾ ಸ್ಥಾನಗಳಲ್ಲಿ ವಿದ್ಯೆಯ ಪ್ರಶಸ್ತಿ ಪ್ರದಾನ ನಡೆಯುತ್ತಿದ್ದು ಅದರಲ್ಲಿಯೂ ಬ್ರಾಹ್ಮಣರೇ ವಾಸಿಸುತ್ತಿದ್ದರು. ಅಂದ ಮೇಲೆ ಪ್ರಾಚೀನ ಭಾರತೀಯ ವಿದ್ಯಾ ಕೇಂದ್ರಗಳ ಒಡೆತನ ಪೂರ್ಣವಾಗಿ ಬ್ರಾಹ್ಮಣರಿಗೇ ಸೇರಿತ್ತೆಂಬುದು ಸ್ಪಷ್ಟ. ಇದಕ್ಕೆ ಇನ್ನಷ್ಟು ಆಧಾರಗಳು ಬೇಕಾದರೆ ಆ ಕಾಲದಲ್ಲಿ ಹೇಳಿಕೊಡುತ್ತಿದ್ದ ಪಾಠಗಳನ್ನು ಗಮನಿಸಬೇಕು.

**ಪ್ರಾಥಮಿಕ ವಿದ್ಯಾಭ್ಯಾಸ:** ಸುಮಾರು 5ನೇ ವರ್ಷದಲ್ಲಿ ವಿದ್ಯಾಭ್ಯಾಸವನ್ನು ಆರಂಭಿಸುತ್ತಿದ್ದರು. ಒಳ್ಳೆಯ ಮುಹೂರ್ತದಲ್ಲಿ 'ಓಂ ನಮಃ ಸಿದ್ಧಂ' ಎಂದು ಅಕ್ಷರ ಸ್ವೀಕರಣ ವಿಧಿಯನ್ನು ನೆರವೇರಿಸಲಾಗುತ್ತಿತ್ತು. ಆದರೆ ನಿಜವಾದ ವಿದ್ಯಾಭ್ಯಾಸವು ವಿದ್ಯಾರ್ಥಿಯ ಉಪನಯನದ ಅನಂತರವೇ ಆರಂಭವಾಗುತ್ತಿತ್ತು. ಆ ಕಾಲದಲ್ಲಿ ಮುಖ್ಯವಾಗಿ 'ಋಗ್ವೇದ ಬಾಲ ಶಿಕ್ಷೆ' ಎಂಬುದನ್ನು ಹೇಳಿಕೊಡಲಾಗುತ್ತಿತ್ತು.

**ಪ್ರೌಢ ವಿದ್ಯಾಭ್ಯಾಸ :** ಪ್ರೌಢ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಲು 'ಭಟ್ಟ ವೃತ್ತಿ' ಗಳಿದ್ದರು. ಆ ಭಟ್ಟ ವೃತ್ತಿಗಳು ಯಾರಾಗಿರಬೇಕೆಂದರೆ-

1. ಸಾಮವೇದಿಯ ಮಗನಾಗಿರಬೇಕು.
2. ಅದೇ ಊರಿನವನಾಗಿರಕೂಡದು.
3. ಎರಡು ವೇದಗಳನ್ನು ಓದಿದವನಾಗಿರಬೇಕು.
4. ಅಷ್ಟಾಧ್ಯಾಯಿಯನ್ನೂ, ಅಲಂಕಾರ ಶಾಸ್ತ್ರವನ್ನೂ ಬೋಧಿಸಲು ಸಮರ್ಥನಿರಬೇಕು.
5. ಇಪ್ಪತ್ತು ಅಧ್ಯಾಯಗಳ ಮೀಮಾಂಸ ಶಾಸ್ತ್ರವನ್ನು ಬೋಧಿಸುವಂತಿರಬೇಕು - ಇತ್ಯಾದಿ.

ಇದನ್ನು ಗಮನಿಸಿದರೆ ಪ್ರೌಢವಿದ್ಯಾಭ್ಯಾಸದ ಪಠ್ಯ ವಿಷಯ ಎಂತಹದು ಇದ್ದಿರಬೇಕು ಎಂಬುದು ತಾನೇ ತಾನಾಗಿ ಖಚಿತವಾಗುತ್ತದೆ.

**ಅಧ್ಯಯನ ವಿಷಯಗಳು:** ವಿದ್ಯಾಭ್ಯಾಸದ ಸ್ವರೂಪವೇ 'ಪರಾ' ಆಗಿರುವುದರಿಂದ ಅದಕ್ಕೆ ಪೂರಕವಾದ ವಿಷಯಗಳನ್ನೇ ಕಲಿಸಲಾಗುತ್ತಿತ್ತು. ಅಧ್ಯಯನ ವಿಷಯದಲ್ಲಿ ವೇದಾಧ್ಯಯನಕ್ಕೆ ಪ್ರಾಶಸ್ತ್ಯ ನೀಡಲಾಗುತ್ತಿತ್ತು. ಅದರಲ್ಲಿ ವೇದಗಳು, ವೇದಾಂಗಗಳು ಮತ್ತು ವೇದದ

ಉಪಾಂಗಗಳು ಸೇರಿದ್ದವು. ಜೊತೆಗೆ ಪಾಣಿನಿಯ ವ್ಯಾಕರಣ, ತರ್ಕ, ಜ್ಯೋತಿಷ, ಪುರಾಣ, ಕಾವ್ಯ, ಸ್ಮೃತಿಗಳು, ಷಡ್ದರ್ಶನಗಳು - ಇವೂ ಅಧ್ಯಯನ ವಿಷಯವಾಗಿದ್ದವು. ಲೌಕಿಕ ಜಗತ್ತಿಗೆ ಸಂಬಂಧಿಸಿದ ವಿಷಯಗಳ ಮೇಲೆ ಚರ್ಚೆಗಳೇ ನಡೆಯುತ್ತಿರಲಿಲ್ಲ.

**ಮಹಿಳೆಯರ ವಿದ್ಯಾಭ್ಯಾಸ:** ಕ್ವಚಿತ್ತಾಗಿ ಕೆಲವು ವಿದ್ಯಾವಂತ ಮಹಿಳೆಯರ ಹೆಸರು ಸಿಗುವುದು ಹೌದಾದರೂ ಒಟ್ಟಿನಲ್ಲಿ ಮಹಿಳೆಯರಿಗೆ ವಿದ್ಯೆ ನೀಡಲಾಗುತ್ತಿರಲಿಲ್ಲ. ಸ್ತ್ರೀಯರು ಓದುಕಲಿತ ಯಾವ ಗುರುಕುಲದ ಬಗ್ಗೆಯೂ ಉಲ್ಲೇಖಗಳಿಲ್ಲ. ಹುಡುಗಿಯು ಎಂಟು ಅಥವಾ ಹನ್ನೆರಡನೆಯ ವಯಸ್ಸಿನಲ್ಲಿ ಮದುವೆ ಮಾಡಿಕೊಳ್ಳಬೇಕೆಂದು ಸ್ಮೃತಿಗಳು ವಿಧಿಸಿರುವಾಗ ಅವಳ ವಿದ್ಯಾಭ್ಯಾಸಕ್ಕೆ ಅವಕಾಶ ಎಲ್ಲಿದೆ? ಮನುವಿನ ಪ್ರಕಾರ ಸ್ತ್ರೀಯು ಉತ್ತಮ ಗೃಹಿಣಿಯೂ ಆದರ್ಶಮಾತೆಯೂ ಆಗಿದ್ದರೆ ಸಾಕು; ಉತ್ತಮ ವಧುವಿನ ಅರ್ಹತೆಗಳಲ್ಲಿ ವಿದ್ಯೆಯೂ ಒಂದು ಎಂದು ಯಾರೂ ಭಾವಿಸಿಲ್ಲ. ಸ್ತ್ರೀಯರ ವಿದ್ಯಾಭ್ಯಾಸವನ್ನು ಪೂರ್ಣವಾಗಿ ಉಪೇಕ್ಷಿಸಲಾಗುತ್ತಿತ್ತು. ಪ್ರಾಚೀನ ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ಯಾವ ವಿದ್ಯಾರ್ಥಿನಿಯೂ ಅಧ್ಯಯನ ಮಾಡಿದ್ದಕ್ಕೆ ಸಾಕ್ಷ್ಯಾಧಾರಗಳಿಲ್ಲ.

**ಪ್ರಾದೇಶಿಕ ಭಾಷೆಗಳು:** ಶಿಕ್ಷಣಕ್ಕೆ ಮಾತೃಭಾಷೆಯೇ ಶ್ರೇಷ್ಠ ಎಂಬ ಮಾತಿರುವುದು ಹೌದಾದರೂ ಭಾರತೀಯ ಶಿಕ್ಷಣ ಪದ್ಧತಿಯಲ್ಲಿ ಜನರ ಮಾತೃಭಾಷೆ ಯಾವಾಗಲೂ ಅವಗಣನೆಗೆ ತುತ್ತಾಗಿದೆ. ಸಂಸ್ಕೃತವೇ ಅಧ್ಯಯನದ ಮುಖ್ಯ ವಿಷಯ ಮತ್ತು ಭಾಷೆ. ಬಹುಶ: ಜೈನರು ಮತ್ತು ಬೌದ್ಧರು ಮಾತ್ರ ಪ್ರಾಕೃತದಲ್ಲಿ ವಿದ್ಯಾಭ್ಯಾಸ ನಡೆಸುತ್ತಿದ್ದರು. ಎಲ್ಲಿಯಾದರೂ, ಯಾರಾದರೂ ಕನ್ನಡ ಭಾಷೆ ಮತ್ತು ಸಾಹಿತ್ಯದ ಅಧ್ಯಯನಕ್ಕೆ ದತ್ತಿ ಬಿಟ್ಟ ವಿಚಾರ ದಾಖಲಾಗಲಿಲ್ಲ.

**ವಸಾಹತೀಕರಣದ ಅನಂತರ:** ಬ್ರಿಟಿಷರು ಈ ದೇಶವನ್ನು ಆಳತೊಡಗಿದ ಅನಂತರ ವಿದ್ಯಾಭ್ಯಾಸ ಪದ್ಧತಿಯಲ್ಲಿ ಮೂಲಭೂತ ಬದಲಾವಣೆಗಳು ಸಂಭವಿಸಿದವು. 1823ರಲ್ಲಿ ವಸಾಹತು ಶಿಕ್ಷಣದ ಬಗ್ಗೆ ತನ್ನ ವಾದವನ್ನು ಮಂಡಿಸಿದ ಮೆಕಾಲೆಯು ಈ ದೇಶವನ್ನು ಬಿಳಿಯರೇ ಶಾಶ್ವತವಾಗಿ ಆಳಿಕೊಂಡು ಬರಲು ಸಾಧ್ಯವಾಗುವಂಥ ಶಿಕ್ಷಣ ಪದ್ಧತಿಯ ಬಗೆಗೆ ವಾದಿಸಿದ. ಆ ಪ್ರಕಾರ "ವಸಾಹತು ಶಿಕ್ಷಣ ಪದ್ಧತಿ" ಜಾರಿಗೆ ಬಂತು. ಇದರಿಂದ ಪ್ರಾಚೀನ ಭಾರತದ ಶಿಕ್ಷಣ ಪದ್ಧತಿಯು ನಾಮಾವಶೇಷ ಆಯಿತಾದರೂ ಅದನ್ನು 'ಬಹುಪಯೋಗಿ ಪ್ರಗತಿಪರ ಬದಲಾವಣೆ' ಎಂದು ಕರೆಯಲು ಸಾಧ್ಯವಿಲ್ಲ. ಏಕೆಂದರೆ ಹಳೆಯದನ್ನು ನಾಶಮಾಡಿ ಅಸ್ತಿತ್ವಕ್ಕೆ ಬಂದ ಹೊಸ ಪದ್ಧತಿಯು, ಹಳೆಯದರಷ್ಟೇ ಅಪಾಯಕಾರಿಯಾಗಿತ್ತು. ಎಲ್ಲೋ ಕೆಲವೆಡೆಗಳಲ್ಲಿ 'ಹಳೆಯದಕ್ಕಿಂತ ವಾಸಿ' ಎಂದನ್ನಿಸುತ್ತಿದ್ದರೂ ಒಟ್ಟಾರೆ ಪರಿಣಾಮದಲ್ಲಿ ಇದೂ ಅಪಾಯಕಾರಿಯೇ ಆಗಿದೆ. ಅದರ ಫಲವನ್ನು ಈಗ ನಾವು ಉಣ್ಣುತ್ತಿದ್ದೇವೆ.

ಈಗಲೂ ಶಿಕ್ಷಣ ಪದ್ಧತಿಯು ಇಡಿಯಾಗಿ ಪರಕೀಯವಾದುದು. ಅದಕ್ಕೆ ಭಾರತೀಯರ ಧ್ಯೇಯ-ಉದ್ದೇಶಗಳ ಬಗೆಗೆ ಯಾವುದೇ ಆಸಕ್ತಿಯಿಲ್ಲ. ಇದರ ದೊಡ್ಡ ಜವಾಬ್ದಾರಿಯನ್ನು ಹೊರಬೇಕಾಗಿದ್ದುದು ಕಾಂಗ್ರೆಸ್ ಸರಕಾರವೇ. ಸ್ವಾತಂತ್ರ್ಯ ಬಂದ ತಕ್ಷಣ, ಇಡೀ ಶಿಕ್ಷಣ ಪದ್ಧತಿಯನ್ನು ದೇಶದ ಆಶೋತ್ತರಗಳಿಗೆ ಅನುಗುಣವಾಗಿ ಪರಿವರ್ತಿಸಬೇಕಾಗಿತ್ತು. ನಾವು ಪ್ರಜಾಪ್ರಭುತ್ವದಲ್ಲಿ ಅಂಗೀಕರಿಸಿದ ಮೌಲ್ಯಗಳ ಬಗ್ಗೆ ಶಿಕ್ಷಣ ಪದ್ಧತಿಯಲ್ಲಿ ನಿರ್ಣಾಯಕ ಸ್ಥಾನ ಇರಬೇಕಿತ್ತು. ಆದರೆ ಆಗಿನ ಪ್ರಧಾನ ಮಂತ್ರಿಗಳಾಗಿದ್ದ ಜವಾಹರಲಾಲರು ಅದರ ಬಗ್ಗೆ ಗಮನವನ್ನೇ ಹರಿಸಲಿಲ್ಲ. ಅಂದರೆ ಬ್ರಿಟಿಷರನ್ನು ಹೊರತಳ್ಳಿ, ನಾವು ತಂದುಕೊಂಡ ರಾಜಕೀಯ ಬದಲಾವಣೆಗಳು, ಈ ನಾಡಿನ ಸಾಂಸ್ಕೃತಿಕ, ನೈತಿಕ, ಸಾಮಾಜಿಕ ಬದಲಾವಣೆಗಳಿಗೆ ಕಾರಣವಾಗಿಲ್ಲ. ಹಿಂದೆ ಬ್ರಾಹ್ಮಣರು,ಇಂದು ಇಂಗ್ಲೀಷ್ ಕಲಿತವರು. ಹಿಂದೆ ಸಂಸ್ಕೃತ, ಇಂದು ಇಂಗ್ಲೀಷ್- ಹೀಗೆ ಪಟ್ಟಿ ಬೆಳೆಯುತ್ತದೆ. ಈ ದೇಶದ ಬಹುಸಂಖ್ಯಾತ ಜನವರ್ಗವನ್ನು ಇವು ತಲುಪಲೇ ಇಲ್ಲ.

ಮುಸ್ಲಿಮರು: ನಾನು ಹಿಂದೆ ಹೇಳಿದ ಸಾಂಪ್ರದಾಯಿಕ ಭಾರತದ ಶಿಕ್ಷಣ ಪದ್ಧತಿಗೂ, ಮುಸ್ಲಿಮರು ತಾವೇ ರೂಢಿಸಿಕೊಂಡಿರುವ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಗೂ ಮೂಲಭೂತ ವ್ಯತ್ಯಾಸ ಇದ್ದಂತಿಲ್ಲ. ಎಳೆಯ ತಲೆಗಳ ಒಳಗೆ ಅವೈಚಾರಿಕತೆಯನ್ನು ತುಂಬಿಸಿ, ಇತಿಹಾಸವನ್ನು ವೈಭವೀಕರಿಸುವ ಅವು ಆಧುನಿಕ ಜಗತ್ತಿನ ಬಗ್ಗೆ ಜನರಿಗೆ ತಿಳಿವು ನೀಡುವಲ್ಲಿ ವಿಫಲವಾಗುತ್ತಿವೆ. ಮಹಿಳೆಯರಂತೂ ಇಲ್ಲಿ ಕೂಡಾ ಪೂರ್ಣವಾಗಿ ತಿರಸ್ಕೃತರೇ. ತುಂಬ ಭಯ ಹುಟ್ಟಿಸುವ ವಿಚಾರವೆಂದರೆ, ಇಂಥ ಸಂಕುಚಿತ ಮನೋಭಾವವನ್ನು ಧರ್ಮದ ಹೆಸರಲ್ಲಿ ಸಮರ್ಥಿಸಿಕೊಳ್ಳುವುದು ಮತ್ತು ಮುಕ್ತವಾಗಿ ಮಾತಾಡಬಲ್ಲ ಧ್ವನಿಗಳನ್ನು ವ್ಯವಸ್ಥಿತವಾಗಿ ಹೊಸಕಿ ಹಾಕುವುದು.

ಮುಸ್ಲಿಮರು ತಮ್ಮ 'ಮದ್ರಸ ಶಿಕ್ಷಣ'ವನ್ನು ಮುಗಿಸಿ ಹೊರಬಂದು ಶಾಲೆಗಳಿಗೆ ಸೇರಿದರೆ ಅವರ ಸಮಸ್ಯೆ ಪರಿಹಾರವಾಗುವುದಿಲ್ಲ. ಆ 'ಹೊರಗಿನ ಶಿಕ್ಷಣ ಪದ್ಧತಿ' ಮುಸ್ಲಿಮರಿಗೆ ಇನ್ನಷ್ಟು ಹೊರಗಿನದ್ದಾಗಿಯೇ ತೋರುತ್ತದೆ. ಮೊದಲೇ ವಸಾಹತೀಕರಣಕ್ಕೊಳಪಟ್ಟ ವ್ಯವಸ್ಥೆಯಲ್ಲಿ ಮುಸ್ಲಿಮರು ಹಿಂದೂಗಳನ್ನು ಮತ್ತು ಇಂಗ್ಲೀಷರನ್ನು ಜೊತೆಯಾಗಿಯೇ ಗಮನಿಸಬೇಕಾಗುತ್ತದೆ. ಅಂದರೆ ಇದರ ಸರಳವಾದ ತೀರ್ಮಾನ ಇಷ್ಟು. ಮುಸ್ಲಿಮರಿಗೆ ಶಾಲೆಗಳು ಅವರ ಮನೆಯ ಸಂಸ್ಕೃತಿಯ ವಿಸ್ತರಣೆ ಅಲ್ಲ. ಬದಲು ಅವರದ್ದಲ್ಲದ್ದನ್ನು ಕಲಿಯುವ ಪರಕೀಯ ವ್ಯವಸ್ಥೆ. ಇಂಥ ವ್ಯವಸ್ಥೆಯು ಯಾವುದೇ ಜನಾಂಗದಲ್ಲೂ ಸೃಜನಶೀಲರನ್ನು ನಿರ್ಮಾಣ ಮಾಡಲಾರದು.

ಈಗ ಸಮಸ್ಯೆಯ ಸ್ವರೂಪ ಸ್ಪಷ್ಟವಾಗುತ್ತದೆ. ಪ್ರಾಚೀನ ಭಾರತೀಯ ಶಿಕ್ಷಣ ಪದ್ಧತಿ ಮತ್ತು ಸಾಂಪ್ರಾದಾಯಕ ಮುಸ್ಲಿಂ ಶಿಕ್ಷಣ ಪದ್ಧತಿಗಳೆರಡೂ ಬಹುಮಟ್ಟಿಗೆ

ಒಂದೇ ಆಗಿದ್ದು ತೀರಾ ಪ್ರತಿಗಾಮಿಯಾಗಿವೆ. ಅವು ಮತಾಂಧತೆಯನ್ನು ಪೋಷಿಸುತ್ತವೆ ಇಲ್ಲವೇ ಮುಗ್ಧಮನಸ್ಸುಗಳನ್ನು ಅರಳದಂತೆ ಸಂಕುಚಿತಗೊಳಿಸುತ್ತವೆ. ಪರಿಣಾಮವಾಗಿ ಬೂದಿ ಬಾಬಾಗಳನ್ನು ನಂಬುವ, ಮಹಿಳೆಯನ್ನು ಕೋಣೆಯೊಳಗೆ ಬಂಧಿಯಾಗಿಸುವ ಜನರೇ ಅಲ್ಲಿಂದ ಹೊರ ಬರುತ್ತಿದ್ದಾರೆ. ಅದನ್ನು ಬಿಟ್ಟು ಹೊರ ಬಂದರೆ ಅವರಿಬ್ಬರಿಗೂ ಸಿಗುವುದು ವಸಾಹತು ಶಿಕ್ಷಣವೇ. ಈ ಶಿಕ್ಷಣ ಪದ್ಧತಿಯು ಯಾವುದೇ ಭಾರತೀಯನಿಗೆ ಪರಕೀಯವಾದುದು. ಹಾಗಾಗಿ ಇಲ್ಲಿಂದ ಪ್ರತಿಭಾವಂತರನ್ನು ಹುಡುಕುವುದು ಕಷ್ಟ. ಶ್ರೀಮಂತರ ಮಕ್ಕಳಿಗೇ ಅವು ಸರಿಯಾಗುತ್ತವೆ.

ಏನು ಪರಿಹಾರ : ಇದು ಜಟಿಲ ಸಮಸ್ಯೆ ಮತ್ತು ಜನಾಂಗದ ಅಭಿವೃದ್ಧಿಯ ಕುರಿತು ಚಿಂತಿಸುವವರೆಲ್ಲರಿಗೂ ಸಮಾನ ಸಮಸ್ಯೆ. ಅಂತಿಮವಾಗಿ ಇದೊಂದು ರಾಜಕೀಯ ಸಮಸ್ಯೆಯೇ ಹೌದು. ಏಕೆಂದರೆ ಯಾವುದೇ ಬದಲಾವಣೆಗಳಿಗೂ ಅಧಿಕಾರಬೇಕಾಗುತ್ತದೆ.

ಈ ನಿಟ್ಟಿನಲ್ಲಿ ನೋಡಿದಾಗ ಮುಸ್ಲಿಮ್ ಮತ್ತು ಮುಸ್ಲಿಮೇತರರಲ್ಲಿರುವ ಎಲ್ಲ ಪ್ರಗತಿಪರರೂ ಅತ್ಯಂತ ತೀವ್ರವಾಗಿ ಧ್ರುವೀಕರಣವಾಗಬೇಕು ಮತ್ತು ಅವರು ಒಂದು ವರ್ಗವಾಗಿ ರೂಪಗೊಳ್ಳಬೇಕು. ಈ ವರ್ಗ ಎಡ ಪಂಥೀಯ ವಿಚಾರಧಾರೆಗೆ ಬದ್ಧರಾಗದೆ ಬೇರೆ ದಾರಿಯೇ ಇಲ್ಲ. ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ಉಂಟುಮಾಡುವ ಘೋರತರ ಪರಿಣಾಮವನ್ನು ತಲ ಸ್ಪರ್ಶಿಯಾಗಿ ವಿವೇಚಿಸುವ ಈ ವರ್ಗವು ಪರ್ಯಾಯ ಶಿಕ್ಷಣ ಪದ್ಧತಿಯೊಂದನ್ನು ರೂಪಿಸಬೇಕು. ಈ ಪರ್ಯಾಯ ಶಿಕ್ಷಣ ಪದ್ಧತಿಯು ಅನೌಪಚಾರಿಕವಾಗಿ ದ್ದರೂ ಸರಿ ಅಥವಾ ಅಧ್ಯಯನ ವೃತ್ತ (Study Circle) ಗಳ ರೀತಿಯಲ್ಲಿ ಇದ್ದರೂ ಸರಿ. ಇಂಥ ಪ್ರಗತಿಪರ ವರ್ಗಕ್ಕೆ 'ಹಿಂದೂ - ಮುಸ್ಲಿಮ್' ಮತಾಂಧತೆಯ ಬಗ್ಗೆ ಮುಕ್ತವಾಗಿ ಚರ್ಚಿಸುವ ಚೈತನ್ಯ ಬೇಕು. ಅಷ್ಟರ ಮಟ್ಟಿನ 'ದೂರ' (Distance)ವನ್ನೂ ಅವರು ತಮ್ಮ ಜನವರ್ಗದಿಂದ ಕಾಯ್ದುಕೊಳ್ಳಬೇಕಾಗುತ್ತದೆ. ಮುಕ್ತ ವಿಚಾರ ಧಾರೆಯ ಅಂಥ ವರ್ಗವೊಂದು ದೇಶದಾದ್ಯಂತ ಹರಡಿಕೊಂಡಾಗ ಮುಂದಾಗಬಹು ದಾದ ದುರಂತವನ್ನು ತಪ್ಪಿಸಬಹುದು.

ಅಂದರೆ ಯಾವುದನ್ನು ಶಿಕ್ಷಣ ಪದ್ಧತಿಯು ಮಾಡಬೇಕಾಗಿತ್ತೋ ಅದನ್ನು ನಾವಿಂದು ಶಿಕ್ಷಣ ಪದ್ಧತಿಯ ಹೊರಗಡೆಗೆ ನಿಂತೇ ಸಾಧಿಸಬೇಕಾಗಿದೆ. ಆ ಮೂಲಕ ಮತಾಂಧತೆಗೆ ತಡೆಯೊಡ್ಡಿ ಜಾತ್ಯತೀತತೆಯನ್ನು ಸಾಧಿಸಬೇಕಾಗಿದೆ. ಅಂತ ಪರ್ಯಾಯ ಅನೌಪಚಾರಿಕ ಶಿಕ್ಷಣ ಪದ್ಧತಿಯನ್ನು ಎಡಪಂಥೀಯ ವಿಚಾರಧಾರೆಯ ಜನ ತೀವ್ರವಾಗಿ ರೂಪಿಸಿಕೊಳ್ಳಬೇಕಾ ಗಿದೆ.

——————

● ಮುಹ್ಯುದ್ದೀನ್ ಕುಟ್ಟಿ ಅಲ್‌ಖಾಸಿಮೀ
ಖತೀಬ್, ಮಸ್ಜಿದುನ್ನೂರ್,
ಮಂಗಳೂರು 575 001.

# ಶಿಕ್ಷಣ ಪ್ರಸಾರದಲ್ಲಿ ವಿದ್ವಾಂಸರ ಪಾತ್ರ

ಮಾನವನು, ಅಲ್ಲಾಹನ ಸೃಷ್ಟಿಗಳಲ್ಲಿ ಅತ್ಯುನ್ನತ ಸ್ಥಾನ ನೀಡಲಾಗಿರುವ ಉತ್ತಮ ಸೃಷ್ಟಿ. ಆತನ ಔನ್ನತ್ಯಕ್ಕೆ ಕೇವಲ ಸೃಷ್ಟಿ ವಿಲಾಸ, ಆಕಾರ, ರೂಪ ಅಥವಾ ಸೌಂದರ್ಯ ಕಾರಣವಲ್ಲ. ಆತನ ಜ್ಞಾನ, ಕಲೆ, ಕರ್ಮ, ಬೋಧನೆ, ಚಿಂತನೆ , ಅನ್ವೇಷಣೆ, ಸಹನೆ, ಸದ್ಗುಣ, ಮಾನವೀಯ ಪ್ರೇಮ, ಕರ್ತವ್ಯ ಪ್ರಜ್ಞೆ, ಸಹಿಷ್ಣುತೆ, ಕುಟುಂಬ ಜೀವನ ಇತ್ಯಾದಿಗಳು ಆತನ ಶ್ರೇಷ್ಠತೆಯ ಬುನಾದಿಗಳಾಗಿವೆ.

ಮಾನವನ ಈ ವೈಶಿಷ್ಟ್ಯವನ್ನು ಸೂಚಿಸುತ್ತಾ ಪ್ರವಾದಿವರ್ಯ (ಸ)ರು ''ಮಾನವನು ಬಂಗಾರ ಬೆಳ್ಳಿ ಮತ್ತಿತರ ಸಂಪನ್ಮೂಲಗಳನ್ನು ಹೊಂದಿದ ಗನಿ ''ಎಂದು ಹೇಳಿದ್ದಾರೆ. ಅಜ್ಞಾನ ಕಾಲದಲ್ಲಿ ನಿಮ್ಮಲ್ಲಿ ಉನ್ನತರು ಮತ್ತು ಉತ್ತಮರಾಗಿರುವವರು, ಇಸ್ಲಾಮಿನಲ್ಲಿಯೂ ಉನ್ನತರು ಮತ್ತು ಉತ್ತಮರಾಗಿರುತ್ತಾರೆ, ನೀವು ಜ್ಞಾನಿಗಳಾಗಿದ್ದರೆ. ಭೂಮಿ ಮತ್ತು ಮನುಷ್ಯನ ನಡುವೆ ಬಹಳಷ್ಟು ಸಾಮ್ಯತೆಯಿದೆ. ಮನುಷ್ಯನನ್ನು ಮಣ್ಣಿನಿಂದ ಸೃಷ್ಟಿಸಲಾಗಿದೆ. ಮಾನವನು ಜೀವನಾವಶ್ಯಕ ವಸ್ತುಗಳೆಲ್ಲವನ್ನೂ ಮಣ್ಣಿನಿಂದಲೇ ಸಂಪಾದಿಸುತ್ತಾನೆ. ಅವುಗಳನ್ನು ಕಂಡುಹಿಡಿಯಬೇಕಾದ ಹೊಣೆ ಆತನ ಮೇಲಿದೆ. ಅದನ್ನು ಗಳಿಸಿದಾಗ ಆತನ ದೇವ ವಿಶ್ವಾಸವು ನಿಷ್ಕಳಂಕವಾಗುತ್ತದೆ. ಆಗ ಮಾನವನ ಲೌಕಿಕ ಜೀವನದ ಧ್ಯೇಯೋದ್ದೇಶ ಸಫಲವಾಗುತ್ತದೆ.

ಆದರೆ ಮಾನವನು ಇವುಗಳನ್ನು ಸ್ವತ: ಕಂಡು ಹಿಡಿಯಲು ಸಾಧ್ಯವೇ? ಇಲ್ಲ. ಖಂಡಿತ ಸಾಧ್ಯವಿಲ್ಲ. ಅದಕ್ಕೆ ಓರ್ವ ಮಾರ್ಗದರ್ಶಕ ಅಥವಾ ಉಪದೇಶಕನಿರಬೇಕಾದುದು ಅನಿವಾರ್ಯವಾಗಿದೆ. ಆದ್ದರಿಂದ ಸೃಷ್ಟಿಕರ್ತನು ತನ್ನ ಸೃಷ್ಟಿಗಳಿಂದಲೇ ಅವರಿಗೆ ಪ್ರವಾದಿಗಳನ್ನು ನೇಮಿಸಿದನು. ಅಂಥ ಒಂದು ಲಕ್ಷಕ್ಕೂ ಹೆಚ್ಚು ಪ್ರವಾದಿಗಳನ್ನು ಆತನು

ನಿಯೋಗಿಸಿದನು. ಅವರು ಕಾಲಾನುಕ್ರಮದಲ್ಲಿ ತಮ್ಮ ಪ್ರವಾದಿತ್ವ ಕರ್ತವ್ಯವನ್ನು ನಿರ್ವಹಿಸಿದರು. ಸಮಾಜದ ಒಂದು ವಿಭಾಗವು ಅದನ್ನು ಸ್ವೀಕರಿಸಿತು. ಇನ್ನೊಂದು ವಿಭಾಗವು ಅದನ್ನು ತಿರಸ್ಕರಿಸಿತು. ಎಲ್ಲ ಧರ್ಮಗಳ ಸಾರವನ್ನೊಳಗೊಂಡ ಅಲ್ಲಾಹನ ಸಮಗ್ರ ತತ್ವಸಂಹಿತೆಯನ್ನು ಜಗತ್ತಿಗೆ ತಲಪಿಸಲಿಕ್ಕಾಗಿ ಕೊನೆಯ ಪ್ರವಾದಿ ಮುಹಮ್ಮದ್(ಸ) ರನ್ನು ನೇಮಿಸಿದಾಗ ಅಲ್ಲಾಹನು ಹೇಳಿದನು. ''ಇನ್ನು ಮುಂದೆ ನಿಮ್ಮ ಮಾರ್ಗದರ್ಶನಕ್ಕಾಗಿ ಪ್ರವಾದಿಗಳು ಬರಲಾರರು. ನಿಮ್ಮ ಧರ್ಮವನ್ನು ಸಂಪೂರ್ಣಗೊಳಿಸಲಾಗಿದೆ. ಇಸ್ಲಾಮನ್ನು ನಿಮ್ಮ ಧರ್ಮವಾಗಿ ಅಂಗೀಕರಿಸಿ ಸಂತೃಪ್ತನಾಗಿದ್ದೇನೆ; ಅದರಿಂದ ಹೊರತಾದ ಧರ್ಮವೆಲ್ಲವೂ ತಿರಸ್ಕೃತವಾಗಿದೆ.''

ಜಾತಿ, ವರ್ಗ, ದೇಶ ಇತ್ಯಾದಿ ಎಲ್ಲ ಭೇದ ಭಾವಗಳನ್ನೂ ಇಸ್ಲಾಮ್ ಅಳಿಸಿಹಾಕುತ್ತದೆ. ಅದು, ಸಾರ್ವಕಾಲಿಕವಾಗಿದ್ದು, ಭೌತಿಕ ಮತ್ತು ಆಧ್ಯಾತ್ಮಿಕಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಸಮಾಜಕ್ಕೆ ಕಲಿಸಿಕೊಡುತ್ತದೆ. ಕಾಲಕ್ರಮೇಣ ಮಾನವ ಸಮಾಜದಲ್ಲಿ ಸಂಭವಿಸಬಹುದಾದ ಪಥಭ್ರಷ್ಟತೆಗಳ ಕುರಿತು ಪ್ರವಾದಿವರ್ಯ (ಸ)ರು ತಮ್ಮ ಪ್ರಥಮ ಹಾಗೂ ಕೊನೆಯದಾದ ಹಜ್ಜತ್ತುಲ್ ವಿದಾದಲ್ಲಿ ಉಪದೇಶಿಸಿದರು. ''ಇಲ್ಲಿ ಹಾಜರಿರುವವರು ಹಾಜರಿಲ್ಲದವರಿಗೆ ಈ ಸಂದೇಶವನ್ನು ತಲುಪಿಸಿರಿ. ಇದು ನಿಮ್ಮ ಕರ್ತವ್ಯವಾಗಿದೆ.'' ಅನಂತರ ಈ ಹೊಣೆಯನ್ನು ವಿದ್ವಾಂಸರಿಗೆ ಹಸ್ತಾಂತರಿಸಲಾಗಿದೆ. ವಿದ್ವಾಂಸರು ಪ್ರವಾದಿಗಳ ವಾರೀಸುದಾರರು; ವಿದ್ವಾಂಸರೆಂದರೆ ಸೊತ್ತು ಸಂಪತ್ತುಗಳನ್ನು ಸಂಗ್ರಹಿಸುವವರಲ್ಲ. ಅವರು ಪ್ರವಾದಿಗಳು ಬೋಧಿಸಿದ ಜ್ಞಾನ ಮತ್ತು ಸಂಸ್ಕೃತಿಯ ಪ್ರಭೆಗಳಾಗಿದ್ದಾರೆ. ಅವುಗಳನ್ನು ಸಮಾಜಕ್ಕೆ ನೀಡಿ ಯುಗಯುಗಾಂತರಗಳಿಂದ ಭೂಮಿಯಲ್ಲಿ ಹುಟ್ಟಿ ಬೆಳೆಯುವ ಮಾನವ ಸಂತತಿಯನ್ನು ಒಳಿತಿನತ್ತ ಸಾಗಿಸುವ ಜವಾಬ್ದಾರಿಯು ವಿದ್ವಾಂಸರದ್ದಾಗಿದೆ. ಆ ಜವಾಬ್ದಾರಿಯನ್ನು ನಿರ್ವಹಿಸಿದರೆ ಅವರು ಕರ್ತವ್ಯ ಪೂರೈಸಿದ ವಾರೀಸುದಾರರೆನಿಸುತ್ತಾರೆ.

ಜ್ಞಾನವು ಅಮೂಲ್ಯ, ಅದನ್ನು ಗಳಿಸಿದವರು ಮಹಾಭಾಗ್ಯಶಾಲಿಗಳು. ಜ್ಞಾನವಿಲ್ಲದಿದ್ದರೆ ಅರ್ಥ, ಅಧಿಕಾರಗಳು ಅನಾಹುತಕಾರಿಯಾಗುತ್ತವೆ. ಪಾಪ ಮತ್ತು ಪತನಕ್ಕೆ ಅವಕಾಶ ನೀಡುತ್ತದೆ. ಜ್ಞಾನವು ಜೀವನಕ್ಕೆ ಗುರಿ ಮತ್ತು ಬೆಳಕನ್ನು ನೀಡುತ್ತದೆ; ಅದು ಸಂಸ್ಕರಣೆ ಮತ್ತು ವಿಜಯದ ಮಾರ್ಗದರ್ಶನ ಮಾಡುತ್ತದೆ. ಸಂಪತ್ತನ್ನು ವ್ಯಯಿಸಿದಾಗ ಕ್ಷಯಿಸುತ್ತದೆ. ಜ್ಞಾನವನ್ನು ವಿನಿಯೋಗಿಸಿದಷ್ಟೂ ಅದು ವೃದ್ಧಿಸುತ್ತದೆ.

ಆಧುನಿಕ ಯುಗದಲ್ಲಿ ಜ್ಞಾನವು ವ್ಯಾಪಾರ ಸರಕಾಗಿ ಬಿಟ್ಟಿದೆ. ಉದರ ನಿಮಿತ್ತ ತತ್ವೋಪದೇಶ ಹೇಳುತ್ತಾ ಇಚ್ಛೆಗಳಿಗೆ ಮಣಿಯುವ ಶೋಚನೀಯ ದೃಶ್ಯ ! ಮರಣ ಸಂಭವಿಸಿದ ಮನೆಯವರಿಗೆ ಆಹಾರಪಾನೀಯಗಳನ್ನು ತಯಾರಿಸಿಕೊಡಬೇಕು. ಅವರನ್ನು ಸಾಂತ್ವನಪಡಿಸಬೇಕು. ಅವರ ದು:ಖದಲ್ಲಿ ಭಾಗಿಯಾಗಬೇಕೆಂದು ಪ್ರವಾದಿ (ಸ)

ಬೋಧಿಸಿದ್ದರು. ಪ್ರವಾದಿಗಳ ಪ್ರಸ್ತುತ ಚರ್ಯೆಯನ್ನೂ ತಿರಸ್ಕರಿಸಿ ಆ ಮನೆಯವರಿಂದಲೇ ಔತಣ ಮಾಡಿಸಿ ಹಣ ಪಡೆಯುವುದನ್ನು ಕಡ್ಡಾಯ ಆಚಾರವನ್ನಾಗಿ ಮಾಡುವ ದುರ್ಗತಿಗೆ ನಾವಿಂದು ತಲಪಿದ್ದೇವೆ. ರೋಗಿಗಳ ಶುಶ್ರೂಷೆಯೂ ಇದರಿಂದ ಮುಕ್ತವಾಗಿಲ್ಲ. ಮರಣ ಯಾತನೆಯಿಂದ ಸೆಣಸುತ್ತಿರುವ ಮಾನವ ಪ್ರಾಣಗಳನ್ನು ರಕ್ಷಿಸಬೇಕಾದ ಬಹುತೇಕ ವೈದ್ಯರೂ ಆಧುನಿಕ ಜಗತ್ತಿನಲ್ಲಿ ಸ್ವಾರ್ಥಿಗಳಾಗಿ, ಹಣದ ಗುಲಾಮರಾಗಿದ್ದಾರೆಂಬುದೇ ನಿಜ.

ಆದರೆ ಜ್ಞಾನಸಂಪಾದನೆಯನ್ನೂ ಅದರ ವಿನಿಯೋಗವನ್ನೂ ಇಸ್ಲಾಮ್ ಪಾವನ ಕರ್ಮವೆಂದು ಪರಿಗಣಿಸಿದೆ. ಹಿಂದಿನ ಕಾಲದ ಪಂಡಿತರು ಮತ್ತು ಗಣ್ಯರು ಅದನ್ನು ಸೇವೆ ಮತ್ತು ಪುಣ್ಯವೆಂದು ಭಾವಿಸಿದ್ದರು. ಇಂದಿನ ಕಾಲದಲ್ಲಿ ಪರಿಸ್ಥಿತಿ ಬದಲಾಗಿ ಧನಮೋಹಿಗಳಾದ ಕೆಲವು ಪಂಡಿತರು ಮತ್ತು ನಾಯಕರು ತಮ್ಮ ಜ್ಞಾನ ಮತ್ತು ಪ್ರತಿಭೆಗಳನ್ನು ಬಡ ನಿರಕ್ಷರಸ್ಥ ಜನರ ಶೋಷಣೆಯ ಉಪಾಧಿಯಾಗಿ ಮಾಡಿದ್ದಾರೆ. ಅಂಥ ಮಂದಿ ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯನ್ನು ದುರ್ವ್ಯಾಖ್ಯಾನಿಸಿ ಪಾಮರರನ್ನು ದಾರಿ ತಪ್ಪಿಸಿ ಸುಖಲೋಲುಪರಾಗಿ ಮೆರೆದರು. ತನ್ನಿಮಿತ್ತ ಜ್ಞಾನದ ಪಾವಿತ್ರ್ಯಕ್ಕೆ ಕಳಂಕ ತಟ್ಟಿತು. ಅಂತೆಯೇ ಜ್ಞಾನ ಮತ್ತು ಜ್ಞಾನಿಗಳ ಬಗೆಗಿನ ಗೌರವಾಭಿಮಾನವು ಕಡಿಮೆಯಾಯಿತು.

ಜ್ಞಾನದ ಮೌಲ್ಯವನ್ನು ತಿಳಿದು ಅದರ ಮಹತ್ವ ಮತ್ತು ಉನ್ನತಿಗಾಗಿ ಶ್ರಮಿಸಿದ ಇಮಾಮ್ ಮಾಲಿಕ್(ರ) ಮುಂತಾದ ಕೆಲವರು ಮಾತ್ರ ಅದರ ಸ್ಥಿತಿ ಸುಧಾರಣೆಯಲ್ಲಿ ಯಶಸ್ವಿಯಾಗಿದ್ದರು. ಜ್ಞಾನದ ಮಹತ್ವವನ್ನು ಮನಗಂಡವರು ಅದಕ್ಕೆ ಅತ್ಯಧಿಕ ಪ್ರಾಮುಖ್ಯತೆ ನೀಡುತ್ತಾರೆ. ಸಲ್ಜೂಕಿ ಆಡಳಿತಗಾರರಾಗಿದ್ದ 'ಮಾಲಿಕ್‌ಶಾ'ರು ತಮ್ಮ ರಾಜ್ಯ ವ್ಯವಹಾರಗಳ ಮಂತ್ರಿಯಾಗಿ ನಿಝಾಮುಲ್ ಮುಲ್ಕ್ ತೂಸಿಯವರನ್ನು ನೇಮಿಸಿದ್ದರು. ಅವರು ಸಾರ್ವಜನಿಕ ಸಂಪತ್ತಿನ ಸಿಂಹಪಾಲನ್ನು ಶೈಕ್ಷಣಿಕ ಅಗತ್ಯಗಳ ಪೂರೈಕೆಗಾಗಿ ವ್ಯಯಿಸುತ್ತಿದ್ದರು. ಅದಕ್ಕಾಗಿ ಒಮ್ಮೆ 'ಮಾಲಿಕ್ ಶಾ' ಅವರೊಡನೆ ಹೇಳಿದರು. "ನೀವು ಶಿಕ್ಷಣಕ್ಕಾಗಿ ವ್ಯಯಿಸುವ ಹಣವನ್ನು ಸೈನಿಕ ಅಗತ್ಯಗಳಿಗಾಗಿ ವ್ಯಯಿಸುತ್ತಿದ್ದರೆ ಇಡೀ ಜಗತ್ತನ್ನು ನಾವು ಅಧೀನಪಡಿಸಹುದಾಗಿತ್ತು." ಆಗ ಸಚಿವ ನಿಝಾಮುದ್ದೀನ್ ಮುಲ್ಕ್ ಹೀಗೆಂದರು: ನೀವು ಸಜ್ಜುಗೊಳಿಸುವ ಸೈನಿಕರ ಅಸ್ತ್ರಗಳು ಸ್ವಲ್ಪ ದೂರ ಮಾತ್ರ ತಲಪುತ್ತವೆ. ಆದರೆ ನಾನು ಸಜ್ಜುಗೊಳಿಸುವ ಪಂಡಿತ ಸೇನೆಯ ಪ್ರಾರ್ಥನೆಯೆಂಬ ಅಸ್ತ್ರಗಳು ದಿಗಂತವನ್ನೂ ಬೇಧಿಸಿ ಮುಂದೆ ಸಾಗುವ ಸಾಮರ್ಥ್ಯವನ್ನು ಹೊಂದಿವೆ.

ಇಂದು ಪರಿಸ್ಥಿತಿ ಅಪಾಯಕಾರಿ ಮಟ್ಟಕ್ಕೆ ತಲುಪಿದೆ. ನೈಜ ವಿದ್ವಾಂಸರು ಅತಿ ವಿರಳವಾಗಿದ್ದಾರೆ. ಇಂದು ವಿದ್ಯೆಯು ಉಪಜೀವನ ಮಾರ್ಗವಾಗಿ ಮಾರ್ಪಟ್ಟಿದೆ. ಲೌಕಿಕ ಹಾಗೂ ಧಾರ್ಮಿಕ ವಿದ್ಯೆಗಳು ಕೇವಲ ಉದ್ಯೋಗ ನಿಮಿತ್ತವಾಗಿ ಬಿಟ್ಟಿವೆ. ಹೀಗೆ

ಸಮಾಜಕ್ಕೆ ವಿದ್ಯೆಯನ್ನು ಕೀಳಾಗಿ ಕಾಣುವ ಅವಕಾಶ ನೀಡಿದ್ದರಿಂದ, ಅದನ್ನು ಪ್ರೋತ್ಸಾಹಿಸಲೂ ಜನರು ಹಿಂಜರಿದರು. ವಿದ್ವಾಂಸರಲ್ಲಿ ಕಂಡು ಬರುವ ಅಪ್ರಾಮಾಣಿಕತೆ ಮತ್ತು ಪೌರೋಹಿತ್ಯ ಮನೋಭಾವದಿಂದ ಜನರ ತಾಳ್ಮೆಗೆಟ್ಟಿತು. ಅವರ ಬಗ್ಗೆ ಜನರಲ್ಲಿ ಕೀಳು ಭಾವನೆ ಬೆಳೆಯಿತು. ತನ್ನಿಮಿತ್ತ ಸಮುದಾಯವು ಅಪಾಯಕ್ಕೆ ಸಿಲುಕಿತು. ಧರ್ಮಚ್ಯುತಿ ಹೆಚ್ಚಿತು.

ಸಮಾಜದಲ್ಲಿ ಇಸ್ಲಾಮೀ ಚೈತನ್ಯ ಮತ್ತು ತತ್ವಸಿದ್ಧಾಂತ ವಿರೂಪಗೊಂಡಿತು. ಅನ್ಯರು ಸವಾರಿ ಮಾಡುವ ಕುದುರೆಯಾಯಿತು. ನೈಜ ತಿಳುವಳಿಕೆಯ ಕೊರತೆಯಿಂದಾಗಿಯೂ ಹೀಗೆಲ್ಲ ಸಂಭವಿಸುತ್ತದೆ. ಆಧುನಿಕ ಇಸ್ಲಾಮೇತರ ಶಕ್ತಿಗಳು ಭೂಮ್ಯಾಕಾಶಗಳ ಗಾಢ ಅಧ್ಯಯನ ನಡೆಸುತ್ತಿವೆ. ಅದೇ ವೇಳೆ 14 ಶತಮಾನಗಳ ಹಿಂದೆಯೇ ಇಂಥ ವಿಷಯಗಳ ಬಗ್ಗೆ ಆಲೋಚಿಸಿ, ಅಧ್ಯಯನ ನಡೆಸಲು ಬೋಧಿಸಿದ್ದ ಕುರ್‌ಆನ್‌ನ ವಕ್ತಾರರಾದ ಮುಸ್ಲಿಮರು ಈಗ ಅದನ್ನು ಕೇವಲ ಪಾರಾಯಣಕ್ಕೆ ಸೀಮಿತಗೊಳಿಸಿ ಸಂತೃಪ್ತರಾಗುತ್ತಿದ್ದಾರೆ. ಈ ದು:ಖ ಸತ್ಯವನ್ನು ಮರೆಯುವಂತಿಲ್ಲ.

"ಆಕಾಶ, ಭೂಮಿ, ಸೂರ್ಯ, ಚಂದ್ರ, ನಕ್ಷತ್ರಾದಿಗಳ ಸೃಷ್ಟಿಯಲ್ಲಿಯೂ, ರಾತ್ರಿ ಹಗಲುಗಳ ಬದಲಾವಣೆಯಲ್ಲಿಯೂ ಆಲೋಚಿಸುವವರಿಗೆ ಧಾರಾಳ ದೃಷ್ಟಾಂತಗಳಿವೆ" ಯೆಂದು ಕುರ್‌ಆನ್ ಕಲಿಸುತ್ತದೆ. ನಾವಾದರೋ ಕುರ್‌ಆನನ್ನು ಭಾಷಾಂತರಿಸಬಹುದೋ ಭಾಷಾಂತರಿಸಬಾರದೋ ಎಂಬ ತರ್ಕದ ಬಗ್ಗೆ ಆಲೋಚಿಸುತ್ತಿದ್ದೇವೆ. ಇಂಥ ತರ್ಕಗಳು ಸಮಾಜವನ್ನು ಕುರ್‌ಆನ್‌ನಿಂದ ದೂರ ಸರಿಸುವುದಕ್ಕಷ್ಟೇ ಪ್ರೇಕರವಾಗುವುದೆಂಬುದನ್ನು ನಾವು ಮನಗಾಣದಿರುವುದು ಖೇದಕರ.

ಇಂದು ಜ್ಞಾನವನ್ನು ಎರಡು ವಿಭಾಗಗಳಾಗಿ ವಿಂಗಡಿಸಿ ಮಾನವರನ್ನೂ ವರ್ಗೀಕರಿಸಲಾಗಿದೆ. ಭೌತಿಕ ಮತ್ತು ಧಾರ್ಮಿಕವೆಂಬ ವಿಂಗಡನೆ. ಇಸ್ಲಾಮಿನಲ್ಲಿ ಈ ರೀತಿಯ ವಿಭಜನೆಯಿಲ್ಲ. ಯಾಕೆಂದರೆ ಲೌಕಿಕ ಮತ್ತು ಧಾರ್ಮಿಕವೆಂಬುದೇ ಅದರ ತಾತ್ಪರ್ಯ. ಅವೆರಡನ್ನೂ ಕುರ್‌ಆನ್ ಹಿಂದಿನ ಕಾಲದಲ್ಲಿಯೇ ಪ್ರೋತ್ಸಾಹಿಸಿದೆ. ಯಾಕೆಂದರೆ ಎಲ್ಲದರಲ್ಲಿಯೂ ದೇವನ ಅನ್ವೇಷಣೆಯಿದೆ. ತನ್ಮೂಲಕ ಆತ್ಮ ಸಂಸ್ಕರಣೆಯನ್ನು ಸಾಧಿಸಬಹುದು.

ಪ್ರಾಣಿ ಶಾಸ್ತ್ರದ ಅಧ್ಯಯನಕ್ಕೆ ಕುರ್‌ಆನ್ ಪ್ರೇರಣೆ ನೀಡಿರುವುದನ್ನು ಗಮನಿಸಿರಿ. 'ಹೇ ಮನುಷ್ಯರೇ! ನೀವು ಒಂಟೆಗಳನ್ನು ಗಮನಿಸುವುದಿಲ್ಲವೇ? ಅವುಗಳನ್ನು ಹೇಗೆ ಸೃಷ್ಟಿಸಲಾಯಿತೆಂಬುದನ್ನು.' ಅದೇ ವಾಕ್ಯದಲ್ಲಿ ಗೋಳಗಳ ಬಗ್ಗೆ ಆಲೋಚಿಸಿ ಕಲಿತು ತರುವಾಯ ದೇವಾಸ್ತಿತ್ವವನ್ನು ಖಚಿತಪಡಿಸಲು ಮಾನವನಿಗೆ ಅಲ್ಲಾಹನು ಆಜ್ಞಾಪಿಸುತ್ತಾನೆ.

ಹಾಗೆಯೇ ಪತಂಗ, ಜೇನ್ನೊಣ ಇತ್ಯಾದಿಗಳ ಬಗ್ಗೆಯೂ ಆಲೋಚಿಸಿ ಕಲಿಯುವಂತೆ

ಅಲ್ಲಾಹನು ಆದೇಶಿಸಿದ್ದಾನೆ. ಸೂರಾ: ಅನ್ನಹ್ಲ್‌ನ 68-69ನೇ ವಾಕ್ಯಗಳನ್ನು ಗಮನಿಸಿರಿ. ಅಲ್ಲಾಹನು ಹೇಳುತ್ತಾನೆ. "ನೋಡಿ! ನಿಮ್ಮ ಪ್ರಭುವು ಜೇನ್ನೊಣಗಳಿಗೆ ಬೋಧನೆ ನೀಡಿದ್ದಾನೆ. ಪರ್ವತಗಳಲ್ಲಿಯೂ ಮರಗಳಲ್ಲಿಯೂ ಮಣ್ಣಿನ ಮೇಲೆ ವ್ಯಾಪಿಸಿರುವ ಬಳ್ಳಿಗಳಲ್ಲಿಯೂ ನೀವು ಗೂಡುಕಟ್ಟಿರಿ. ಎಲ್ಲ ರೀತಿಯ ಫಲಗಳಿಂದಲೂ ರಸ ಹೀರಿರಿ. ನಿಮ್ಮ ಪ್ರಭುವು ಸಜ್ಜುಗೊಳಿಸಿದ ಹಾದಿಯ ಮೂಲಕ ಸಾಗಿರಿ. ಈ ಜೇನ್ನೊಣಗಳ ಒಡಲಿನಿಂದ ವರ್ಣವೈವಿಧ್ಯವಿರುವ ಒಂದು ಪಾನೀಯ ಸೃಜಿಸಲ್ಪಡುತ್ತದೆ. ಅದರಲ್ಲಿ ಮಾನವನಿಗೆ ರೋಗ ಶಮನವಿದೆ. ಖಂಡಿತವಾಗಿಯೂ ಆಲೋಚಿಸುವ ಜನರಿಗೆ ಇದರಲ್ಲೊಂದು ದೃಷ್ಟಾಂತವಿದೆ."

ಹೀಗೆ ಅನೇಕ ಕಡೆಗಳಲ್ಲಿ ವಿವಿಧ ವಿಷಯಗಳ ಕುರಿತು ಕಲಿಯಲು ಆಲೋಚಿಸಲು ಕುರ್‌ಆನ್ ಆದೇಶಿಸುತ್ತದೆ. ಕೇವಲ ಜ್ಞಾಪಕಕ್ಕಾಗಿ ಒಂದೆರಡು ಉದಾಹರಣೆಗಳನ್ನಷ್ಟೆ ಇಲ್ಲಿ ಸೂಚಿಸಲಾಗಿದೆ. ಈ ಮೂಲಕ ಅಲ್ಲಾಹನು ಮಾನವನನ್ನು ಚಿಂತನೆ ಮತ್ತು ಅಧ್ಯಯನ ನಡೆಸಬೇಕೆಂದು ಎಚ್ಚರಿಸಿದ್ದಾನೆ. ಕುರ್‌ಆನನ್ನು ಕೇವಲ ವಾಚನಕ್ಕೆ ಸೀಮಿತಗೊಳಿಸಿ ಪುಣ್ಯ ಸಂಪಾದಿಸುವುದಕ್ಕಿರುವುದಲ್ಲವೆಂಬ ಸತ್ಯವನ್ನು ನಾವು ಮರೆಯಬಾರದು. ಇಷ್ಟೆಲ್ಲಾ ತಿಳಿದಿದ್ದೂ ನಮ್ಮ ಹೃದಯ ಮೆದುವಾಗುವುದಿಲ್ಲ. ಈ ಪರಿಸ್ಥಿತಿ ಎಲ್ಲಿಯ ವರೆಗೆ ತಲಪಿದೆಯೆಂದರೆ ಜುಮ್‌ಆ ಕುತ್‌ಬದಲ್ಲಿಯೂ ಯಾರೋ ಬರೆದಿಟ್ಟ ಅರಬೀ ಭಾಷಣವನ್ನು ಓದುವುದೇ ಪುಣ್ಯದಾಯಕವೆಂದು ನಮ್ಮಲ್ಲಿ ಹೆಚ್ಚಿನವರು ಭಾವಿಸುತ್ತಾರೆ. ಅದನ್ನೂ ತಿಳಿಯಬಾರದು. ಹೀಗೆ ಸಾಗಿದರೆ ಮುಸ್ಲಿಮ್ ಸಮುದಾಯ ಎಲ್ಲಿಗೆ ತಲಪೀತೆಂದು ನೋಡಿಯೇ ತಿಳಿಯಬೇಕಷ್ಟೆ. ಇದು ನಮ್ಮಿಂದ ಜಾಹಿಲಿಯ್ಯತ್ ಮತ್ತು ಪೌರೋಹಿತ್ಯ ಇನ್ನೂ ತೊಲಗಿಲ್ಲದ ಲಕ್ಷಣಗಳಾಗಿವೆ.

ಇನ್ನು, ಇಸ್ಲಾಮಿನ ಆರಂಭ ಕಾಲದ ಪಂಡಿತರ ಇತಿಹಾಸ ಮತ್ತು ಸೇವೆಯನ್ನು ಪರಿಶೀಲಿಸೋಣ. ಅವರು ಲೌಕಿಕ ಮತ್ತು ಧಾರ್ಮಿಕ ಪಾಂಡಿತ್ಯದಲ್ಲಿ ಅಗಾಧಜ್ಞಾನ ಸಂಪಾದಿಸಿದ್ದರು. ಅದೇ ವೇಳೆ ಸಂಶೋಧಕರೂ ಸಮಾಜದ ಹಿತಸಾಧಕರೂ ಆಗಿದ್ದರು.

ಕೆಲವು ಉದಾಹರಣೆಗಳನ್ನು ನೋಡಿರಿ. ಮಹಾವಿದ್ವಾಂಸ ಹಾಗೂ ಸೂಫಿವರ್ಯರಾಗಿದ್ದ 'ಬಿನ್ ಸೀನಾ' ಜಗತ್ತಿನಾದ್ಯಂತ ಸರ್ವಾದರಣೀಯರಾಗಿದ್ದರು. ಪಾಶ್ಚಾತ್ಯ ಜಗತ್ತಿನಲ್ಲಿ ಅವರು 'ಅವಿಸಿನ್ನಾ' ಎಂದು ಖ್ಯಾತರಾಗಿದ್ದಾರೆ. ರಶ್ಯನ್ ಮೂಲದ 'ಬಿನ್ ಸೀನಾ'ರನ್ನು ಜಾಗತಿಕ ವೈದ್ಯ ಶಾಸ್ತ್ರದ ಜನಕರೆಂದು ಸದಾ ಸ್ಮರಿಸಲಾಗುತ್ತಿದೆ. ವೈದ್ಯಶಾಸ್ತ್ರದಲ್ಲಿ ಅವರು ನಡೆಸಿದ ಅಧ್ಯಯನ, ಅನ್ವೇಷಣೆ, ಸಂಶೋಧನೆಗಳು ಜಾಗತಿಕ ರಾಷ್ಟ್ರಗಳಿಗೆ ಇಂದಿಗೂ ಮಾರ್ಗದರ್ಶಕವಾಗಿವೆ.

ಅಂತೆಯೇ ಪ್ರಖ್ಯಾತ ಕುರ್‌ಆನ್ ವ್ಯಾಖ್ಯಾನಗಾರ, ವಿದ್ವಾಂಸ, ತಫ್ಸೀರ್ ರಾಝಿಯ

ಕರ್ತೃ ಇಮಾಮ್ ಫಕ್ರುದ್ದೀನ್ ರಾಝಿಯವರು ಓರ್ವ ವೈದ್ಯಕೀಯ ಸಂಶೋಧಕರಾಗಿದ್ದರೆಂಬುದು ಪ್ರಾಯಶ: ಮುಸ್ಲಿಮರಾದ ನಮಗೆ ತಿಳಿದಿಲ್ಲದಿರಬಹುದು. ಸಿಡುಬು ರೋಗಕ್ಕೆ ಪ್ರತಿಬಂಧಕ ಚುಚ್ಚು ಮದ್ದು ಮತ್ತು ಔಷಧಿಯನ್ನು ಇಮಾಮ್ ರಾಝಿಯವರು ಪ್ರಥಮವಾಗಿ ಜಗತ್ತಿಗೆ ಕಲಿಸಿಕೊಟ್ಟರೆಂಬುದನ್ನು ಜಗತ್ತು ಇಂದಿಗೂ ಜ್ಞಾಪಿಸುತ್ತಿದೆ. ಮೆಡಿಕಲ್ ಕಾಲೇಜುಗಳಲ್ಲಿಯೂ ಆಸ್ಪತ್ರೆಗಳಲ್ಲಿಯೂ ಅವರು ಸಿಡುಬು ರೋಗಿಯನ್ನು ಪರೀಕ್ಷಿಸುವ ಚಿತ್ರವನ್ನು ನಾವು ಕಾಣಬಹುದಾಗಿದೆ. ಅದರ ಕೆಳಗೆ 'ರಾಝೀಸ್' (RAZEES) ಎಂದು ಬರೆದಿರುತ್ತದೆ.

ಎಂಟು ಶತಮಾನಗಳ ತನಕ ಸ್ಪೈನ್ ಮುಸ್ಲಿಮರ ಆಡಳಿತಕ್ಕೊಳಪಟ್ಟಿತ್ತು. ಎರಡು ಸಾವಿರ ವರುಷಗಳ ಸ್ಪೈನ್‌ನ ಇತಿಹಾಸದಲ್ಲಿ ಸ್ವರ್ಣಲಿಪಿಯಿಂದ ಉಲ್ಲೇಖಿಸಲ್ಪಟ್ಟ ಆ ಕಾಲದ ಪ್ರಗತಿಯು ಪ್ರಖ್ಯಾತವಾಗಿತ್ತು. ಮುಸ್ಲಿಮ್ ವಿದ್ವಾಂಸರು ಮತ್ತು ವಿಜ್ಞಾನಿಗಳು ಶಿಕ್ಷಣ ಮತ್ತು ತಾಂತ್ರಿಕ ಜ್ಞಾನದಲ್ಲಿ ಅನ್ಯ ರಾಷ್ಟ್ರಗಳು ತಲುಪಲಾಗದ ಮಟ್ಟಕ್ಕೆ ಆ ರಾಷ್ಟ್ರವನ್ನು ತಲಪಿಸಿದ್ದರು.

ಯೂರೋಪಿನಲ್ಲಿ ವಿಜ್ಞಾನ ಮತ್ತು ಕಲೆಯ ಪ್ರಕಾಶ ಚೆಲ್ಲಲು ಮುಸ್ಲಿಮರಿಗೆ ಸಾಧ್ಯವಾಯಿತು. ಅದನ್ನು ಸ್ಪೈನ್‌ನ ಸ್ವರ್ಣಕಾಲವೆಂದು ಜಗತ್ತು ವರ್ಣಿಸುತ್ತದೆ. ಸ್ಪೈನ್ ಒಂದು ಪುಟ್ಟ ರಾಷ್ಟ್ರವಾಗಿದ್ದರೂ ವಿಜ್ಞಾನ, ಕಲೆ, ನಾಗರಿಕತೆ, ಸಂಸ್ಕೃತಿ ಇತ್ಯಾದಿಗಳಲ್ಲಿ ಇಸ್ಲಾಮೀ ಜಗತ್ತಿನ ಯಾವುದೇ ರಾಷ್ಟ್ರಕ್ಕೂ ಕಡಿಮೆಯಿರಲಿಲ್ಲ. ಧರ್ಮ ವಿದ್ವಾಂಸರಲ್ಲಿ ''ಬಿನ್ ಹಸಮ್'' 'ಬಿನ್ ಅಬ್ದುರ‍್ರಬ್' 'ಬಿನ್ ಅರಬಿ'; ತತ್ವ ಚಿಂತಕರಲ್ಲಿ ಬಿನ್ ರುಶ್ದ್, ಬಿನ್ ತುಫೈಲ್, ವಿಜ್ಞಾನಿಗಳಲ್ಲಿ ಸಹ್ರಾವಿ, ಬಿನ್‌ಸಹರ್; ಇತಿಹಾಸಕಾರರಲ್ಲಿ ಕತ್ತೀಸ್, ಬಿನ್‌ಅಬ್ದುರ‍್ರಬ್; ಕವಿಗಳಲ್ಲಿ ಬಿನ್ ಸೈದ್ದುನ್, ಬಿನ್ ಅಮ್ಮಾರ್ ಮುಂತಾದವರು ಮುಸ್ಲಿಮ್ ಆಡಳಿತ ಕಾಲದಲ್ಲಿ ಪ್ರಖ್ಯಾತರಾಗಿದ್ದರು. ಇಸ್ಲಾಮ್ ಜ್ಞಾನ ಸಂಪಾದನೆಗೆ ನೀಡಿದ ಪ್ರೇರಣೆಯಿಂದಾಗಿಯೇ ಇಂಥ ಜಗತ್ಪ್ರಸಿದ್ಧ ಮೇಧಾವಿಗಳು ಬೆಳಕಿಗೆ ಬರಲು ಕಾರಣವಾಯಿತು.

ಜಗತ್ತಿನಲ್ಲಿ ವಿಮಾನ ತಯಾರಿಯ ಪ್ರಥಮ ಪ್ರಯತ್ನವು ಮುಸ್ಲಿಮ್ ಸ್ಪೈನ್‌ನಲ್ಲಿಯೇ ಆರಂಭಗೊಂಡಿತ್ತು. ಅಬ್ಬಾಸ್ ಬಿನ್ ಫರ್ನಾಸ್ ಎಂಬ ವಿಜ್ಞಾನಿಯು ತಯಾರಿಸಿದ್ದ ವಿಮಾನವು ಆಕಾಶದಲ್ಲಿ ಸ್ವಲ್ಪ ದೂರ ಹಾರಿ ಉರುಳಿ ಬಿತ್ತು. ಪ್ರತಿಭಾನ್ವಿತ 'ಬಿನ್‌ಫರ್ಸ್' ಎಂಬ ವಿಜ್ಞಾನಿ ಸ್ವಗೃಹದಲ್ಲಿ ಸೂರ್ಯ, ಚಂದ್ರ, ನಕ್ಷತ್ರಾದಿ ಗೋಳಗಳಿರುವ ಒಂದು ಕೃತಕ ಆಕಾಶವನ್ನೇ ರಚಿಸಿದ್ದರು. ಕಲ್ಲಿನಿಂದ ಕನ್ನಡಿ ತಯಾರಿಸುವ ತಂತ್ರವನ್ನೂ ಅವರು ಸಂಶೋಧಿಸಿದ್ದರು.

'ಬಿನ್ ಅವಾಮ್' ಎಂಬ ವಿಜ್ಞಾನಿಯು ವೈಜ್ಞಾನಿಕ ಕೃಷಿ ಪದ್ಧತಿಯನ್ನು ಪ್ರಚಾರ

ಪಡಿಸಿದರು. ಅವರ ಸಂಶೋಧನೆಗಳು ಕೃಷಿರಂಗದ ಅಭಿವೃದ್ಧಿಗೆ ಪ್ರೇರಕವಾಯಿತು. ಭೂಮಿಯನ್ನು ಕೃಷಿಗೆ ಯೋಗ್ಯಗೊಳಿಸಿ ಉತ್ತಮಫಸಲು ಪಡೆಯುವ ಅನೇಕ ವಿಧಾನಗಳನ್ನು ಅವರ ಗ್ರಂಥದಲ್ಲಿ ವಿವರಿಸಲಾಗಿದೆ. ಅವರ ಸಂಶೋಧನೆಗಳ ಆಧಾರದಲ್ಲಿ ಭತ್ತ, ಲಿಂಬೆ, ಕಿತ್ತಳೆ, ದ್ರಾಕ್ಷೆ, ಬಾಳೆ ಮುಂತಾದ ಫಲವಸ್ತುಗಳನ್ನು ಸ್ಪೈನ್‌ನಲ್ಲಿ ಮುಸ್ಲಿಮರು ಪ್ರಥಮವಾಗಿ ಬೆಳೆಸಿದರು. ಆ ತನಕ ಸ್ಪೈನ್ ಅಥವಾ ಯುರೋಪಿನಲ್ಲಿ ಅವುಗಳನ್ನು ಬೆಳೆಸುತ್ತಿರಲಿಲ್ಲ. ಅನಂತರ ಸ್ಪೈನ್‌ನಿಂದ ಅವು ಇತರ ಐರೋಪ್ಯ ರಾಷ್ಟ್ರಗಳಿಗೆ ತಲಪಿತು.

ಇಮಾಮ್ ಕುರ್ತುಬಿ (ಕೊರ್ಡೋವಾ), ಅರಬೀ ವ್ಯಾಕರಣ ಪಂಡಿತ ಬಿನ್ ಮಾಲಿಕ್(ರ) ಮುಂತಾದ ಅಗ್ರೇಸರ ವಿದ್ವಾಂಸರನ್ನು ಮುಸ್ಲಿಮ್ ಸ್ಪೈನ್ ಕೊಡುಗೆ ನೀಡಿದೆ.

ಹಿಂದಿನ ಕಾಲದಲ್ಲಿ ಇಸ್ಲಾಮೀ ಶಿಕ್ಷಣದಲ್ಲಿ ವಿಭಜನೆಯಿರಲಿಲ್ಲವೆಂಬುದನ್ನು ಮೇಲಿನ ಉದಾಹರಣೆಗಳು ಸ್ಪಷ್ಟಪಡಿಸುತ್ತವೆ. ಅಂದು ಮುಸ್ಲಿಮ್ ಸಮುದಾಯದಲ್ಲಿ ಎಲ್ಲವನ್ನೂ ಕಲಿಯಬೇಕೆಂಬ ನೀತಿ ರೂಢಿಯಲ್ಲಿತ್ತು. ಕಾಲ ಕ್ರಮೇಣ ಮುಸ್ಲಿಮರ ಆಡಳಿತ ಪ್ರತಾಪ ಕುಸಿಯಿತು. ಬ್ರಿಟಿಷರ ಹಾಗೂ ಕ್ರೈಸ್ತನಾಯಕರ ದಬ್ಬಾಳಿಕೆಗೆ ಇಸ್ಲಾಮೀ ಆಡಳಿತಗಳು ಬಲಿಯಾದುವು. ಮುಸ್ಲಿಮರ ಅನೈಕ್ಯ ಮತ್ತು ಧರ್ಮಭ್ರಷ್ಟತೆಯು ಅದಕ್ಕೆ ಕಾರಣವಾಯಿತು. ತನ್ನಿಮಿತ್ತ ಮುಸ್ಲಿಮರು ಶಿಥಿಲಗೊಂಡು ವೈರಿಗಳು ಅವರ ಇಸ್ಲಾಮೀ ಚೈತನ್ಯ ಮತ್ತು ತತ್ವಸಿದ್ಧಾಂತಗಳನ್ನು ಕಿತ್ತೆಸೆಯುವ ನಿಟ್ಟಿನಲ್ಲಿ ಯಶಸ್ವಿಯಾದರು.

ಮುಸ್ಲಿಮರ ವೈಜ್ಞಾನಿಕ ಸಾಧನೆಗಳನ್ನು ಅವರು ಸ್ವಾಯತ್ತಗೊಳಿಸಿದರು. ಇಸ್ಲಾಮಿಗೆ ಕಳಂಕ ಹಚ್ಚುವ ಕಟ್ಟುಕಥೆಗಳನ್ನು ಇಸ್ಲಾಮ್ ಮತ್ತು ಮುಸ್ಲಿಮರ ಮೇಲೆ ಹೊರಿಸಿದರು. ಇಸ್ಲಾಮಿನ ಕುರಿತು ಕುಪ್ರಚಾರ ನಡೆಸಿದರು. ಉಳಿದ ಮುಸ್ಲಿಮರಲ್ಲಿ ಏಕದೇವ ವಿಶ್ವಾಸವನ್ನು ಅಳಿಸಿಬಿಡಲಿಕ್ಕಾಗಿ ಓರಿಯಂಟಲಿಸ್ಟರ ಮೂಲಕ ತೀವ್ರವಾಗಿ ಪ್ರಯತ್ನಿಸಿ ಅದರಲ್ಲಿ ಸ್ವಲ್ಪಂಶ ಜಯಸಾಧಿಸಿದರು. ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯನ್ನು ಕಲಿಯದ ವಿದ್ಯಾವಂತರೂ, ಸ್ವಾರ್ಥಿಗಳಾದ ವಿದ್ವಾಂಸ ವೇಷಧಾರಿಗಳೂ, ಏನೂ ತಿಳಿಯದ ಪಾಮರ ಜನರೂ ಅವರ ಕುಪ್ರಚಾರಗಳಿಗೆ ಮರುಳಾಗಿ ದಾರಿ ತಪ್ಪಿದರು. ಇದು ಮುಸ್ಲಿಮರ ಅಧಃಪತನ ಮತ್ತು ಅವನತಿಗೆ ಕಾರಣವಾಯಿತು.

ಮಧ್ಯಂತರ ಕಾಲದಲ್ಲಿ ಮುಸ್ಲಿಮರಲ್ಲಿ ಜಾಗೃತಿ ಮೂಡಿದಾಗ ಶಿಕ್ಷಣ ಪ್ರಸಾರಕ್ಕಾಗಿ ಅವರು ಪ್ರಯತ್ನಿಸಲಿಲ್ಲ. ಬದಲಾಗಿ ಬ್ರಿಟಿಷರ ಬಗ್ಗೆ ವೈರತ್ವ ಬೆಳೆಸಿ ಅವರ ಭಾಷೆಯನ್ನೂ ಅಸ್ಪೃಶ್ಯಗೊಳಿಸಿ ಸ್ವಯಂ ಹಿಂದುಳಿದರು ಮಾತ್ರವಲ್ಲ, ಗತ ಪ್ರತಾಪವನ್ನೂ ಮರಳಿ ಪಡೆಯುವ ಪ್ರಯತ್ನ ನಡೆಸಲಿಲ್ಲ.

ಅಂಥ ವಾತಾವರಣದಲ್ಲಿ ನಮ್ಮ ಮಿದುಳಿನಲ್ಲಿ ಮೂಡಿದ್ದ ಸಾಹಿತ್ಯ, ಕಲೆ, ಸಂಸ್ಕೃತಿ, ಶಾಸ್ತ್ರ, ಅಲಂಕಾರ, ಶಿಸ್ತು ಇತ್ಯಾದಿಗಳೆಲ್ಲವನ್ನೂ ಇತರರು ಸ್ವಾಧೀನಪಡಿಸಿ ಬಳಸಿಕೊಂಡರು. ನಮಗೆ ಕೇವಲ ಪ್ರೇಕ್ಷಕರಾಗಿರುವ ದುರ್ಗತಿ ಪ್ರಾಪ್ತವಾಯಿತು. ಭವಿಷ್ಯದ ಬಗ್ಗೆ ಪ್ರಜ್ಞಾವಂತರಾಗಿರಬೇಕಾದ ಪಂಡಿತರು ಮತ್ತು ನಾಯಕರು ಬಡವರನ್ನು ಶೋಷಿಸುವ ವರ್ಗವಾಗಿ ಮಾರ್ಪಟ್ಟಿತು. ಜನಸಾಮಾನ್ಯರು ಶಿಕ್ಷಣ ಪಡೆದರೆ ತಮ್ಮ ಹೊಟ್ಟೆಗೆ ಕುತ್ತು ಬಂದೀತೆಂಬ ಭೀತಿಯಿಂದ ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯ ಪ್ರೇರಕಗಳನ್ನು ಅವರು ಮರೆಮಾಚಿ ಸಮಾಜವನ್ನು ವಂಚಿಸಿದರು.

ಪ್ರವಾದಿ (ಸ) ಹೇಳಿದ್ದಾರೆ "ನನ್ನ ಸಮುದಾಯದಲ್ಲಿ ಎರಡು ವರ್ಗಗಳು ಒಳ್ಳೆಯವರಾದರೆ ಜನರೆಲ್ಲರೂ ಒಳ್ಳೆಯವರಾಗುತ್ತಾರೆ; ಅವರು ಕೆಟ್ಟರೆ ಜನರೆಲ್ಲರೂ ಕೆಡುತ್ತಾರೆ. ವಿದ್ವಾಂಸರು ಮತ್ತು ಪುರಪ್ರಮುಖರೇ ಆ ಎರಡು ವರ್ಗಗಳು."

ಆಧುನಿಕ ಮುಸ್ಲಿಮ್ ಜಗತ್ತಿನ ಅಧೋಗತಿಗೆ ಅದೇ ಮೂಲ ಕಾರಣವಾಗಿದೆ. 'ವಿದ್ವಾಂಸರು (ಉಲೆಮಾ) ಮತ್ತು ಗಣ್ಯರು (ಉಮರಾ) ಕೆಟ್ಟರು; ಸಮಾಜವು ದುಷ್ಕರ್ಮಗಳಿಗೆ ಸಿಲುಕಿತು. ಇಸ್ಲಾಮಿನ ಮುಖವನ್ನು ಅವರು ವಿಕೃತಗೊಳಿಸಿ ಮಂಡಿಸಿದರು. ಸತ್ಯ ಮತ್ತು ಮಿಥ್ಯಗಳನ್ನು ತಿಳಿಯುವ ಜನಸಾಮಾನ್ಯನ ಹಾದಿಯನ್ನು ತಡೆದರು. ಸತ್ಯವನ್ನು ತಿಳಿಯುವ ಅವರ ಹಂಬಲ ಕಡಿಮೆಯಾಯಿತು. ಪೌರೋಹಿತ್ಯ ಮತ್ತು ರಾಜಾಳ್ವಿಕೆಯನ್ನು ಧರ್ಮಬಾಹಿರವೆಂದು ವರ್ಣಿಸುವ ಇಸ್ಲಾಮಿನ ಅನುಯಾಯಿಗಳಲ್ಲಿ ಅವೆರಡೂ ಪ್ರಾಬಲ್ಯ ಪಡೆಯಿತು. ಮಾನವೀಯ ಸಹೋದರತೆ ಮತ್ತು ಸಮಾನತೆಯನ್ನು ಸಾರುವ ಕುರ್‌ಆನ್ ಮತ್ತು ಪ್ರವಾದಿಚರ್ಯೆಯನ್ನು ಕೈಬಿಡಲಾಯಿತು. ಸಮಾಜವನ್ನು ವರ್ಗೀಕರಿಸಿ ಪರಸ್ಪರ ರಕ್ತಪಾತಕ್ಕೆ ಅನುವು ಮಾಡಲಾಯಿತು. ಸ್ವತಂತ್ರ ಚಿಂತಕರನ್ನು ಖಂಡಿಸಲಾಯಿತು. ಭಾರತದಲ್ಲಿ ಈ ಪ್ರವಣತೆ ಮತ್ತಷ್ಟು ಬೆಳೆಯಿತು. ಯಾಕೆಂದರೆ, ಇಲ್ಲಿ ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯ ಬದಲಾಗಿ ವ್ಯಕ್ತಿ ಮತ್ತು ಸೃಷ್ಟಿ ಪೂಜೆಗೆ ಪ್ರಾಮುಖ್ಯತೆ ನೀಡಲಾಗುತ್ತಿತ್ತು. ತಿಳುವಳಿಕೆಯಿಲ್ಲದ ಪರಿಸ್ಥಿತಿಯಲ್ಲಿ ಹಿಂದೂ ಬಹುಸಂಖ್ಯಾತರಾಗಿರುವ ಭಾರತೀಯ ಜನತೆಯಲ್ಲಿ ಹಾಗೆ ಸಂಭವಿಸುವುದರಲ್ಲಿ ಅಚ್ಚರಿಯೇನಿಲ್ಲ.

ಇಸ್ಲಾಮಿನ ಕಡ್ಡಾಯಕರ್ಮಗಳ ಅನುಷ್ಠಾನಕ್ಕೂ ಜನಸಾಮಾನ್ಯರು ಅರ್ಹರಲ್ಲವೆಂದು ನಂಬಿದ್ದ ಮುಸ್ಲಿಮರು ಭಾರತದಲ್ಲಿದ್ದರು. ಬಡ ಪಾಮರ ಜನರು ಅವುಗಳ ಹೊಣೆಯನ್ನು ಪೀರ್ ಮತ್ತು ದರ್ವೇಶರಿಗೆ ಒಪ್ಪಿಸಿ ತಾವು ಕೃತಾರ್ಥರೆಂದು ಭಾವಿಸುತ್ತಿದ್ದರು. ದಕ್ಷಿಣ ಮತ್ತು ಉತ್ತರ ಭಾರತಗಳಲ್ಲಿ ಈ ಅಧಾರ್ಮಿಕತೆಗಳು ವ್ಯಾಪಕವಾಗಿದ್ದುವು. ಇಂದು ಇತರೆಡೆಗಳಲ್ಲಿಯೂ ಅಂಥ ಕಂದಾಚಾರ ಕಂಡು ಬರುತ್ತಿದೆ. ರಾಜಾಡಳಿತ ಮತ್ತು ರಾಜಭಕ್ತಿಯಿಂದ ಬೆಳೆದು ಬಂದ ವ್ಯಕ್ತಿ ಪೂಜೆ ಮತ್ತು ಪೌರೋಹಿತ್ಯವನ್ನು ಮೂಲಭೂತ

ಸಿದ್ಧಾಂತಗಳ ಪ್ರಚಾರದಿಂದ ಮಾತ್ರ ಸರಿಪಡಿಸಲು ಸಾಧ್ಯ.

ಮೂಢನಂಬಿಕೆ, ಅನಾಚಾರ, ಧರ್ಮಭ್ರಷ್ಟತೆಯಲ್ಲಿ ಸಿಲುಕಿದ ಭಾರತೀಯ ಮುಸ್ಲಿಮರ ಸುಧಾರಣೆಗಾಗಿ ಅನೇಕ ವಿದ್ವಾಂಸರು, ಸೂಫೀವರ್ಯರು ತೀವ್ರ ಪ್ರಯತ್ನ ನಡೆಸಿದ್ದಾರೆ. ಅದರಲ್ಲಿ ಅವರು ಭಾಗಶಃ ಯಶಸ್ವಿಯೂ ಆಗಿದ್ದಾರೆ. ಹಿಂದಿನ ಕಾಲದ ಅಂಥ ಸುಧಾರಕರಲ್ಲಿ ಹಝ್ರತ್ ಖ್ವಾಜಾ ಮುಈನುದ್ದೀನ್ ಚಿಶ್ತಿ (ರ), ಹಝ್ರತ್ ಶಾ ವಲಿಯುಲ್ಲಾಹ್ ದಹ್ಲವಿ(ರ) ಮುಜದ್ದಿದೆ ಅಲ್ಫಸಾನಿ ಸರ್‌ಹಿಂದ್ (ರ) ಹಝ್ರತ್ ಮೌಲಾನಾ ಮುಹಮ್ಮದ್ ಕಾಸಿಮ್ ನಾನೂತ್ವಿ (ರ) ಹಝ್ರತ್ ಮೌಲಾನಾ ಇಲ್ಯಾಸ್ ಸಾಹೆಬ್(ರ) ಶಾ ಅನ್ವರ್ ಕಾಶ್ಮೀರಿ (ರ) ಮೌ॥ ಹುಸೈನ್ ಅಹ್ಮದ್ ಮದನಿ (ರ) ಮುಂತಾದ ಘನ ವಿದ್ವಾಂಸರು ಮತ್ತು ಸೂಫಿವರ್ಯರು ಸೇರಿದ್ದಾರೆ. ಇಂದು ಜೀವಿಸಿರುವವರಲ್ಲಿ ಅಬುಲ್‌ಹಸನ್ ಅಲಿ ನದವಿಯಂಥವರು ಇಸ್ಲಾಮ್ ಮತ್ತು ಮುಸ್ಲಿಮರ ಉದ್ಧಾರಕ್ಕಾಗಿ ಜಾಗತಿಕ ಮಟ್ಟದಲ್ಲಿ ಪ್ರಯತ್ನಿಸುತ್ತಿದ್ದಾರೆ.

ಆಧುನಿಕ ಮಾನವನ ನಿಬಿಡ ಜೀವನದಲ್ಲಿ ಜನಸಾಮಾನ್ಯರನ್ನು ಪ್ರಜ್ಞಾವಂತಗೊಳಿಸಲು ಕುರ್‌ಆನ್ ಹಲವು ಮಾರ್ಗಗಳನ್ನು ಸೂಚಿಸಿದೆ. ಸಮಾಜವು ಅದನ್ನು ಬಳಸಿಕೊಳ್ಳಬೇಕು. ಶುಕ್ರವಾರದ 'ಖುತ್‌ಬಾ'ವು ಆ ಗುರಿಸಾಧನೆಯ ಒಂದು ಪ್ರಮುಖ ಉಪಾಧಿಯಾಗಿದೆ. ಜನರಿಗೆ ತಿಳುವಳಿಕೆ ನೀಡುವುದೇ 'ಖುತ್‌ಬಾ'ದ ಧ್ಯೇಯ. ಕೇವಲ ಯಾರೋ ಸಾಂಪ್ರದಾಯಿಕವಾಗಿ ಬರೆದ ಕೆಲವು ಅರಬಿ ಭಾಷಣಗಳನ್ನು ಓದಿದರೆ ಸಾಲದು. ಅದನ್ನು ಜನರಿಗೆ ತಿಳಿದಿರುವ ಭಾಷೆಯಲ್ಲಿ ಅಗತ್ಯವಿರುವ ಉಪದೇಶ ನಿರ್ದೇಶಗಳನ್ನು ನೀಡುವಂತಿರಬೇಕು. ಇದು ಪ್ರವಾದಿ ಚರ್ಯೆಯಾಗಿದೆ. ಪ್ರವಾದಿವರ್ಯ(ಸ)ರು ಜನರಿಗೆ ಅರ್ಥವಾಗದ ಭಾಷೆಯಲ್ಲಿ ಒಮ್ಮೆಯೂ ಖುತ್‌ಬಾ ನಡೆಸಿರಲಿಲ್ಲ.

ಇಸ್ಲಾಮಿನ ಆರಂಭಕಾಲದಲ್ಲಿ ಸಮಾಜೋದ್ಧಾರಕ್ಕಾಗಿ ಕಾಲೇಜು ಅಥವಾ ವಾರ್ಸಿಟಿಗಳಿರಲಿಲ್ಲ. ಮಸೀದಿ ಮತ್ತು ಮಠಗಳನ್ನು ಅದಕ್ಕಾಗಿ ಬಳಸಲಾಯಿತು. ಅದು ಹೆಚ್ಚು ಫಲದಾಯಕವೂ ಆಗಿದೆ. ಇಂದು ಮಸೀದಿಗಳು ಹೇರಳವಾಗಿದ್ದರೂ ಅಲ್ಲಿ ಬೋಧನೆ ಉಪದೇಶಗಳು ನಡೆಯುವುದಿಲ್ಲ. ಅಲ್ಲಾಹನ ಪವಿತ್ರ ಮಸೀದಿಯಲ್ಲಿ ಅಲ್ಲಾಹೇತರರನ್ನು ಕರೆದು ಪ್ರಾರ್ಥಿಸುವುದಕ್ಕೆ ಅಡ್ಡಿಯಿಲ್ಲ. ಆದರೆ ಅಲ್ಲಾಹನ ಆರಾಧನೆಗಾಗಿ ಉಪದೇಶಿಸುವುದನ್ನು ವಿರೋಧಿಸಲಾಗುತ್ತಿದೆ. ಎಂಥ ವೈರುಧ್ಯ!

ಇಂದು ನಮ್ಮ ಹೆಚ್ಚಿನ ಮಸೀದಿಗಳಲ್ಲಿ ಧ್ವನಿವರ್ಧಕದ ಮೂಲಕ ಬಾಂಗ್, ಜನರಿದ್ದರೆ ಪ್ರಹಸನದಂತೆ ಒಂದು ಜಮಾಅತ್ ಮತ್ತು ಕೆಲವಾರು ಸಾಂಪ್ರದಾಯಿಕತೆಗಳು ನಡೆಯುತ್ತಿವೆ. ಈ ಪರಿಸ್ಥಿತಿಯನ್ನು ಬದಲಾಯಿಸುವುದಕ್ಕಾಗಿ 1975ರ ಸೆಪ್ಟೆಂಬರ್‌ನಲ್ಲಿ ರಾಬಿತತುಲ್ ಆಲಮಿಲ್ ಇಸ್ಲಾಮಿಯ (Muslim world leaguc) ಆಶ್ರಯದಲ್ಲಿ

80 ರಾಷ್ಟ್ರಗಳ ವಿದ್ವಾಂಸರು, ಇಮಾಮರು ಮತ್ತಿತರ ಧಾರ್ಮಿಕ ನಾಯಕರು ಸೇರಿದ್ದ ಜಾಗತಿಕ ಮಸೀದಿ ಮಂಡಳಿಯ ಸಭೆಯನ್ನು ಮಕ್ಕಾದಲ್ಲಿ ಜರಗಿಸಲಾಗಿತ್ತು. ಜಾಗತಿಕ ಮುಸ್ಲಿಮ್‌ಮಸೀದಿಗಳನ್ನು ಸಕ್ರಿಯಗೊಳಿಸಿ ಅವುಗಳನ್ನು ಪ್ರವಾದಿವರ್ಯರ ಕಾಲದ ಮಸೀದಿಗಳಂತೆ ಶೈಕ್ಷಣಿಕ - ಸಾಂಸ್ಕೃತಿಕ ಕೇಂದ್ರವಾಗಿ ಬೆಳೆಸುವ ಹಲವು ನಿರ್ಧಾರಗಳನ್ನು ಕೈಗೊಳ್ಳಲಾಗಿತ್ತು. ಆ ನಿರ್ಧಾರಗಳಲ್ಲಿ 'ಜುಮ್‌ಆ ಕುತ್‌ಬ'ದ ಕಡ್ಡಾಯ ವಿಧಿ (ಫರ್ಳ್)ಗಳನ್ನು ಅರಬಿಯಲ್ಲಿಯೂ, ಉಪದೇಶವನ್ನು ಶ್ರೋತೃಗಳಲ್ಲಿ ಬಹುಮಂದಿ ಅರಬಿಭಾಷೆ ತಿಳಿಯದವರಾಗಿದ್ದರೆ ಅವರ ಮಾತೃಭಾಷೆಯಲ್ಲಿಯೂ ನಿರ್ವಹಿಸಬೇಕೆಂಬುದು ಮುಖ್ಯವಾಗಿತ್ತು. ಇದು ಶರೀಅತ್ ಅನ್ವಯ ಜಾಗತಿಕ ಮುಸ್ಲಿಮ್ ಸಂಸ್ಥೆಯ ಕರೆಯಾಗಿದೆ. ಈ ಕರೆಯನ್ನಾದರೂ ಅಂಗೀಕರಿಸಿದರೆ ಈ ಸಮುದಾಯವು ಸ್ವಲ್ಪ ಮಟ್ಟಿಗಾದರೂ ಪ್ರಜ್ಞಾವಂತರಾಗಿ ಕರ್ಮನಿರತವಾಗಬಹುದು.

(ಕನ್ನಡಕ್ಕೆ: ಪಿ.ಎನ್.ಎಮ್.)

------

● ಅಮೃತ ಸೋಮೇಶ್ವರ
ಕನ್ನಡ ವಿಭಾಗ ಮುಖ್ಯಸ್ಥ,
ವಿವೇಕಾನಂದ ಕಾಲೇಜು,
ಪುತ್ತೂರು, ದ.ಕ. 574 203.

# ಆಧುನಿಕ ಶಿಕ್ಷಣ ವ್ಯವಸ್ಥೆ ಮತ್ತು ನೈತಿಕ ಪ್ರಜ್ಞೆ

ಆಧುನಿಕ ಶಿಕ್ಷಣ ವ್ಯವಸ್ಥೆಯೆಂಬುದು ರೂಪುಗೊಂಡದ್ದು ಬ್ರಿಟಿಷ್ ವಸಾಹತುಶಾಹೀ ಆಳ್ವಿಕೆಯ ಹಿನ್ನೆಲೆಯಲ್ಲಿ ಎಂಬುದನ್ನು ಗಮನಿಸಬೇಕು. ಇದನ್ನು ಆರಂಭದಲ್ಲಿ ರೂಪಿಸಿದ್ದ ಆಂಗ್ಲರಿಗೆ ಬೇಕಾಗಿದ್ದದ್ದು ಭಾರತೀಯ ಪರಂಪರೆಯ, ನೀತಿ ಮತ್ತೆಯ ಹಿನ್ನೆಲೆಯ ವಿದ್ಯಾಭ್ಯಾಸದ ಕೊಡುಗೆಯಲ್ಲ; ಅವರ ಆಡಳಿತಕ್ಕೆ ಪೂರಕವಾದ ವ್ಯವಹಾರ ಜ್ಞಾನವುಳ್ಳ ವ್ಯಕ್ತಿಗಳ ನಿರ್ಮಾಣ. ಇದರ ಪರಿಣಾಮವಾಗಿ ಆಧುನಿಕ ವಿದ್ಯಾಭ್ಯಾಸವೆಂಬುದು ಅತ್ತ ಪಾಶ್ಚಾತ್ಯವೂ ಅಲ್ಲದ, ಇತ್ತ ಪೌರ್ವಾತ್ಯವೂ ಅಲ್ಲದ ಕೆಲವೊಂದು ವಿಷಯಗಳ ವಿಚಿತ್ರ ಸಮೀಕರಣವಾಯಿತು. ಸ್ವಾತಂತ್ರ್ಯೋತ್ತರ ಕಾಲದಲ್ಲೂ ವಿದ್ಯಾಭ್ಯಾಸ ಪದ್ಧತಿಯಲ್ಲಿ ಆಮೂಲಾಗ್ರ ಬದಲಾವಣೆ ಆಗಿಲ್ಲ.

ವಿದ್ಯಾಭ್ಯಾಸವೆಂದರೆ ವ್ಯಕ್ತಿಯ ಸರ್ವತೋಮುಖ ಪ್ರಗತಿಯ, ಶೀಲಸಮೃದ್ಧಿಯ ಬುನಾದಿ; ಸಮಾಜದ ಹೃದಯ ಪ್ರಕಾಶದ ಪ್ರವರ್ಧನೆ; ರಾಷ್ಟ್ರೀಯ ಜೀವಸತ್ವದ ವಿಕಾಸದ ಪ್ರಕ್ರಿಯೆ. ವಿದ್ಯಾಬೋಧನೆಯೆಂಬುದು ಕೇವಲ ಕೆಲವು ವಿಷಯಗಳ ಉರು ಹೊಡೆಯುವಿಕೆ ಗಷ್ಟೇ ಮೀಸಲಾದರೆ ವಿದ್ಯಾರ್ಥಿಗಳೇನೋ ಆಯಾ ವಿಷಯಗಳಲ್ಲಿ ಪರಿಣತಿ ಪಡೆಯಬಹುದು. ಆದರೆ ಅಂಥ 'ವಿದ್ಯಾವಂತ' ರೆಲ್ಲ ಉತ್ತಮ 'ಮನುಷ್ಯ' ರಾದಾರೆಂದು ಹೇಳುವುದು ದುಸ್ತರ.

ಉತ್ತಮ ಮಾನವನಾಗಲು ಹೃದಯಸಂಸ್ಕಾರ ಮುಖ್ಯ, ಹೃದಯ ಸಂಸ್ಕಾರವು

ನೀತಿಪ್ರಜ್ಞೆಯಿಂದ ಉತ್ಪನ್ನವಾಗುತ್ತದೆ. ಹಾಗಾಗಿ ನೀತಿಪ್ರಜ್ಞೆಯ ಬಲವಿಲ್ಲದ ವಿದ್ಯಾಭ್ಯಾಸವು ಅಪೇಕ್ಷಿತ ಸತ್ಪರಿಣಾಮಗಳನ್ನು ಉಂಟುಮಾಡುವುದಿಲ್ಲ.

ನೀತಿ ಎಂದರೆ ಋಜುವಾದ ಅಥವಾ ಸಮಂಜಸವಾದ ಬದುಕಿನ ರೀತಿ. ಇದು ಜಗತ್ತಿನ ಸರ್ವರಿಗೂ ಬೇಕಾದುದು. ಎಲ್ಲ ಮತಧರ್ಮಗಳೂ ನೀತಿಯನ್ನು ಬೋಧಿಸುತ್ತವೆ. ಆದರೆ ಎಲ್ಲ ಮತಧರ್ಮಗಳು ಪ್ರತಿಪಾದಿಸುವ ನೀತಿ ಸಂಹಿತೆಯನ್ನು ಮೀರಿರುವ ಒಂದು ಧರ್ಮವಿದೆ. ಅದೇ ಮಾನವೀಯತೆ. ಅಂಥ ಮಾನವತೆಯ ಅನುಷ್ಠಾನಕ್ಕೆ ಇರತಕ್ಕ ಸಾಧನವೇ ನೀತಿ. ಇದು ಸಾರ್ವಕಾಲಿಕ ಹಾಗೂ ಸಾರ್ವಜನಿಕ.

ಇಂದಿನ ದಿನಗಳಲ್ಲಿ ಸಮಾಜದಲ್ಲಿ ನೀತಿಯ ಕಲ್ಪನೆಯೇ ಹದಗೆಟ್ಟಿದೆಯೆಂದೂ ಅನೀತಿಯೇ ಎಲ್ಲೆಲ್ಲೂ ತಾಂಡವವಾಡುತ್ತದೆಂದೂ ಹಲವರು ತಿಳಿಯುತ್ತಾರೆ; ಹೇಳುತ್ತಾರೆ. (ಆದರೆ, ಇದು ಪೂರ್ತಿ ನಿಜವಲ್ಲ!) ಪತ್ರಿಕೆ, ಬಾನುಲಿ, ದೂರದರ್ಶನಗಳಂಥ ಮಾಧ್ಯಮಗಳಲ್ಲಿಯೂ ದುರ್ವಾರ್ತೆಗಳು ಧಾರಾಳವಾಗಿ ಪ್ರಕಟವಾಗುತ್ತವೆ. ನಿರ್ಮಲವಾಗಿರ ಬೇಕೆಂದು ಬಯಸಲಾಗುವ ಶಿಕ್ಷಣರಂಗದಲ್ಲೂ ಅವ್ಯವಹಾರ, ಅನೀತಿ ಪ್ರಸಂಗಗಳು ನಡೆಯುವುದುಂಟು. ವಿಶ್ವವಿದ್ಯಾನಿಲಯಗಳು ರಣರಂಗವಾಗುವುದುಂಟು.

ವಿದ್ಯಾರ್ಥಿ ಸಮುದಾಯದ ತರತರದ ವರ್ತನೆಗಳು ವರದಿಯಾಗುತ್ತಿರುತ್ತವೆ. ಚಿಕ್ಕಪುಟ್ಟ ವಿಷಯಗಳಿಗೂ ವಿದ್ಯಾರ್ಥಿಗಳು ಬೀದಿಗಿಳಿಯುವುದನ್ನೂ, ಮುಷ್ಕರ ಹೂಡುವುದನ್ನೂ ನೋಡುತ್ತೇವೆ. ವಿದ್ಯಾರ್ಥಿಗಳ ದುಡುಕಿನಿಂದ ಅನೇಕ ವೇಳೆ ಹಿಂಸಾಚಾರ ಭುಗಿಲೇಳುತ್ತದೆ. ಶಾಲಾ ಕಾಲೇಜುಗಳಲ್ಲಿ, ವಿದ್ಯಾರ್ಥಿನಿಲಯಗಳಲ್ಲಿ, ವಿದ್ಯಾರ್ಥಿಗಳ (ಕೆಲವೊಮ್ಮೆ ವಿದ್ಯಾರ್ಥಿನಿಯರದೂ) ವರ್ತನೆ ಮಿತಿಮೀರುತ್ತದೆ. ಯೌವನೋದಯ ಕಾಲದಲ್ಲಿ ಕೆಲವರು ಸರಿಯಾದ ಮಾರ್ಗದರ್ಶನವಿಲ್ಲದೆ ತಪ್ಪು ದಾರಿಯಲ್ಲಿ ನಡೆಯುತ್ತಾರೆ. ಕೆಲವರು ವ್ಯಗ್ರರಾಗಿ ಹಿರಿಯ ತಲೆಮಾರಿನ ದ್ವೇಷಿಗಳಾಗುತ್ತಾರೆ. ಕೆಲವರು ಇನ್ನಿತರ ಅಸಂಗತ ಕಾರ್ಯಗಳಲ್ಲಿ ತೊಡಗುತ್ತಾರೆ. ಮೋಸ, ಕಳ್ಳತನಗಳಿಗೆ ಇಳಿಯುವವರೂ ಉಂಟು. ಹೀಗೆ ಇವರು ಸಮಾಜಕ್ಕೆ, ಸವಾಲಾಗುತ್ತಾರೆ. ಅವಿದ್ಯಾವಂತರು ಕೆಟ್ಟರೆ ಆಗುವ ಪರಿಣಾಮಕ್ಕಿಂತ 'ವಿದ್ಯಾವಂತ'ರು ಅನಿಷ್ಟಮಾರ್ಗಕ್ಕೆ ಬಿದ್ದರೆ ಆಗುವ ಅನಾಹುತ ಘೋರ!

ಇಂದು ಯುವ ಜನಾಂಗದಲ್ಲಿ ಕಂಡು ಬರುವ ಸಮಸ್ಯೆಗಳನ್ನು ಸಾಮಾಜಿಕ, ಮನಶ್ಶಾಸ್ತ್ರೀಯ, ಮಾನವೀಯ ಹಿನ್ನೆಲೆಯಲ್ಲಿ ವಿಶ್ಲೇಷಿಸಬೇಕಾಗುತ್ತದೆ. ಯುವಜನರ ವರ್ತನೆಯ ಮೂಲವನ್ನು ಅವರ ಬಾಲ್ಯದಲ್ಲಿ ಶೋಧಿಸಬೇಕಾಗುತ್ತದೆ. ಇದ್ದಕ್ಕಿದ್ದ ಹಾಗೆ ಯಾರೂ ಕೆಟ್ಟವರಾಗುವುದಿಲ್ಲ; ಒಳ್ಳೆಯವರಾಗುವುದೂ ಇಲ್ಲ. ಬಾಲ್ಯದ ಅತಿ ನಿರ್ಬಂಧ, ಅತಿ ಮುದ್ದು ಮಾಡುವಿಕೆ, ಅತಿ ತಿರಸ್ಕಾರ ಇತ್ಯಾದಿಗಳು ವ್ಯಕ್ತಿಯ ಬುದ್ಧಿನೀತಿಯ ಮೇಲೆ ಪರಿಣಾಮ ಬೀರುತ್ತವೆ.

ಗುಂಪು ಮನೋಭಾವದಿಂದಲೂ ವಿದ್ಯಾರ್ಥಿ ಯಾವುದೋ ಅವಿಚಾರಕ್ಕೆ ಧುಮುಕಬಹುದು. ಕೀಳು ಅಭಿರುಚಿಯ ಕಳಪೆ ನಾಟಕ, ಸಿನಿಮಾ, ಟಿವಿ ಚಿತ್ರ, ಕಾದಂಬರಿಗಳು ವಿದ್ಯಾರ್ಥಿಯ ಮನೋವೃತ್ತಿಯನ್ನು ಕೆಡಿಸಬಹುದು. ಸಮಾಜದಲ್ಲಿ ಸುತ್ತಲೂ ನಡೆಯುವ ದೃಶ್ಯಗಳು ಅವನಲ್ಲಿ ಅನ್ಯಥಾ ಪ್ರಚೋದನೆ ಮೂಡಿಸಬಹುದು. ಕಾಳಸಂತೆ, ಕಳ್ಳಭಟ್ಟಿ, ಮೋಸದ ವ್ಯವಹಾರ, ಲಂಚ ರುಷುವತ್ತುಗಳಿಂದ ದ್ರವ್ಯಾರ್ಜನೆ ಮಾಡಿದವರು ಸುಖಪುರುಷರಾಗಿ ಐಷಾರಾಮದ ಬದುಕನ್ನು ಬದುಕುತ್ತಾ ಕೊಬ್ಬುವುದನ್ನು ಕಂಡು ಅವನ ಮನಸ್ಸು ಅಪಮಾರ್ಗಕ್ಕೆ ತಿರುಗಬಹುದು.

ಸಮಾಜದ ಒಟ್ಟು ಚಿತ್ರ ಬದಲಾಗದೆ ವಿದ್ಯಾರಂಗ ಬದಲಾಗುವಂತಿಲ್ಲ. ನೈತಿಕ ಪ್ರಜ್ಞೆ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಸರ್ವವ್ಯಾಪಿಯಾಗಿ ಇರಬೇಕಾದ ಮೌಲ್ಯ. ಸಾರ್ವಜನಿಕ ಜೀವನರಂಗ ನಿರ್ಮಲವಾಗುತ್ತ ಹೋದಂತೆ ಶಿಕ್ಷಣರಂಗವೂ ನಿರ್ಮಲವಾಗಬಹುದು.

ಹಾಗೆಂದು ಶಿಕ್ಷಣರಂಗವು ಕೈಕಟ್ಟಿ ಕುಳಿತುಕೊಳ್ಳುವಂತಿಲ್ಲ. ನೈತಿಕ ಮೌಲ್ಯದ ಉದ್ದೀಪನದ ಯತ್ನ ಅಲ್ಲಿಹಲವು ನಿಟ್ಟಿನಲ್ಲಿ ಸಾಗಬೇಕಾದುದು ಅಗತ್ಯ. ಪಾಠಪ್ರವಚನಗಳೊಂದಿಗೆ ಹಿತಕಾರಕವಾದ ರೀತಿಯಲ್ಲಿ ನೀತಿ ಪ್ರತಿಪಾದನೆಯೂ ನಡೆಯಬೇಕು.

ನೀತಿ ಪ್ರಜ್ಞೆಯೆಂದೊಡನೆ ನೀರಸ ಧಾರ್ಮಿಕ ಉಪದೇಶಗಳೆಂದೋ, ಶುಷ್ಕಕಠಿಣ ನಿಯಮಪಾಲನೆಗಳೆಂದೋ ತಿಳಿಯಬೇಕಾಗಿಲ್ಲ. ನೈತಿಕಪ್ರಜ್ಞೆ ಬೆಳೆಯುವುದು ಕೇವಲ ಉಪದೇಶಗಳಿಂದ ಅಲ್ಲ. ಹಿರಿಯರ, ಗುರುವರ್ಗದವರ ನಡೆನುಡಿಗಳಿಂದ ಎಳೆಯರು ಸ್ವಾಭಾವಿಕವಾಗಿ ನೀತಿಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತಾರೆ. ವಿದ್ಯಾಭ್ಯಾಸದ ಒಂದಂಗವಾಗಿ ಕಡ್ಡಾಯ ಧಾರ್ಮಿಕ ಪಾಠ ಅಥವಾ ಪ್ರತ್ಯೇಕ ನೀತಿ ಪಾಠ ಬೇಕು ಎಂಬುದಾಗಿ ಕೆಲವರು ಪ್ರತಿಪಾದಿಸುತ್ತಾರೆ. ಅನುದಿನದ ಸಾಮಾಜಿಕ ಬದುಕಿಗೆ ಸಂಬಂಧಪಡುವಂತೆ ಸ್ವಾರಸ್ಯವಾಗಿ ಬೋಧಿಸಿದರೆ ಇಂಥ ಪಾಠಗಳಿಂದ ಒಂದಿಷ್ಟು ಪರಿಣಾಮ ಆಗಲೂಬಹುದು. ಇಲ್ಲವಾದರೆ ಅದು ವ್ಯರ್ಥಶ್ರಮವಾದೀತು. ನನ್ನ ಕಾಲೇಜುದಿನಗಳಲ್ಲಿ ನೀತಿಪಾಠ ಕಡ್ಡಾಯವಾಗಿತ್ತು. ಗುರುಗಳೊಬ್ಬರು ಬಂದು ಧಾರ್ಮಿಕ ಪ್ರವಚನವನ್ನು ನೀರಸವಾಗಿ ಮಾಡಿ ಹೋಗುತ್ತಿದ್ದರು. ಅದರಿಂದ ವಿದ್ಯಾರ್ಥಿಗಳ ಮೇಲೆ ಲವಲೇಶ ಪರಿಣಾಮವಾದುದನ್ನು ನಾನು ಕಾಣೆ.

ಇಂಥ ಪದ್ಧತಿಗಿಂತ ಆಯಾ ಪಠ್ಯ ಸಂದರ್ಭದಲ್ಲೇ ಜೀವನ ನೀತಿಗಳನ್ನು ಸಂದರ್ಭೋಚಿತವಾಗಿ ವಿವರಿಸಲು ಅವಕಾಶವನ್ನು ಅಧ್ಯಾಪಕರು ಕಲ್ಪಿಸುವುದು ಉತ್ತಮ. ಸಾಹಿತ್ಯ ಪಾಠಗಳಲ್ಲಂತೂ ಇದಕ್ಕೆ ವಿಪುಲ ಅವಕಾಶಗಳಿರುತ್ತವೆ. ನ್ಯಾಯಾನ್ಯಾಯ, ಸತ್ಯ ಅಸತ್ಯ, ನೀತಿ ಅನೀತಿಗಳ ಫಲಗಳನ್ನು ಸಾಕಷ್ಟು ವಿವರಿಸಲು ಎಡೆಯಿರುತ್ತದೆ. ಉಳಿದ

ಪಾಠಗಳಲ್ಲೂ ಇದು ತಕ್ಕ ಮಟ್ಟಿಗೆ ಸಾಧ್ಯ. ಉದಾ: ವಾಣಿಜ್ಯ ಶಾಸ್ತ್ರವನ್ನು ಬೋಧಿಸುವವನು ನಿಜವಾದ ನೀತಿಯುತ ವಾಣಿಜ್ಯಧರ್ಮವನ್ನು ಬೋಧಿಸಿ, ವ್ಯಾಪಾರದಲ್ಲಿ ಮೋಸಗಾರಿಕೆಯನ್ನು ಖಂಡಿಸಬೇಕು. ಅರ್ಥಶಾಸ್ತ್ರಜ್ಞನು ಆರ್ಥಿಕ ಅಪರಾಧಗಳ ಕುರಿತು ವಿವರಿಸಬೇಕು. ರಾಜ್ಯಶಾಸ್ತ್ರದ ಅಧ್ಯಾಪಕನು ಶುದ್ಧವಾದ ಪೌರನೀತಿಯನ್ನು ಬೋಧಿಸಬೇಕು. ನ್ಯಾಯಶಾಸ್ತ್ರದ ಬೋಧನೆಯಲ್ಲಂತೂ ನ್ಯಾಯಾನ್ಯಾಯದ ತುಲನೆಗೆ ಧಾರಾಳ ಅವಕಾಶವಿದೆ. ವೈದ್ಯಕೀಯ ವಿದ್ಯಾರ್ಥಿಗೆ ಮನುಷ್ಯ ಜೀವದ ಮೌಲ್ಯದ ಬಗೆಗೆ ತಿಳುವಳಿಕೆ ಹುಟ್ಟಿಸಬೇಕು. ಮಾನವ ಜೀವದಲ್ಲಿ ಆಟವಾಡದ ಹಾಗೆ, ವೈದ್ಯಕೀಯ ವೃತ್ತಿ ಕೇವಲ ವ್ಯಾಪಾರರಂಗ[illegible]ಗದ ಹಾಗೆ ವೃತ್ತಿನೀತಿಯು ಕೊಡಲ್ಪಡಬೇಕು. ಭೌತಶಾಸ್ತ್ರದ ಬೋಧಕನು ಭೌತಶಾಸ್ತ್ರವನ್ನು ಮನುಷ್ಯನ ಪ್ರಗತಿಯ ಬಗೆಗೆ ಹೇಗೆ ಬಳಸಬೇಕೆಂದು ಹೇಳುವುದರ ಜತೆಗೆ ಅಣುಬಾಂಬು ಇತ್ಯಾದಿಗಳ ವಿನಾಶಕಾರೀ ಶಕ್ತಿಯನ್ನು ಕುರಿತು ಹೇಳಿ ಮನುಷ್ಯನ ಕ್ರೂರಪ್ರವೃತ್ತಿಗೆ ಕಡಿವಾಣ ಹಾಕಬೇಕು.

ಶಾಲಾ ಕಾಲೇಜುಗಳಲ್ಲಿ ತರತರದ ಕ್ರೀಡೆಗಳು ಇರುತ್ತವಷ್ಟೆ. ಕ್ರೀಡಾರಂಗವೂ ನೈತಿಕಪ್ರಜ್ಞೆಯನ್ನು ಬೆಳೆಸುವಂಥ ಕ್ಷೇತ್ರವಾಗಲು ಸಾಧ್ಯ. ಕ್ರೀಡಾರಂಗದಲ್ಲಿ ಎಂತೊ ಅಂತೆಯೇ ಬದುಕಿನಲ್ಲೂ ನ್ಯಾಯವಾದ ರೀತಿಯಲ್ಲಿ ಗೆಲ್ಲಬೇಕೆಂಬ ನೀತಿ ಸಾರ್ವತ್ರಿಕ ಮನ್ನಣೆಯನ್ನು ಪಡೆಯಬೇಕಾಗಿದೆ.

ಶಾಲೆಗಳಲ್ಲಿ ಕೈಕೊಳ್ಳಬಹುದಾದ ಕೆಲವು ಕಾರ್ಯಗಳ ಬಗ್ಗೆ ಹೇಳಬಹುದಾದರೆ - ಸಾಹಿತ್ಯದ ಪಠ್ಯಪುಸ್ತಕಗಳಲ್ಲಿ ಉತ್ತಮ ನೀತಿಪ್ರತಿಪಾದಕ ರಚನೆಗಳು ಇರುವುದು ಇಷ್ಟಕರ. ಚಿಕ್ಕ ತರಗತಿಗಳಲ್ಲಿ ಮಕ್ಕಳಿಗೆ ನೀತಿಯುಕ್ತವಾದ ಸರಳಕಥೆಗಳನ್ನು ಹೇಳಿಕೊಟ್ಟು ಅವರಿಂದ ಅವುಗಳನ್ನು ಹೇಳಿಸಬಹುದು; ಬರೆಸಬಹುದು. ಉತ್ತಮ ನೀತಿಯುಳ್ಳ ನಾಟಕಾದಿಗಳನ್ನು ಮಕ್ಕಳಿಂದ ಪ್ರದರ್ಶಿಸಬಹುದು.

ಮಕ್ಕಳಿಗೆ ಪರೋಪಕಾರ, ಮಾನವ ಸೇವೆ ಇತ್ಯಾದಿಗಳ ವಿಚಾರವನ್ನು ತಿಳಿಯಹೇಳಿ ಅಂಥ ಮೌಲ್ಯಗಳನ್ನು ಕಾರ್ಯಗತಗೊಳಿಸುವ ದಿಶೆಯಲ್ಲಿ ತರಬೇತು ನೀಡಬಹುದು. ಉದಾ: ಮಕ್ಕಳನ್ನು ಆಸ್ಪತ್ರೆಗಳಿಗೆ, ಅನಾಥಾಲಯಗಳಿಗೆ, ಕರೆದುಕೊಂಡು ಹೋಗಿ ರೋಗಿಗಳನ್ನು, ಅನಾಥರನ್ನು, ವೃದ್ಧರನ್ನು ಸಹಾಯನುಭೂತಿಯಿಂದ ನೋಡಲು ಕಲಿಸುವುದು, ಅವರಿಗೆ ಹಣ್ಣು ಹಂಪಲು ಇತ್ಯಾದಿ ಕೊಡಿಸುವುದು. ಹಾಗೆಯೇ ಇತರ ಆಪತ್ತುಗಳಿಗೆ ಸಿಲುಕಿದವರಿಗೆ ಸ್ವಯಂ ಸ್ಫೂರ್ತಿಯಿಂದ ಸಹಾಯಮಾಡುವುದು ಇತ್ಯಾದಿ. ಜಾತಿ ಮತ ಭೇದವಿಲ್ಲದೆ ಎಲ್ಲರೂ ಪ್ರೀತಿಯಿಂದ ಸಹಬಾಳ್ವೆ ಮಾಡುವುದನ್ನು ಅನುಷ್ಠಾನಕ್ಕೆ ತರುವುದಂತೂ ಅತ್ಯಗತ್ಯ. ವಿದ್ಯಾರ್ಥಿನಿಲಯ ಇದಕ್ಕೆ ಸೂಕ್ತವಾದ ಕ್ಷೇತ್ರವಾಗಿದೆ. ಪ್ರವಾಸದಂಥ ಕಾರ್ಯಕ್ರಮಗಳೂ ಇಂಥ ದಿಶೆಯಲ್ಲಿ ಉಪಯುಕ್ತ.

ಒಟ್ಟಿನಲ್ಲಿ ವಿದ್ಯಾರಂಗದಲ್ಲಿ ಪ್ರತಿಪಾದಿಸಲ್ಪಡುವ ನೀತಿಯೆಂಬುದು ಪ್ರಾಯೋಗಿಕ, ಅನುಕರಣೀಯ ಹಾಗೂ ಆನ್ವಯಿಕವಾಗಿರಬೇಕು. ಬರೇ ನೀತಿಗಾಗಿ ನೀತಿಪಾಠ ಎಂಬುದರಲ್ಲಿ ವಿಶೇಷ ಅರ್ಥವಿಲ್ಲ.

ಬೇರೆ ಕೆಲವು ದೇಶಗಳಲ್ಲಿ ಸಾರ್ವಜನಿಕ ರಂಗದಲ್ಲಿ ಕಾಣುವ ನೀತಿಪ್ರಜ್ಞೆ, ಪ್ರಾಮಾಣಿಕತೆ ನಮ್ಮ ದೇಶದಲ್ಲಿ ಅಷ್ಟರಮಟ್ಟಿಗೆ ಕಾಣಿಸುವುದಿಲ್ಲ. ಜನಮನದಲ್ಲಿ ಸ್ವಾಭಾವಿಕವಾದ ರೀತಿಯಲ್ಲಿ ನೈತಿಕಮೌಲ್ಯ ಬೆಳೆದು ಬಂದರೆ ಅದು ದೇಶದ ಸೌಭಾಗ್ಯ. ಅ[illegible] ಶೀಲಸೌಭಾಗ್ಯದ ಕನಸು ಕಾಣುವುದು ತಪ್ಪಲ್ಲ. ಇಂದಿನ ಕನಸೇ ನಾಳಿನ ನನಸು!

---

● ಡಾ। ಸೈಯದ್ ಜಮೀರುಲ್ಲಾ ಷರೀಫ್
ಎಂ.ಎ.ಪಿಎಚ್.ಡಿ,
ಕನ್ನಡ ಉಪನ್ಯಾಸಕರು,
ಅಂಜುಮನ್ ಕಲಾ, ವಿಜ್ಞಾನ ಮತ್ತು
ವಾಣಿಜ್ಯ ಮಹಾವಿದ್ಯಾಲಯ ಭಟ್ಕಳ -581320 (ಉ.ಕ).

# ನವಾಯಿತರು ಮತ್ತು ಶಿಕ್ಷಣ

ಇಸ್ಲಾಮ್ ಧರ್ಮಾವಲಂಬಿಗಳಾದ ಮುಸ್ಲಿಮರು ಸಾಮಾಜಿಕ, ಭೌತಿಕ ಕಾರಣಗಳಿಂದ ವಿವಿಧ ಪಂಗಡಗಳಾಗಿ ಒಡೆದು ವಿವಿಧ ಸ್ಥಳಗಳಲ್ಲಿ ನೆಲೆಸಿದರು. ಆಗ ಅಲ್ಲಿನ ಪರಿಸರಕ್ಕೆ ಹೊಂದಿಕೊಂಡು ಅವರು ಬದುಕುವುದು ಅನಿವಾರ್ಯವಾದಾಗ ಅವರ ಸಂಪ್ರದಾಯ ಮತ್ತು ನಂಬಿಕೆಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳು ತಲೆದೋರಿದವು. ಊಟೋಪಚಾರ, ಭಾಷೆ ಮೊದಲಾದವು ಒಂದು ಪಂಗಡದಿಂದ ಮತ್ತೊಂದು ಪಂಗಡಕ್ಕೆ ಭಿನ್ನವಾದವು. ಹೀಗೆ ವಿಶಿಷ್ಟ ಭಾಷೆ, ಆಚರಣೆಗಳನ್ನೊಳಗೊಂಡ ಪಂಗಡಗಳಲ್ಲಿ 'ನವಾಯಿತರ' ಪಂಗಡವು ಒಂದಾಯಿತು. ಕರ್ನಾಟಕ ಕರಾವಳಿಯ ಭಟ್ಕಳ ನಗರದಲ್ಲಿ ಕೇಂದ್ರೀಕೃತವಾಗಿರುವ ಅವರು ಆಕರ್ಷಣೀಯ ಮೈಕಟ್ಟಿನ ಸ್ನೇಹಮಯಿ ಜನರು.

'ನವಾಯಿತ' ಎಂಬ ಪದವನ್ನು ಬಿಡಿಸಿದಾಗ 'ನವ', 'ಆಯಿತ' ಎಂದಾಗುತ್ತದೆ. ಇದನ್ನೇ 'ನಯ ಆಬಾದಿ', 'ನವ್ ಆಬಾದಿ' ಎಂದೆಲ್ಲಾ ಉರ್ದುವಿನಲ್ಲಿ ವಿಭಾಗಿಸಲಾಗುತ್ತದೆ. ಇದರ ಅರ್ಥ ''ಹೊಸ ಜನರು'' ಎಂದಾಗುತ್ತದೆ. ಇಸ್ಲಾಮ್ ಧರ್ಮಾವಲಂಬಿಗಳಾದ ಅವರು 'ಹೊಸ ಜನ'ರೆಂಬ ಹೆಸರನ್ನು ಹೇಗೆ ಪಡೆದರು ಎಂಬುದು ಗಮನಾರ್ಹವಾದುದು. ಹಜ್ಜಾಜ್ ಎಂಬ ರಾಜನು ಅರೇಬಿಯಾ ದೇಶವನ್ನು ಆಳುತ್ತಿರುವಾಗ ಅವನಿಗೆ ಅಲ್ಲಿ ನೆಲೆಸಿದ್ದ ಖುರೇಷಿ ವಂಶದವರನ್ನು ಕಂಡರೆ ಆಗುತ್ತಿರಲಿಲ್ಲ. ಆದ್ದರಿಂದ ಅವನು ಖುರೇಷಿ ವಂಶದವರನ್ನು ದೇಶಬಿಟ್ಟು ಹೋಗುವಂತೆ ಆಜ್ಞೆ ಹೊರಡಿಸಿದನು. ಆ ಆಜ್ಞೆಯನ್ನು ಅವರು ಧಿಕ್ಕರಿಸಿದರು. ಆಗ ರಾಜನು ಅವರ ಮನೆಗಳನ್ನು ಸುಡುವಂತೆ, ಅವರನ್ನು ಸಿಕ್ಕೆಡೆಗಳಲ್ಲಿ ಕೊಂದು ಹಾಕುವಂತೆ ಆಜ್ಞೆ ಮಾಡಿದನು. ಹಜ್ಜಾಜ್‌ನ ಹಿಂಸೆಗೊಳಗಾದ

ಖುರೇಷಿ ವಂಶದವರು ಅರೇಬಿಯಾ ದೇಶ ಬಿಟ್ಟು ಹಡಗುಗಳಲ್ಲಿ ಭಾರತದ ಕಡೆಗೆ ಪ್ರಯಾಣ ಬೆಳೆಸಿದರು. ಅಲ್ಲಿಂದ ಹೊರಟ ಹಡಗುಗಳಲ್ಲಿ ಒಂದು ಹಡಗು ಭಟ್ಕಳದ ಬಂದರನ್ನು ತಲುಪಿತು. ಅದರಲ್ಲಿದ್ದವರು ಸ್ಥಳೀಯ ಭಾಷೆಯಾದ ಕೊಂಕಣಿಯನ್ನು ಕಲಿತು ಅದರೊಂದಿಗೆ ತಮ್ಮದೇ ಆದ ಭಾಷೆಯನ್ನು ರೂಪಿಸಿಕೊಂಡರು. ಹೀಗೆ ಸುಮಾರು 7ನೇ ಶತಮಾನದಲ್ಲಿ ಅರಬ್ ದೇಶದಿಂದ ಭಟ್ಕಳಕ್ಕೆ ಹೊಸದಾಗಿ ಬಂದ ಜನರು 'ನವಾಯಿತ'ರೆಂದು ಕರೆಯಲ್ಪಟ್ಟರು. ಅವರಾಡುತ್ತಿದ್ದ ಭಾಷೆಯು ನವಾಯಿತಿ ಭಾಷೆ ಎಂದು ಹೆಸರು ಪಡೆಯಿತು. ಉರ್ದು ಲಿಪಿಯನ್ನು ಬರವಣಿಗೆಯಲ್ಲಿ ಬಳಸಲ್ಪಡುವ ನವಾಯಿತಿ ಭಾಷೆಯಲ್ಲಿ ಉರ್ದು, ಫಾರ್ಸಿ, ಅರಬಿ, ಮರಾಠಿ, ಕೊಂಕಣಿ, ಸಂಸ್ಕೃತ ಮೊದಲಾದ ಭಾಷೆಗಳು ಸೇರಿವೆ.

ನೋಡಲು ಸುಂದರವಾಗಿ, ಉಡುಗೆ ತೊಡುಗೆಯಲ್ಲಿ ಸಂಪ್ರದಾಯಬದ್ಧರಾಗಿರುವ ನವಾಯಿತರು ಇಂದಿಗೂ ಕೊಲ್ಲಿ ರಾಷ್ಟ್ರಗಳೊಡನೆ ಸಂಬಂಧವಿಟ್ಟುಕೊಂಡಿದ್ದಾರೆ. ಅಲ್ಲಿನ ದುಡಿಮೆಯೇ ಅವರಿಗೆ ಹೆಚ್ಚು ಪ್ರಿಯ. ವ್ಯಾಪಾರವೇ ಅವರ ಮುಖ್ಯ ಉದ್ಯೋಗ. ಭಟ್ಕಳನಗರವೇ ಅವರ ತವರುಮನೆ. ಆದ್ದರಿಂದಲೇ ಅವರು ಇತಿಹಾಸ ಪ್ರಸಿದ್ಧವಾಗಿರುವ ಭಟ್ಕಳ ನಗರವನ್ನು ಆಧುನಿಕ ನಗರವಾಗಿ, ಶೈಕ್ಷಣಿಕ ಕೇಂದ್ರವಾಗಿ ಪರಿವರ್ತಿಸಿರುವುದು. ತಮ್ಮೂರಿನ ಬಗ್ಗೆ ಅವರಿಗೆ ಎಲ್ಲಿಲ್ಲದ ಅಭಿಮಾನ. ಇಡೀ ಊರನ್ನು 48 ಕಲಾತ್ಮಕ ಮಸೀದಿಗಳಿಂದ ಧಾರ್ಮಿಕ ನಗರವನ್ನಾಗಿಸಿದ್ದಾರೆ.

ನವಾಯಿತರ ಪರಿಶ್ರಮದಿಂದ ತಾಲ್ಲೂಕು ಕೇಂದ್ರವಾದ ಭಟ್ಕಳ ನಗರವು ಲೌಕಿಕ ಮತ್ತು ಅಲೌಕಿಕ ಜ್ಞಾನದ ಕೇಂದ್ರ ಸ್ಥಳವಾಗಿದೆ. ಒಂದೆಡೆ ಅರೆಬಿಕ್ ಶಾಲೆಗಳು ಕಂಗೊಳಿಸಿದರೆ ಮತ್ತೊಂದೆಡೆ ಸಾಮಾನ್ಯ ಮತ್ತು ತಾಂತ್ರಿಕ ಶಿಕ್ಷಣ ಶಾಲೆಗಳು ಆಕರ್ಷಿಸುತ್ತಿವೆ. ಅಂಜುಮನ್ ಹಾಮಿಯಾ ಮುಸ್ಲಿಮೀನ್ ಸಂಸ್ಥೆಯನ್ನು 1919ರಲ್ಲಿ ಅವರು ಶೈಕ್ಷಣಿಕ ಕೆಲಸಕ್ಕಾಗಿಯೇ ಸ್ಥಾಪಿಸಿದ್ದಾರೆ. ಅದು, ಮೊಟ್ಟಮೊದಲು ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸುವುದರ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ಹೆಜ್ಜೆ ಇಟ್ಟಿತು. ಕಾಲಕಳೆದಂತೆ 1939ರಲ್ಲಿ ಪ್ರೌಢಶಾಲೆಯನ್ನು, 1968ರಲ್ಲಿ ಕಾಲೇಜನ್ನು, 1971ರಲ್ಲಿ ಹೆಣ್ಣು ಮಕ್ಕಳ ಪ್ರೌಢಶಾಲೆಯನ್ನು, 1980ರಲ್ಲಿ ಮಹಿಳಾ ಪದವಿಪೂರ್ವ ಕಾಲೇಜನ್ನು ಅದೇ ವರ್ಷ ಎಂಜಿನಿಯರಿಂಗ್ ಕಾಲೇಜನ್ನು ಭಟ್ಕಳ ನಗರದಲ್ಲಿ ಪ್ರಾರಂಭಿಸಿ ನಗರವನ್ನೆಲ್ಲಾ ಶಿಕ್ಷಣಮಯವನ್ನಾಗಿಸಿತು. ಆ ಸಂಸ್ಥೆಯ ಯೋಜನೆಯಲ್ಲಿ ಎಂಜಿನಿಯರಿಂಗ್ ಮತ್ತು ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜುಗಳಿರುವ ವಿಶಾಲ ಪ್ರದೇಶವನ್ನು 'ಅಂಜುಮನಾಬಾದ್' ಎಂದು ಹೆಸರಿಸಿ ಅಲ್ಲಿ ಇಸ್ಲಾಮಿಕ್ ಮತ್ತು ಅರೇಬಿಕ್ ಅಕಾಡೆಮಿಯನ್ನು ಸ್ಥಾಪಿಸುವುದರ ಜೊತೆಗೆ ಅತಿಥಿ ಗೃಹ, ಅಧ್ಯಾಪಕರ ವಸತಿ ಗೃಹಗಳ ನಿರ್ಮಾಣದ ಕೆಲಸಗಳು ಸೇರಿವೆ. ಜನಾಬ್ ಎಸ್.ಎಂ.

ಯಾಹ್ಯಾ, ಜನಾಬ್ ಎಂ.ಎ. ಗನಿ, ಜನಾಬ್ ಡಿ.ಎಚ್. ಶಬ್ಬೀರ್ ಮೊದಲಾದ ಮಹಾನುಭಾವರ ಪ್ರಯತ್ನದಿಂದ ಅಂಜುಮನ್ ಹಾಮಿಯಾ ಮುಸ್ಲಿಮೀನ್ ಸಂಸ್ಥೆಯು ಪ್ರತಿ ವರ್ಷ ಶಿಕ್ಷಣ ರಂಗದಲ್ಲಿ ಪ್ರಗತಿಯನ್ನು ಸಾಧಿಸುತ್ತಲೇ ಮುಂದುವರಿಯುತ್ತದೆ. ಈ ಸಂಸ್ಥೆಯನ್ನು ಹೊರತುಪಡಿಸಿ ವೈಯಕ್ತಿಕವಾಗಿ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಲ್ಲಿ ಜನಾಬ್ ಮುನೀರಿಯವರು ಪ್ರಮುಖರಾಗಿರುತ್ತಾರೆ. ಅವರು ಮಹಿಳೆಯರಿಗಾಗಿ 'ಜಾಮಿಯತುಸ್ಸಾಲೆಹಾತ್' ಎಂಬ ಅರೇಬಿಕ್ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿರುವುದು ಮಾತ್ರವಲ್ಲದೆ ಹೊರ ಊರಿನಿಂದ ಬರುವ ಮಹಿಳೆಯರಿಗೆ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ. ಇದಲ್ಲದೆ ಪುರುಷರಿಗಾಗಿ 'ಜಾಮಿಯಾ' ಎಂಬ ಅರೇಬಿಕ್ ಶಿಕ್ಷಣ ಸಂಸ್ಥೆಯು ಭಟ್ಕಳದಲ್ಲಿದೆ. ಇಲ್ಲೂ ಸಹ ಪರ ಊರಿನ ವಿದ್ಯಾರ್ಥಿಗಳಿಗೆ ಊಟ - ವಸತಿಯ ವ್ಯವಸ್ಥೆಯಿದೆ. ಇವುಗಳ ಹೊರತು ಹಲವಾರು ಮದ್ರಸಾಗಳು ಇಸ್ಲಾಮಿಕ್ ಶಿಕ್ಷಣವನ್ನು ನೀಡುವುದರಲ್ಲಿ ನಿರತವಾಗಿವೆ.

ಬಹಳ ಕಡಿಮೆ ಜನಸಂಖ್ಯೆ ಇರುವ ನವಾಯಿತರು ಶಿಕ್ಷಣ ಕ್ಷೇತ್ರದಲ್ಲಿ ಮಾಡಿರುವ ಸಾಧನೆಗೆ ಅವರಲ್ಲಿರುವ ಒಗ್ಗಟ್ಟು ಮುಖ್ಯ ಕಾರಣವಾಗಿದೆ. ಯಾವುದೇ ಕ್ಷೇತ್ರದಲ್ಲಾಗಲಿ ಮುನ್ನುಗ್ಗಿ ಕೆಲಸ ಮಾಡುವವರಿಗೆ ಅವರು ತನು-ಮನ-ಧನದಿಂದ ಪ್ರೋತ್ಸಾಹ ನೀಡುತ್ತಾರೆ. ಅವರು ಎಲ್ಲೇ ಹೋಗಿ ದುಡಿಯಲಿ ಅವರ ಉದಾರ ಮನೋಭಾವನೆಯ ಕೊಡುಗೆ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗಾಗಿ ಸಲ್ಲುತ್ತಲೇ ಇರುತ್ತದೆ. ನವಾಯಿತರು ಎಂದೂ ಶಿಕ್ಷಣ ಕ್ಷೇತ್ರವನ್ನು ವ್ಯಾಪಾರದ ಅಂಗಡಿಯನ್ನಾಗಿಸಿಕೊಂಡಿಲ್ಲ. ನೌಕರಿ ಹುಡುಕಿಕೊಂಡು ಬರುವಂತಹವರಿಂದ ಅವರೆಂದೂ ಹಣಪಡೆದು ನೌಕರಿಕೊಟ್ಟ ನಿದರ್ಶನಗಳಿಲ್ಲ. ಅಭ್ಯಾಸಕ್ಕಾಗಿ ಬರುವ ವಿದ್ಯಾರ್ಥಿಗಳಿಂದ ಅವರೆಂದೂ ನಿಗದಿತ ಶುಲ್ಕಕ್ಕಿಂತ ಹೆಚ್ಚು ಹಣ ಪಡೆದಿಲ್ಲ. ಇಂದಿಗೂ ಅಂಜುಮನ್ ಹಾಮಿಯಾ ಮುಸ್ಲಿಮೀನ್ ಸಂಸ್ಥೆಯೊಂದೇ ಪ್ರತಿವರ್ಷ 24ಲಕ್ಷ ರೂಪಾಯಿಗಳನ್ನು ನೌಕರರಿಗೆ ಸಂಬಳವಾಗಿ ನೀಡುತ್ತಿದೆ.

ಕೊಲ್ಲಿ ರಾಷ್ಟ್ರದಲ್ಲಿರುವ ನವಾಯಿತರ ಉದಾರವಾದ ಕೊಡುಗೆಯಿಂದ ಇಂದು ಭಟ್ಕಳದ ತುಂಬಾ ವಿವಿಧ ಬಗೆಯ ಶಿಕ್ಷಣ ಸಂಸ್ಥೆಗಳು ಜ್ಞಾನವನ್ನೆರೆವ ಅಕ್ಷಯಪಾತ್ರೆಗಳಾಗಿವೆ. ಇದರಿಂದ ಹಲವಾರು ಬಡವರು, ನಿರ್ಗತಿಕರು ಶಿಕ್ಷಣ ಪಡೆದು ಭವ್ಯ ಭಾರತದ ಪ್ರಜೆಗಳಾಗಿ ನವಾಯಿತರ ತ್ಯಾಗವನ್ನು ಸ್ಮರಿಸುತ್ತಿದ್ದಾರೆ. ಇದೇ ರೀತಿ ಉಳಿದ ಮುಸ್ಲಿಮರು ಒಗ್ಗಟ್ಟಾಗಿ ಶಿಕ್ಷಣ ಕ್ಷೇತ್ರದಲ್ಲಿ ದುಡಿದರೆ ಶಿಕ್ಷಣದಿಂದ ವಂಚಿತರಾಗಿ, ಆರ್ಥಿಕವಾಗಿ ಹಿಂದುಳಿದು ಬಳಲುತ್ತಿರುವ ಕೋಟಿ ಕೋಟಿ ಮುಸ್ಲಿಮರನ್ನು ಮೇಲಕ್ಕೆತ್ತಬಹುದು, ಶಿಕ್ಷಣ ರಂಗದಲ್ಲಿ ತನ್ನದೇ ಆದ ಹೆಜ್ಜೆ ಗುರುತನ್ನು ಮೂಡಿಸಬಹುದು.

● ನರೇಂದ್ರ ನಾಯಕ್
ಮೈಕ್ರೋವೇವ್ ಸ್ಟೇಷನ್ ರಸ್ತೆ,
ಮಂಗಳೂರು - 575 006.

# ಶಿಕ್ಷಣರಂಗದ ವ್ಯಾಪಾರೀಕರಣ

ಶಿಕ್ಷಣರಂಗದ ವ್ಯಾಪಾರೀಕರಣವು ನಮ್ಮ ಜೀವನದಲ್ಲಿ ಮುಖ್ಯವಾದ ಅಂಗವಾದ ಶಿಕ್ಷಣಕ್ಕೆ ತಗಲಿರುವ ಕ್ಯಾನ್ಸರ್‌ವ್ಯಾಧಿಯಂತಿದೆ. ಇದನ್ನು ಕ್ಯಾನ್ಸರ್‌ಗೆ ಹೋಲಿಸಲು ಕಾರಣಗಳೇನೆಂದರೆ - ಈ ವ್ಯಾಧಿಯು ದೇಹದ ಒಂದು ಅಂಗ ಯಾ ಕಣದಲ್ಲಿ ಆರಂಭವಾಗಿ ಇಡೀ ದೇಹವನ್ನೇ ವ್ಯಾಪಿಸಿ ಆ ಬಳಿಕ ವ್ಯಾಧಿಗ್ರಸ್ತನನ್ನೇ ಬಲಿತೆಗೆದುಕೊಳ್ಳುವಂತಹ ಪಿಡುಗಾಗಿದೆ. ನಮ್ಮ ದೇಶದಲ್ಲಿ ಈ ಸಮಸ್ಯೆಯು ಈಗ ಎರಡನೆಯ ಹಂತದಲ್ಲಿದೆ- ಅರ್ಥಾತ್ ದೇಹದ ಎಲ್ಲಾ ಅಂಗಗಳನ್ನೂ ವ್ಯಾಪಿಸಿದೆ. ಈ ಹಂತದಲ್ಲಾದರೂ ಪರಿಸ್ಥಿತಿಯನ್ನು ಸರಿಪಡಿಸಿಕೊಳ್ಳದಿದ್ದಲ್ಲಿ ಮುಂದೆ ಶಿಕ್ಷಣರಂಗ ನಾಶಕ್ಕೆಡೆಯಾಗುವುದಂತೂ ಖಂಡಿತ.

ಶಿಕ್ಷಣದ ಖಾಸಗೀಕರಣ ಮತ್ತು ವಾಣಿಜ್ಯೀಕರಣ ಒಂದೇ ನಾಣ್ಯದ ಎರಡು ಮುಖಗಳೆನ್ನಬಹುದು. ವಾಸ್ತವವಾಗಿ ಪ್ರಜೆಗಳಿಗೆ ಅವರ ಅಭಿರುಚಿಗೆ, ಅವರ ಬುದ್ಧಿಮಟ್ಟಕ್ಕೆ ತಕ್ಕದಾದ ಶಿಕ್ಷಣವನ್ನು ಕೊಟ್ಟು ಅವರಲ್ಲಿ ಹುದುಗಿರುವ ಶಕ್ತಿಗಳನ್ನು ದೇಶದ ಉನ್ನತಿಗಾಗಿ, ಸಮಾಜದ ಉದ್ಧಾರಕ್ಕಾಗಿ ಉಪಯೋಗಿಸಿಕೊಳ್ಳುವುದು ಯಾವುದೇ ಜನಹಿತಕಾರಿಯಾಗಿ ಕೆಲಸಮಾಡುವ ಸರಕಾರದ ಉದ್ದೇಶವಾಗಿರಬೇಕು. ಆದರೆ ಈ ಗುರಿಗಳು ಮುಟ್ಟದಿದ್ದಾಗ ಖಾಸಗೀರಂಗವು ಇಲ್ಲಿ ಪ್ರವೇಶಮಾಡುವುದು ಸಾಧ್ಯ. ಇಂದಿನ ಪರಿಸ್ಥಿತಿಯಲ್ಲಿ ಸಮಾಜದ ಒಂದು ವರ್ಗವು ಐಷಾರಾಮದ ಜೀವನವನ್ನು ನಡೆಸಿಕೊಂಡು, ಬಹುಸಂಖ್ಯಾತರನ್ನು ಶೋಷಿಸುವ ಪರಿಸ್ಥಿತಿಯಿರುವಾಗ, ಈ ಶೋಷಣಾಧಾರಿತ ವ್ಯವಸ್ಥೆಯ ಒಂದು ಅಂಗವಾಗಿ ಶಿಕ್ಷಣರಂಗವೂ ಕಾರ್ಯವಹಿಸುತ್ತಿದೆ.

ಶಿಕ್ಷಣದ ಖಾಸಗೀಕರಣವು ಸ್ವಾತಂತ್ರ್ಯದ ಹಿಂದಿನಿಂದಲೂ ಇತ್ತು. ಆದರೆ, ಒಂದು ಕಾಲದಲ್ಲಿ ರಾಷ್ಟ್ರೀಯ ಭಾವನೆಗಳು, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮುಂತಾದವುಗಳು ಮುನ್ನಡೆಯಲು ಸರಕಾರದ ಯಾವುದೇ ರೀತಿಯ ಹಸ್ತಕ್ಷೇಪವಿಲ್ಲದ ಶಿಕ್ಷಣ ಸಂಸ್ಥೆಗಳ ಅಗತ್ಯವಿತ್ತು. ಇಂತಹ ಸ್ಫೂರ್ತಿಯಿಂದ ಆರಂಭವಾಗಿದ್ದ ಹಲವಾರು ಶಿಕ್ಷಣ ಸಂಸ್ಥೆಗಳು ಇಂದು ಸ್ವಾತಂತ್ರ್ಯಾನಂತರ ಸರಕಾರದ ಸಹಾಯ ಧನದಿಂದ ನಡೆಯುತ್ತವೆ. ಆದರೆ, ಸ್ವಾತಂತ್ರ್ಯದ ಬಳಿಕ ದೇಶದಲ್ಲಿ ಶಿಕ್ಷಣರಂಗಕ್ಕೆ ಹೊಸ ಶಕ್ತಿಗಳ ಪ್ರವೇಶವಾಯಿತು. ಇಂದು ಶಿಕ್ಷಣವನ್ನು ಕೈಯಲ್ಲಿರಿಸಿಕೊಂಡಿರುವ ಶಕ್ತಿಗಳು ಮೂರು ರೀತಿಯವು. ಶಿಕ್ಷಣವನ್ನು ಉದ್ಯಮವನ್ನಾಗಿ ಮಾಡಿರುವ ಉದ್ಯೋಗಪತಿಗಳು ತಮ್ಮ ಹಣವನ್ನು ತೊಡಗಿಸಿದಲ್ಲಿ ಎಲ್ಲಿ ಹೆಚ್ಚಿನ ಲಾಭ ಪಡೆಯಬಹುದೆಂಬ ಮುಂದಾಲೋಚನೆಯಿರುವವರು. ಶಿಕ್ಷಣರಂಗದಲ್ಲಂತೂ ಲಾಭಗಳು ಅತ್ಯಧಿಕವಾದ ಕಾರಣ ಈ ರಂಗದಲ್ಲಿ ಹಣ ಹೂಡಿರುವ ಬಂಡವಾಳಶಾಹಿಗಳು ಈಗ ತಮ್ಮ ಆರ್ಥಿಕ ಸಾಮ್ರಾಜ್ಯಗಳನ್ನೇ ಸೃಷ್ಟಿಸಿವೆ. ಕೆಲವು ರಾಜ್ಯಗಳಲ್ಲಿ ಶಿಕ್ಷಣರಂಗವು ಗೂಂಡಾಗಳ ಹಿಡಿತದಲ್ಲಿದೆ. ರಾಜಕಾರಣಿ - ಗೂಂಡಾಗಳ ಕಪಿಮುಷ್ಟಿಯಲ್ಲಿರುವ ಶಿಕ್ಷಣರಂಗವು ಎಷ್ಟರ ಮಟ್ಟಿಗೆ ಶಿಕ್ಷಣ ಕೊಡುವುದರಲ್ಲಿ ಸಫಲವಾಗುವುದೆಂಬುದು ಸರ್ವವಿದಿತ. ಬಿಹಾರದಲ್ಲಿ ಮಾಫಿಯಾ ಎಂಬ ಬಲವಾದ ಗೂಂಡಾಗಳ ಕೂಟವು ಶಿಕ್ಷಣರಂಗದ ಎಲ್ಲಾ ಹಂತಗಳನ್ನು ನಿಯಂತ್ರಿಸುತ್ತಿದೆ.

ಪಾಳೆಯಗಾರೀ ಶಕ್ತಿಗಳು ಶಿಕ್ಷಣರಂಗದ ವ್ಯಾಪಾರೀಕರಣದಲ್ಲಿ ಬಹಳ ಮುತುವರ್ಜಿ ವಹಿಸಿವೆ. ಇವರಿಗೆ ಮೊದಲಿನಿಂದಲೇ ಹಣ, ಜನ ಬಲವಿದ್ದು ಹೆಚ್ಚಿನ ಭೂಮಿಯೂ ಇದೆ. ಇಂತಹ ಸಂದರ್ಭದಲ್ಲಿ ಸುಲಭವಾಗಿ ಹಣ ಮಾಡುವುದರೊಂದಿಗೆ ತಮ್ಮ ಇತರ ರಂಗಗಳಲ್ಲಿ ಹಿಡಿತವನ್ನು ಬಲಪಡಿಸಿಕೊಳ್ಳುವುದಕ್ಕೂ ಸಹಾಯವಾಗಲು ಶಿಕ್ಷಣರಂಗದಲ್ಲಿ ಇವು ನುಗ್ಗಿವೆ. ಇವರಿಗೆ ರಾಜಕಾರಣಿ-ಮಠಾಧೀಶ-''ಶಿಕ್ಷಣತಜ್ಞ''ರುಗಳ ಬೆಂಬಲವೂ ಇದ್ದ ಕಾರಣ, ತಮ್ಮ ಬೇಳೆ ಬೇಯಿಸುವುದು ಬಹಳ ಸುಲಭ.

ಮತೀಯ ಶಕ್ತಿಗಳು ಸ್ವಾತಂತ್ರ್ಯ ಪೂರ್ವ ಪರಿಸ್ಥಿತಿಯಲ್ಲಿ ಸರಕಾರದ ಬೆಂಬಲದಿಂದ ಬದುಕುತ್ತಿದ್ದುವು. ಇವರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳು ಬ್ರಿಟಿಷ್ ಸರಕಾರದ ಕೃಪೆಯಲ್ಲಿ ಬೆಳೆಯುತ್ತಿದ್ದುವು. ಮೊದಮೊದಲು ತಮ್ಮ ಮತ ಪ್ರಚಾರಕ್ಕೆ ಕಾರ್ಯಕರ್ತರನ್ನು ಸಿದ್ಧಪಡಿಸಲು, ತಮ್ಮ ಮತಕ್ಕೆ ಸೇರಿದವರ ಮಕ್ಕಳಿಗೆ ಶಿಕ್ಷಣ ಕೊಡಲು ಆರಂಭವಾದ ಈ ಸಂಸ್ಥೆಗಳು ಇತ್ತೀಚೆಗೆ ವಾಣಿಜ್ಯೀಕರಣದತ್ತ ವಾಲುತ್ತಿದೆ. ಈ ಮತೀಯ, ಜಾತಿವಾದ ಶಕ್ತಿಗಳು ಇಂದು ಶಿಕ್ಷಣರಂಗದ ಆಧಾರಸ್ತಂಭಗಳಲ್ಲೊಂದಾಗಿವೆ.

ಅಲ್ಪ ಸಂಖ್ಯಾತರೆಂಬ ಹೆಸರಿನಲ್ಲಿ ಸಂವಿಧಾನವನ್ನು ಬಳಸಿಕೊಳ್ಳಲು ಈ ಶಕ್ತಿಗಳು ಹೇಸುವುದಿಲ್ಲ. ಮತೀಯ ಅಲ್ಪಸಂಖ್ಯಾತರೆಂಬ ನೆಪದಲ್ಲಿ ತಮಗೆ ಬೇಕಾದನ್ನು ಮಾಡುವ

ಇವರ ಸಾಲಿಗೆ ಈಗ ಭಾಷಾ ಅಲ್ಪ ಸಂಖ್ಯಾತರೂ ಸೇರಿಕೊಂಡಿದ್ದಾರೆ. ವಾಸ್ತವವಾಗಿ ಸಂವಿಧಾನದಲ್ಲಿ ಇವರಿಗೆ ಕೊಟ್ಟಿರುವ ಹಕ್ಕು ಸಾಂಸ್ಕೃತಿಕವಾಗಿ ಅವರು ಅಳಿಸಿ ಹೋಗದಿರಲಿ ಎಂಬ ಉದ್ದೇಶದಿಂದ ಮಾತ್ರ. ಇದಲ್ಲದೆ ಇವರಿಗೆ ಕೊಟ್ಟ ಸಂವಿಧಾನದ ರಕ್ಷಣೆಯನ್ನು ತಮ್ಮ ಭಾಷೆ ಯಾ ಮತದ ರಕ್ಷಣೆಗಾಗಿ ಇವುಗಳನ್ನು ಕಲಿಸುವ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಸೀಮಿತವಾಗಿಡಬೇಕಾಗಿತ್ತು. ಆದರೆ ಈಗ ಅಲ್ಪ ಸಂಖ್ಯಾತರೆಂಬ ನೆಪದಲ್ಲಿ ತಾಂತ್ರಿಕ, ವೈದ್ಯಕೀಯ ಇತ್ಯಾದಿ ಸಂಸ್ಥೆಗಳನ್ನು ನಡೆಸಿ ಹಣ ದೋಚಿಕೊಳ್ಳುವವರಿದ್ದಾರೆ. ಮತ್ತು ಇಂತಹ ವ್ಯಾಪಾರಿ ಶಕ್ತಿಗಳಿಗೆ ಬೆಂಬಲ ಕೊಡುವ ವಿ.ವಿ.ಗಳೂ ಇವೆ ! ಈ ವಿ.ವಿ. ಗಳ ನಿರ್ಧಾರ ಮಾಡಿಕೊಳ್ಳುವ ವಿವಿಧ ಅಂಗಗಳಾದ ಅಕಾಡೆಮಿಕ್ ಕೌನ್ಸಿಲ್, ಸೆನೇಟ್, ಸಿಂಡಿಕೇಟುಗಳಲ್ಲಿ ಇಂತಹ ಸ್ಥಾಪಿತ ಹಿತಾಸಕ್ತಿಗಳಿಗೆ ಬಲವಾದ ಹಿಡಿತವಿದೆ. ಈ ಸಂಸ್ಥೆಗಳಿಗೆ ನಡೆಯುವ ಚುನಾವಣೆಗಳಲ್ಲಿಯೂ ಈ ಶಕ್ತಿಗಳ ಕೈವಾಡವನ್ನು ಸಾಕಷ್ಟು ಮಟ್ಟಿಗೆ ಕಾಣಬಹುದು.

ಇವತ್ತು ನಮ್ಮ ಮುಂದಿರುವ ಮುಖ್ಯವಾದ ಪ್ರಶ್ನೆಯೇನೆಂದರೆ ಹಣಕೊಡುವ ಬಲವಿದ್ದವರಿಗೆ ತಮಗೆ ಬೇಕಾದ ಶಿಕ್ಷಣವನ್ನು ಪಡೆಯುವ ಹಕ್ಕಿಲ್ಲವೇ ಎಂಬುದು. ಈ ಪ್ರಶ್ನೆಯು ಗಮನಾರ್ಹ. ಇಲ್ಲಿ ನಾವು ನೆನಪಿಡಬೇಕಾದ ಮುಖ್ಯವಾದ ವಿಷಯವೇನೆಂದರೆ ವರ್ಧಮಾನ ರಾಷ್ಟ್ರವೊಂದರಲ್ಲಿ ಆರ್ಥಿಕ ಸಂಪನ್ಮೂಲಗಳ ಕೊರತೆ ಇರುವಾಗ, ಈ ಸಂಪನ್ಮೂಲಗಳು ಯೋಗ್ಯವಾದ ಉದ್ದೇಶಕ್ಕೆ ಅರ್ಥಾತ್ ಸಮಾಜದ ಉನ್ನತಿಗೆ ಉಪಯೋಗವಾಗಬೇಕು. ಆಯಾ ವಿಷಯಗಳಿಗೆ ಸರಿಯಾದ ಅರ್ಹತೆಯಿರುವವರಲ್ಲಿ ಅತ್ಯುತ್ತಮರು ಅವುಗಳಲ್ಲಿ ತರಬೇತಿ ಪಡೆಯಬೇಕು. ಇದು ಸಮಾಜದಲ್ಲಿರುವ ಹಿಂದುಳಿದವರ ಏಳಿಗೆಗೂ ಅಗತ್ಯವಾಗಿರುವ ವಿಷಯ. ಆದರೆ ದಾನಶುಲ್ಕ ಪಡೆಯುವ ಶಿಕ್ಷಣ ಸಂಸ್ಥೆಗಳಲ್ಲಿ ಸೀಟುಗಳನ್ನು ಕೊಡಲು ವಿದ್ಯಾರ್ಥಿಯ ಹೆತ್ತವರ ಹಣ ಕೊಡುವ ಶಕ್ತಿಯೇ ಅರ್ಹತೆಯಾಗಿರುತ್ತದೆ. ಇದರಿಂದಾಗಿ, ಸಮಾಜದ ಶೋಷಣಾಧಾರಿತ ವ್ಯವಸ್ಥೆಯ ಸ್ಥಿರೀಕರಣವು ಅವ್ಯಾಹತವಾಗಿ ನಡೆಯುತ್ತಿರುತ್ತದೆ. ಯಾಕೆಂದರೆ ಉಳ್ಳವರು ತಮ್ಮ ಮಕ್ಕಳನ್ನೇ ಮತ್ತೂ ಉಳ್ಳವರ ಶ್ರೇಣಿಯಲ್ಲೇ ಇರಿಸಲು ಬಯಸುತ್ತಾರೆ! ಉದಾಹರಣೆಗೆ ನರ್ಸಿಂಗ್ ಹೋಂನ ಮಾಲಕನೋರ್ವನಿಗೆ ತನ್ನ ಬಳಿಕ ತನ್ನ ದಂಧೆಯನ್ನು ಚಲಾಯಿಸುವವ ಬೇಕು- ಈ ಕಾರಣದಿಂದಾಗಿ ತನ್ನ ಮಗ - ಮಗಳಿಗೆ ಅರ್ಹತೆಯಿರಲಿ ಇಲ್ಲದಿರಲಿ ಅವನನ್ನು (ಅವಳನ್ನು) ವೈದ್ಯಕೀಯ ಪದವೀಧರರನ್ನಾಗಿ ಮಾಡುವ ಆಕಾಂಕ್ಷೆಯಿಟ್ಟಿರುತ್ತಾನೆ. ಈ ಕಾರಣದಿಂದಾಗಿ ಆತ ಎಷ್ಟು ಹಣ ತೆತ್ತಾದರೂ ತನ್ನ ಸಂತಾನಕ್ಕಾಗಿ ಮೆಡಿಕಲ್ ಸೀಟನ್ನು ಕೊಳ್ಳುತ್ತಾನೆ! ಕೆಲವೊಮ್ಮೆ, ಕಂಪೌಂಡರ್ ಕೆಲಸಕ್ಕೂ ಅರ್ಹತೆಯಿಲ್ಲದ ಇಂತವರ ಮಕ್ಕಳು ವೈದ್ಯಕೀಯ ವಿದ್ಯಾರ್ಥಿಗಳಾಗಿ ಸೇರಿರುತ್ತಾರೆ! ಮುಂದೆ, ವರ್ಷಗಟ್ಟಲೆ ನಾಪಾಸಾಗಿ ಕೊನೆಗೆ

ಹೇಗಾದರೂ ಮಾಡಿ ತಮ್ಮ ಪದವಿಯನ್ನು ಪಡೆಯುತ್ತಾರೆ! ಮುಂದೆ, ಇವರ ಭವಿಷ್ಯವಂತೂ ಪೂರ್ವ ನಿರ್ಧರಿತವಾದ ಕಾರಣ ಅವರು ಯಾವುದೇ ವಿಷಯದ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಗಿಲ್ಲ - ಕಲಿಯುವಿಕೆಯ ಬಗ್ಗೆ ಕೂಡಾ!

ದಾನಶುಲ್ಕದ ಬಲದಿಂದ ಸೀಟುಪಡೆದುಕೊಳ್ಳುವವರಲ್ಲಿ ಎಲ್ಲರೂ ಹೀಗಿರುತ್ತಾರೆಂಬುದಲ್ಲ. ಅವರಲ್ಲೂ ಕೆಲವರು ನಿಜವಾದ ಅರ್ಹತೆಯುಳ್ಳವರಿರುತ್ತಾರೆ. ಆದರೆ, ಕೆಲವು ಆರ್ಥಿಕವಾಗಿ ಬಲವಾಗಿರುವ ವರ್ಗದವರು (ಮೇಲ್ಕಾಣಿಸಲಾದಂತಹವರು) ಕಾಲೇಜಿಗೆ ಸೇರುವುದು ತಮ್ಮ ತಂದೆ-ತಾಯಿಗಳ ಬಲವಂತದ ಕಾರಣ, ಇವರಿಗೆ ಕಲಿಯುವಿಕೆಗಿಂತಲೂ ಮಜಾ ಮಾಡುವುದೇ ಮುಖ್ಯವಾಗಿರುತ್ತದೆ. ಇವರಿಗಂತೂ ತಮ್ಮ ಹೆತ್ತವರ ಕಾಳಧನವೂ ಹೇರಳವಾಗಿ ಲಭ್ಯವಾಗಿರುವ ಕಾರಣ, ಮೋಜಿನ ಜೀವನವನ್ನು ನಡೆಸುತ್ತಿರುತ್ತಾರೆ. ಇಂತಹವರ ಸಹಪಾಠಿಗಳೂ ಇವರೊಂದಿಗೆ ಸೇರಿ, ತಾವೂ ಇಂತಹದ್ದೇ ರೀತಿಯ ಜೀವನ ವಿಧಾನವನ್ನು ಹಮ್ಮಿಕೊಳ್ಳುತ್ತಾರೆ.

ದಾನಶುಲ್ಕವನ್ನು ಪಡೆಯುವ ಶಿಕ್ಷಣ ಸಂಸ್ಥೆಗಳು ಸಮಾಜದ ಮತ್ತು ದೇಶದ ಸಮಸ್ಯೆಗಳಿಂದ ಪೂರ್ತಿಯಾಗಿ ಬೇರ್ಪಡಿಸಲ್ಪಟ್ಟ ದಂತಗೋಪುರಗಳಾಗಿರುತ್ತವೆ. ತಮ್ಮ ಪರಿಸರದಲ್ಲಿ ನಡೆಯುವ ಯಾವುದೇ ರೀತಿಯ ಅನ್ಯಾಯ, ದಬ್ಬಾಳಿಕೆ, ಶೋಷಣೆಗಳಿಗೆ ಸ್ಪಂದಿಸುವ ಯಾ ಪ್ರತಿಕ್ರಿಯಿಸುವ ಪ್ರವೃತ್ತಿ ಇವರಲ್ಲಿರುವುದಿಲ್ಲ. ಹಲವೊಮ್ಮೆ, ಇಂತಹ ''ಶಿಕ್ಷಣ ಸಂಸ್ಥೆ''ಗಳಲ್ಲಿ ಪ್ರತಿಭಟನೆ ಇತ್ಯಾದಿಗಳು ನಡೆದಲ್ಲಿ ಅವು ತೀರಾ ತಾತ್ಕಾಲಿಕವಾಗಿದ್ದು ಕೆಲವೊಮ್ಮೆ ಕ್ಷುಲ್ಲಕ ಕಾರಣಗಳಿಗಾಗಿರುತ್ತವೆ. ಕೆಲವೊಮ್ಮೆ ಇವು ಸಮಾಜದ ಅಗತ್ಯಗಳಿಗೆ ಸ್ಪಂದಿಸುವ ಸೋಗಿನಲ್ಲಿ ಕೆಲವು ಕಾರ್ಯಕ್ರಮಗಳನ್ನು ನಡೆಸುತ್ತದೆ. ಉದಾಹರಣೆಗೆ ಉಚಿತ ವೈದ್ಯಕೀಯ, ದಂತ ವೈದ್ಯಕೀಯ ಶಿಬಿರಗಳು ಇತ್ಯಾದಿ. ಇಂತಹವುಗಳೂ ವಾಸ್ತವವಾಗಿ ಸಮಾಜದ ಅಗತ್ಯಗಳಿಗೆ ಸ್ಪಂದಿಸುವ ಉದ್ದೇಶದಿಂದಲ್ಲ. ಇವುಗಳನ್ನು ತಮ್ಮ ವಿದ್ಯಾರ್ಥಿಗಳ ಕಲಿಯುವಿಕೆಗೆ ಬಲಿಪಶುಗಳನ್ನು ಹುಡುಕುವ ಉದ್ದೇಶದಿಂದ ನಡೆಸಲಾಗುತ್ತದೆ! ಹಲವೊಮ್ಮೆ ಇಂತಹ ಶಿಬಿರಗಳಿಗೆ ಹೋದವರು ಈ ಕಲಿಯುವವರ ತಪ್ಪುಗಳಿಗೆ ಬಲಿಯಾಗಿರುವ ಸಂದರ್ಭಗಳೂ ಇವೆ. ಇಲ್ಲಿ ಗಮನಾರ್ಹವಾದ ಸಂಗತಿಯೇನೆಂದರೆ ಇಂತಹ ವ್ಯಾಪಾರೀಕರಣದ ಕೇಂದ್ರಗಳಲ್ಲಿ ಕಲಿಯುವ ವಿದ್ಯಾರ್ಥಿಗಳಲ್ಲಿ ಬಹು ಸಂಖ್ಯೆಯವರು ಪರದೇಶ, ಪರವೂರುಗಳಿಂದ ಬಂದವರಾಗಿರುತ್ತಾರೆ. ಇವರಿಗೆ ಸ್ಥಳೀಯರ ಮೇಲೆ ಯಾವುದೇ ಮೋಹ, ಮಮತೆಗಳಿಲ್ಲ. ತತ್ಕಾರಣವಾಗಿ ಅವರಿಗೆ ಇವರು ತಮ್ಮ ಅರ್ಧಕಲಿತ ಜ್ಞಾನವನ್ನು ಉಪಯೋಗಿಸುವ ಪ್ರಯೋಗಪಶುಗಳಾಗಲು ಯಾವುದೇ ಅಭ್ಯಂತರವಿರುವುದಿಲ್ಲ!

ಈ ದಾನಶುಲ್ಕ ''ಲಾಬಿ'' ಯ ಪ್ರಾಬಲ್ಯ ಎಷ್ಟರ ಮಟ್ಟಿಗೆ ವ್ಯಾಪಿಸಿದೆಯೆಂದರೆ ವಿ.ವಿ.ಗಳು, ಸರಕಾರಗಳು ಇವರ ಕೈಗೊಂಬೆಗಳಾಗಿವೆ. ಇದರ ಪರಿಣಾಮವಾಗಿ

ವಿ.ವಿ-ದಾನಶುಲ್ಕ ಲಾಬಿ-ರಾಜಕಾರಣಿಗಳ ಪ್ರಬಲವಾದ ಕೂಟವಾಗಿ ಬೆಳೆದು, ಶಿಕ್ಷಣ ರಂಗವೇ ಇವರ ಆಟದ ಬಯಲಾಗಿದೆ. ಇಂದು ನಾವು ವಿ.ವಿ.ಗಳಲ್ಲಿ ಗಮನಿಸುವ ವಿಷಯವೇನೆಂದರೆ ಅಲ್ಲಿ ಯಾವ ನಿರ್ಧಾರವನ್ನು ತೆಗೆದುಕೊಳ್ಳಬೇಕಾದರೂ ಅದಕ್ಕೆ ಇವರ ಸಮ್ಮತಿ ಬೇಕೇ ಬೇಕು. ವಿ.ವಿ.ದ ಪರೀಕ್ಷಾಂಗಗಳಂತೂ ತಮ್ಮ ಪೂರ್ಣಾವಧಿಯನ್ನು ಈ ಮಳಿಗೆಗಳ ಪರೀಕ್ಷೆ-ಫಲಿತಾಂಶ-ಮರುಮೌಲ್ಯಮಾಪನಗಳಲ್ಲಿ ಕಳೆಯುತ್ತಿರುತ್ತವೆ. ಯಾಕೆಂದರೆ, ಇಂತಹ ಕಾಲೇಜುಗಳ ವಿದ್ಯಾರ್ಥಿಗಳು ಆರ್ಥಿಕವಾಗಿ ಬಲಶಾಲಿಗಳೂ, ಸಮಾಜದಲ್ಲಿ ಪ್ರಭಾವಿಗಳೂ ಆಗಿರುತ್ತಾರೆ. ಇವರ ಹೇಳಿಕೆಗಳಿಗೆ ತಕ್ಕಂತೆ ನಡೆಯದಿದ್ದಲ್ಲಿ, ವಿ. ವಿ. ದ ಉದ್ಯೋಗಿಗಳು ಪ್ರಬಲರ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಇದಲ್ಲದೆ, ವಿ. ವಿ. ದ ಪರೀಕ್ಷಾ ವಿಭಾಗದ - ವೆಚ್ಚದ ಸಿಂಹಪಾಲು ಈ ತಾಂತ್ರಿಕ ಕಾಲೇಜುಗಳಲ್ಲಿ ಪರೀಕ್ಷೆಗಳನ್ನು ನಡೆಸಲು ವ್ಯಯವಾಗುತ್ತದೆ. ಈ ಕಾಲೇಜುಗಳ ವಿದ್ಯಾರ್ಥಿಗಳು ಕಟ್ಟುವ ಶುಲ್ಕವು ಇತರರಷ್ಟೇ ಆದರೂ, ಇವರ ಪರೀಕ್ಷಕರು ದೂರದೂರುಗಳಿಂದ ಬರುವ ಕಾರಣ, ಅವರ ಭತ್ಯೆ, ಮೌಲ್ಯಮಾಪನ ಶುಲ್ಕ ಇತ್ಯಾದಿ ಕೆಲವು ಸಾವಿರಗಳಷ್ಟಾಗುತ್ತದೆ. ಇದರಿಂದಾಗಿ, ವಿ.ವಿ. ಗೆ ಪರೀಕ್ಷೆಗಳನ್ನು ನಡೆಸುವ ಆದಾಯ ಬರುವುದು ಸಾಮಾನ್ಯ ಪದವಿ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಂದಾದರೂ, ವೆಚ್ಚವು ಈ ತಾಂತ್ರಿಕ, ವೈದ್ಯಕೀಯ ಕಾಲೇಜುಗಳಿಗೆ. ಸ್ನಾತಕೋತ್ತರ ತರಗತಿಗಳಲ್ಲಂತೂ ಒಂದೆರಡು ವಿದ್ಯಾರ್ಥಿಗಳಿದ್ದು ಇವರು ತೆರುವ ಶುಲ್ಕ ಕೆಲವೇ ನೂರುಗಳಾದರೂ ಒಬ್ಬೊಬ್ಬ ಪರೀಕ್ಷಕನಿಗೆ ಕೊಡುವ ವಿಮಾನ ಪ್ರಯಾಣ ಭತ್ಯೆ ಇತ್ಯಾದಿ ಕೆಲವು ಸಾವಿರಗಳಾಗುತ್ತದೆ. ಈ ವರ್ಗದ ವಿದ್ಯಾರ್ಥಿಗಳು ಪ್ರಭಾವಿಗಳಾಗಿರುವ ಕಾರಣ ಇವರ ಶುಲ್ಕವನ್ನು ಹೆಚ್ಚಿಸಲೂ ಸಾಧ್ಯವಿರುವುದಿಲ್ಲ.

ಇಂತಹ ಶಿಕ್ಷಣದ ಮಾರಾಟ ಕೇಂದ್ರಗಳಿಂದ ಶಿಕ್ಷಣರಂಗಕ್ಕೂ ಸಮಾಜಕ್ಕೂ ಆಗುವ ಹಾನಿಯು ಅನಿಯಮಿತ. ಯಾಕೆಂದರೆ ಕಳಪೆ ದರ್ಜೆಯ ತರಬೇತಿ ಪಡೆದ ತಾಂತ್ರಿಕ, ವೈದ್ಯಕೀಯ ವಿದ್ಯಾರ್ಥಿಯು ಸಮಾಜಕ್ಕೆ ಕಂಟಕಪ್ರಾಯನಾಗಿರುತ್ತಾನೆ. ಸಾಕ್ಷರರು ಅತಿ ಕಡಿಮೆ ಪ್ರಮಾಣದಲ್ಲಿರುವ ನಮ್ಮ ದೇಶದಲ್ಲಿ, ಸಾಕ್ಷರರಾದವರೂ ತಾಂತ್ರಿಕ ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ಒದ್ದಾಡಬೇಕಾದ ಪರಿಸ್ಥಿತಿಯಲ್ಲಿ ಈ ಕಳಪೆಗುಣಮಟ್ಟದ ಪದವೀಧರರು ಮಾಡಿದ ತಪ್ಪುಗಳನ್ನು ಯಾರೂ ಕಂಡು ಹುಡುಕುವ ಹಾಗಿಲ್ಲ. ಯಾಕೆಂದರೆ ಒಬ್ಬ ವೃತ್ತಿಪರ ಮಾಡಿದ ತಪ್ಪನ್ನು ಎತ್ತಿ ತೋರಿಸಲು ಆತನ ವೃತ್ತಿಯ ಇನ್ನೊಬ್ಬನು ಖಂಡಿತಕ್ಕೂ ಸಿದ್ಧನಿರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ರೋಗಿಯು ಮರಣಗೊಂಡರೂ ಅದಕ್ಕೆ ಗ್ರಹಚಾರ, ದೇವರ ಶಾಪ ಇತ್ಯಾದಿ ಸಬೂಬುಗಳನ್ನು ಕೊಟ್ಟು ತಪ್ಪಿಸಿಕೊಳ್ಳಲಾಗುತ್ತದೆ. ಕಳಪೆ ತಾಂತ್ರಿಕ ಪದವೀಧರರಿಂದಾಗಿ ಎಷ್ಟು ಸೇತುವೆ, ಮನೆ, ಕಟ್ಟಡಗಳು ಕುಸಿದಿರಬಹುದು?

ಕಳಪೆದರ್ಜೆಯ ವೈದ್ಯಕೀಯ ಪದವೀಧರರಿಂದಾಗಿ ಎಷ್ಟು ಮಂದಿ ಬಡ, ನಿರಪರಾಧಿ ರೋಗಿಗಳು ಪ್ರಾಣ ಕಳೆದುಕೊಂಡಿರಬಹುದು? ಈ ಪ್ರಶ್ನೆಗಳ ಉತ್ತರಗಳಿಗೆ ನಾವೇ ನಮ್ಮನ್ನು ಪ್ರಶ್ನಿಸಿಕೊಳ್ಳಬೇಕಾಗಿದೆ.

ಕೊನೆಯಲ್ಲಿ ನಾವು ನಮ್ಮನ್ನು ಪ್ರಶ್ನಿಸಿಕೊಳ್ಳಬೇಕಾಗಿದೆಯೇನೆಂದರೆ ಈ ದುಸ್ಥಿತಿಗೆ ಯಾರು ಹೊಣೆಯೆಂದು. ಇದಕ್ಕೆ ನಾವು ಪ್ರತಿಯೋರ್ವರೂ ಹೊಣೆಗಾರರಾಗಿದ್ದೇವೆಂಬುದನ್ನು ನೆನಪಿಟ್ಟುಕೊಳ್ಳಬೇಕು. ನಮ್ಮ ಮನೋಭಾವನೆ ಏನೆಂದರೆ ಸಮಾಜದ ಆಗು ಹೋಗುಗಳಿಗೆ ಪ್ರತಿಕ್ರಿಯಿಸದೆ ಸುಮ್ಮನಿರುವುದು. ಕೊನೆಗೊಮ್ಮೆ, ಈ ಸಾಮಾಜಿಕ ಪಿಡುಗು ನಮ್ಮ ಮೇಲೆ ನೇರವಾದ ಪ್ರಭಾವ ಬೀರುವ ಸಮಯದಲ್ಲಿ ಪಶ್ಚಾತ್ತಾಪ ಪಡುವುದು! ನಮ್ಮಲ್ಲಿ ಬುದ್ಧಿ ಜೀವಿಗಳೆಂದು ಕರೆಸಿಕೊಳ್ಳುವವರು ಇಂತಹ ಮನೋಭಾವವುಳ್ಳವರಲ್ಲಿ ಅಗ್ರಸ್ಥಾನ ಪಡೆದಿರುತ್ತಾರೆ. ಒಟ್ಟಿನಲ್ಲಿ ಕರ್ನಾಟಕ ರಾಜ್ಯದಲ್ಲಂತೂ ಸೀಟು ಮಾರಾಟಗಾರರು ''ಮಾಫಿಯಾ''ದಂತೆ ಬೆಳೆದಿದ್ದಾರೆ.

ಈ ಪಿಡುಗನ್ನು ನಿಯಂತ್ರಿಸಲು ಯಾವುದೇ ಸೌಮ್ಯವಾದಿ, ಮಧ್ಯವಾದಿ (Centrist Party) ಪಕ್ಷದ ಆಡಳಿತದಿಂದ ಸಾಧ್ಯವಿಲ್ಲ. ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರವಿದ್ದಾಗಲೂ, ಜನತಾ ಸರಕಾರವಿದ್ದಾಗಲೂ ಈ ಸೀಟು ಮಾರಾಟಗಾರರ ಬೆಳವಣಿಗೆಗೆ ಯಾವುದೇ ಧಕ್ಕೆ ಬಂದಿಲ್ಲ. ದಾನ ಶುಲ್ಕವನ್ನು ನಿವಾರಿಸುವೆವೆಂದು ಅಧಿಕಾರಕ್ಕೆ ಬಂದ ಜನತಾಪಕ್ಷದ ಧುರೀಣ ರಾಮಕೃಷ್ಣ ಹೆಗಡೆ ಮತ್ತು ಈ ಖಾಸಗಿ ಶಿಕ್ಷಣ ರಂಗಕ್ಕಿದ್ದ ನಂಟು ಎಲ್ಲರಿಗೂ ತಿಳಿದ ವಿಷಯ. ಗುಂಡುರಾವ್ ಮುಖ್ಯಮಂತ್ರಿಯಾಗಿರುವಾಗ ಅನುಮತಿ ಕೊಟ್ಟ ಕಾಲೇಜುಗಳ ಬಗ್ಗೆ ತೀವ್ರವಾದ ಆಕ್ಷೇಪವೆತ್ತಿದ ಜನತಾ ಪಕ್ಷದವರು ತಾವು ಅಧಿಕಾರಕ್ಕೆ ಬಂದಾಗ ಅದಕ್ಕಿಂತಲೂ ಹೆಚ್ಚಿನ ಕಾಲೇಜುಗಳನ್ನು ಸ್ಥಾಪಿಸಲು, ಸೀಟುಗಳ ಸಂಖ್ಯೆ ಹೆಚ್ಚಿಸಲು ಅನುಮತಿ ನೀಡಿದರು! ಒಟ್ಟಿನಲ್ಲಿ ಸಮಾಜವಾದಿ, ಎಡ ಒಲವಿರುವ ಸರಕಾರವು ಅಧಿಕಾರಕ್ಕೆ ಬಂದು ಈ ಸೀಟು ಮಾರಾಟ ಮಳಿಗೆಗಳನ್ನು ರಾಷ್ಟ್ರೀಕರಿಸಿ, ಇವುಗಳಿಗೆ ಪ್ರವೇಶವನ್ನು ಅರ್ಹತೆಯ ಮೂಲಕ ಮಾತ್ರ ಮಾಡುವುದೇ ಈ ಸಮಸ್ಯೆಗೆ ಪರಿಹಾರ. ಈ ರೀತಿಯ ದೃಢ ನಿರ್ಧಾರವಿಲ್ಲದೆ ಪರಿಸ್ಥಿತಿಯನ್ನು ಬದಲಾಯಿಸಲು ಸಾಧ್ಯವೇ ಇಲ್ಲವೆನ್ನಬಹುದು.

ಒಟ್ಟಿನಲ್ಲಿ ನಮ್ಮ ರಾಜ್ಯವನ್ನು ತಮ್ಮ ಒಕ್ಟೋಪಸ್ ಬಾಹುಗಳಲ್ಲಿ ಬಂಧಿಸಿರುವ ಈ ಶಿಕ್ಷಣದ ವಾಣಿಜ್ಯೀಕರಣ ಮಾಡಿದ ಲಾಬಿಗಳನ್ನು ನಿಯಂತ್ರಿಸದಿದ್ದಲ್ಲಿ ನಮ್ಮ ಯುವ ಜನತೆಗೆ ಮುಂದಿನ ಪೀಳಿಗೆಗೆ ಕರಾಳವಾದ ಭವಿಷ್ಯವಿದೆ. ನಮ್ಮ ಮುಂದಿನ ಜನಾಂಗದ ಆರೋಗ್ಯಕರ ಬೆಳವಣಿಗೆಯ ದೃಷ್ಟಿಯಿಂದಾದರೂ ಈ ಬಗ್ಗೆ ಸರಕಾರಗಳೂ, ಮುಖ್ಯವಾಗಿ ನಾವೆಲ್ಲರೂ ಸಂಘಟಿತ, ವ್ಯವಸ್ಥಿತ ಹೋರಾಟ ನಡೆಸಬೇಕಾಗಿದೆ.

— — — — — —

● ಬಿ.ಎಂ.ಹನೀಫ್
ವರದಿಗಾರರು,
ಪ್ರಜಾವಾಣಿ ದೈನಿಕ,
ಬೆಂಗಳೂರು.

# ದಲಿತರ ಹೋರಾಟದಲ್ಲಿ ಮುಸ್ಲಿಮರೂ ಪಾಲ್ಗೊಳ್ಳಬೇಕು

ಸ್ವತಂತ್ರ ಭಾರತಕ್ಕಾಗಲೀ, ಸ್ವಾತಂತ್ರ್ಯೋತ್ತರ ಭಾರತಕ್ಕಾಗಲೀ ಮುಸ್ಲಿಮರ ಕೊಡುಗೆ ಕಡಿಮೆ ಏನಲ್ಲ. ಈ ನೆಲದ ಎಲ್ಲ ಬಗೆಯ ಹೋರಾಟಗಳಲ್ಲೂ ಎಲ್ಲ ರಂಗದ ಸಾಧನೆಗಳಲ್ಲೂ ಮುಸ್ಲಿಮರ ರಕ್ತ - ಬೆವರಿನ ಪಾಲು ಬಹಳಷ್ಟಿದೆ. ಕ್ರಿ.ಶ. 6ನೇ ಶತಮಾನದ ಅಂತ್ಯದ ವೇಳೆಗೆ ಕೇರಳದ ಮುಜಿರಿಸ್ (ಈಗಿನ ಕೊಡಂಗಲ್ಲೂರು) ಬಂದರಿನ ಮೂಲಕ ಈ ನೆಲದ ಮೇಲೆ ಮೊದಲ ಹೆಜ್ಜೆಯಿಟ್ಟ ಮುಸ್ಲಿಮರು ಇವತ್ತು ಮುಹಮ್ಮದ್ ಅಜರುದ್ದೀನ್ ಇಂಡಿಯಾದ ಕ್ರಿಕೆಟ್ ತಂಡದ ಕಪ್ತಾನನಾಗಿ ಸೇವೆ ಸಲ್ಲಿಸುವವರೆಗೆ ಈ ದೇಶ ಕಟ್ಟಲು ಹರಿಸಿದ ಬೆವರು ಅಷ್ಟಿಷ್ಟಲ್ಲ. ಸುರಿಸಿದ ಕಣ್ಣೀರು ಮತ್ತು ಬಸಿದ ರಕ್ತವೂ ಕಡಿಮೆಯಿಲ್ಲ. ಬ್ರಿಟಿಷರ ವಿರುದ್ಧ ನಡೆದ ಮಹಾ ಸ್ವಾತಂತ್ರ್ಯ ಹೋರಾಟದಲ್ಲಂತೂ; ಅದು 1905ರ ವಂಗಭಂಗ ಚಳವಳಿಯಾಗಲೀ 1921 ರಲ್ಲಿ ನಡೆದ ಕೇರಳದ ಮಾಪಿಳ್ಳಾ ದಂಗೆಯಾಗಲೀ; ಹೆಜ್ಜೆ ಹೆಜ್ಜೆಗೂ ಮುಸ್ಲಿಮರು ಇತರ ಸಮುದಾಯಗಳ ಭುಜಕ್ಕೆ ಭುಜಕೊಟ್ಟು ಹೋರಾಟ ನಡೆಸಿದ ಉದಾಹರಣೆಗಳು ಕಾಲಿಗೊಂದು ಕೊಸರಿಗೊಂದು ಕಾಣಸಿಗುತ್ತವೆ.

ಇಷ್ಟೆಲ್ಲಾ ಹೋರಾಟದ ಬಳಿಕ ನಡೆದ ಸ್ವಾತಂತ್ರ್ಯ ನಿಜಕ್ಕೂ ಮುಸ್ಲಿಮರಿಗೆ ದಕ್ಕಿದೆಯೇ ಎಂಬುದು ಮಹತ್ವದ ಪ್ರಶ್ನೆ. ತೀರಾ ಸಾಮಾನ್ಯೀಕರಿಸಿ ಈ ಪ್ರಶ್ನೆಗೆ ಉತ್ತರಿಸಲು ಸಾಧ್ಯವಿಲ್ಲ. ಇವತ್ತು ಮುಸ್ಲಿಮರ ಶೈಕ್ಷಣಿಕ ಅಧೋಗತಿಯ ಬಗ್ಗೆ ನಾವು ಚರ್ಚಿಸುವಾಗ ಅದಕ್ಕೆ

ಪೂರಕವಾಗಿರುವ ಮುಸ್ಲಿಮರ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ 'ಬರ'ದ ಬಗ್ಗೆಯೂ ನಾವು ಚರ್ಚಿಸಲೇಬೇಕಾಗುತ್ತದೆ. ಮುಸ್ಲಿಮರಿಗೆ ಧರ್ಮ ಎನ್ನುವುದು ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಸ್ತರಗಳನ್ನು ಒಳಗೊಂಡ ಜೀವನ ವಿಧಾನವೇ ಆಗಿರುವುದರಿಂದ ಈ ಶೈಕ್ಷಣಿಕ ಹಿನ್ನೆಡೆಯಲ್ಲಿ ಅಥವಾ ಒಟ್ಟಾಗಿ ಹೇಳುವುದಾದರೆ ಈ ಸಾಮಾಜಿಕ ಆರ್ಥಿಕ ಹಿನ್ನಡೆಯಲ್ಲಿ ಅವರ ರಾಜಕೀಯ ಮತ್ತು ಧಾರ್ಮಿಕ ನಿಲುವುಗಳೂ ಮಹತ್ವದ ಪಾತ್ರ ವಹಿಸಿವೆ. ಸಿಂಧೂಕೊಳ್ಳ ದಾಟಿ ಬಂದ ಇತರೆಲ್ಲಾ ಧರ್ಮಗಳೂ ಇಲ್ಲಿನ ಆತ್ಮಚಿಂತನೆಯ ಹುಲ್ಲುಗಾವಲಿನಲ್ಲಿ ಕೊಬ್ಬಿ, ಬೊಜ್ಜು ಬೆಳೆಸಿಕೊಂಡು ಜಡವಾದಂತೆ ಇಲ್ಲಿ ಇಸ್ಲಾಮ್ ಧರ್ಮ ಕೂಡಾ ಜಡವಾಗಿದೆ. ಜಗತ್ತಿನ ಬೇರೆಲ್ಲಾ ದೇಶಗಳ ಮುಸ್ಲಿಮರು ಶೈಕ್ಷಣಿಕವಾಗಿ ಮುಂದುವರಿದು ಆರ್ಥಿಕ ಹಾಗೂ ಸಾಮಾಜಿಕ ಸ್ವಾಸ್ಥ್ಯದೊಂದಿಗೆ ಮುನ್ನಡೆ ಸಾಧಿಸುತ್ತಿದ್ದರೆ, ಭಾರತೀಯ ಉಪಖಂಡದ (ಭಾರತ, ಪಾಕಿಸ್ತಾನ ಮತ್ತು ಅಫಘಾನಿಸ್ತಾನ) ಮುಸ್ಲಿಮರು ದಲಿತರಲ್ಲಿ ದಲಿತರಾಗಿ ದಿನ ದೂಡುತ್ತಿರುವುದಕ್ಕೆ ಧರ್ಮದ ಹೆಸರಿನಲ್ಲಿ ಅವರು ನಡೆಸಿಕೊಂಡು ಬಂದಿರುವ ಆತ್ಮವಂಚನೆಯೇ ಪ್ರಮುಖ ಕಾರಣ ಎಂದರೆ ತಪ್ಪಾಗುವುದಿಲ್ಲ.

ಮುಖ್ಯವಾಗಿ ಇಂಡಿಯಾದ ಮುಸ್ಲಿಮರ ಸ್ಥಿತಿಗತಿಗಳನ್ನು ನೋಡೋಣ. ದೇಶದ ಜನ ಸಂಖ್ಯೆಯಲ್ಲಿ 13 ಶೇಕಡಾದಷ್ಟು ತಲೆಗಳನ್ನು ಪ್ರತಿನಿಧಿಸುತ್ತಿರುವ ಮುಸ್ಲಿಮರು ರಾಜಕೀಯವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಕನಿಷ್ಠ ಅಷ್ಟು ಪಾಲನ್ನು ಹೊಂದಿಲ್ಲ ಎನ್ನುವುದಕ್ಕೆ ಧಾರಾಳ ಅಂಕಿಅಂಶಗಳ ಸಮರ್ಥನೆ ಸಿಗುತ್ತದೆ.

550ರಷ್ಟು ಸಂಸತ್ ಸದಸ್ಯರುಳ್ಳ ಲೋಕಸಭೆಯಲ್ಲಿ ಈ ಸಲ ಆಯ್ಕೆಯಾದವರಲ್ಲಿ ಕೇವಲ 27 ಮಂದಿ ಮುಸ್ಲಿಮ್ ಸದಸ್ಯರು (ಇವರಲ್ಲಿ ಧರ್ಮದ ಹೆಸರು ಹೇಳಿಕೊಂಡು ಮತೀಯ ಪಕ್ಷಗಳ ಟಿಕೆಟಿನಲ್ಲಿ ಗೆದ್ದವರು ಮೂರು ಮಂದಿ ಮಾತ್ರ ಎನ್ನುವುದು ಇಲ್ಲಿ ಅಪ್ರಸ್ತುತವಾದರೂ ಗಮನಾರ್ಹ) ಎಲ್ಲ ರಾಜ್ಯಗಳ ವಿಧಾನ ಸಭೆ, ವಿಧಾನ ಪರಿಷತ್ತುಗಳ ಅಂಕೆ ಸಂಖ್ಯೆಗಳನ್ನು ಗಮನಿಸಿದಾಗಲೂ ಮುಸ್ಲಿಮರಿಗೂ ಸಿಕ್ಕಿರುವ ಪ್ರಾತಿನಿಧ್ಯ ಬಹಳ ಕಡಿಮೆ ಎನ್ನುವುದು ಗೋಚರವಾಗುತ್ತದೆ.

ದೇಶದಲ್ಲಿ ಐದು ಮಹಾನಗರಗಳ ಬಹುತೇಕ ಕೊಳೆಗೇರಿಗಳಲ್ಲಿ ವಾಸಿಸುತ್ತಿರುವ ಬಡವರ ಪೈಕಿ ಸುಮಾರು 30 ಶೇಕಡಾದಷ್ಟು ಮಂದಿ ಮುಸ್ಲಿಮರು ಎನ್ನುವ ಗಾಬರಿ ಹುಟ್ಟಿಸುವ ಅಂಶವೊಂದನ್ನು ಇತ್ತೀಚೆಗಿನ ಅಧ್ಯಯನವೊಂದು ಬಯಲು ಮಾಡಿದೆ. ಯಾವ ರಾಜ್ಯದಲ್ಲೂ ಆ ರಾಜ್ಯದ ಆರ್ಥಿಕತೆಯನ್ನು ನಿಯಂತ್ರಿಸುವ ಮಹಾನ್ ಶ್ರೀಮಂತ ಪಟ್ಟಿಯಲ್ಲಿ ಮುಸ್ಲಿಮರ ಹೆಸರಿಲ್ಲ. ಈ ದೇಶದಲ್ಲಿ 'ಪರ್ಯಾಯ ಆರ್ಥಿಕತೆ' ನಡೆಸುತ್ತಿರುವ 16 ಮಂದಿ ಬಂಡವಾಳಶಾಹಿ ಶ್ರೀಮಂತರ ಪಟ್ಟಿಯಲ್ಲೂ ಮುಸ್ಲಿಮರ ಹೆಸರಿಲ್ಲ.

ಇಷ್ಟೆಲ್ಲದರ ಮಧ್ಯೆ ಮುಸ್ಲಿಮರನ್ನು 'ಅನ್ಯ'ರಂತೆ ಕಾಣುವ, ಅವರ ದೇಶ ಪ್ರೇಮವನ್ನು ಶಂಕಿಸುವ ಹೊಸ ರಾಜಕೀಯ - ಸಾಮಾಜಿಕ ಸಂಸ್ಕೃತಿಯೊಂದು ಇತ್ತೀಚೆಗೆ ತಲೆ ಎತ್ತಿದೆ. ಈ (ಕು)ಸಂಸ್ಕೃತಿಯ ಪರಿಣಾಮವಾಗಿ ಇವತ್ತು ಮುಸ್ಲಿಮರು ತಮ್ಮ ಹಿಂದುಳಿದಿರುವಿಕೆಯ ಬಗ್ಗೆ ಮಾತನಾಡಿದರೆ, ಮುಂದುವರಿಯಲು ಸವಲತ್ತು ಕೇಳಿದರೆ ಅದು ಕೋಮುವಾದ ಎಂಬುದಾಗಿ ಪರಿಗಣಿಸಲ್ಪಡುತ್ತಿದೆ.

ನಾನು ಮೊದಲೇ ಹೇಳಿದಂತೆ ಈ ಸಮಸ್ಯೆಗಳಿಗೆಲ್ಲ ಪೂರಕ ಸಂಬಂಧವಿದೆ. ಮುಸ್ಲಿಮರ ಸಾಮಾಜಿಕ, ಆರ್ಥಿಕ, ರಾಜಕೀಯ ಹಿನ್ನಡೆಗೆ ಮುಖ್ಯ ಕಾರಣ ಅವರ ಶೈಕ್ಷಣಿಕ ಹಿನ್ನಡೆ. ಈ ಶೈಕ್ಷಣಿಕ ಹಿನ್ನಡೆಗೆ ಆರ್ಥಿಕ ಹಿಂದುಳಿದಿರುವಿಕೆ ಹಾಗೂ ಸಾಮಾಜಿಕ ಹಿಂದುಳಿದಿರುವಿಕೆ ಕಾರಣವಾಗಿದೆ. ಹೀಗೆ ಇವು ಪರಸ್ಪರ ಸಾವಯವ ಸಂಬಂಧ ಹೊಂದಿವೆ. ಈ ಹಿನ್ನಡೆಗೆ ಕಳಶಪ್ರಾಯವಾಗಿ ಮುಸ್ಲಿಮರ ಧಾರ್ಮಿಕತೆ ಕೆಲಸ ಮಾಡುತ್ತಿರುವುದು ವಿಪರ್ಯಾಸದ ಸಂಗತಿ.

ಬ್ರಿಟಿಷರ ಆಗಮನದೊಂದಿಗೆ ಇಂಡಿಯಾದಲ್ಲಿ ಹೊಸ ಶೈಕ್ಷಣಿಕ ಪರಿಸರವೂ ಉಂಟಾಯಿತು. ಆಂಗ್ಲ ಶಿಕ್ಷಣ ಪದ್ಧತಿ ಸರಕಾರಿ ಆಶ್ರಯದೊಂದಿಗೆ ದೇಶಾದ್ಯಂತ ಬೇರುಬಿಡತೊಡಗಿತು. ಕ್ರಿಶ್ಚಿಯನ್ನರಂತೆ ಮುಸ್ಲಿಮರು ಹಾಗೂ ಹಿಂದುಗಳು ಈ ಹೊಸ ಶಿಕ್ಷಣ ಪದ್ಧತಿಗೆ ತಮ್ಮನ್ನು ತಾವು ತೆರೆದುಕೊಳ್ಳಲಿಲ್ಲ. ಹಿಂದೂಗಳು ಮುಖ್ಯವಾಗಿ ಬ್ರಾಹ್ಮಣರು ನಿಧಾನವಾಗಿಯಾದರೂ ಈ ಹೊಸಗಾಳಿಗೆ ತಮ್ಮನ್ನು ತೆರೆದುಕೊಂಡರು; ಆದರೆ ಮುಸ್ಲಿಮರು ಈ ಹೊಸ ಶಿಕ್ಷಣ ಪದ್ಧತಿ ತಮ್ಮ ಧಾರ್ಮಿಕ ನಂಬಿಕೆಗಳಿಗೆ ಏಟು ನೀಡುವುದೆಂದು ಭಾವಿಸಿದ್ದು ಅವರ ಹಿನ್ನಡೆಗೆ ಮುಖ್ಯ ಕಾರಣವಾಯಿತು.

ಎಂಟುನೂರು ವರ್ಷಗಳ ಕಾಲ 'ಅಖಂಡ ಭಾರತ'ದ ಹೊಸ ಕಲ್ಪನೆ ಹುಟ್ಟು ಹಾಕಿ ದೇಶವಾಳಿದ ಮೊಗಲ್ ಅರಸರ ಸಾಮ್ರಾಜ್ಯ 1857ರಲ್ಲಿ ನೆಲ ಕಚ್ಚಿದ್ದು ದೇಶದ ಮುಸ್ಲಿಮರಲ್ಲಿ ಸಹಜವಾಗಿ ಹಿಂಜರಿಕೆ ಮೂಡಿಸಿತ್ತು. ಸರ್ ಸೈಯ್ಯದ್ ಅಹ್ಮದ್ ಖಾನ್‌ರಂತಹ ಮೇಧಾವಿಗಳು ಮುಸ್ಲಿಮರ ಶೈಕ್ಷಣಿಕ ಅಭಿವೃದ್ಧಿಗಾಗಿ ಕೈಗೊಂಡ ಕ್ರಮಗಳೂ ಆಗ ಜನಸಾಮಾನ್ಯ ಮುಸ್ಲಿಮರಿಗೆ ಧರ್ಮ ವಿರೋಧಿಯಾಗಿ ಕಂಡವು. ಆಂಗ್ಲ ಶಿಕ್ಷಣ ಕ್ರಮದ ಈ ಪ್ರಭಾವವನ್ನು ಎದುರಿಸಲೆಂಬಂತೆಯೇ ಮುಸ್ಲಿಮರು (ಮುಖ್ಯವಾಗಿ ಕೇರಳದಲ್ಲಿ) ಮದ್ರಸಾ ವ್ಯವಸ್ಥೆಯನ್ನು ಜಾರಿಗೆ ತಂದರು. ಧಾರ್ಮಿಕ ವಿದ್ಯಾಭ್ಯಾಸವನ್ನು ಎಲ್ಲ ಮಕ್ಕಳಿಗೆ ಕಡ್ಡಾಯವಾಗಿ ಕಲಿಸಹೊರಟ ಈ ಕ್ರಮ ಇವತ್ತು ನಿರೀಕ್ಷೆಗೂ ಹೆಚ್ಚು ಪ್ರಭಾವಶಾಲಿಯಾದ ಸಾಂಸ್ಥಿಕ ಬೆಳವಣಿಗೆಯನ್ನು ಕಂಡಿದೆ. ಕೇರಳದ ಪ್ರತಿ ಹಳ್ಳಿಯಲ್ಲೂ ಸುಮಾರು 500 ಜನರಿಗೆ ಒಂದರಂತೆ ಮಸೀದಿಗಳಿದ್ದು ಆ ಮಸೀದಿಗಳ ಆಶ್ರಯದಲ್ಲಿ ಪ್ರತಿ ಹಳ್ಳಿಗಳಲ್ಲೂ ಮದ್ರಸಾಗಳು ತಲೆ ಎತ್ತಿವೆ. ಕರ್ನಾಟಕದ ದಕ್ಷಿಣ ಭಾಗವೂ ಈ ಬೆಳವಣಿಗೆಯಿಂದ ಹೊರತಾಗಿಲ್ಲ. ಈ ಪ್ರತಿರೋಧದ ಪರಿಣಾಮ ಎಷ್ಟಾಗಿತ್ತೆಂದರೆ, ಮುಸ್ಲಿಮರೇ ಅತ್ಯಧಿಕ

ಸಂಖ್ಯೆಯಲ್ಲಿರುವ ಕೇರಳದ 'ಮಲಬಾರ್ ಪ್ರದೇಶದಲ್ಲಿ 1873ರಲ್ಲಿ (ಕಲ್ಲಿಕೋಟೆಯಲ್ಲಿ) ಮೊತ್ತಮೊದಲ ಆಂಗ್ಲ ಕಾಲೇಜು ಆರಂಭವಾದರೂ ಈ ಪ್ರದೇಶದ ಮೊತ್ತ ಮೊದಲ ಮುಸ್ಲಿಮ್ ಪದವೀಧರ ಕಾಲೇಜಿನಿಂದ ಹೊರಬಂದ ಉದಾಹರಣೆ ನಮಗೆ ಕಾಣಸಿಗುವುದು 1918ರ ಸುಮಾರಿನಲ್ಲಿ. (ತಲಚ್ಚೇರಿ ಕಾಲೇಜಿನಲ್ಲಿ ಪದವಿ ಪಡೆದ ಬಿ. ಪೋಕರ್ ಸಾಹೇಬ್ ಮೊದಲ ಮುಸ್ಲಿಮ್ ಪದವೀಧರ ಎಂದು ಭಾವಿಸಲಾಗಿದೆ. ಇವರು ಪದವಿ ಪಡೆದ ನಿಶ್ಚಿತ ಇಸವಿ ತಿಳಿದಿಲ್ಲ. ಮುಂದೆ ಇವರು ವಕೀಲರಾಗಿ ಕೇರಳದಾದ್ಯಂತ ಖ್ಯಾತರಾದರು.)

ಉತ್ತರದಲ್ಲೂ ಸ್ಥಿತಿ ಇದಕ್ಕಿಂತ ಭಿನ್ನವಿರಲಿಲ್ಲ. ಸರ್ ಸೈಯ್ಯದ್ ಅಹ್ಮದ್ ಖಾನರು ಸಂಪ್ರದಾಯವಾದಿ ಮುಸ್ಲಿಮರಿಂದ ತೀವ್ರ ಪ್ರತಿರೋಧ ಎದುರಿಸಲೇಬೇಕಾಯಿತು. ಆಂಗ್ಲ ಶಿಕ್ಷಣ ಮುಸ್ಲಿಮರಲ್ಲಿ ಬೇರು ಬಿಟ್ಟರೆ ನಾವು ಸಮುದಾಯದ ಮೇಲೆ ಹೊಂದಿರುವ ಹಿಡಿತ ಸಡಿಲವಾಗುತ್ತದೆಂದು ಮುಸ್ಲಿಮ್ ಉಲೇಮಾಗಳು ಹಾಗೂ ಮೌಲ್ವಿಗಳು ಭಾವಿಸಿದರು. ಹೀಗಾಗಿ ಅಲ್ಲಿಯೂ ಮಸೀದಿಗಳ ಆಶ್ರಯದಲ್ಲಿ ಮದ್ರಸಾಗಳು ಸರಾಗವಾಗಿ ತಲೆಯೆತ್ತಿದವು. ಈ ಮದ್ರಸಾಗಳಲ್ಲಿ ಅರೆಬಿಕ್ ಶಿಕ್ಷಣ ಹಾಗೂ ಉರ್ದು ಭಾಷೆಯ ಧಾರ್ಮಿಕ ಶಿಕ್ಷಣ ಪ್ರಮುಖ ಸ್ಥಾನ ಪಡೆದುಕೊಂಡಿತ್ತು.

ಮಧ್ಯಪೂರ್ವದಲ್ಲಿ ಕ್ರಿಶ್ಚಿಯನ್ ಧರ್ಮ ಚರ್ಚ್ ಎಂಬ ಚಿಪ್ಪುಗಳಲ್ಲಿ ಅವಿತು ಪುರೋಹಿತಶಾಹಿಯ ಕಪಿಮುಷ್ಟಿಯಲ್ಲಿ ಪ್ರತಿಗಾಮಿ ವ್ಯವಸ್ಥೆ ವ್ಯಾಪಕ ಪ್ರಭಾವ ಗಳಿಸತೊಡಗಿದಾಗ, ಕಾನ್‌ಸ್ಟಾಂಟಿನೋಪಲ್ ಪತನದ ಮೂಲಕ ಇಡೀ ಜಗತ್ತಿಗೆ ಹೊಸಬೆಳಕು ಹಾಗೂ ಪ್ರಗತಿಶೀಲ ಬದುಕಿನ ಆಶೆ ಮೂಡಿಸಿದ್ದ ಇಸ್ಲಾಮ್ ಧರ್ಮ ಇವತ್ತು ಭಾರತೀಯ ಮುಸ್ಲಿಮರನ್ನು ಇಷ್ಟೊಂದು ಅಂಧಕಾರದಲ್ಲಿರಲು ಬೋಧಿಸುತ್ತದೆಂದರೆ ನಂಬಲು ಸಾಧ್ಯವಾಗುವ ಮಾತಲ್ಲ. ಲೌಕಿಕ ವಿದ್ಯಾಭ್ಯಾಸ ಕೂಡಾ ಧಾರ್ಮಿಕ ವಿದ್ಯಾಭ್ಯಾಸದಷ್ಟೇ ಮಹತ್ವದ್ದು ಎಂದು ಇಸ್ಲಾಮ್ ಬೋಧಿಸುತ್ತದೆ. ಆದರೆ ಇವತ್ತು ಕಾಶ್ಮೀರದಲ್ಲಾಗಲೀ, ಅಸ್ಸಾಂನಲ್ಲಾಗಲೀ, ಉತ್ತರ ಪ್ರದೇಶದಲ್ಲಾಗಲೀ ಅಥವಾ ಕೇರಳದಲ್ಲೇ ಆಗಲಿ ಮದ್ರಸಾ ವ್ಯವಸ್ಥೆ ಕೇವಲ ಅರಬಿ ಜ್ಞಾನ ಹಾಗೂ ಧಾರ್ಮಿಕ ಜ್ಞಾನದ ಬೋಧನೆಗಷ್ಟೇ ಸೀಮಿತಗೊಂಡು ಬಹುತೇಕ ಮುಸ್ಲಿಮರು ಹೊರಜಗತ್ತಿಗೆ ಪಂಚೇಂದ್ರಿಯಗಳನ್ನು ಮುಚ್ಚಿಕೊಂಡವರಾಗಿದ್ದಾರೆ.

ಈ ಮದ್ರಸಾಗಳಾದರೂ ಹೇಗೆ ಕೆಲಸ ಮಾಡುತ್ತಿವೆ? ಕರ್ನಾಟಕದ ಸ್ಥಿತಿಯಂತೂ ಶೋಚನೀಯವಾಗಿದೆ. ಬೆಳಿಗ್ಗೆ 7ರಿಂದ 9.30ರ ವರೆಗೆ ಹಾಗೂ ಕೆಲವೆಡೆ ರಾತ್ರಿ7ರಿಂದ 8ಗಂಟೆ ವರೆಗೆ ಈ ಮದ್ರಾಸಗಳಲ್ಲಿ ಅರೆಬಿಕ್ ಶಿಕ್ಷಣ ನೀಡಲಾಗುತ್ತದೆ. ಸಾಮಾನ್ಯವಾಗಿ ಐದನೇ ವರ್ಷದಿಂದ ಸುಮಾರು 10-12 ವರ್ಷ ವಯಸ್ಸಾಗುವವರೆಗೆ ಇಲ್ಲಿ ಮುಸ್ಲಿಮ್ ಮಕ್ಕಳು ವಿದ್ಯಾರ್ಥಿಗಳಾಗಿರುತ್ತಾರೆ. ಹೆಚ್ಚಿನವರ ವಿದ್ಯಾಭ್ಯಾಸ ಕೇವಲ 12ರ ಹರೆಯದಲ್ಲೇ ನಿಂತು ಬಿಡುತ್ತದೆ. ಹೆಣ್ಣು ಮಕ್ಕಳಂತೂ 12ರ ವಯಸ್ಸಿನಲ್ಲಿ ಧಾರ್ಮಿಕ ಶಿಕ್ಷಣ

ಹಾಗೂ ಲೌಕಿಕ ಶಿಕ್ಷಣ ನಿಲ್ಲಿಸಿಯೇ ಬಿಡುತ್ತಾರೆ.

ಹಗಲಿಡೀ ಈ ಮದ್ರಸಾಗಳ ಕಟ್ಟಡ, ಮೇಜು, ಕುರ್ಚಿಗಳು ನಿರುಪಯೋಗಿಯಾಗಿ ಬಿದ್ದಿರುತ್ತದೆ. ಇಲ್ಲಿನ ಮಲೆಯಾಳಿ ಮಾತೃಭಾಷೆಯ ಅಧ್ಯಾಪಕರಿಗೆ ನಿರ್ದಿಷ್ಟ ವಿದ್ಯಾಭ್ಯಾಸದ ಅಥವಾ ಪದವಿಯ ಅಗತ್ಯವೂ ಇಲ್ಲ. ಜತೆಗೆ ಕನ್ನಡ ಭಾಷೆಯ ಬಗೆಗಿನ ಪರಿಜ್ಞಾನವೂ ಇರುವುದಿಲ್ಲ.

ಉತ್ತರ ಕರ್ನಾಟಕದಲ್ಲೂ ಸ್ಥಿತಿ ಇದಕ್ಕಿಂತ ಭಿನ್ನವಿಲ್ಲ. ಸಾಮಾನ್ಯವಾಗಿ ಉರ್ದು ಭಾಷೆ ಇಲ್ಲಿ ಮುಸ್ಲಿಮರ ಮಾತೃಭಾಷೆಯಾಗಿದ್ದು ಕನ್ನಡ ಓದುವ ಬರೆಯುವವರ ಸಂಖ್ಯೆ ಅತ್ಯಲ್ಪ. ಉರ್ದುವನ್ನು ತಮ್ಮದೇ ಭಾಷೆ ಎಂದು ತಪ್ಪಾಗಿ ಗ್ರಹಿಸಿರುವ ಭಾರತೀಯ ಮುಸ್ಲಿಮರು ಉರ್ದುವಿನ ಜತೆಗೆ ಭಾವನಾತ್ಮಕವಾಗಿ ಗುರುತಿಸಿಕೊಂಡು ಅನ್ಯ ಭಾಷೆಗಳ ಜ್ಞಾನದಿಂದ ವಂಚಿತರಾಗುತ್ತಿರುವುದೂ ಇಲ್ಲಿಯ ಇನ್ನೊಂದು ವಿಪರ್ಯಾಸ. ಭಾರತದ ಒಟ್ಟು ಮುಸ್ಲಿಮರಲ್ಲಿ ಕೇವಲ ಶೇಕಡಾ 46ರಷ್ಟು ಮಂದಿ ಮಾತ್ರ ಉರ್ದುವನ್ನು ಬಳಸುತ್ತಾರೆ ಎಂಬ ಸತ್ಯ ಇವರಿಗೆ ಅರ್ಥವಾಗುವುದೇ ಇಲ್ಲ.

ಶಿಕ್ಷಣ ಅರ್ಥಾತ್ ಲೌಕಿಕ ಶಿಕ್ಷಣ ಬದುಕಿಗೆ ಅತ್ಯಾವಶ್ಯಕ ಎಂಬ ಪರಿಜ್ಞಾನವನ್ನು ಮುಸ್ಲಿಮರಲ್ಲಿ ಮೂಡಿಸಬೇಕಾಗಿದೆ. ಹಾಗೆ ಮೂಡಿಸುವುದರ ಜತೆಗೆ ಶಿಕ್ಷಣಕ್ಕೆ ಮುಖ್ಯವಾಗಿ ಮಹಿಳಾ ಶಿಕ್ಷಣಕ್ಕೆ ಒತ್ತು ಕೊಟ್ಟು ಶಿಕ್ಷಣದ ಸಲಕರಣೆಗಳನ್ನು ಒದಗಿಸಬೇಕಾಗಿದೆ. ಹೀಗೆ ಮಾಡುವ ನಿಟ್ಟಿನಲ್ಲಿ ಸದ್ಯಕ್ಕೆ ಕೈಗೊಳ್ಳಬಹುದಾದ ಕ್ರಮವೆಂದರೆ ಮದ್ರಸಾಗಳನ್ನು ರಾಷ್ಟ್ರೀಕರಿಸುವುದು ಅಥವಾ ಎಲ್ಲ ಮದ್ರಸಾಗಳನ್ನು ಸರಕಾರಿ ಮಹಿಳಾ ಹೈಸ್ಕೂಲ್‌ಗಳನ್ನಾಗಿ ಪರಿವರ್ತಿಸುವುದು.

ಕೇರಳದಲ್ಲಿ ಈ ಸಂಬಂಧ ಅರೆ ರಾಷ್ಟ್ರೀಕರಣ ನಡೆದಿದೆ. ಮದ್ರಸಾಗಳು ಪರೋಕ್ಷ ರೂಪಗಳಲ್ಲಿ ಸರ್ಕಾರದ ನೆರವು ಪಡೆದರೂ ಅವುಗಳ ಮೇಲೆ ಸರಕಾರದ ಪೂರ್ಣ ಹಿಡಿತ ಇಲ್ಲವಾಗಿದೆ. ಉತ್ತರ ಪ್ರದೇಶ, ಅಸ್ಸಾಂಗಳಲ್ಲೂ ಈ ತೆರನ ಅರೆ ರಾಷ್ಟ್ರೀಕರಣ ನಡೆದಿದೆ. ಆದರೆ ಕರ್ನಾಟಕ, ಕಾಶ್ಮೀರಗಳಲ್ಲಂತೂ ಮದ್ರಸಾ ವ್ಯವಸ್ಥೆ ಮೇಲೆ ಸರ್ಕಾರಕ್ಕೆ ಯಾವುದೇ ರೀತಿಯ ಹಿಡಿತ ಇಲ್ಲವಾಗಿದೆ.

ಕರ್ನಾಟಕದಲ್ಲಿ ದಿವಂಗತ - ದೇವರಾಜ ಅರಸು ಅವರು ಮುಖ್ಯ ಮಂತ್ರಿ ಆಗಿದ್ದಾಗ ಮದ್ರಸಾಗಳಿಗೆ ಸರ್ಕಾರಿ ಗ್ರ್ಯಾಂಟ್ ಒದಗಿಸುವ ಬಗ್ಗೆ ಸ್ವಲ್ಪ ಮಟ್ಟಿನ ಚಟುವಟಿಕೆ ನಡೆದವು. ಆದರೆ ಸಮಾನ ಸಿಲೆಬಸ್ ರೂಪಿಸುವ ಹಾಗೂ ಅದಕ್ಕೆ ತಕ್ಕ ಅಧ್ಯಾಪಕ ವರ್ಗ ಸಿಗುತ್ತಿಲ್ಲ ಎಂಬ ಹಿನ್ನೆಲೆಯಲ್ಲಿ ಈ ಪ್ರಯತ್ನ ಅರ್ಧದಲ್ಲೇ ನಿಂತಿತು. ಸರಕಾರದ ಗ್ರ್ಯಾಂಟ್ ಸಿಗುವ ಕಾನೂನಿಗೆ ತಿದ್ದುಪಡಿ ತರುವ ಕೆಲಸ ಅರ್ಧದಲ್ಲಿ ನಿಂತದ್ದು ಇವತ್ತಿಗೂ

ಹಾಗೆಯೇ ಇದೆ.

ಈಗಿನ ಸ್ಥಿತಿಯಲ್ಲಿ ಮುಸ್ಲಿಮರಿಗೆ ಸೌಲಭ್ಯ ನೀಡುವ ಪ್ರಶ್ನೆಯೂ ವಿವಾದಾಸ್ಪದವಾಗುತ್ತಿದೆ. ಸಂವಿಧಾನದಲ್ಲಿ ಭಾಷಾ ಅಲ್ಪ ಸಂಖ್ಯಾತರು ಹಾಗೂ ಧರ್ಮೀಯ ಅಲ್ಪ ಸಂಖ್ಯಾತರಿಗೆ ವಿಶೇಷ ಸವಲತ್ತು ನೀಡುವ ಪ್ರಸ್ತಾಪವಿದೆ. ಕರ್ನಾಟಕದಲ್ಲಿ ಹಿಂದುಳಿದವರನ್ನು ಗುರುತಿಸಲು ನೇಮಕವಾದ ನ್ಯಾಯಮೂರ್ತಿ ಹಾವನೂರು ಅವರ ಆಯೋಗ ಮುಸ್ಲಿಮರ ಶೈಕ್ಷಣಿಕ ಅಧೋಗತಿಯನ್ನು ಗುರುತಿಸಿ ಮುಸ್ಲಿಮರಿಗೇ ಆರು ಶೇಕಡಾದಷ್ಟು ಪ್ರತ್ಯೇಕ ಮೀಸಲಾತಿ ನೀಡಬೇಕೆಂದು ಶಿಫಾರಸ್ಸು ಮಾಡಿತ್ತು. ಆದರೆ ಸಾಂವಿಧಾನಿಕ ಬಿಕ್ಕಟ್ಟಿನಿಂದಾಗಿ ಈ ಶಿಫಾರಸ್ಸು ಕಾರ್ಯಗತವಾಗದೆ ಇತರ 16 ಹಿಂದುಳಿದ ಜಾತಿಗಳ ಜತೆಗೇ ಮುಸ್ಲಿಮರನ್ನೂ ಗುರುತಿಸಿ ಮೀಸಲಾತಿ ನೀಡಲಾಯಿತು.

ಇತ್ತೀಚಿಗಿನ ಮಂಡಲ್ ಆಯೋಗದ ವರದಿಯಲ್ಲಿ ಮುಸ್ಲಿಮರಲ್ಲಿನ 16 ಪಂಗಡಗಳನ್ನು ಶೈಕ್ಷಣಿಕವಾಗಿ, ಆರ್ಥಿಕವಾಗಿ ಅತೀ ಹಿಂದುಳಿದ ಪಂಗಡ ಎಂದು ಗುರುತಿಸಿ ಮೀಸಲಾತಿ ಶಿಫಾರಸ್ಸು ಮಾಡಲಾಗಿತ್ತು. (ಅನ್ಸಾರಿ, ಜುಲಾಯಿ, ನಲಬಂದ್, ಬ್ಯಾರಿ, ಪೆಂಟಾರಿಸ್, ಬಾಗವಾನ್, ತಂಬೋಲಿ, ಚಪ್ಪರ ಬಂದ್, ದರ್ಜಿ, ದರ್ವೇಶ್, ದೋಬಿ, ಫಕೀರ್, ಖುರೇಶಿ (ಕಸ್ಸಬ್), ಸ್ವೀಪರ್ಸ್, ತಕರಸ್ ಮತ್ತು ಜಾದ್‌ಗರ್ ಪಂಗಡಗಳು ಮೀಸಲಾತಿ ಶಿಫಾರಸ್ಸು ಹೊಂದಿದ ಮುಸ್ಲಿಮ್ ಪಂಗಡಗಳು). ಇಡೀ ದೇಶದಲ್ಲಿ ಮಂಡಲ್ ವರದಿ ಪರ ಹಾಗೂ ವಿರೋಧವಾಗಿ ಚಳವಳಿ ನಡೆದಾಗ ಮುಸ್ಲಿಮ್ ಸಮುದಾಯ ಮೌನವಾಗಿತ್ತು. ಯಾಕೆಂದರೆ ಯಾವ ಮುಸ್ಲಿಮರಿಗೂ ಮಂಡಲ್ ವರದಿಯಲ್ಲಿ ತಮ್ಮ ಧರ್ಮದ ಹಿಂದುಳಿದ ಪಂಗಡಗಳಿಗೆ ಮೀಸಲಾತಿ ಸಿಗುತ್ತದೆಂಬುದು ಗೊತ್ತೇ ಇರಲಿಲ್ಲ. ಅವರ ಅಜ್ಞಾನ ಅಷ್ಟೊಂದು ತಳ ಮುಟ್ಟಿತ್ತು!

ಶೈಕ್ಷಣಿಕ ಪ್ರಗತಿಯ ಜತೆಜತೆಗೇ ಸಾಮಾಜಿಕ ಹಾಗೂ ರಾಜಕೀಯ ಪ್ರಗತಿಯೂ ಸಾಧ್ಯವಾಗುವುದರಿಂದ ಮುಸ್ಲಿಮರು ಈಗ ಹಿಂದೂ ಸಮಾಜದ ಇತರ ಹಿಂದುಳಿದ ಜಾತಿಗಳ ಹೋರಾಟದ ಜತೆ ತಮ್ಮನ್ನು ಗುರುತಿಸಿಕೊಳ್ಳುವುದು ಅನಿವಾರ್ಯವಾಗಿದೆ. ಇದರಿಂದ ಮಾತ್ರ ಅವರು ರಾಜಕೀಯ ಪ್ರಾಮುಖ್ಯತೆ ಗಳಿಸಿಕೊಳ್ಳಲು ಸಾಧ್ಯ. ಈ ರಾಜಕೀಯ ಪ್ರಾಮುಖ್ಯತೆಯನ್ನು ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಮುನ್ನಡೆಗಾಗಿ ಬಳಸಿಕೊಳ್ಳುವಂತಹ ಮುತ್ಸದ್ದಿತನವನ್ನು ಮುಸ್ಲಿಮರು ತೋರಬೇಕಿದೆ.

ಬಿಹಾರದಲ್ಲಿ ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆ ಮುಸ್ಲಿಮರ ಈ ಮುತ್ಸದ್ದಿತನಕ್ಕೊಂದು ಸ್ಪಷ್ಟ ಉದಾಹರಣೆ. ಮಂಡಲ ವರದಿ ಜಾರಿಯ ಪರ ಅತ್ಯಂತ ಪ್ರಭಾವಶಾಲಿ ಜನ ಚಳವಳಿ ನಡೆದದ್ದು ಬಿಹಾರದಲ್ಲಿ . ಅಲ್ಲಿನ ಹಿಂದುಳಿದ ಜಾತಿಗಳಾದ ಯಾದವರು, ಕುರ್ಮಿಗಳು ನಡೆಸಿದ ಈ ಹೋರಾಟದ ವೇಳೆ ಮುಸ್ಲಿಮ್ ಮೊಹಲ್ಲಾಗಳು

ಪೂರ್ಣ ಬಂದ್ ಆಚರಿಸಿ ಬೆಂಬಲ ವ್ಯಕ್ತಪಡಿಸಿದವು. ಇದರ ಪರಿಣಾಮವಾಗಿ ಮುಸ್ಲಿಮರು ಎರಡು ರೀತಿಯ ಲಾಭ ಪಡೆದುಕೊಂಡರು. ರಾಮಜನ್ಮಭೂಮಿ ವಿವಾದದ ಸಂಬಂಧ ವಿಶ್ವ ಹಿಂದೂ ಪರಿಷತ್ ದೇಶಾದ್ಯಂತ ಬಂದ್ ಕರೆ ನೀಡಿದಾಗ ಬಿಹಾರದ ಯಾದವರು ಮುಸ್ಲಿಮರಿಗೆ ನೈತಿಕ ಬೆಂಬಲ ವ್ಯಕ್ತಪಡಿಸಿ ಬಂದ್ ಕರೆಯನ್ನು ವಿಫಲಗೊಳಿಸಿದರು. ಎರಡನೆಯದಾಗಿ 10ನೇ ಲೋಕಸಭೆಗೆ ಬಿಹಾರ ಈ ಸಲ ಅತ್ಯಧಿಕ ಸಂಖ್ಯೆಯ (6 ಮಂದಿ) ಮುಸ್ಲಿಮ್‌ಲೋಕಸಭಾ ಸದಸ್ಯರನ್ನು ಆರಿಸಿ ಕಳುಹಿಸುವಂತಾಯಿತು. 1980ರಲ್ಲಿ 18ಮಂದಿ ಮುಸ್ಲಿಮ್ ಎಂ.ಪಿ. ಗಳನ್ನು ಲೋಕಸಭೆಗೆ ಕಳುಹಿಸಿದ್ದ ಉತ್ತರ ಪ್ರದೇಶದಲ್ಲಿ ಈ ಸಲ ಅಲ್ಲಿನ ಮುಸ್ಲಿಮರ ಮುತ್ಸದ್ದಿತನ ಕೈಕೊಟ್ಟದ್ದರಿಂದ ಕೇವಲ ಮೂರು ಮಂದಿ ಮುಸ್ಲಿಮರು ಮಾತ್ರ ಆಯ್ಕೆಯಾಗಿದ್ದಾರೆ.

ಕೇವಲ ಧಾರ್ಮಿಕ ಶಿಕ್ಷಣ ಪಡೆದು ಕೂಪ ಮಂಡೂಕಗಳಾಗಿ ಬದುಕಿದಲ್ಲಿ ಮುಸ್ಲಿಮರು ರಾಷ್ಟ್ರೀಯ ಪ್ರವಾಹದ ಜತೆ ತಮ್ಮನ್ನು ತಾವು ಗುರುತಿಸಿಕೊಳ್ಳುವುದು ಅಸಾಧ್ಯ. ರಾಷ್ಟ್ರೀಯ ಮುಖ್ಯವಾಹಿನಿ ಎಂದರೆ ಕೇವಲ ಸಾಮಾಜಿಕ ಸಮಾನತೆ ಮಾತ್ರವಲ್ಲ; ರಾಜಕೀಯ ಪ್ರಾತಿನಿಧ್ಯ ಹಾಗೂ ಆರ್ಥಿಕ ಸಮಾನತೆ ಎಂಬುದನ್ನೂ ಗಮನದಲ್ಲಿಟ್ಟುಕೊಂಡು ಈ ಮಾತು ಹೇಳುತ್ತಿದ್ದೇನೆ. ಇವತ್ತು ರಾಷ್ಟ್ರೀಯ ಸಾರ್ವಜನಿಕ ಅಭಿಪ್ರಾಯ ರೂಪಿಸುತ್ತಿರುವ 16 ಪತ್ರಿಕೆಗಳಲ್ಲಿ ಒಂದರಲ್ಲೂ ಮುಸ್ಲಿಮರು ಸಂಪಾದಕರಾಗಿಲ್ಲ. ವಿಶ್ವವಿದ್ಯಾನಿಲಯಗಳ ಉಪಕುಲಪತಿ ಸ್ಥಾನಗಳಲ್ಲೂ ಮುಸ್ಲಿಮರ ಪ್ರಾತಿನಿಧ್ಯ ತೀರಾ ಕೆಳಮಟ್ಟದಲ್ಲಿದೆ. ವಿದೇಶಿ ದೂತವಾಸದ 106 ಮಂದಿ ರಾಯಭಾರಿಗಳಲ್ಲಿ ಕೇವಲ 6 ಮಂದಿ ಮುಸ್ಲಿಮರು, ವಿದೇಶಿ ಹೈಕಮೀಶನ್‌ಗಳಲ್ಲಿನ ಮುಖ್ಯಸ್ಥರ ಒಟ್ಟು 34 ಹುದ್ದೆಗಳಲ್ಲಿ ಮುಸ್ಲಿಮರಿಗೆ ಪ್ರಾತಿನಿಧ್ಯ ಶೂನ್ಯ. (ಸೊನ್ನೆ!) ಇನ್ನು ರಾಜ್ಯ ಸರಕಾರದ ನೀತಿ ರೂಪಿಸುವ, ಜಾರಿಗೊಳಿಸುವ ಮುಖ್ಯ ಕಾರ್ಯದರ್ಶಿ ಹುದ್ದೆಗಳಲ್ಲಿ ಮುಸ್ಲಿಮರ ಸಂಖ್ಯೆ ಎಷ್ಟಿದೆಯೆಂಬುದು ನಿಮ್ಮ ಊಹೆಗೇ ಬಿಟ್ಟ ವಿಚಾರ. ನ್ಯಾಯಾಲಯಗಳಲ್ಲಿ, ಪೋಲೀಸ್‌ಇಲಾಖೆಗಳಲ್ಲೂ ಮುಸ್ಲಿಮರ ಸಂಖ್ಯೆ ತೀರಾ ಕಡಿಮೆ. ಇದಕ್ಕೆಲ್ಲ ಕಾರಣ ಅನ್ಯ ಜಾತಿಗಳ ಶೋಷಣೆ ಮಾತ್ರವಲ್ಲ; ಮುಸ್ಲಿಮರ ಅವಿದ್ಯಾವಂತಿಕೆ ಕೂಡಾ ಎಂಬುದನ್ನು ಮರೆಯಬಾರದು.

ಕೇವಲ ಶಿಕ್ಷಣದ ಪ್ರಶ್ನೆಯನ್ನು ಒತ್ತಟ್ಟಿಗಿಟ್ಟು ಪರಿಶೀಲಿಸುವುದು ಮೂರ್ಖತನ, ಮುಸ್ಲಿಮರ ಶಿಕ್ಷಣದ ಸಮಸ್ಯೆ ಎಂದರೆ ಅವರ ಸಾಮಾಜಿಕ, ಆರ್ಥಿಕ ಬದುಕಿನ ಪ್ರಶ್ನೆ ಕೂಡಾ. ಈಗ ನಿರ್ಣಾಯಕ ಘಟ್ಟ ತಲುಪಿರುವ ಭಾರತದ 'ಕೋಮುವಾದಿ ರಾಜಕಾರಣ' ಅದರ ಕ್ಷಣಗಣನೆಯನ್ನು ಮುಗಿಸಿ ಸ್ಫೋಟಿಸುವ ಮುನ್ನ ಮುಸ್ಲಿಮರು ಎಚ್ಚೆತ್ತುಕೊಂಡು ಈ ದೇಶದ ಶೋಷಿತರ ಹೋರಾಟದ ಜತೆಗೆ ತಮ್ಮನ್ನು ಗುರುತಿಸಿಕೊಳ್ಳಬೇಕಿದೆ.

------

● ಆರ್.ವಿ.ಭಂಡಾರಿ
ಆರೇಅಂಗಡಿ,
ಹೊನ್ನಾವರ (ಉ.ಕ).

# ನಮ್ಮ ಶಿಕ್ಷಣ ತಜ್ಞರು

ಶಿಕ್ಷಣ (education) ಅಂದರೇನು? ಎನ್ನುವುದನ್ನು ಮೂಲಭೂತವಾಗಿ ವಿಚಾರಿಸ ಹೊರಟರೆ ನಮಗೆ ಖಚಿತವಾದ ಕೆಲವು ಸಂಗತಿಗಳು ಗೊತ್ತಾಗುತ್ತವೆ. ಅದೇ ವಿಚಾರ ಬೇರೆ ಬೇರೆ ವ್ಯಕ್ತಿಗಳಿಂದ ಬೇರೆ ಬೇರೆ ಸನ್ನಿವೇಶದಲ್ಲಿ ರೂಪಧಾರಣ ಮಾಡುತ್ತದೆ.

ಮಾನವರು ಸಮಾಜ ಜೀವಿಗಳು ಎನ್ನುವುದು ಒಂದು ಸರ್ವಗ್ರಾಹ್ಯವಾದ ವಿಚಾರ. ಅದಕ್ಕಿಂತ ಹಿಂದೆ ನಾವು ವಿಚಾರ ಮಾಡಲಾರೆವು. ಕುಟುಂಬಕ್ಕೆ ಕೂಡಾ ಸಮಾಜವೇ ಆಕರ. ಅದರ ಸ್ವರೂಪ, ವಿಸ್ತಾರ ಬೇರೆ ಬೇರೆ ಆಗುತ್ತಲಿರಲಿ. ಒಟ್ಟಾರೆಯಾಗಿ ಮನುಷ್ಯ ಗುಂಪಿನಲ್ಲಿಯೇ ತನ್ನ ಪ್ರಗತಿ ಪಥದ ಹೆಜ್ಜೆ ಗುರುತುಗಳನ್ನು ದಾಖಲು ಪಡಿಸಿದ್ದಾನೆ.

ಅಂಥ ಒಂದು ಅನಾಗರಿಕ ಎನ್ನುವ ಸಂದರ್ಭದಲ್ಲಿಯೇ ಶಿಕ್ಷಣ ಎಂಬುದು ತಲೆ ಎತ್ತಿದ್ದು. ಅದು ಪ್ರತ್ಯೇಕ ಶಾಖೆಯಾಗಿ ಕಂಡಿರಲಿಕ್ಕಿಲ್ಲ. ಆದರೆ ಜೀವನ ಮುಂದುವರಿಕೆಯಲ್ಲಿ ಅದರ ಅವಶ್ಯಕತೆ ಇತ್ತು. ಅಂಥ ಅವಶ್ಯಕತೆ ಯಾವುದು?

ಈ ಗುಂಪು ತನ್ನ ಆಹಾರಕ್ಕಾಗಿ ಬೇಟೆಗೆ ಹೊರಟಿತು ಎಂದುಕೊಳ್ಳುವ. ಇದಕ್ಕೆ ತಯಾರಿಯಾಗಿ ಶಿಲಾಯುಗದ ಮನುಷ್ಯ, ಪ್ರಾಣಿಗಳನ್ನು ಗಾಯಗೊಳಿಸಲು ಗಟ್ಟಿಯಾದ ಕಲ್ಲನ್ನು ಸಿದ್ಧಪಡಿಸಿಕೊಳ್ಳಬೇಕಾಯಿತು.

ನಿಸರ್ಗ ಅತ್ಯಂತ ರಹಸ್ಯಮಯವಾದುದು. ಸಾವಿರ ಜನರನ್ನು ಜನರೆಂದು - ಗಂಡು ಹೆಣ್ಣುಗಳೆಂದು - ಗುರುತಿಸುವೆವಾದರೂ ಸಾವಿರ ಜನರ ಮುಖ ಒಂದೇ ತೆರ ಇರದು. ಹಾಗೆಯೇ ಸಾವಿರ ಜನರ ವ್ಯಕ್ತಿತ್ವ, ಬುದ್ಧಿವಂತಿಕೆ ಒಂದೇ ತೆರ ಇರದು. ಹಾಗೆ ಬೇಟೆಗೆ ಸಿದ್ಧನಾಗುವ ಮನುಷ್ಯ ಒಂದು ಹರಿತವಾದ ಕಲ್ಲಿನ ಆಯುಧವನ್ನು

ಸಿದ್ಧಗೊಳಿಸಿದ ಎನ್ನುವ. ಆಗ ಅಂಥ ಹಲವು ಅಸ್ತ್ರಗಳ ಅವಶ್ಯಕತೆಗಳಿಗನುಸಾರ ಆತ ಅಥವಾ ಅವಳು ಅದನ್ನು ತಮ್ಮ ಗುಂಪಿನ ಸದಸ್ಯರಿಗೆ ಕಲಿಸಬೇಕಾಗುತ್ತದೆ. ಈ ಉದಾಹರಣೆಯನ್ನೇ ತುಸು ಮುಂದುವರಿಸುವ. ಗುಂಪಾಗಿ ಬೇಟೆಗೆ ಹೊರಟಾಗ ಅವರು ಪ್ರಾಣಿಗಳನ್ನು ಸುತ್ತುವರಿಯುವ, ಅಪಾಯದಿಂದ ತಪ್ಪಿಸಿಕೊಳ್ಳುವ ವ್ಯೂಹವನ್ನು ರಚಿಸಬೇಕು. ಬೇಟೆಯಲ್ಲಿ ಬಾಲಕ-ಬಾಲಕಿಯರೂ ಭಾಗವಹಿಸಬೇಕು ತಾನೆ? ಅವರಿಗೆ ಈ ವ್ಯೂಹ ರಚನೆ ಕುರಿತು ತಿಳಿವಳಿಕೆ ಕೊಡಬೇಕಾಗುತ್ತದೆ. ಇದೋ ಇಲ್ಲಿಯೇ ಶಿಕ್ಷಣ ಹುಟ್ಟಿತು.

ಸರಿಯೇ; ಮನುಷ್ಯ ಸಮಾಜ ಜೀವಿ. ಆದರೆ ವ್ಯಕ್ತಿ ಬೇರೆ ಬೇರೆ. ಆದರೆ ಈ ವ್ಯಷ್ಟಿ, ಸಮಷ್ಟಿ ಆಗುವುದು ಹೇಗೆ? ಹಲ್ಲು ಉದುರಿದ ಮುದುಕಿಗೆ ಅಥವಾ ಮುದುಕನಿಗೆ ಹಲ್ಲುಳ್ಳ ಜವ್ವನಿಗರು ಮಾಂಸವನ್ನು ತಮ್ಮ ಶೂಲವಾದ ಹಲ್ಲಿನಿಂದ ಹಿಂಜಿಯೋ, ಜಗಿದೋ ಕೊಡಬೇಕಾದ ಆವಶ್ಯಕತೆ ಇದ್ದಿರಲಾರದೆ? ಅಥವಾ ಕುಟುಂಬದ ಯಜಮಾನನಿಗೆ ಆ ಕುಟುಂಬಕ್ಕೆ ಸೇರಿದ ವ್ಯಕ್ತಿಗಳ ವಿಧೇಯತೆ ಇರಬೇಡವೆ? ಹಾಗಿದ್ದಾಗಲೇ ಸಾಮಾಜಿಕ, ಕೌಟುಂಬಿಕ ನಿಯಮಗಳ ಉದ್ಭವವಾದುದು. ಬುಡಕಟ್ಟಿನ - ಸಮಾಜದ ಸ್ವಾಸ್ಥ್ಯಕ್ಕೆ ಈ ನಿಯಮವನ್ನು ಹಿರಿಯರು ಕಿರಿಯರಿಗೆ ಕಲಿಸಬೇಕು. ಇದೂ ಶಿಕ್ಷಣಕ್ಕೆ ಸೇರಿದ್ದು. ಇಲ್ಲಿಯವರೆಗಿನ ಉದಾಹರಣೆಯಿಂದ ಸಿದ್ಧವಾಗುವುದೇನು? ಮನುಷ್ಯ ಅಥವಾ ಮನುಷ್ಯಳು ಉತ್ಪನ್ನದ ವಿಧಾನವನ್ನು, ಕರಕುಶಲತೆಯನ್ನು, ಸಾಮಾಜಿಕ ನಿಯಮಗಳನ್ನು ಮತ್ತು ಅನುಭವ ವಿಶೇಷತೆಯನ್ನು, ಇಹಪರದ ಚಿಂತನೆಯನ್ನು ಮುಂದಿನ ಪೀಳಿಗೆಗೆ ಮುಂದುವರಿಸಿಕೊಂಡು ಹೋಗುವ ತರಬೇತಿಯೇ ಶಿಕ್ಷಣ. ಅದು ವ್ಯಕ್ತಿಯನ್ನು ಬೆಳೆಸುವ ಹಾಗೆ ಅವರನ್ನು ಸಾಮಾಜಿಕರನ್ನಾಗಿಯೂ ಮಾಡಬೇಕು.

ಇದೇ ಶಿಕ್ಷಣದ ಮೂಲಭೂತವಾದ ವ್ಯಾಖ್ಯೆ. ಆದರೆ ಈ ಕರಕುಶಲತೆ, ಸಾಮಾಜಿಕ ನಿಯಮ, ಇಹಪರ ಚಿಂತನೆ ಇದಾವುದೂ ಎಲ್ಲಾ ಕಾಲಕ್ಕೂ ಒಂದೇ ಇರಲು ಸಾಧ್ಯವಿಲ್ಲ. ಒಂದು ನದಿ ಯಾವುದೋ ಮೂಲದಲ್ಲಿ ಒರತೆಯಾಗಿ ಹುಟ್ಟಿ ಮುಂದುವರಿದಂತೆ ಕಿರುಹಳ್ಳವಾಗಿ, ಹಳ್ಳವಾಗಿ, ಹೊನಲಾಗಿ, ಹೊಳೆಯಾಗಿ ವಿಸ್ತರಿಸುತ್ತಲೇ ಹೋಗುವಂತೆ ಜೀವನ ಪ್ರಕ್ರಿಯೆಯ ವಿಷಯ ಸಹ. ನದಿ ಎನ್ನುವ ಶಬ್ದಕ್ಕೆ ಜೀವನ ಎನ್ನುವ ಅರ್ಥ ಕೂಡಾ ಇಲ್ಲಿ ಸಾರ್ಥಕವೇ. ಆದ್ದರಿಂದ ಕಾಲಕಾಲಕ್ಕೆ ಮನುಷ್ಯನ ಸಾಮಾಜಿಕ ಸ್ವರೂಪ, ಕಲಾತ್ಮಕ-ಭಾವಾತ್ಮಕ ಬೆಳವಣಿಗೆ, ವೈಜ್ಞಾನಿಕ ಅನ್ವೇಷಣೆ - ಇವುಗಳಿಂದ ಶಿಕ್ಷಣದ ವ್ಯಾಖ್ಯೆ , ವಿವರಣೆ ಬದಲಾಗುತ್ತಾ ಹೋಗುತ್ತದೆ. ಅದೇನೇ ಇದ್ದರೂ ಶಿಕ್ಷಣ ಎನ್ನುವುದು ಮನುಷ್ಯ ಕುಲದ ಅವಿಭಾಜ್ಯವಾದ ಚಟುವಟಿಕೆ ಎನ್ನುವುದರಲ್ಲಿ ಸುಳ್ಳಿಲ್ಲ. ವರ್ತಮಾನದ ಜೀವನಕ್ಕೆ ಭೂತಕಾಲದ ಅನುಭವ ಪ್ರವಾಹ, ಪ್ರಭಾವ ಅವಿಚ್ಛಿನ್ನವಾಗಿರುವುದರಿಂದಲೇ ಶಿಕ್ಷಣದ ಸೂತ್ರೀಕರಣ ಸಹ ನಡೆಯುತ್ತದೆ.

ಹೀಗೆ ಸೂತ್ರೀಕರಣ, ವಿಚಾರ ನಿರೂಪಣೆ ನಡೆಯುವುದು ಶೂನ್ಯದಲ್ಲಿ ಆಗಿರುವುದಿಲ್ಲವಾದ್ದರಿಂದ ಇಂತಹ ಶೈಕ್ಷಣಿಕ ವಿವರಣೆಯ ಮೇಲೆ ಆಯಾ ಕಾಲದ ಸಮಾಜ - ಸನ್ನಿವೇಶದ ಪ್ರಭಾವ ಹಾಗೂ ವ್ಯಕ್ತಿಯ ಬೆಳವಣಿಗೆಯ ಪರಿಸರ, ಕುಟುಂಬ ಹಾಗೂ ತಾನು ಪಳಗಿಸಿಕೊಂಡ ಶಿಕ್ಷಣದ ಪ್ರಭಾವ ಒಟ್ಟಾರೆಯಾಗಿ ನಿರೂಪಿಸಿದ ಸೈದ್ಧಾಂತಿಕ, ನಿಲುವು ಪರಿಣಾಮ ಬೀರುತ್ತದೆ. ಆದ್ದರಿಂದ ಪ್ಲೇಟೋ ಶಿಕ್ಷಣದ ಬಗ್ಗೆ ಹೇಳಿದೊಡನೆ ಅಲ್ಲಿಗೇ ನಿಂತು ಹೋಗುವುದಿಲ್ಲ. ಅಥವಾ ವೇದದಲ್ಲಿ ಶಿಕ್ಷಣದ ಬಗ್ಗೆ ಹೇಳಿದೊಡನೆ ಅದೇ ಇಂದಿಗೂ ಸಿದ್ಧಿಸುವುದಿಲ್ಲ. ಎಂತಲೇ ಯಾರೊಬ್ಬರ ಶೈಕ್ಷಣಿಕ ವಿಚಾರವನ್ನು ಹೇಳಬೇಕಾದರೂ ಈ ಎಲ್ಲಾ ಪರಿಸರ ಪ್ರಭಾವದ ಕುರಿತು ವಿಚಾರ ಮಾಡಬೇಕಾಗುತ್ತದೆ. ಈ ಹಿನ್ನೆಲೆ ನಾನು ಮುಂದೆ ವಿವರಿಸಲಿರುವ ಶಿಕ್ಷಣ ತಜ್ಞರ ವಿಚಾರ ವಿವರಣೆ - ವಿಶ್ಲೇಷಣೆಗೆ ಮಾರ್ಗಸೂಚಿ ಎನ್ನಬಹುದು.

**ಡಾ। ಸರ್ವಪಳ್ಳಿ ರಾಧಾಕೃಷ್ಣನ್**

ಡಾ। ರಾಧಾಕೃಷ್ಣನ್ ಆಧುನಿಕ ಕಾಲದ ಮನುಷ್ಯ. ಅಂದರೆ ಅವರು ನಮ್ಮ ಹಿಂದಿನ ತಲೆಮಾರಿಗೆ ಸೇರಿದ ಶಿಕ್ಷಣ ತಜ್ಞ. ಅವರು ಹುಟ್ಟಿದ್ದು 1888ರಲ್ಲಿ. ಒಂದು ಸುಶಿಕ್ಷಿತ ಮನೆತನದಲ್ಲಿ ಜನಿಸಿದರು. ಸ್ವಾಭಾವಿಕವಾಗಿ ಸಂಪ್ರದಾಯವಾದಿ ಧಾರ್ಮಿಕ ಶಿಕ್ಷಣವನ್ನು ಪಡೆದವರು. ತಮ್ಮ ಉನ್ನತ ಶಿಕ್ಷಣದಲ್ಲಿ ತತ್ವಶಾಸ್ತ್ರವನ್ನು ಮುಖ್ಯ ವಿಷಯವನ್ನಾಗಿ ಅಭ್ಯಾಸ ಮಾಡಿದವರು. ಅವರು ಕಾಲೇಜಿನಲ್ಲಿ ಉಪನ್ಯಾಸಕರಾಗಿ ತಮ್ಮ ಜೀವನವನ್ನು ಆರಂಭಿಸಿದರು. ದೇಶ ವಿದೇಶಗಳ, ಅನೇಕ ವಿಶ್ವವಿದ್ಯಾಲಯಗಳಲ್ಲಿ ಪ್ರೊಫೆಸರ್ ಆಗಿ ಅನುಭವ ಪಡೆದವರು. ತತ್ವಜ್ಞಾನಿಯಾಗಿ ಪೌರಾತ್ಯ, ಪಾಶ್ಚಾತ್ಯ ಧರ್ಮಗಳನ್ನು ಆಳವಾಗಿ ಅಭ್ಯಾಸ ಮಾಡಿದವರು.

ಅವರು ಪ್ರಕಾಶಕ್ಕೆ ಬರುತ್ತಿರುವ ಕಾಲವೆಂದರೆ ಭಾರತದ ಸ್ವಾತಂತ್ರ್ಯ ಹೋರಾಟದ ಕಾಲ. ಮಹಾತ್ಮಗಾಂಧೀಜಿಯ ಸಮೀಪ ಸಂಪರ್ಕ ಪಡೆದರು. ಭಾರತ ಸ್ವಾತಂತ್ರ್ಯಾನಂತರ ಉಪರಾಷ್ಟ್ರಪತಿ, ರಾಷ್ಟ್ರಪತಿಯಾಗಿ ಆಡಳಿತ ಸಂಪರ್ಕ ಪಡೆದರು. ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿ ವರದಿ ಕೊಟ್ಟವರು. ಹೀಗೆ ಅವರಲ್ಲಿ ಪ್ರಾಚೀನ ಕಾಲದ ಹಿಂದೂ ತತ್ವಜ್ಞಾನದ ಒಳನೋಟ ಇದ್ದಂತೆ ಆಧುನಿಕ ಕಾಲದ ಸೆಕ್ಯುಲರ್ ತಿಳಿನೋಟವೂ ಇತ್ತು. ಇವೆಲ್ಲ ಅವರ ಶೈಕ್ಷಣಿಕ-ವಿಚಾರದ ಹಿಂದೆ ಪ್ರೇರಕ ಧಾತುವಾಗಿ ಕೆಲಸ ಮಾಡಿವೆ. ಭಾರತೀಯ ಶಿಕ್ಷಣ ತಜ್ಞರಲ್ಲಿ ಅವರ ಹೆಸರು ಮೇಲ್ಪಂಕ್ತಿಗೆ ಸೇರಿವೆ.

ಮುಖ್ಯವಾಗಿ ರಾಧಾಕೃಷ್ಣನ್ ಆದರ್ಶವಾದಿಗಳು. (Idealist) ಹಾಗೆಂದಾಕ್ಷಣ ಅವರು ಲೌಕಿಕವನ್ನು ನಿರಾಕರಿಸಲಿಲ್ಲ. ನಿರಾಕರಿಸಲು ಸಾಧ್ಯವಿಲ್ಲ ತಾನೆ? ಆದ್ದರಿಂದ ಅವರ ಶೈಕ್ಷಣಿಕ ವಿಚಾರ ಆದರ್ಶವಾದಕ್ಕೂ, ಭೌತಿಕವಾದಕ್ಕೂ ಬೆಸೆದ ಬೆಸುಗೆಯಾಗಿದೆ.

ಒಟ್ಟಾರೆಯಾಗಿ 'ಇಲ್ಲಿ ಸಲ್ಲುವವರು ಅಲ್ಲೂ ಸಲ್ಲುವರು' ಎಂಬಂತೆ ಒಂದು ಸಾಮರಸ್ಯ ಹೊಂದಿದೆ.

ರಾಧಾಕೃಷ್ಣನ್ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಒಂದು ದೈವಿಕ ಕಿಡಿ ಅಥವಾ ಬೆಳಕಿನ ಕಿಡಿ ಇದೆ. ಮನುಷ್ಯ ಜೀವನದ ಅಂತಿಮವಾದ ಉದ್ದೇಶ ಈ ದೈವಿಕತೆಯ ಸಾಕ್ಷಾತ್ಕಾರವೇ ಆಗಿದೆ. ಆದ್ದರಿಂದ ಜೀವನಕ್ಕೆ ಒಂದು ಉದ್ದೇಶವಿದೆ. ಆ ಉದ್ದೇಶವನ್ನು ಸಾಕ್ಷಾತ್ಕರಿಸಿಕೊಂಡು ಜೀನವನ್ನು ಉದ್ಧರಣ ಮಾಡಿಕೊಳ್ಳಲು ಅನುವು ಮಾಡಿಕೊಡುವುದೇ ಶಿಕ್ಷಣದ ಪರಮೋದ್ದೇಶ.

ಹಾಗೆ ಮನುಷ್ಯ ಅಂತರಂಗದಲ್ಲಿ ಅಡಗಿದ ದೇವನ ಕಿಡಿಯನ್ನು ಅರಿವಿಗೆ ತಂದುಕೊಳ್ಳಲು ಅಸಮರ್ಥನಾದರೆ ಕೇವಲ ಭೌತಿಕನಾಗುತ್ತಾನೆ, ನಾಸ್ತಿಕನಾಗುತ್ತಾನೆ. ಹಾಗಾಗುವುದೆಂದರೆ ಅಧ:ಪತನದತ್ತ ಸಾಗಿದಂತೆ. ಹಾಗಾಗದಂತೆ ಮನುಷ್ಯನನ್ನು ಭೋಗ, ಮೋಹ, ಧನದಾಹ, ಅಧಿಕಾರದಾಹದಿಂದ ಮೇಲಕ್ಕೆತ್ತಿ ಅವನ ವ್ಯಕ್ತಿತ್ವದ ದೈವಿಕತೆಯನ್ನು ಅರಳಿಸಲು ಶಿಕ್ಷಣ ಸಹಾಯಕವಾಗಬೇಕು.

ಅಂತೆಯೇ ಅವರು, ವಿಶ್ವವಿದ್ಯಾಲಯಗಳು ವಿದ್ಯಾರ್ಥಿಯ ಭೌದ್ಧಿಕತೆಯನ್ನು ಬೆಳೆಸಲು, ಭಾವಾತ್ಮಕತೆಯಲ್ಲಿ ಉದಾತ್ತತೆಯನ್ನು ಸಾಧಿಸಲು, ದೈವಿಕತೆಯನ್ನು (Spiritual) ಅರಳಿಸಲು ಮೀಸಲಾಗಿರಬೇಕಾದ ಕ್ಷೇತ್ರ ಎನ್ನುತ್ತಾರೆ.

ಹೀಗೆ ಭಾವಿಸಲು ಮತ್ತು ಚಿಂತನೆಯ ಸಾಮರಸ್ಯವನ್ನು ಸಾಧಿಸಿಕೊಂಡು ಉನ್ನತ ವ್ಯಕ್ತಿತ್ವವನ್ನು ಪಡೆಯಲು ಧಾರ್ಮಿಕ ಶಿಕ್ಷಣ ಅತ್ಯಂತ ಅವಶ್ಯ ಎಂದು ರಾಧಾಕೃಷ್ಣನ್ ಎನ್ನುತ್ತಾರೆ. ಧಾರ್ಮಿಕ ಶಿಕ್ಷಣ ಎಂದೊಡನೆ ಯಾವ ಧರ್ಮದ್ದು? ದಿನಕ್ಕೆಷ್ಟು ಸಲ ಪೂಜೆ ಮಾಡುವುದು ಅಥವಾ ಪ್ರಾರ್ಥನೆ ಮಾಡುವುದು? ಆದರೆ ರಾಧಾಕೃಷ್ಣನ್ ಧರ್ಮದ ಈ ಹೊರ ಆಚರಣೆಯ ಕುರಿತು, ಕರ್ಮಠತನದ ಕುರಿತು ಹೇಳುತ್ತಿಲ್ಲ. ಅವರೆನ್ನುವುದು ಎಲ್ಲ ಧರ್ಮಗಳ ಆಳವಾದ ಅಭ್ಯಾಸವನ್ನು ಎಲ್ಲ ಧರ್ಮಗಳೂ ಅತ್ಯಂತ ಆಳದಲ್ಲಿ ಒಂದೇ ಉದ್ದೇಶವನ್ನು ಹೊಂದಿದೆ. ಅದೆಂದರೆ ಜೀವನದ ಪರಮ ಸಾರ್ಥಕತೆ, ದೈವಿಕ ಸಾಕ್ಷಾತ್ಕಾರ. ಈ ಒಳತಿರುಳನ್ನು ಅರಿತು ಶಿಕ್ಷಣ ಸಾಗಬೇಕು. ರಾಧಾಕೃಷ್ಣನ್ ಹಲವು ಧರ್ಮಗಳು ಬದಿಬದಿಗೆ ಬಾಳುತ್ತಿರುವ ನಾಡಿನಲ್ಲಿ ಹುಟ್ಟಿದ್ದರು. ಹಿಂದು, ಮುಸ್ಲಿಮ್, ಕ್ರೈಸ್ತ, ಸಿಖ್ ಎನ್ನದೆ ಎಲ್ಲರೂ ಒಟ್ಟಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿದ್ದರು. ಅದೇ ಹೊತ್ತಿಗೆ ಧಾರ್ಮಿಕ ಮೂಲಭೂತವಾದಿಗಳ ಸಂಘಟನೆ ಚಿಗುರೊಡೆಯುತ್ತಿತ್ತು. ಇಂಥ ಸಂದರ್ಭ ಅವರ ಮುಂದಿತ್ತು. ಈ ಧಾರ್ಮಿಕ ಸಂಕುಚಿತತೆಯನ್ನು ದೂರ ಮಾಡಿ ಒಂದು ಸಾಮರಸ್ಯ ಸಾಧಿಸಬೇಕಾದ ಅವಶ್ಯಕತೆ ಶಿಕ್ಷಣಕ್ಕೆ ಇತ್ತು. ಅದು ಅಂದು ಹೇಗೋ ಇಂದೂ ಹಾಗೆಯೇ.

ಹೀಗೆಂದಾಕ್ಷಣ ರಾಧಾಕೃಷ್ಣನ್ ವೈಜ್ಞಾನಿಕ ಶಿಕ್ಷಣವನ್ನು ಕಡೆಗಣಿಸಲಿಲ್ಲ. ಅವರ ಪ್ರಕಾರ ಸತ್ಯದ ಸಂಶೋಧನೆ ಧರ್ಮದ್ದೂ ಹೌದು, ವಿಜ್ಞಾನದ್ದೂ ಹೌದು. ನಮ್ಮ ತಾಂತ್ರಿಕ, ಔದ್ಯೋಗಿಕ ಪ್ರಗತಿಯನ್ನು ಸಾಧಿಸುವ ವೈಜ್ಞಾನಿಕ ಶಿಕ್ಷಣ ನಮಗೆ ಬೇಕು. ಶಿಕ್ಷಣ ಮಕ್ಕಳಲ್ಲಿ ಅನ್ವೇಷಣಾ ಗುಣವನ್ನು ಬೆಳಗಿಸಬೇಕು. ಇದ್ದುದನ್ನು ವಿಶ್ಲೇಷಿಸುವ, ಹೊಸದನ್ನು ಸೃಷ್ಟಿಸುವ, ಪೂರ್ವಗ್ರಹವನ್ನು ಮೂಢನಂಬಿಕೆಯನ್ನು ಛಿದ್ರಗೊಳಿಸಿ, ಹೊಸ ಹೊಸದನ್ನು ಸ್ವೀಕರಿಸುವ ಮನೋಭಾವವನ್ನೂ ಹೊಸದನ್ನು ಸ್ವಾಗತಿಸುವ ತೆರೆದ ಮನಸ್ಸನ್ನು ಶಿಕ್ಷಣ ಬೆಳೆಸಬೇಕು.

ನಾವು ಪ್ರಜಾಪ್ರಭುತ್ವಯುಗದಲ್ಲಿ ಇದ್ದೇವೆ. ಪ್ರಜಾಪ್ರಭುತ್ವಕ್ಕೆ ತಕ್ಕದಾದ ನಾಗರಿಕನನ್ನು ಶಿಕ್ಷಣ ತರಬೇತುಗೊಳಿಸಬೇಕು. ತನ್ನನ್ನು ತಾನು ಆಳಿಕೊಳ್ಳುವ, ತನಗೆ ತಾನೇ ಶಿಸ್ತನ್ನು ಕಾಪಾಡಿಕೊಳ್ಳುವ ತರಬೇತು ನಮಗೆ ಬೇಕು. ನಮ್ಮ ಮುಂದಿರುವ ಆಮಿಷಗಳು ಹಲವು. ಆದರೆ ಅದನ್ನು ಹತೋಟಿಗಿಟ್ಟುಕೊಳ್ಳುವ, ತನ್ನ ಕಾರ್ಯಕ್ಕೆ ತಾನೇ ಹೊಣೆಯಾಗುವ, ತನಗೆ ತಾನೇ ವೈಚಾರಿಕತೆಯನ್ನು ಬೆಳೆಸಿಕೊಳ್ಳುವಂತೆ ಮಾಡುವ ಕೆಲಸ ಇಂದಿನ ಶಿಕ್ಷಣದ್ದಾಗಬೇಕು.

ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಸಮಾನ ಹಕ್ಕು ಮತ್ತು ಕರ್ತವ್ಯ. ಅಂತೆಯೇ ರಾಧಾಕೃಷ್ಣನ್ ಶಿಕ್ಷಣ ಸಾರ್ವತ್ರಿಕವಾಗಬೇಕೆಂದರು. ಶಿಕ್ಷಣ ಎಲ್ಲರಿಗೆ ತಲುಪಬೇಕು. ಬಡವರಿರಬಹುದು. ಸಾಮಾಜಿಕವಾದ ಉನ್ನತ ಸ್ಥಾನ ಹೊಂದಿರದಿರಬಹುದು. ಆದರೆ ಎಲ್ಲರಿಗೂ ಶಿಕ್ಷಣ ಮುಕ್ತವಾಗಿ ದೊರಕಬೇಕು. ಆ ಶಿಕ್ಷಣ ಅವರ ಅಂತಸ್ತನ್ನು ಹೆಚ್ಚಿಸಿಕೊಳ್ಳಲು ಒಂದು ಅವಕಾಶ. ಅವರ ಬೌದ್ಧಿಕತೆ ಬೆಳೆಯಬೇಕು. ಪ್ರಸ್ತುತ ಸಮಾಜದಲ್ಲಿ ಅವರು ತಮ್ಮ ಸ್ಥಿತಿಯನ್ನು ಪ್ರಗತಿಯ ಕಡೆಗೆ ಒಯ್ಯುವಂತಾಗಬೇಕು. ಆದ್ದರಿಂದ ಶಿಕ್ಷಣ ಕೆಲವೊಂದು ವರ್ಗಕ್ಕೆ ಮೀಸಲಾಗಿರದೇ ಎಲ್ಲರ ಹಕ್ಕಾಗಬೇಕು ಎನ್ನುವುದು ಅವರ ವಿಚಾರ. ಶಿಕ್ಷಣದ ಸಾರ್ವತ್ರಿಕತೆ ಇಂದಿನ ಆವಶ್ಯಕತೆಗಳಲ್ಲಿ ಒಂದು. ಅದಕ್ಕೆ ರಾಧಾಕೃಷ್ಣನ್ ಕುರುಡಾಗಲಿಲ್ಲ. ಪ್ರಜಾಪ್ರಭುತ್ವದಲ್ಲಿ ಬದುಕುವವರು ಯಾರೂ ಕುರುಡಾಗಲು ಸಾಧ್ಯವಿಲ್ಲ.

ಪ್ರಜಾಪ್ರಭುತ್ವದಲ್ಲಿ ಸಲ್ಲದ ಇನ್ನೊಂದು ಮಹತ್ವದ ಸಂಗತಿ ಎಂದರೆ ಲಿಂಗಭೇದ. ನಮ್ಮಲ್ಲಿ ಅದು ಹಿಂದುವಾಗಿರಲಿ, ಮುಸ್ಲಿಮ್ ಆಗಿರಲಿ ಹೆಣ್ಣು ಮಕ್ಕಳನ್ನು ಎರಡನೇ ದರ್ಜೆ ಪ್ರಜೆಗಳಾಗಿಯೇ ಕಂಡಿದ್ದೇವೆ. ಧರ್ಮದ ಮೂಲದಲ್ಲಿ ಅದಿರಲಿ ಇಲ್ಲದಿರಲಿ ಆದರೆ ವರ್ತಮಾನದ ವರ್ಗೀಯ ಸಮಾಜದಲ್ಲಂತೂ ಗಂಡಿನದೇ ಯಜಮಾನ್ಯ. ಆದ್ದರಿಂದ ಗಂಡಿಗೆ ತೆರೆದಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಅವಕಾಶಗಳು ಹೆಣ್ಣಿಗೆ ಸಾಹಸದ ಮಾತು. ರಾಧಾಕೃಷ್ಣನ್ ಗಂಡು - ಹೆಣ್ಣಿಗೆ ಸಮಾನ ಶಿಕ್ಷಣವನ್ನು ಭೋಧಿಸುತ್ತಾರೆ.

ಒಟ್ಟಾರೆಯಾಗಿ ಡಾ। ರಾಧಾಕೃಷ್ಣನ್ ವಿಚಾರದಲ್ಲಿ ಶಿಕ್ಷಣ, ಧಾರ್ಮಿಕ ಮತ್ತು

ವೈಜ್ಞಾನಿಕ ವಿಚಾರದಲ್ಲಿ ಒಂದು ಸಾಮರಸ್ಯವನ್ನು ಹೊಂದಿಸುವಂತಿರಬೇಕು. ಧಾರ್ಮಿಕ ಶಿಕ್ಷಣದಿಂದ ವಂಚಿತವಾದ ಶಿಕ್ಷಣ ಪರಿಪೂರ್ಣವಲ್ಲ. ಅದು ಐಹಿಕ ಸುಖದ ಮೋಹವನ್ನು ಅಥವಾ ಆವೇಶವನ್ನು ನಿಯಂತ್ರಿಸಬೇಕು. ವೈಜ್ಞಾನಿಕ ವೈಚಾರಿಕ ಮನೋಭಾವವನ್ನು ಬೆಳೆಸಬೇಕು. ಜ್ಞಾನದ ಬೆನ್ನು ಹತ್ತಿ ಹೋಗುವಂತೆ ಪ್ರೇರೇಪಿಸಬೇಕು. ಅಂಥಜ್ಞಾನ (ಧಾರ್ಮಿಕ-ವೈಜ್ಞಾನಿಕ)' ಸತ್ಯ-ನ್ಯಾಯಗಳ ಬಗ್ಗೆ ಗೌರವವನ್ನು ಹೆಚ್ಚಿಸಬೇಕು. ಹೊಸ ಹೊಸ ಸಂಶೋಧನೆಯನ್ನು ಅನುಸಂಧಾನ ಮಾಡುತ್ತಾ ಬಾಳನ್ನು ಸಮೃದ್ಧ ಪಡಿಸುವಂತಿರಬೇಕು. ಆದರೆ ಈ ಯಾವ ಧಾರ್ಮಿಕವಾಗಿರಲಿ, ವೈಜ್ಞಾನಿಕವಾಗಿರಲಿ ಅದು ಮನುಷ್ಯರನ್ನು ಹಿಂಸಕರನ್ನಾಗಿ, ಸರ್ವಾಧಿಕಾರಿಗಳನ್ನಾಗಿ, ನ್ಯಾಯನಿಷ್ಠುರತೆಯಲ್ಲಿ ಭರವಸೆ ಕಳಕೊಂಡವರನ್ನಾಗಿ ಬೆಳೆಸಬಾರದು. ಶಿಕ್ಷಣದ ಪರಮೋದ್ದೇಶ ಮಾನವತೆಯನ್ನು ಪೋಷಿಸುವುದೇ, ಬೆಳೆಸುವುದೇ ಆಗಿದೆ.

**ಮಹಾತ್ಮಾ ಗಾಂಧಿ:**

ಹಾಗೆ ಕೇಳಿದರೆ, ಮೋಹನ ಕರಮಚಂದ ಗಾಂಧಿ ಒಬ್ಬ ವೃತ್ತಿ ಪರ ಶಿಕ್ಷಣ ತಜ್ಞನಲ್ಲ. ಅವರು ಜೀವನ ಆರಂಭಿಸಿದ್ದು ಒಬ್ಬ ನ್ಯಾಯವಾದಿಯಾಗಿ. (ನ್ಯಾಯವಾದಿ ಪದಕ್ಕೆ ಪೂರ್ಣ ಅರ್ಥದಲ್ಲಿ ನ್ಯಾಯ ಸಲ್ಲಿಸಿದವರು ಅವರೊಬ್ಬರೇ ಇರಬೇಕು) ನಂತರ ಒಬ್ಬ ರಾಜಕೀಯ ನೇತಾರನಾಗಿ.

ಗಾಂಧೀಜಿಯ ಕಾಲವೆಂದರೆ ಭಾರತದ ಒಂದು ಸಂಕ್ರಮಣದ ಹಂತದ ಕಾಲ. ಅವರು ಮೂರು ದಶಕಗಳ ದೀರ್ಘಕಾಲ ಭಾರತ ಸ್ವಾತಂತ್ರ್ಯ ಹೋರಾಟದ ನೇತಾರನಾಗಿ ಕಾರ್ಯ ಚಟುವಟಿಕೆಯಲ್ಲಿ ನಿರತರಾಗಿದ್ದರು. ಅವರ ರಾಜಕಾರಣವೆಂದರೆ ಅಧಿಕಾರ ಚಲಾವಣೆಯ ಕಾಲವಲ್ಲ ಬದಲಾಗಿ ರಾಷ್ಟ್ರೀಯ ಹೋರಾಟಕ್ಕೆ ಮುಖಂಡರನ್ನೂ, ಜನಸಾಮಾನ್ಯರನ್ನೂ ತಯಾರಿಸುವ ಕಾಲ. ಗಾಂಧಿಯೇನೋ ಮಧ್ಯಮ ಕುಟುಂಬದಲ್ಲಿ ಹುಟ್ಟಿ ಬಂದಿದ್ದರಾದರೂ ಅವರು ಭಾರತದ ಎಲ್ಲ ವರ್ಗದ ಜನರ ಜೀವನ ಸ್ಥಿತಿಯ ಮತ್ತು ಹೋರಾಟದ ಸಹವರ್ತಿಯಾಗಿರಬೇಕಾಗಿತ್ತು. ಭಾರತವನ್ನು ಸ್ವತಂತ್ರಗೊಳಿಸಲೆತ್ನಿಸಿದಾಗ, ಸ್ವಾತಂತ್ರ್ಯ ನಂತರದ ಕನಸನ್ನು ರೂಪಿಸಬೇಕಿತ್ತು. ಹೀಗೆ ಹಲವು ಹತ್ತು ಯೋಜನೆ - ಕಾರ್ಯಚಟುವಟಿಕೆಗಳ ಪ್ರಕ್ರಿಯೆಯಾಗಿ ಹುಟ್ಟಿಕೊಂಡುದೇ ಅವರ ಶೈಕ್ಷಣಿಕ ವಿಚಾರ.

ಒಂದು ವಿಚಾರ, ಒಂದು ಆಂದೋಲನ ಆಯಾ ಕಾಲದ ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿಯ ಗರ್ಭದಿಂದಲೂ ಹುಟ್ಟಿಬರುತ್ತದೆ ಎನ್ನಲು ಗಾಂಧೀಜಿಯ ಶೈಕ್ಷಣಿಕ ವಿಚಾರಕ್ಕಿಂತ ಬೇರೆ ಉತ್ತಮ ಉದಾಹರಣೆ ಬೇಕಿಲ್ಲ.

ಗಾಂಧಿ ಭಾರತಕ್ಕೆ ಬರುವ ಪೂರ್ವದಲ್ಲೇ ದಕ್ಷಿಣ ಆಫ್ರಿಕಾದಲ್ಲಿ ತಮ್ಮ ಕಾರ್ಯ

ಪಟುತ್ವವನ್ನು ಹದಗೊಳಿಸಿದ್ದರು. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಕುರಿತು ಇರುವ ಕೀಳರಿಮೆಯನ್ನು ಹೋಗಲಾಡಿಸಲು ಅಲ್ಲಿಯ ಭಾರತೀಯ ಮಕ್ಕಳಿಗಾಗಿ ಅವರೇ ಶಾಲೆಯನ್ನು ತೆರೆಯಬೇಕಾಯಿತು. ಆಗಲೇ ಅವರ ಮೇಲೆ ರಷಿಯಾ ದೇಶದ ಮಹಾ ಸಾಹಿತಿ ಟಾಲ್‌ಸ್ಟಾಯ್ ಅವರ ಶಾಲೆಯ ಪ್ರಭಾವ ಬಿದ್ದಿತು. ಅಥವಾ ಅದು ಸೂಕ್ತ ಪರಿಣಾಮ ಮಾಡಿತು. ಅದರ ಮುಖ್ಯ ಪರಿಣಾಮವೆಂದರೆ ಉದ್ಯೋಗ ಪೂರ್ಣವಾದ ಶಿಕ್ಷಣ. ಟಾಲ್‌ಸ್ಟಾಯ್ ಅವರ ಶಾಲೆಯ ಬಾಗಿಲಿಗೆ "ಈ ಶಾಲೆಯನ್ನು ಪ್ರವೇಶಿಸಿ ಸ್ವತಂತ್ರವಾಗಿ ಬಾಳುವುದನ್ನು ಕಲಿತು ಹೊರಬೀಳಿ" ಎಂದು ಬರೆದಿತ್ತಂತೆ. ಗಾಂಧೀಜಿಯ ಶಾಲೆಯ ಜೀವಾಳವೂ ಇದುವೇ.

ಭಾರತಕ್ಕೆ ಬಂದಾಗಲೂ ಗಾಂಧಿ ಕಂಡಿದ್ದೇನು? ಪಾಶ್ಚಾತ್ಯ ಶಿಕ್ಷಣ ಹೊಂದಿದ ಶಿಷ್ಟವರ್ಗ, ಶಿಕ್ಷಣವೇ ಇಲ್ಲದೆ ವಂಶ ಪರಂಪರೆಯಲ್ಲಿ ಬಂದ, ಉದ್ಯೋಗವನ್ನೂ ಕಳಕೊಂಡ ನಿರುದ್ಯೋಗಿ ಬಡವರ್ಗ. ಈ ಎರಡೂ ವರ್ಗವನ್ನು ಒಟ್ಟಾಗಿ ಬೆಸೆಯುವುದು, ಬಡವರಲ್ಲಿ ಸ್ವಾವಲಂಬನೆ ಬೆಳೆಸುವುದು, ಎಲ್ಲರನ್ನೂ ರಾಷ್ಟ್ರೀಯ ಹೋರಾಟದಲ್ಲಿ ಬೆಸೆಯುವುದು ಅಂದಿನ ಅವಶ್ಯಕತೆಯಾಗಿತ್ತು. ಈ ಎಲ್ಲದರ ಪರಿಸ್ಥಿತಿಯ ಪ್ರಭಾವವೂ ಗಾಂಧಿಯ ಶೈಕ್ಷಣಿಕ ವಿಚಾರದ ಮೇಲೆ ಪರಿಣಾಮ ಬೀರಿದೆ. ಗಾಂಧೀಜಿಯ ಶೈಕ್ಷಣಿಕ ವಿಚಾರದಲ್ಲಿ ಅಸಂಗತೆಯೂ ಇದೆ. ಆದರೆ ಅದೇನೇ ಇದ್ದರೂ ಕಾರ್ಯ ಚಟುವಟಿಕೆಯ ಮಧ್ಯದಲ್ಲೇ ಮೂಡಿ ಬಂದ ಅವರ ವಿಚಾರದಲ್ಲಿ ಶೈಕ್ಷಣಿಕ ಕ್ರಾಂತಿಕಾರಕ ಗುಣ ಹಾಗೂ ಮನಶ್ಶಾಸ್ತ್ರೀಯ ಉತ್ತಮೋತ್ತಮ ಗುಣಗಳೂ ಸೇರಿವೆ. ಆದ್ದರಿಂದಲೇ ಅವರು ಭಾರತೀಯ ಹಿರಿಯ ಶಿಕ್ಷಣ ತಜ್ಞರ ಪಟ್ಟಿಯಲ್ಲಿ ಸೇರುತ್ತಾರೆ.

ಬೌದ್ಧಿಕ - ಧಾರ್ಮಿಕ, ಶಾರೀರಿಕ ಈ ಎಲ್ಲ ಗುಣಗಳ ಸರ್ವಾಂಗೀಣ ವ್ಯಕ್ತಿತ್ವ ಉನ್ನತಿಯನ್ನು ಸಾಧಿಸುವುದೇ ಶಿಕ್ಷಣ (An all round drawing out of the best in child and man-body, mind and spirit) ಎಂಬ ಅವರ ವಾಕ್ಯ ಪ್ರಸಿದ್ಧವೇ ಇದೆ.

ಗಾಂಧೀಜಿ ಮಗುವಿನ ಆಂತರಿಕ ಮತ್ತು ಬಾಹ್ಯ ಎಲ್ಲದರಲ್ಲಿಯ ಉತ್ತಮತೆಯನ್ನು ಶಿಕ್ಷಣ, ಪ್ರಕಾಶಕ್ಕೆ ತರಬೇಕು ಎನ್ನುತ್ತಾರೆ. ಮುಖ್ಯವಾಗಿ ಗಾಂಧೀಜಿ ಧಾರ್ಮಿಕ ಮನುಷ್ಯ. ಧರ್ಮ ಎಂದರೆ ಯಾವ ಸಂಕುಚಿತ ಅರ್ಥದಲ್ಲೂ ಅಲ್ಲ. ಅವರು ದೇವರ ಸಾಕ್ಷಾತ್ಕಾರ ಕಟ್ಟ ಕೊನೆಯ ಸತ್ಯ ಎಂದು ನಂಬುತ್ತಾರೆ. ಆ ದೇವರನ್ನು ಸಾಕ್ಷಾತ್ಕರಿಸುವ ದಾರಿಯೆಂದರೆ ಸತ್ಯ ಮತ್ತು ಅಹಿಂಸೆಯ ಆಚರಣೆಯೇ ಆಗಿದೆ. ಯಾಕೆಂದರೆ ದೇವರೆಂದರೆ ಪ್ರೀತಿ (Love) ಎಂದೇ ಆಗಿದೆ. ಆದ್ದರಿಂದ ಸತ್ಯ ಮತ್ತು ಅಹಿಂಸೆ ಒಂದಕ್ಕೊಂದು ಹೊಂದಿಕೊಂಡಿರುವುದೇ ಆಗಿದೆ. ಇಂಥ ಸತ್ಯದ ಸಾಕ್ಷಾತ್ಕಾರಕ್ಕಾಗಿ ವ್ಯಕ್ತಿ ಕ್ರಾಂತಿಗೂ ಸಿದ್ಧನಾಗಬೇಕಾಗಬಹುದು ಅಥವಾ ಹಾಗೆ ಮಾಡಬೇಕು. ಈ ಸತ್ಯ ಶೋಧನೆಯಲ್ಲಿ

ಆತ ಹೊಸ ಮಾರ್ಗವನ್ನೇ ಕಾಣಬಹುದು. ಆದರೆ ಅದು ಕೇವಲ ವ್ಯಷ್ಟಿಗಾಗಿ ಇರದೆ ಸಮಷ್ಟಿಗಾಗಿ ಇರಬೇಕು.

ಗಾಂಧೀಜಿ ಧಾರ್ಮಿಕ ಮನುಷ್ಯ ಎಂದು ಮೇಲೆ ಹೇಳಿದೆ. ಆದರೆ ಅವರ ಧಾರ್ಮಿಕತೆ ಗಂಭೀರವಾದುದು, ಚಿತ್ತ ವೇದ್ಯವಾದುದೂ ಆಗಿದೆ. ಅವರು ಧಾರ್ಮಿಕ ಶಿಕ್ಷಣದ ಬಗ್ಗೆ ಹೇಳುವ ಮಾತು ಇದಕ್ಕೆ ಸಾಕ್ಷಿಯಾಗಿದೆ. "ಇಂದಿನ ಧರ್ಮಗಳ ಬೋಧನೆಯ ರೀತಿ ಹಾಗೂ ಆ ಧರ್ಮಗಳ ಆಚರಣೆ ಇವನ್ನು ನೋಡಿದಲ್ಲಿ ಈ ಧರ್ಮಗಳು ಐಕ್ಯಕ್ಕೆ ಕಾರಣವಾಗದೇ ದ್ವೇಷಕ್ಕೆ ಕಾರಣವಾಗುತ್ತದೆಂಬ ಉದ್ದೇಶದಿಂದ ವರ್ಧಾ ಶಿಕ್ಷಣ ಪದ್ಧತಿಯಲ್ಲಿ ಧಾರ್ಮಿಕ ಶಿಕ್ಷಣಕ್ಕೆ ಅವಕಾಶ ಕೊಟ್ಟಿಲ್ಲ. ಆದರೆ ಈ ಎಲ್ಲ ಧರ್ಮಗಳಲ್ಲಿಯೂ ಸಾಮಾನ್ಯವಾದ ಸತ್ಯಾಂಶಗಳನ್ನು ಬಾಲಕರಿಗೆ ಕಲಿಸಬಹುದು; ಕಲಿಸಲೇಬೇಕೆಂದು ನನ್ನ ಅಭಿಪ್ರಾಯ" ಗಾಂಧೀಜಿಯ ವಿಚಾರದಲ್ಲಿ ಶಿಕ್ಷಣ ಮುಖ್ಯವಾಗಿ ಎರಡು ಸಂಗತಿಗಳನ್ನು ಸಾಧಿಸಬೇಕು. ಮೊದಲನೆಯದು, ಉದ್ಯೋಗ ತರಬೇತಿಯನ್ನು ಕೊಡಬೇಕು. ಆ ಮುಖಾಂತರ ವ್ಯಕ್ತಿ ಹೊಟ್ಟೆ-ಬಟ್ಟೆಯ ಬಗ್ಗೆ ಸ್ವಾವಲಂಬಿಯಾಗಿರಬೇಕು. ಸಾಂಸ್ಕೃತಿಕ ಮಟ್ಟವನ್ನು ದೊರಕಿಸಿಕೊಳ್ಳಬೇಕು. ಎರಡನೆಯದೆಂದರೆ, ತನ್ನ ಅಂತರಂಗದಲ್ಲಿ ಹುದುಗಿದ ಸತ್ಯ ದರ್ಶನವನ್ನು, ದೈವಿಕತೆಯ ಸಾಕ್ಷಾತ್ಕಾರವನ್ನು ಪಡೆಯಬೇಕು. ಜೀವನದಲ್ಲಿ ನೀತಿ, ನಿಯಮ, ಸಂಯಮ, ಸಾಮಾಜಿಕತೆ, ಪರೋಪಕಾರ ಬುದ್ಧಿ, ಸಾರ್ವಜನಿಕ ಸೇವೆ ಮುಂತಾದ ಗುಣ ವ್ಯಕಿಗತವಾಗಬೇಕು. ಶಿಕ್ಷಣ ಅಂತಹ ತರಬೇತು ನೀಡಬೇಕು. ಅದಿಲ್ಲದಿದ್ದರೆ ಕೇವಲ ಅಕ್ಷರ ಕಲಿಕೆ ಯಾವ ಮಹತ್ವದ್ದೂ ಅಲ್ಲ. ಅಕ್ಷರ ಕಲಿಕೆ ಮಾತ್ರ ಶಿಕ್ಷಣದ ಧ್ಯೇಯವಲ್ಲ.

ಈ ಕಾರಣದಿಂದ ಗಾಂಧೀಜಿ ಮೂಲೋದ್ಯೋಗ (Craft) ಶಿಕ್ಷಣವನ್ನು ಪ್ರತಿಪಾದಿಸಿದರು. ಅಂದರೆ ಶಿಕ್ಷಣ ಉದ್ಯೋಗ ಮುಖಾಂತರ ಸಾಗಬೇಕು. ಗಣಿತವೇ ಇರಲಿ, ವಿಜ್ಞಾನದ ಇತರ ವಿಷಯವೇ ಇರಲಿ ಅದು ಒಂದು ಅಥವಾ ಹಲವು ಉದ್ಯೋಗದ ಸಾಹಚರ್ಯದಲ್ಲಿ-ಸಮನ್ವಯದಲ್ಲಿ ಸಾಗಬೇಕು. ಅಲ್ಲಿ ಸಾಂಘಿಕತೆ, ಶಿಸ್ತು, ಮುಂದಾಳ್ತನ, ಅರ್ಥಶಾಸ್ತ್ರೀಯ ಗುಣ, ಅಚ್ಚುಕಟ್ಟು, ಇಂದ್ರಿಯ ಪಟುತ್ವ ಬೆಳೆಯುತ್ತದೆ. ಅವರ ಪ್ರಕಾರ ಶಾಲೆಯ ಏಳುವರ್ಷಗಳ ಕಲಿಕೆಯ ನಂತರ ಆತ ಅಥವಾ ಅವಳು ಸ್ವಯಂ ಉದ್ಯೋಗಿಗಳಾಗಬೇಕು. ಇಷ್ಟಲ್ಲದೆ ಶಾಲಾ ಮಕ್ಕಳ ಉದ್ಯೋಗದ ಗಳಿಕೆಯಿಂದ ಶಿಕ್ಷಕರ ಸಂಬಳ ಇತ್ಯಾದಿ ವೆಚ್ಚ ಸಾಗಬೇಕು ಎಂದೂ ಅನ್ನುತ್ತಾರೆ! ಇದಕ್ಕೆ ಕ್ರೇಫ್ಟ್ ಸೆಂಟರ್ಡ್ ಎಜ್ಯುಕೇಶನ್ - ಮೂಲೋದ್ಯೋಗ ಶಿಕ್ಷಣ ಎನ್ನುತ್ತಾರೆ.

ಈ ವಿಚಾರ ಗಾಂಧೀಜಿಯವರ ಕಾರ್ಯ ಸಂದರ್ಭದ ಅನುಭವದಿಂದ ಹುಟ್ಟಿದ್ದು.

ಆದರೆ ಇದು ಸಂಪೂರ್ಣವಾಗಿ ಸ್ವೀಕಾರಾರ್ಹವಲ್ಲ. ಇದಕ್ಕೆ ಮಕ್ಕಳ ಮನೋವಿಜ್ಞಾನದ, ಹಾಗೆಯೇ ವ್ಯವಹಾರಿಕ ವಿಚಾರದಲ್ಲೂ ಭಾದಕವಿದೆ. ಸಾಂದರ್ಭಿಕವಾಗಿ ಈ Craft Centered ಶಿಕ್ಷಣ ಮಹತ್ವ ಪಡೆದರೂ ಅದು ಮನಶಾಸ್ತ್ರೀಯವಾಗಿ ತುಷ್ಟಿ ಪಡೆಯಲಾರದು. Child Centred Education ಅಥವಾ ಮಗು ಕೇಂದ್ರಿತ ಶಿಕ್ಷಣವೇ ಯೋಗ್ಯವಾದುದೆಂದೇ ಇಂದಿನ ಗ್ರಹಿಕೆಯಾಗಿದೆ. ಇಂದಿನದು ಮಾತ್ರವಲ್ಲ ಗಾಂಧೀಜಿಯ ಸಮಕಾಲೀನ ಶಿಕ್ಷಣ ತಜ್ಞ ರವೀಂದ್ರನಾಥ ಟಾಗೂರರು ಇದನ್ನು (ಉದ್ಯೋಗ ಕೇಂದ್ರಿತ) ಪೂರ್ಣವಾಗಿ ಸ್ವೀಕರಿಸಿದಂತಿಲ್ಲ. ಹಾಗಂತ ಇಲ್ಲಿ ಮಗುವು ಪಡೆಯುವ ಸ್ವಂತ ಅನುಭವ, ತೊಡಗುವ ದೈಹಿಕ ಚಟುವಟಿಕೆ ಇವೆಲ್ಲಾ ಮಹತ್ವದ್ದೆ. ಆದರೆ ಏಳರಿಂದ ಹದಿನಾಲ್ಕು ವರ್ಷದ ಮಗುವನ್ನು ಶಾಲೆ ಎಂಬ ಕಾರಖಾನೆಯ ಕೂಲಿಯನ್ನಾಗಿ ಮಾಡುವುದು ಉದ್ಯೋಗ ತರಬೇತಿ ಆಗುವುದಿಲ್ಲ. ಇಂದಿನ ಶಿಕ್ಷಣದ ಪುಸ್ತಕದ ಹೊರೆಯಂತೆ ಅದೂ ಉದ್ಯೋಗದ ಹೊರೆ ಆಗಬಹುದು. ಇಷ್ಟೇ ಅಲ್ಲ ಆ ಪ್ರಯೋಗ ಯಶಸ್ವಿ ಕೂಡಾ ಆಗಲಿಲ್ಲ.

ಇನ್ನೊಂದು ವ್ಯವಹಾರಿಕ ತೊಂದರೆಯೆಂದರೆ ಮಕ್ಕಳ ಉದ್ಯೋಗ ಉತ್ಪತ್ತಿಯಿಂದ ಶಾಲೆಯ ಎಲ್ಲಾ ಖರ್ಚು ಸರಿದೂಗಿಸುವುದು. ಇದು ಇಂದಿನ ಬಂಡವಾಳಶಾಹಿ ಸಮಾಜದಲ್ಲಿ ಹಾಸ್ಯಾಸ್ಪದ ಸಂಗತಿಯಾಗುತ್ತದೆ.

ಗಾಂಧೀಜಿಯ ಶಿಕ್ಷಣದ ಪ್ರಶಂಸಾರ್ಹ ಗುಣವೆಂದರೆ ಅದು ವ್ಯಕ್ತಿತ್ವ ನಿರ್ಮಾಣದಲ್ಲಿ ಸಾಧಿಸ ಬಯಸುವ ಕ್ರಾಂತಿ

ಆ ದರ್ಶನವೆಂದರೆ ಶಿಕ್ಷಣದಲ್ಲಿ ಪ್ರಭಾವ ಬೀರಿಕೊಂಡೇ ಬಂದ Three 'R' ಅಂದರೆ ರೀಡಿಂಗ್, ರೈಟಿಂಗ್ ಮತ್ತು ರಿತ್‌ಮೆಟ್ - ಬದಲಾಗಿ Three 'H' ಹೇಂಡ್, ಹಾರ್ಟ್ ಮತ್ತು ಹೆಡ್ ಎನ್ನುವುದೇ ಆಗಿದೆ. ಕೇವಲ ಓದು ಬರಹ ಮತ್ತು ಗಣಿತದ ಕಲಿಕೆ ಆಗಲೇ ಭಾರತದಲ್ಲಿ ಗುಮಾಸ್ತರನ್ನು ಸೃಷ್ಟಿಸುವ ಕಾರಖಾನೆ ಆಗುತ್ತಿರುವುದನ್ನು ಗಾಂಧೀಜಿ ಗಮನಿಸಿದ್ದರು. ಆದರ ಬದಲು ಅವರ ಕೈಬೆಳೆಯಬೇಕು - (ಉದ್ಯೋಗ), ಹೃದಯ ವೈಶಾಲ್ಯ ಪಡೆಯಬೇಕು (ಮಾನವೀಯತೆ, ಪ್ರೀತಿ) ಮತ್ತು ಬುದ್ಧಿವಂತಿಕೆ ಬೆಳೆಯಬೇಕು. ಇವು ಒಂದನ್ನಗಲದೆ ಒಂದು ಪೋಷಣೆ ಪಡೆಯಬೇಕು. ಉದ್ಯೋಗ ಶಿಕ್ಷಣದಿಂದ ಸ್ವಾಲಂಬನೆ, ಸ್ವಾಭಿಮಾನ ಮತ್ತು ಸಾಮಾಜಿಕತೆ (ಸಹಕಾರ ಭಾವ) ಬೆಳೆದರೆ ಅದೇ ಮುಂದಿನ ಬೆಳವಣಿಗೆಯ ಹೃದಯವಂತಿಕೆಗೆ ಕಾರಣವಾಗುತ್ತದೆ. ಹಾಗೆಯೇ ಪ್ರತ್ಯಕ್ಷ ಅನುಭವದಿಂದ ಅನ್ವೇಷಕ ಗುಣ ಪುಷ್ಟಿಗೊಳ್ಳುತ್ತದೆ. ಈ ಎರಡಕ್ಕೂ ಮಧ್ಯದಲ್ಲಿ ನಿಂತು ಚಾಲನಾ ಶಕ್ತಿಯಾಗುವುದು ಹೃದಯ. ಹೃದಯವಂತಿಕೆಯೇ ನಿಜವಾದ ಶಿಕ್ಷಣದ ಹಿರಿಯ ಧ್ಯೇಯ ಕೂಡ.

ಗಾಂಧೀಜಿಯವರ ಇನ್ನೊಂದು ಬಹಳ ಮಹತ್ವದ ವಿಚಾರವೆಂದರೆ ಮಾತೃ ಭಾಷೆಯ

ಮುಖಾಂತರವೇ ಶಿಕ್ಷಣ. ಇಂಗ್ಲಿಷ್ ಶಿಕ್ಷಣ ಮಾಧ್ಯಮವನ್ನು ಗಾಂಧೀಜಿ ಸ್ಪಷ್ಟವಾಗಿ ಅಲ್ಲಗಳೆದಿದ್ದಾರೆ. "ಪರದೇಶಿ ಭಾಷಾ ಶಿಕ್ಷಣ ಮಾಧ್ಯಮ ನಮ್ಮ ಮಕ್ಕಳ ಮಿದುಳನ್ನು ದಣಿಸುತ್ತದೆ. ಅವರ ಇಂದ್ರಿಯಗಳ ಮೇಲೆ ಸಲ್ಲದ ಒತ್ತಡ ಹೇರುತ್ತದೆ. ಅವರನ್ನು ಕೇವಲ ಉರುಹೊಡೆಯುವವರನ್ನಾಗಿ ನಕಲಿಗಳನ್ನಾಗಿ ಮಾಡುತ್ತದೆ. ತಮ್ಮ ಜನರನ್ನೇ ಅಪರಿಚಿತರನ್ನಾಗಿ ಮಾಡುತ್ತದೆ" ಎಂದು ಹೇಳಿ ಮಾತೃ ಭಾಷಾ ಶಿಕ್ಷಣದ ಮಹತ್ವವನ್ನು ಎತ್ತಿ ಹೇಳಿದ್ದಾರೆ. ಈ ಸಂಗತಿ ಇಂದಿನ ಎಲ್ಲಾ ಶಿಕ್ಷಣ ತಜ್ಞರಿಂದಲೂ ಮನ್ನಣೆ ಪಡೆದಿದೆ.

ಒಟ್ಟಾರೆಯಾಗಿ ಶಿಕ್ಷಣ ಬಾಲಕ - ಬಾಲಕಿಯರಲ್ಲಿ ಧೈರ್ಯ, ಸ್ವಾಭಿಮಾನ, ಸ್ವಾವಲಂಬನೆ, ಸಂಯಮ, ನ್ಯಾಯಪ್ರಿಯತೆ, ಶಿಸ್ತು, ಆರೋಗ್ಯ, ಅಹಿಂಸಾಗುಣ ಮತ್ತು ವಿಶ್ವ ಬಂಧುತ್ವವನ್ನು ಬೆಳೆಸಬೇಕೆಂಬುದೇ ಗಾಂಧೀಜಿಯವರ ಶಿಕ್ಷಣ ಸೂತ್ರವಾಗಿದೆ.

## ಡಾ। ಭೀಮರಾವ್ ಅಂಬೇಡ್ಕರ್

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದ ರಾಜಕೀಯದಲ್ಲಿ ಮತ್ತು ಸಮಾಜದ ಸುಧಾರಣೆಯಲ್ಲಿ ಡಾ। ಬಿ.ಆರ್.ಅಂಬೇಡ್ಕರ್ ಒಂದು ದೊಡ್ಡ ಹೆಸರು. ಅವರು ಗಾಂಧೀಜಿಯ ಸಂದರ್ಭದ ರಾಜಕೀಯದಲ್ಲಿ ಬಿರುಗಾಳಿಯಂತೆ ಬೀಸಿದರು. ಹಿಂದೂ ಧರ್ಮದ ವಿಶ್ಲೇಷಣೆ - ವಿಮರ್ಶೆಯಲ್ಲಿ ಲಾವರಸ ಹರಿಸಿದರು. ಒಟ್ಟಾರೆಯಾಗಿ ಅಂದಿನ ಸಾಮಾಜಿಕ ರೀತಿ ನೀತಿ ಮತ್ತು ಗಾಂಧಿ ರಾಜಕೀಯ ವಿರುದ್ಧ ಪ್ರವಾಹದಲ್ಲಿ ಬಲಶಾಲಿಯಾಗಿ ಈಸಿದರು. ಅವರು ಅಸ್ಪೃಶ್ಯರ ಮತ್ತು ಹಿಂದುಳಿದವರ ಪ್ರತಿನಿಧಿ ಮಾತ್ರವಾಗಿರಲಿಲ್ಲ, ಅವರು ಅಖಂಡ ವಿದ್ವಾಂಸರಾಗಿದ್ದರು. ಅಂತೆಯೇ ಅವಿಶ್ರಾಂತ ಕಾರ್ಯಪಟುವಾಗಿದ್ದರು.

ಡಾ। ಅಂಬೇಡ್ಕರ್ ಅಸ್ಪೃಶ್ಯ ಜನಾಂಗಕ್ಕೆ ಸೇರಿದ ಮಹಾರ ಜಾತಿಯಲ್ಲಿ ಹುಟ್ಟಿದ್ದರು. ತುಂಬ ಬಡತನ ಅವರದಾಗಿತ್ತು. ಬಡವರೂ, ಅಸ್ಪೃಶ್ಯರೂ ಆದ ಅವರು ವಿದ್ಯಾಭ್ಯಾಸ ಪಡೆಯುವಾಗ ದಾರುಣ ನೋವು ಅನುಭೋಗಿಸಿದರು. ಆದರೆ ವಿದೇಶದಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡುವಾಗ ಅಲ್ಲಿಯ ಲಿಬರಲ್ ಮತ್ತು ಮುಕ್ತ ಸಮಾಜದ ಸಜ್ಜನಿಕೆಯನ್ನು ಮೈಗೂಡಿಸಿಕೊಂಡರು. ಸತತವಾದ ಓದು, ವಿಮರ್ಶೆ, ವಿಶ್ಲೇಷಣೆ ಅವರನ್ನು ಸ್ವಯಂಸಿದ್ಧ ಮನುಷ್ಯನನ್ನಾಗಿ ಮಾಡಿತ್ತು. ಅವರ ಶಿಕ್ಷಣ ವಿಚಾರವೂ ಇವೆಲ್ಲದರಿಂದ ಪ್ರೇರಿತ.

1938ರಲ್ಲಿ ಮುಂಬೈ ಲೆಜಿಸ್ಲೇಟಿವ್‌ನಲ್ಲಿ ಗಾಂಧಿ ಪ್ರಣೀತ ವರ್ಧಾಶಿಕ್ಷಣ ಯೋಜನೆ ಚರ್ಚೆಗೆ ಬಂದಾಗ ಅದನ್ನು ಕಟುವಾಗಿ ಟೀಕಿಸಿದರು. ಅವರ ಪ್ರಕಾರ ಮೂಲೋದ್ಯೋಗ ಶಿಕ್ಷಣ ಸ್ವೀಕಾರಾರ್ಹವಲ್ಲ. ಅಂಥ ಚರಕಾ ಉದ್ಯೋಗ ಪ್ರಣೀತವಾದ ಶಿಕ್ಷಣ ಮಕ್ಕಳ ಬೌದ್ಧಿಕತೆಯನ್ನು ಕುಂದಿಸುತ್ತದೆ. ಇದರಿಂದ ಶಿಕ್ಷಣದಲ್ಲಿ ಎರಡು ವರ್ಗ ಸಿದ್ಧವಾಗುತ್ತದೆ. ಒಂದು, ಗ್ರಾಮೀಣ ಪ್ರದೇಶದ ಉದ್ಯೋಗಿ ಜನ ಶಿಕ್ಷಣ ಮಟ್ಟವನ್ನು ಕುಂದಿಸಿಕೊಂಡು

ಹಿಂದುಳಿಯುತ್ತಾರೆ. ಎರಡು, ಪಟ್ಟಣದ ಸೌಕರ್ಯ ಹೊಂದಿದ ಜನ ಶಿಕ್ಷಣ ಮಟ್ಟ ಏರಿಸಿಕೊಂಡು ಸರಕಾರದ ಉನ್ನತ ಸ್ಥಾನದ ಗುತ್ತಿಗೆ ಹಿಡಿಯುತ್ತಾರೆ.

ಅಂಬೇಡ್ಕರರ ಈ ವಿಚಾರ ವಿಶೇಷ ವಿಚಾರಕ್ಕೆ ಅರ್ಹವಾದುದು. ಹಾಗಂತ ಅವರು ಉದ್ಯೋಗವನ್ನು ನಿರಾಕರಿಸಲಿಲ್ಲ. ಅದರ ಬದಲು ತಾಂತ್ರಿಕ ಶಿಕ್ಷಣಕ್ಕೆ ಮಹತ್ವ ಕೊಡಬೇಕೆಂದರು. ತಾಂತ್ರಿಕ ಶಿಕ್ಷಣ ಪಡೆದು ಲಾಭಯುಕ್ತ ಉದ್ಯೋಗ ದೊರಕಿಸಿಕೊಳ್ಳುವುದು ಇಂದಿನ ಆವಶ್ಯಕತೆ ಎಂದೇ ಅವರ ಅಭಿಪ್ರಾಯ. ಆಮೂಲಕ ಆರ್ಥಿಕ ಸುಧಾರಣೆ ಮಾತ್ರವಲ್ಲ ಸಾಮಾಜಿಕ ಸಮಾನತೆ ಬರಲು ಸಾಧ್ಯ. ಸಮಾನತೆ ಅವರ ವಿಚಾರದಲ್ಲಿ ಸಿಂಹಪಾಲನ್ನು ಪಡೆಯುತ್ತದೆ.

ಸರಕಾರವೇ ಕಡ್ಡಾಯ ಶಿಕ್ಷಣ ತರಬೇಕೆಂದು ಅವರು ಪ್ರತಿಪಾದಿಸಿದರು. ಹಿಂದುಳಿದ ವರ್ಗದ ಅರ್ಹ ಅಭ್ಯರ್ಥಿಗಳಿಗೆ ರಾಜ್ಯದ ಬೊಕ್ಕಸದಿಂದಲೇ ವಿದ್ಯಾರ್ಥಿವೇತನ ದೊರೆಯುವಂತಾಗಬೇಕೆಂಬುದು ಅವರ ನಿಲುವು.

ಅವರು ಮುಂಬೈಯಲ್ಲಿ ಶಿಕ್ಷಣ ಪ್ರಸಾರಕ್ಕಾಗಿ ಕಾಲೇಜನ್ನು ತೆರೆದರು. ಅದಕ್ಕೆ 'ಸಿದ್ಧಾರ್ಥ ಕಾಲೇಜು' ಎಂದು ಹೆಸರಿಟ್ಟರು. ಹಾಗೆ ಹೆಸರಿಸುವ ಮೂಲಕವೇ ಅವರು ಬೌದ್ಧ ಧರ್ಮದ, ಬುದ್ಧನ ಉಪದೇಶದ ಬಗೆಗಿರುವ ತಮ್ಮ ಒಲವನ್ನು ತೋರಿದರು.

ಅಂಬೇಡ್ಕರ್ ಅಸ್ಪೃಶ್ಯತೆಯ ಶತ್ರುವಾಗಿದ್ದರು. ಅದರ ನೋವುಗಳನ್ನು ಅವರು ಸ್ವತಃ ಉಂಡಿದ್ದರು. ಅವರು ಸ್ಪಷ್ಟವಾಗಿ ''ಯಾವ ಧರ್ಮ ಮನುಷ್ಯ ಮನುಷ್ಯರನ್ನೇ ಮುಟ್ಟಿಕೊಳ್ಳದಂತೆ ನಿರ್ಬಂಧಿಸುತ್ತದೋ ಅದೊಂದು ಧರ್ಮವಲ್ಲ, ಹುಚ್ಚು'' ಎಂದರು. ಆದರೆ ಬೌದ್ಧ ಧರ್ಮ ಹಾಗಲ್ಲ. ಅದು ಸಮಾನತೆ, ಭ್ರಾತೃತ್ವವನ್ನು ಬೋಧಿಸುತ್ತದೆ. ಬೌದ್ಧ ಧರ್ಮ ಆದರ್ಶವಾದಿಯಲ್ಲ ಬದಲಾಗಿ ವೈಜ್ಞಾನಿಕತೆಯ ಪರವಾಗಿದೆ. ಅದು ಜಾತೀಯತೆ, ಅಸ್ಪೃಶ್ಯತೆಯನ್ನು ಮನ್ನಿಸುವುದಿಲ್ಲ. ಪ್ರೀತಿ ಮಾನವೀಯತೆ ಅದರ ಸಂದೇಶ. ಈ ಸಮಾನತೆ, ವೈಜ್ಞಾನಿಕತೆ ಅಂಬೇಡ್ಕರ್ ಶೈಕ್ಷಣಿಕ ವಿಚಾರದಲ್ಲಿ ಹಾಸು ಹೊಕ್ಕಾಗಿದೆ.

ಅವರು ಸ್ವತಃ ಮೇಧಾವಿ ಪ್ರೊಫೆಸರ್ ಆಗಿದ್ದರು. ಅವರು, ಪ್ರೊಫೆಸರ್ ಆಳವಾದ ಅಭ್ಯಾಸಿಯೂ, ಸಂಶೋಧಕನೂ ಆಗಿರಬೇಕೆಂದರು. ಆದರೆ ಅಷ್ಟೇ ಸಾಲದು, ಅವನು ಸ್ಪಷ್ಟವಾದ ಉಚ್ಚಾರ ಸೌಲಭ್ಯ ಉಳ್ಳವನಾಗಿರಬೇಕು. ಸತತವಾದ - ಅಧ್ಯಯನ, ಅನ್ವೇಷಣೆಯಲ್ಲಿರಬೇಕು. ಆತನಿಗೆ ಸರಿಯಾದ ಆರ್ಥಿಕ ಸೌಲಭ್ಯ ದೊರಕಬೇಕು. ಇಂದಿನ ವಿಶ್ವವಿದ್ಯಾಲಯಗಳು ರಾಷ್ಟ್ರದ ಅವಶ್ಯಕತೆಯನ್ನು ಪೂರೈಸಬೇಕು. ಅದೊಂದು ಜ್ಞಾನ ಗಂಗೋತ್ರಿಯಾಗಿರಬೇಕು. ಗುಮಾಸ್ತರನ್ನು ತಯಾರಿ ಮಾಡುವ ಫ್ಯಾಕ್ಟರಿಗಳಾಗಬಾರದು.

ವಿದ್ಯಾರ್ಥಿಗಳು ಒಂದು ಧ್ಯೇಯವನ್ನು ಗುರಿಯಾಗಿಸಿಕೊಂಡಿರಬೇಕು. ಆ ಗುರಿ

ಸಾಧನೆಗಾಗಿ ಸತತ ಪರಿಶ್ರಮಪಡಬೇಕು. ನಿರಂತರ ಅಧ್ಯಯನದಲ್ಲಿ ಇರಬೇಕೇ ಹೊರತು ಕಾರ್ಯ ನಿರತ ರಾಜಕೀಯಕ್ಕೆ ಬೀಳಬಾರದು.

ಗ್ರಂಥಾಲಯಕ್ಕೆ ಅವರ ವಿಚಾರದಲ್ಲಿ ಮಹತ್ವದ ಸ್ಥಾನವಿದೆ. ವಿದ್ಯಾನಿಲಯಗಳು ಉತ್ತಮ ಗ್ರಂಥಾಲಯ ಹೊಂದಿರಬೇಕು.

ಹೆಣ್ಣುಮಕ್ಕಳ ಶಿಕ್ಷಣದ ಕುರಿತು ಅವರ ವಿಚಾರ ಕ್ರಾಂತಿಕಾರಕವಲ್ಲ. ಮ್ಯಾಟ್ರಿಕ್ಯುಲೇಶನ್ ತನಕ ಗಂಡು-ಹೆಣ್ಣುಗಳಿಗೆ ಒಂದೇ ಬಗೆಯ ಶಿಕ್ಷಣ ಇರಲಿ, ಮುಂದೆ ಹೆಣ್ಣುಮಕ್ಕಳಿಗೆ ಅಂಥ ಶಿಕ್ಷಣದ ಅವಶ್ಯಕತೆಯೇನೂ ಇಲ್ಲ ಎಂಬುದು ಅವರ ಅಂಬೋಣ.

ಒಟ್ಟಾರೆ ಅವರ ವಿಚಾರದಲ್ಲಿ ಮಾನವೀಯತೆಯನ್ನು ಬೆಳೆಸುವ ನೀತಿ ಶಿಕ್ಷಣ, ಆಧುನಿಕ ಜಗತ್ತಿಗೆ ಪೂರಕವಾದ ಉದ್ಯೋಗ ಶಿಕ್ಷಣ, ಉನ್ನತ ಮಟ್ಟದ ಬೌದ್ಧಿಕತೆಯನ್ನು ಬೆಳೆಸುವ ಕಾಲೇಜುಶಿಕ್ಷಣ, ಸಾರ್ವಜನಿಕ ಕಡ್ಡಾಯ ಶಿಕ್ಷಣ, ಹಿಂದುಳಿದವರಿಗೆ ಶಿಕ್ಷಣ ಪ್ರೋತ್ಸಾಹ ಇವು ಮುಖ್ಯವಾಗಿವೆ.

**ಸರ್‌ಸೈಯದ್ ಅಹ್ಮದ್‌ಖಾನ್**

ಭಾರತದ ಶೈಕ್ಷಣಿಕ ಮತ್ತು ಸಮಾಜ ಸುಧಾರಣಾ ಆಕಾಶಗಂಗೆಯಲ್ಲಿ ಪ್ರಜ್ವಲಿಸುವ ನಕ್ಷತ್ರದ ಹಾಗೆ ಸರ್‌ಸೈಯದ್ ಅಹ್ಮದ್‌ಖಾನ್ ಕಂಗೊಳಿಸುತ್ತಾರೆ. ಅವರ ಸುಧಾರಣಾವಾದಿ ಮನೋಭಾವ ಉಜ್ವಲವಾಗಿತ್ತು. ಆ ತೀವ್ರತೆಯನ್ನು ಅಂದಿನ ಅಂದರೆ 19ನೇ ಶತಮಾನದ ಉತ್ತರಾರ್ಧ (1957ರ ಸಿಪಾಯಿ ಬಂಡಾಯದ ನಂತರ) ದ ಮುಸ್ಲಿಮ್ ಸಮಾಜ ವಿರೋಧವಿಲ್ಲದೆ ಸ್ವೀಕರಿಸುವಷ್ಟು ಪಕ್ವತೆಯನ್ನು ಹೊಂದಿರಲಿಲ್ಲ. ಅಂತೆಯೇ ಅವರು ಬಿರುಗಾಳಿಯ ಮಧ್ಯೆ ತುಸುವೂ ಚಂಚಲಿಸದ ನಕ್ಷತ್ರದಂತೆ ತೋರುತ್ತಾರೆ.

ಅಂದಿನ ಮುಸ್ಲಿಮ್ ಸಮಾಜವೆಂದರೆ ಅತ್ಯಂತ ಹಿಂದುಳಿದ ಸಮಾಜವಾಗಿತ್ತು. ಅನಕ್ಷರತೆ, ಬಡತನ, ಮೌಢ್ಯ, ಧಾರ್ಮಿಕ ಕಂದಾಚಾರದಿಂದ ತೇಜೋಹೀನವಾಗಿತ್ತು. ಧರ್ಮ ತನ್ನ ನಿಜವಾದ ಅಂತಸ್ಸತ್ವವನ್ನು ಕಳಕೊಂಡು ಕೇವಲ ಕರ್ಮಠತನಕ್ಕೂ, ಹುಂಬತನಕ್ಕೂ ಪಾತ್ರವಾಗಿತ್ತು. ಇಂಥ ಸಂದರ್ಭದಲ್ಲಿ ಇಡೀ ಸಮಾಜವು ಅದರ ಶೈಕ್ಷಣಿಕ, ಧಾರ್ಮಿಕ ಮತ್ತು ಸಾಮಾಜಿಕ ಪುನರ್ಜೀವಕ್ಕೆ ಪಕ್ಕಾಗಿತ್ತು. ಅಂಥ ಒಂದು ಯುಗ ಪರಿವರ್ತನೆಯ ಕರ್ಣಧಾರರಾಗಿ ಸರ್‌ಸೈಯದ್ ಅಹ್ಮದ್‌ಖಾನ್ ಮೂಡಿ ಬಂದರು.

ಸಹಜವಾಗಿ ಅವರು ಬಯಸಿದ್ದರೆ, ಇಂಗ್ಲೆಂಡಿನಲ್ಲೋ ಅಥವಾ ಇಂಡಿಯಾದಲ್ಲಿಯೇ ಸುಖವಾಗಿ ಐಶಾರಾಮದಿಂದ ಬದುಕಬಹುದಾಗಿತ್ತು. ಆದರೆ ಅವರ ಮನಸ್ಸು ಅದಕ್ಕೆ ಒಡಂಬಡಲಿಲ್ಲ. ತನ್ನ ಜನತೆ ಹೀಗೆ ಕತ್ತಲೆಯಲ್ಲಿ ಮುಳುಗಿರುವಾಗ ತಾನೊಬ್ಬ ಭೋಗ ಜೀವನ ನಡೆಸುವುದು ಆ ಅಂತ:ಕರಣಕ್ಕೆ ಸಾಧ್ಯವಾದುದಾಗಿರಲಿಲ್ಲ. ಆಗಲೇ ಹಿಂದುಗಳಲ್ಲಿ

ರಾಜಾರಾಮ್ ಮೋಹನ್‌ರಾಯರಿಂದ ಶುರುವಾಗಿ ಸಾಮಾಜಿಕ ಸುಧಾರಣೆ, ಶೈಕ್ಷಣಿಕ ಮುನ್ನಡೆ, ರಾಜಕೀಯ ಪ್ರಜ್ಞೆ ಮೂರು-ನಾಲ್ಕು ದಶಕಗಳಷ್ಟು ಮುಂದೆ ಹೋಗಿತ್ತು ಎಂದು ಅವರು ಅಭಿಪ್ರಾಯಪಡುತ್ತಾರೆ. ಅವರ ಹೃದಯ ತನ್ನ ಸಮಾಜದ ಸುಧಾರಣೆಗಾಗಿ, ಪ್ರಗತಿಗಾಗಿ ಎಷ್ಟೊಂದು ತೀವ್ರವಾಗಿ ಮಿಡಿಯುತ್ತಿತ್ತೆನ್ನಲು ಒಂದು ಉದಾಹರಣೆಯನ್ನು ನೋಡಬಹುದು. ಸುಧಾರಣಾ ವಿರೋಧಿಯಾದ ಮುಸ್ಲಿಮರನ್ನು ಒಲಿಸಿಕೊಳ್ಳಲು ಮತ್ತು ಅವರಿಗೆ ವೈಜ್ಞಾನಿಕ ಶಿಕ್ಷಣದ ಮಹತ್ವವನ್ನು ಮನಗಾಣಿಸಲು ಉದ್ಯುಕ್ತವಾಗಬೇಕೆಂಬ ಉದ್ದೇಶದಿಂದ ಮುಸ್ಲಿಮ್ ಜನರಲ್ಲಿ ಕಲಿಕೆಯ ಉನ್ನತಿ ಮತ್ತು ಪ್ರಗತಿಯ ಸಾಧನೆಗಾಗಿ ಒಂದು ಸಮಿತಿಯನ್ನು ಸ್ಥಾಪಿಸಲು 1870ರಲ್ಲಿ ಬನಾರಸ್‌ನಲ್ಲಿ ಸಭೆ ಕರೆಯಲಾಗಿತ್ತು. ಅದಕ್ಕೆ ಖಾನರ ಪ್ರೋತ್ಸಾಹಕರಾದ ನವಾಬ್ ಮೊಹಸಿನ್ ಉಲ್‌ಮುಲ್ಕ್-ಮುನ್ನಾದಿನ ರಾತ್ರಿಯೇ ಬಂದಿದ್ದರು. ಖಾನ್ ತಮ್ಮ ರೂಮಿನಲ್ಲಿಯೇ ಅವರ ವಸತಿ ಏರ್ಪಡಿಸಿದ್ದರು. ರಾತ್ರಿ ಮಾತಾಡಿ ಮಲಗಿದಾಗ ನವಾಬರಿಗೆ ಎರಡು ಗಂಟೆಯ ವೇಳೆ ಎಚ್ಚರವಾಯಿತು. ಖಾನ್ ಅಲ್ಲಿ ಇದ್ದಿರಲಿಲ್ಲ. ಹೊರಗೆ ಬಂದು ನೋಡಿದರೆ ಖಾನ್ ಕಣ್ಣೀರು ಸುರಿಸುತ್ತಾ ಹೊರಗೆ ತಿರುಗಾಡುತ್ತಿದ್ದರು. ನವಾಬರಿಗೆ ಆಶ್ಚರ್ಯವಾಗಿ ಏನಾದರೂ ಅಪಾಯದ ಸುದ್ದಿ ಮನೆಯಿಂದ ಬಂತೆ? ಎಂದು ವಿಚಾರಿಸಿದಾಗ ಖಾನ್, 'ಹಾಂ! ನನ್ನ ಜನಾಂಗದ ದುರವಸ್ಥೆಯೇ! ಅವರು ಪ್ರಗತಿ ದಾರಿಯನ್ನೇ ಕಂಡುಕೊಳ್ಳುತ್ತಿಲ್ಲ. ಇದಕ್ಕಿಂತ ದು:ಖ ಆಘಾತ ಮತ್ತಾವುದಿದೆ!' ಎಂದರು.

ಮುಸ್ಲಿಮರು ಧಾರ್ಮಿಕ, ಆರ್ಥಿಕ ವೈಜ್ಞಾನಿಕ ಹೀಗೆ ಸರ್ವವಿಧದಲ್ಲಿ ಪ್ರಗತಿ ಸಾಧಿಸಬೇಕೆಂದು ಬಯಸಿದ್ದರು. ಅವರು ಮುಸ್ಲಿಮರನ್ನು ಮಧ್ಯಕಾಲದ ಕುರುಡು ಗುಹೆಯಿಂದ ಆಧುನಿಕ ಕಾಲದ ನಾಗರಿಕ ಜಗತ್ತಿಗೆ ತರಬಯಸಿದ್ದರು. ಇದಕ್ಕೆ ಧರ್ಮ ಅಡ್ಡಬರುತ್ತಿತ್ತೆಂದು ಅವರ ಖಚಿತವಾದ ಅಭಿಪ್ರಾಯವಾಗಿತ್ತು. ಹಾಗಂತ ಅವರು ಧರ್ಮ ವಿರೋಧಿಗಳಾಗಲಿ, ನಾಸ್ತಿಕರಾಗಲಿ ಆಗಿರಲಿಲ್ಲ. ಅವರಿಗೆ ಪ್ರವಾದಿ ಪೈಗಂಬರರಲ್ಲಿ ಅಪಾರವಾದ ನಂಬಿಕೆ ಮತ್ತು ಕುರಾನಿನಲ್ಲಿ ಶ್ರದ್ಧೆ ಇತ್ತು. ಆದರೆ ಧರ್ಮ ಮಾನವನ ಪ್ರಗತಿಗೆ ತಡೆಯೊಡ್ಡುವುದನ್ನು ಸಹಿಸುತ್ತಿರಲಿಲ್ಲ. ಕಾಲದ ಓಟಕ್ಕೆ ತಕ್ಕಾಗಿ ಅಂದಿನ ಮುಸ್ಲಿಮರು ಹೆಜ್ಜೆಯಿಡುವುದಿಲ್ಲವೆಂದೇ ನಂಬಿದ್ದರು. ''ಭಾರತೀಯ ಮುಸ್ಲಿಮರು ಸ್ವತಂತ್ರವಾಗಿ ವಿಚಾರ ಮಾಡುವುದನ್ನು ಕಲಿಯದಿದ್ದರೆ ಅವರು ಸಂಪತ್ತನ್ನು, ಗೌರವವನ್ನು, ಅಂತಸ್ತನ್ನು ಪಡೆಯಲಾರರು; ಅವರ ಪಾಲಿಗೆ ನಾಗರಿಕತೆಯೇ ಇರುವುದಿಲ್ಲ'' ಎನ್ನುತ್ತಾರೆ. ಮತ್ತೆ ''False religion is doubtless an obstacle to civilised life, but genuine religion can never be obstacle to human progress'' (ನಿಜವಾದ ಧರ್ಮ ಮಾನವನ ಪ್ರಗತಿಗೆಂದೂ ತಡೆಯಲ್ಲ. ಆದರೆ ಪ್ರಚಲಿತ ನಕಲಿಧರ್ಮ ನಿಶ್ಚಯವಾಗಿ ಪ್ರತಿಗಾಮಿಯಾ

ದುದು) ನಿಜವಾದ ಧರ್ಮವೆಂದರೆ ಇಡೀ ಮಾನವ ಕುಟುಂಬದ ಪ್ರೀತಿ ಮತ್ತು ಸೇವೆಯೇ ಆಗಿದೆ. ಪ್ರವಾದಿ ಅದಕ್ಕಾಗಿಯೇ ವ್ಯಕ್ತಿಗಳನ್ನು ನೇಮಿಸಿದ್ದಾರೆ ಎಂದು ಅವರು ನಂಬಿದ್ದರು. ಈ ಮಾತು ಮುಸ್ಲಿಮ್ ಧರ್ಮದವರಿಗೆ ಮಾತ್ರವಲ್ಲ ಹಿಂದೂ, ಮುಸ್ಲಿಮ್, ಕ್ರೈಸ್ತ, ಸಿಖ್‌ಮುಂತಾದ ಎಲ್ಲ ಧರ್ಮದ ಹೃದಯ ಸಾರವೇ ಆಗಿದೆ. ಸ್ವಾರ್ಥ, ಸ್ವಾಭಿಮಾನಹೀನತೆ, ಆಲಸ್ಯ, ಪರಧರ್ಮದವರನ್ನು ಸಹಿಸದಿರುವುದು, ಮತಾಂಧತೆ, ಬಹುಪತ್ನಿತ್ವ ಇಂಥವುಗಳನ್ನು ಖಡ್ಗದಲ್ಲಿ ಕತ್ತರಿಸುವಂತೆ ಖಂಡಿಸಿದರು. ಇಂಥವುಗಳ ರೂಢಿ ಮತ್ತು ಆಚರಣೆಯಿಂದ ಪ್ರಗತಿಯೂ ಇಲ್ಲ, ಸಂಸ್ಕೃತಿಯೂ ಇಲ್ಲ ಎಂದರು. ಶಿಕ್ಷಣ ಇಲ್ಲದ ಮನುಷ್ಯ ಜೇನು ತಾಗದ ಬಂಡೆಗಲ್ಲಿನಂತೆ ಎಂದರು. ಎಂತಲೇ ಅವರು ಮುಸ್ಲಿಮ್ ಸಮಾಜದ ರಾಜಕೀಯ, ಆರ್ಥಿಕ, ಸಮಾಜಿಕ, ಸಾಂಸ್ಕೃತಿಕ ಪ್ರಗತಿಗೆ ಶಿಕ್ಷಣ ಪ್ರಸಾರವೇ ಸರ್ವರೋಗ ಪರಿಹಾರ ಸಿದ್ಧೌಷದ ಎಂದು ಸ್ವೀಕರಿಸಿದರು. ಆ ದಿಸೆಯಲ್ಲಿ ಪಣತೊಟ್ಟು ಹೋರಾಡಿದರು. ಶಿಕ್ಷಣ ಸಂಸ್ಥೆಯನ್ನು ಮುನ್ನಡೆಸಲು ಹಣ ಸಂಗ್ರಹಿಸಲು ತಮ್ಮ ಸ್ನೇಹಿತರನ್ನೂ, ಹಿತೈಷಿಗಳನ್ನೂ ಕಾಡಿದರು. ತಮಗೆ ಸತ್ಕಾರ ಮಾಡಬಯಸಿದವರಿಂದ ಅದರ ಖರ್ಚಿನ ಹಣ ತೆಗೆದುಕೊಂಡು ಅದನ್ನು ಶಿಕ್ಷಣ ನಿಧಿಗೆ ಸೇರಿಸಿದರು. ತಾವೇ ಸ್ವತ: ಸಂಗೀತ ಹಾಡಿ ಹಣಬೇಡಿದರು. ಶಿಕ್ಷಣ ಅವರ ಜೀವನದ ಉಸಿರಾಗಿತ್ತು.

1859ರಲ್ಲಿ ಸರ್‌ಸೈಯದ್ ಖಾನ್ ಮುರಾದಾಬಾದ್‌ನಲ್ಲಿ ಪರ್ಶಿಯನ್ ಮದರಸಾ ಸ್ಥಾಪಿಸಿದರು. ಸಾರ್ವಜನಿಕರಿಗೆ ಶಿಕ್ಷಣ ಕೊಡಲೆಂದು ಮತ್ತು ಜನರಲ್ಲಿ ವೈಜ್ಞಾನಿಕ ಎಚ್ಚರ ಮೂಡಿಸಲೆಂದು ವಿಜ್ಞಾನ ಸಂಘ (Scientific Society)ವನ್ನು ತೆರೆದರು. ನಂತರ 1864ರಲ್ಲಿ ಗಾಝಿಪುರದಲ್ಲಿ ಶಾಲೆಯನ್ನು ತೆರೆದರು ಮತ್ತು 1875ರಲ್ಲಿ ಅಲೀಘಡ ಕಾಲೇಜನ್ನು - ವಿಶ್ವವಿದ್ಯಾನಿಲಯವನ್ನು ತೆರೆದರು. ಆದರೆ ಅವರು ಸ್ಪಷ್ಟವಾಗಿ ಹೇಳಿದರು: ಇವೆಲ್ಲ ಮತೀಯ ಹಿತದ ಸಂಸ್ಥೆಯಾದರೂ ಕೋಮುವಾದಿ ಸಂಸ್ಥೆಯಲ್ಲ. ವಿಜ್ಞಾನ ಸಂಘದ ಮುಖಾಂತರ ಹಿಂದೂ-ಮುಸ್ಲಿಮರನ್ನು ಒಟ್ಟಿಗೆ ತರಬಯಸಿದರು. ಅಲೀಘಡ ಕಾಲೇಜಿಗೆ ಅನೇಕ ಹಿಂದುಗಳು ಖೋಲಿಗಳನ್ನು ದಾನಮಾಡಿದ್ದಾರೆ. ಕಮಿಟಿಯಲ್ಲಿ ಹಿಂದೂ ಸದಸ್ಯರೂ ಇದ್ದರು. ಅವರು ಕೊನೆ ಉಸಿರು ಎಳೆಯುವಾಗ ಕಾಲೇಜಿನಲ್ಲಿ 285 ಮಂದಿ ಮುಸ್ಲಿಮ್‌ವಿದ್ಯಾರ್ಥಿಗಳೂ 64 ಹಿಂದೂ ವಿದ್ಯಾರ್ಥಿಗಳೂ ಓದುತ್ತಿದ್ದರು. ಅಲ್ಲಿ ಉರ್ದು, ಅರೇಬಿಕ್, ಪರ್ಶಿಯನ್ ಜೊತೆ ಸಂಸ್ಕೃತ ಕೂಡಾ ಅಭ್ಯಾಸದ ವಿಷಯವಾಗಿತ್ತು. ಹಿಂದೂ-ಮುಸ್ಲಿಮ್ ಸೋದರರೆಂದೂ, ಈ ಎರಡೂ ಧರ್ಮೀಯರ ಮಧ್ಯೆ ಸಾಮರಸ್ಯದಿಂದ ಮಾತ್ರ ಇಬ್ಬರ ಪ್ರಗತಿಯೂ ಸಾಧ್ಯ; ಇಲ್ಲದಿದ್ದರೆ ಇಬ್ಬರದೂ ನಾಶ ಎಂದು ಅವರು ತಮ್ಮ ಒಂದು ಭಾಷಣದಲ್ಲಿ ಹೇಳಿದ್ದಾರೆ.

ಅವರು ಶಿಕ್ಷಣ ಮುಖಾಂತರ ಹಳೆಯ ಮತ್ತು ಹೊಸ; ಪಶ್ಚಿಮ ಮತ್ತು ಪೂರ್ವದ

ಮಧ್ಯೆ ಸಾಮರಸ್ಯ ಸಂಬಂಧವನ್ನು ಬೆಸೆಯ ಬಯಸಿದರು. ಬಾಲಕರಿಗೆ ತಮ್ಮ ಮಾತೃಭಾಷಾ ಮಾಧ್ಯಮದಲ್ಲಿ ಶಿಕ್ಷಣ ಕೊಡುವುದು ಒಳಿತೆಂದು ಅವರು ತಿಳಿದಿದ್ದರು. ಆದರೆ ಪಾಶ್ಚಾತ್ಯ ವಿಷಯ-ವಿಜ್ಞಾನ, ಚರಿತ್ರೆ, ಔಷಧ ಮುಂತಾದ ವಿಷಯವನ್ನು ಕಲಿಯುವ ಅಗತ್ಯ ಇರುವುದರಿಂದ ಇಂಗ್ಲೀಷ್ ಶಾಲೆಯಲ್ಲಿ ಇಂಗ್ಲೀಷ್ ಮಾಧ್ಯಮವೇ ಅಗತ್ಯ ಎಂದರು. ಸೆಕೆಂಡರಿ ಶಾಲೆಯ ತನಕ ಉರ್ದು ಮಾಧ್ಯಮವಾಗಿತ್ತು.

ಅವರು ಶಿಕ್ಷಣ ತರಬೇತಿಯಲ್ಲಿ ಮೂರು ಹಂತವನ್ನು ಗುರುತಿಸಿದರು. ಆರರಿಂದ-ಹನ್ನೊಂದು, ಹನ್ನೆರಡರಿಂದ-ಹದಿನೆಂಟು ಮತ್ತು ಹದಿನೆಂಟರಿಂದ ಮುಂದೆ - ಈ ಎಲ್ಲ ಹಂತಗಳಲ್ಲೂ ಧಾರ್ಮಿಕ ಶಿಕ್ಷಣದ ಅವಶ್ಯಕತೆಯಿತ್ತು.

ವಿಜ್ಞಾನದ ವಿಷಯಕ್ಕೆ ಅವರು ಹೆಚ್ಚು ಮಹತ್ವವನ್ನು ಕೊಡುತ್ತಿದ್ದರು. ಆಗಿನ ವಿಶ್ವವಿದ್ಯಾನಿಲಯಗಳು ಕೊಡುತ್ತಿರುವ ಜ್ಞಾನ ಅಲ್ಪವಾದುದೆಂದೇ ಅವರು ಹೇಳಿದರು. ಅಂತೆಯೇ ತಮ್ಮ ಕಾಲೇಜು ಆಕ್ಸ್‌ಫರ್ಡ್, ಕ್ಯಾಂಬ್ರಿಜ್ ವಿ.ವಿ.ಯಂತೆ ಆಗಬೇಕೆಂದರು. 'ಶಿಕ್ಷಣದ ನಿಜವಾದ ಉದ್ದೇಶವೆಂದರೆ ಜ್ಞಾನವನ್ನು ವೃದ್ಧಿಪಡಿಸುವುದೂ, ಸೃಷ್ಟಿಶೀಲ ಮತ್ತು ಸಾಮರಸ್ಯದ ವ್ಯಕ್ತಿತ್ವವನ್ನು ಬೆಳೆಸುವುದೇ ಆಗಿದೆ' ಎಂದು ಅವರು ನಂಬಿದ್ದರು.

ತಾಂತ್ರಿಕ-ಯಂತ್ರಶಿಕ್ಷಣ, ವಾಯುಶಾಸ್ತ್ರ, ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಶಿಕ್ಷಣ, ಇತರ ವಿಜ್ಞಾನ, ತತ್ವಶಾಸ್ತ್ರಗಳ ಶಿಕ್ಷಣಕ್ಕೆ ವ್ಯವಸ್ಥೆ ಮಾಡಿದರು. ಒಕ್ಕಲುತನದ ಶಿಕ್ಷಣದ ಬಗ್ಗೆ ಅವರು ಹೆಚ್ಚು ಒತ್ತುಕೊಡುತ್ತಿದ್ದರು. ಇದರ ಕುರಿತು ಅನೇಕ ಪುಸ್ತಕಗಳನ್ನು ಅವರು ಉರ್ದುವಿಗೆ ಭಾಷಾಂತರಿಸಲು ಹಚ್ಚಿದರು. ಆದರೆ ಕೊನೆಗೆ ಅವರು ಆಯಾ ಭಾಷೆಯಲ್ಲಿಯೇ ಸ್ವತಂತ್ರ ಕೃತಿ ಹುಟ್ಟಬೇಕೇ ಹೊರತು ಈ ಅನುವಾದಗಳು ಕ್ರಿಯಾಶೀಲತೆಯನ್ನು ಕುದುರಿಸಲಾರದೆಂದುಕೊಂಡರು.

ಚರಿತ್ರೆ-ಇತಿಹಾಸಕ್ಕೆ ಅವರ ದೃಷ್ಟಿಯಲ್ಲಿ ಮಹತ್ವದ ಸ್ಥಾನವಿತ್ತು. ಚರಿತ್ರೆಯೆಂದರೆ ಆಳರಸರ ದಿನಚರಿಯ ದಾಖಲೆಯಲ್ಲ ಎಂದು ಅವರು ಹೇಳಿದರು. ಇತಿಹಾಸವೆಂದರೆ ಜನಜೀವನದ ಏಳು ಬೀಳುಗಳ ಜೀವಂತ ದಾಖಲೆ. ಹಿಂದಿನ ಇತಿಹಾಸದ ವಿಶ್ಲೇಷಣೆಯಲ್ಲಿ ಇಂದಿನ ಬದುಕನ್ನು ಸುಗಮಗೊಳಿಸಿಕೊಳ್ಳಬೇಕೆಂಬುದು ಅವರ ಅಭಿಪ್ರಾಯ.

ಇತಿಹಾಸದ ಕುರಿತು ಈ ಗ್ರಹಿಕೆ-ಬಹಳ ಮಹತ್ವದ್ದಾಗಿದೆ. ಇತಿಹಾಸದ ಅಭ್ಯಾಸ, ಯಾವ ಸನ್ನಿವೇಶದಲ್ಲಿ ನಮ್ಮ ಹಿರಿಯರು ಹೇಗೆ ಬದುಕಿದರು. ಅಲ್ಲಿಯ ದೋಷ, ಔಚಿತ್ಯ ಯಾವುದು. ಇದರಿಂದ ನಮ್ಮ ಇಂದಿನ ಬದುಕು ಸಮೃದ್ಧವೂ, ಸಾಮರಸ್ಯ ಪೂರ್ಣವೂ ಆಗಬೇಕಾದರೆ ನಾವು ಯಾವುದನ್ನು ಗ್ರಹಿಸಬೇಕು ಎಂಬುದನ್ನು ಇತಿಹಾಸದಿಂದ ತಿಳಿಯಬೇಕು. ಹಾಗಾದಾಗಲೇ ನಮ್ಮ ಮಧ್ಯೆ ಇರುವ ಅನೇಕ ಗಂಡಾಂತರಗಳು

ನಿವಾರಣೆಯಾಗಬಲ್ಲದು.

ಒಟ್ಟಾರೆಯಾಗಿ ಅವರ ಶಿಕ್ಷಣದ ಸೂತ್ರಗಳು ಹೀಗೆ ಇದ್ದವು.

1. ಧಾರ್ಮಿಕ, ಸತ್ಯದ ಕುರಿತು ಜ್ಞಾನ ಹಾಗೂ ಸಂಪ್ರದಾಯ ಮತ್ತು ವೈಚಾರಿಕತೆಯ ಮಧ್ಯೆ ಸಾಮರಸ್ಯವನ್ನು ಬೆಳೆಸುವುದು.

2. ವ್ಯಕ್ತಿಯ ಸಚ್ಚಾರಿತ್ರ್ಯವನ್ನು ರೆಸಿಡೆನ್ಶಿಯಲ್ ಸ್ಕೂಲ್ ಮುಖಾಂತರ ಬೆಳೆಸುವುದು. ಒಳ್ಳೆಯ ರೂಢಿಯನ್ನು ರೂಢಿಸುವುದು.

3. ಆಧುನಿಕ ವಿಜ್ಞಾನವನ್ನು ಕಲಿಸುವುದರ ಮೂಲಕ ಅವರಲ್ಲಿ ಲೌಕಿಕ ಮತ್ತು ವೈಚಾರಿಕ ಜಾಗೃತಿಯನ್ನು ವೃದ್ಧಿಪಡಿಸುವುದು.

ಈ ಧ್ಯೇಯಗಳಿಗಾಗಿ ಅವರು ತಮ್ಮ ಜೀವಿತವನ್ನೇ ಮುಡಿಪಿಟ್ಟರು. ಅವರ ಈ ಆಧುನಿಕ ಮನೋಭಾವ, ಸ್ಪಷ್ಟವಾದ ನಿರ್ಧಾರವು ಸಂಪ್ರದಾಯವಾದಿಗಳಿಂದ, ಮೌಲ್ವಿಗಳಿಂದ ತೀವ್ರವಾದ ವಿರೋಧವನ್ನು ಎದುರಿಸಬೇಕಾಯಿತು. ಅದು ಎಷ್ಟರ ಮಟ್ಟಿಗೆ ಇತ್ತೆಂದರೆ ಅವರಿಗೆ ಬಹಿಷ್ಕಾರದ, ಕೊಲೆಯ ಬೆದರಿಕೆಯನ್ನೂ ಒಡ್ಡಲಾಯಿತು. ಆದರೆ ತನ್ನ ಜನಾಂಗದ ಪ್ರಗತಿಯೇ ತನ್ನ ಜೀವನ ಯಾತ್ರೆಯ ಗುರಿ ಎಂದು ನಂಬಿದ ಧೀರ ವ್ಯಕ್ತಿತ್ವದ ಖಾನ್, ಅಳುಕದೆ, ಅಂಜದೆ ತಮ್ಮ ಧ್ಯೇಯ ಸಾಧನೆಗಾಗಿ ದುಡಿದರು. ಹಿಂದುಗಳ ಸಾಮಾಜಿಕ-ದಾರ್ಮಿಕ ಪುರಜ್ಜೀವನದ ಚರಿತ್ರೆಯಲ್ಲಿ ರಾಜಾರಾಮ್ ಮೋಹನ್ ರಾಯರಿಗೆ ಯಾವ ಉನ್ನತ ಸ್ಥಾನವಿದೆಯೋ ಅಂತಹದೇ ಸ್ಥಾನ ಮುಸ್ಲಿಮ್ ಪುನರುಜ್ಜೀವನದಲ್ಲಿ ಸರ್‌ಸೈಯದ್ ಅಹ್ಮದ್‌ಖಾನರಿಗೆ ಇದೆ.

## ಮೌಲಾನ ಅಬುಲ್‌ಕಲಾಮ್ ಆಝಾದ್

ಮೌಲಾನ ಅಬುಲ್ ಕಲಾಮ್ ಆಝಾದ್ ನಮ್ಮ ರಾಷ್ಟ್ರೀಯ ಮಹಾಪುರುಷರಲ್ಲಿ ಒಬ್ಬರು. ಭಾರತದ ಸ್ವಾತಂತ್ರ್ಯ ಹೋರಾಟದೊಡನೆ ಅವರು ದೀರ್ಘಕಾಲ ಮುಖ್ಯ ಪಾತ್ರವನ್ನು ವಹಿಸಿದವರು. ಆರು ವರ್ಷಗಳ ದೀರ್ಘಕಾಲ ಅವರು ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು. ಹೋರಾಟದ ಕಠಿಣ ಸಂದರ್ಭದಲ್ಲಿ ಅದನ್ನು ಮುನ್ನಡೆಸಿದರು. ಮಹಾತ್ಮಾ ಗಾಂಧೀಜಿಯ ಅಹಿಂಸಾ ತತ್ವವನ್ನು ಬಲಪಡಿಸಿದವರು ಅವರು. ಅಖಂಡ ಭಾರತದ ಸ್ವಾತಂತ್ರ್ಯಕ್ಕಾಗಿ ಅವರ ವಿಶ್ವಾಸ ಅಚಲವಾಗಿತ್ತು.

ಅವರು ಅಸಾಧಾರಣ ಮೇಧಾವಿಗಳಾಗಿದ್ದರು. ಅವರಿಗೆ ಪೌರಾತ್ಯ ಮತ್ತು ಪಾಶ್ಚಾತ್ಯ ಧರ್ಮ, ತತ್ವಜ್ಞಾನಗಳ ಆಳವಾದ ಅಭ್ಯಾಸವಿತ್ತು. ಜಾತ್ಯಾತೀತತೆ (ಸೆಕ್ಯುಲರಿಸಂ) ಅವರ ಅಂತರಂಗದ ಉಸಿರಾಗಿತ್ತು. ಸಹನೆ, ಭಾವನೆಯ ಮೇಲೆ ಹಿಡಿತ, ಕಾರ್ಯನಿರ್ಧಾರಕ ಶಕ್ತಿ, ಪ್ರಸಂಗಾವಧಾನತೆ, ಧೈರ್ಯ, ಜನರ ಮೇಲಿನ ಪ್ರೀತಿ ಅವರ ವ್ಯಕ್ತಿತ್ವದ ಅವಿಭಾಜ್ಯ ಅಂಗವಾಗಿದ್ದವು. ಇಂಥ ಒಬ್ಬ ಅನುಭವೀ ಮೇಧಾವಿ ಸ್ವತಂತ್ರ ಭಾರತದ ಶಿಕ್ಷಣ

ಮಂತ್ರಿಯಾಗಿ ದೊರಕಿದ್ದು ಒಂದು ಘನತೆಯ ಸಂಗತಿಯಾಗಿತ್ತು. ಮೌಲಾನಾ ಸ್ವತಂತ್ರ ಭಾರತದ ಶಿಕ್ಷಣ ಶಿಲ್ಪಿಯಾಗಿದ್ದಾರೆ. ವಲ್ಲಭಬಾಯಿ ಪಟೇಲರನ್ನು ಭಾರತದ ಒಕ್ಕೂಟದ ಶಿಲ್ಪಿಯೆಂದೂ, ಪಂಡಿತ್ ಜವಹರಲಾಲ್ ನೆಹರೂ ಅವರನ್ನು ಪಂಚಶೀಲ ತತ್ವದ ಶಿಲ್ಪಿಯೆಂದೂ, ಹೇಳುವುದುಂಟು. ಆ ಸಾಲಿನಲ್ಲಿ ಮೌಲಾನಾ ಆಧುನಿಕ ಭಾರತದ ಶಿಕ್ಷಣ ಶಿಲ್ಪಿಯಾಗಿದ್ದಾರೆ. ಇಂದು ಅನೇಕ ಪರಿವರ್ತನೆಯೊಡನೆಯೂ ಶಿಕ್ಷಣ ಅವರದೇ ದಾರಿಯಲ್ಲಿ ಮುಂದುವರಿಯುತ್ತಿದೆ.

ಅವರ ಶೈಕ್ಷಣಿಕ ವಿಚಾರವನ್ನು ಐದು ಅಂಶಗಳಲ್ಲಿ ಕಲಿಕ್ ಅಹ್ಮದ್ ನಿಝಾಮರು ನಿರೂಪಿಸುತ್ತಾರೆ:

1) ಶಾಲಾ ವಯಸ್ಸಿನ ಎಲ್ಲ ಮಕ್ಕಳಿಗೆ ಕಡ್ಡಾಯ ಶಿಕ್ಷಣ, ಹೈಸ್ಕೂಲ್ ವರೆಗೆ ಉಚಿತ ಶಿಕ್ಷಣ.

2) ಅನಕ್ಷರಸ್ಥ ಪ್ರೌಢರಿಗೆ ಸಾಮಾಜಿಕ ಶಿಕ್ಷಣ.

3) ಸೆಕೆಂಡರಿ ಮತ್ತು ಉನ್ನತ ಶಿಕ್ಷಣಕ್ಕೆ ಸಾಲಸೌಲಭ್ಯವನ್ನು ಹೆಚ್ಚಿಸುವುದು ಮತ್ತು ಶಿಕ್ಷಣ ಮಟ್ಟವನ್ನು ಎತ್ತರಿಸುವುದು.

4) ಭಾರತದ ಅವಶ್ಯಕತೆಗೆ ತಕ್ಕಾದ ತಾಂತ್ರಿಕ ಮತ್ತು ವೈಜ್ಞಾನಿಕ ಶಿಕ್ಷಣ.

5) ಸಮಾಜದ ಸಾಂಸ್ಕೃತಿಕ ಮಟ್ಟವನ್ನು ಹೆಚ್ಚಿಸುವುದು ಮತ್ತು ಕಲೆಗಳಿಗೆ ಹೆಚ್ಚು ಅವಕಾಶ ಒದಗಿಸುವುದು.

ಅವರ ಶೈಕ್ಷಣಿಕ ಸಾಧನೆಯಲ್ಲಿ ಈ ಅಂತಸತ್ವವು ಹೊಂದಿದೆ. ವೈಜ್ಞಾನಿಕ ಶಿಕ್ಷಣ ದೇಶದ ಪ್ರಗತಿಗೆ ಅವಶ್ಯಕವಾಗಿದೆ. ಅದರೊಟ್ಟಿಗೆ ಮಾನವೀಯ ವಿಜ್ಞಾನ ಸಹಾ ದೇಶದ ಚರಿತ್ರೆಯನ್ನು ಶಕ್ತಿಶಾಲಿಗೊಳಿಸಲು ಅವಶ್ಯಕ ಎಂದು ಅವರು ಗ್ರಹಿಸಿದ್ದರು. ಭಾರತ ಆರ್ಥಿಕ ಪ್ರಗತಿ ಹೊಂದಬೇಕಾದರೆ ತಾಂತ್ರಿಕ ಶಿಕ್ಷಣದ ಬೆಳವಣಿಗೆಯಾಗಬೇಕು. ಭಾರತದ ಭಾಷೆಗಳು ಉನ್ನತ ಶಿಕ್ಷಣದ ಮಾಧ್ಯಮವಾಗಲೂ ತಕ್ಕದಾಗಬೇಕೆಂಬುದು ಅವರ ಮನೀಷೆ. ಆದ್ದರಿಂದ ಅವರು ಭಾರತದ ಎಲ್ಲ ಮುಖ್ಯ ಭಾಷೆಗಳ ಬೆಳವಣಿಗೆಗೆ ಅನುಕೂಲ ಒದಗಿಸಿದರು. ಅದೇ ಹೊತ್ತಿನಲ್ಲಿ ಆಯಾ ರಾಜ್ಯ ಭಾಷಿಕ ಪ್ರದೇಶದಲ್ಲಿ ಬರುವ ಅಲ್ಪಸಂಖ್ಯಾತ ಭಾಷಿಕರು ರಾಜ್ಯಭಾಷೆಯಲ್ಲಿ ಕಲಿಯುವುದು ಅವರ ಸ್ವಯಂ ಪ್ರೇರಣೆಯಿಂದಲೇ.

ಹೀಗೆ ದೇಶ ಭಾಷೆಯ ಬಗ್ಗೆ ಒಲವು ತೋರಿದರೂ, ಇಂಗ್ಲೀಷ್ ಭಾಷೆಯನ್ನು ಅವರು ಸಾರಸಗಟಾಗಿ ನಿರಾಕರಿಸಲಿಲ್ಲ. ಇಂಗ್ಲೀಷ್ ಭಾಷೆ ಭಾರತೀಯ ವಿವಿಧ ಪ್ರದೇಶಗಳ ಮತ್ತು ಆಡಳಿತದಲ್ಲಿರುವ ಜನರನ್ನು ಒಂದುಗೂಡಿಸಿದ್ದು ಎಂಬುದನ್ನು ಮರೆಯಲಿಲ್ಲ. ಅಲ್ಲದೆ ರಾಷ್ಟ್ರೀಯ ಜಾಗೃತಿಯನ್ನು ಹುಟ್ಟಿಸಿ, ಬೆಳೆಸಿದ್ದೂ ಇಂಗ್ಲೀಷ್ ಭಾಷೆಯೇ.

ಅಷ್ಟು ಮಾತ್ರವಲ್ಲ ಜಗತ್ತಿನ ಸಂಪರ್ಕವನ್ನು ಬೇರೆ ದಲ್ಲಾಳಿಗಳಿಲ್ಲದೆ ಇಂಗ್ಲೀಷ್ ಒದಗಿಸಿತು. ಅದಕ್ಕಿಂತ ಹೆಚ್ಚಾಗಿ ಇಂಗ್ಲೀಷ್ ಭಾರತೀಯರಿಗೆ ವೈಜ್ಞಾನಿಕ ಜಗತ್ತನ್ನು ತೆರೆದು ತೋರಿತು. ಆದ್ದರಿಂದ ಇಂಗ್ಲೀಷ್ ಶಿಕ್ಷಣದ ದೋಷವನ್ನಷ್ಟೆ ನಿವಾರಿಸಿ, ಅದರ ಉತ್ತಮಾಂಶವನ್ನು ಇಟ್ಟುಕೊಂಡರು.

ನಮ್ಮ ಸಂಕುಚಿತ ಮನೋಭಾವ ರಾಷ್ಟ್ರೀಯ ಪ್ರಗತಿಗೆ ಮಾರಕವಾಗಿದೆ ಎಂದು ಅವರೆಂದರು.

ಜನಸಾಮಾನ್ಯರಿಗೆ ಸಾಮಾಜಿಕ ಶಿಕ್ಷಣ ಕೊಡುವುದು ಒಂದು ರಾಷ್ಟ್ರೀಯ ಜವಾಬ್ದಾರಿ ಎಂದು ಅವರು ಹೇಳಿದರು. ಯಾಕೆಂದರೆ ಅವರಿಂದ ಮತ ಪಡೆಯುವುದು ಒಂದು ಕರ್ತವ್ಯವಲ್ಲ. ಬದಲಾಗಿ ಅದೊಂದು ಋಣ ಬದ್ಧತೆ. ಪ್ರೌಢ ಶಿಕ್ಷಣವೆಂದರೆ ಕೇವಲ ಅಕ್ಷರಾಭ್ಯಾಸ ಮಾತ್ರವಲ್ಲ. ಪ್ರಜಾಪ್ರಭುತ್ವಕ್ಕೆ ಬೇಕಾದ ಶಿಕ್ಷಣ ಜನಸಾಮಾನ್ಯರಿಗೆ ಸಿಕ್ಕಬೇಕು. ಆ ಕಾರಣಕ್ಕಾಗಿ ಅವರು ಹಳ್ಳಿಯ ಶಾಲೆಗಳು ಸಮಾಜ ಕೇಂದ್ರವಾಗಬೇಕು ಎಂದರು. ಶಾಲೆ ಸಾಮಾಜಿಕರಿಗೆ ನಾಗರಿಕ ಶಿಕ್ಷಣವನ್ನೂ, ಸಾಮಾನ್ಯವಾದ ತಾಂತ್ರಿಕ, ಔದ್ಯೋಗಿಕ ಶಿಕ್ಷಣವನ್ನು ಕೊಡಬೇಕು. ಅದಕ್ಕೆ ಅನುಕೂಲತೆಯನ್ನು ಸರಕಾರ ಒದಗಿಸಬೇಕು. ಸಾಮಾಜಿಕ ಕಲಾಭಿವೃದ್ಧಿಯಾಗುವಂತೆಯೂ ಅದು ನೋಡಿಕೊಳ್ಳಬೇಕು. ಹಾಡು, ನೃತ್ಯ, ನಾಟಕ ಮೊದಲಾದವೂ ಪ್ರೌಢಶಿಕ್ಷಣದ ಅಂಗವಾಗಬೇಕು ಮತ್ತು ಅಂಥ ಸಾಂಸ್ಕೃತಿಕ ಕಲೆಗಳು ರಾಷ್ಟ್ರೀಯ ಐಕ್ಯತೆಯನ್ನು ಬೆಳೆಸಬೇಕು ಎಂದರು.

ಅವರ ಶಿಕ್ಷಣದ ಕಲ್ಪನೆಗೆ ಒಂದು ಜಾಗತಿಕ ದೃಷ್ಟಿಕೋನವಿತ್ತು. ಭಾಷೆ, ಧರ್ಮ ಇತ್ಯಾದಿಗಳ ಸಂಕುಚಿತತೆಯಿಂದ ಅದು ಬಿಡುಗಡೆಗೊಳ್ಳಬೇಕು. ಬೆಳಕು ಬರದಂತೆ ಬಾಗಿಲು ಮುಚ್ಚಿಕೊಳ್ಳಲು ಕಲಿಸುವ ಶಿಕ್ಷಣ ಯಾವ ಜನಾಂಗವನ್ನೂ ಬೆಳೆಸಲಾರದು. ಭಾರತ ಎಂಟು ಸುತ್ತಲಿನ ಜಗತ್ತಿನೊಡನೆ ಸಂಪರ್ಕ ಹೊಂದಿದ್ದಾಗ ಅದು ಜ್ಞಾನ ಸಮೃದ್ಧಿಯನ್ನು ಹೊಂದಿತ್ತು. ಅದೇ ಸರಿಯಾದ ರೀತಿ. ಧರ್ಮ ಒಂದಲ್ಲ ಒಂದು ರೀತಿಯಿಂದ ಶಿಕ್ಷಣದಲ್ಲಿ ಅವಶ್ಯಕ. ಆದರೆ ಧರ್ಮಶಿಕ್ಷಣ ಅಕ್ಷರಕಲಿತ ಅಶಿಕ್ಷಿತರಿಂದ ಆಗಕೂಡದು. ಆದ್ದರಿಂದ ಧರ್ಮ ರಾಜಕಾರಣದಿಂದ ಬೇರೆಯಾಗಿರಬೇಕು. ಧಾರ್ಮಿಕ ಅಂಧತೆ ಅಥವಾ ತಪ್ಪು ಅನುಸರಣೆ ರಾಷ್ಟ್ರೀಯ ಐಕ್ಯವನ್ನು ಒಡೆಯಕೂಡದು.

ನವಭಾರತದ ಅವಶ್ಯಕತೆಗೆ, ಅದರ ಪ್ರಗತಿಗೆ ಮೂಲ ಸಂಶೋಧನಾ ಶಿಕ್ಷಣ ಅವಶ್ಯ. ಆ ಕಾರಣಕ್ಕಾಗಿ ದೇಶದಲ್ಲಿ ಅನೇಕ ಉತ್ತಮ ಪ್ರಯೋಗಾಲಯಗಳು ಉಂಟಾಗುವಂತೆ ಮಾಡಿದರು.

ಶಿಕ್ಷಣದ ಅಭ್ಯಾಸ ನಿರೂಪಣೆ, ಪತ್ರಗಳು ನಿಂತ ನೀರಾಗಕೂಡದು. ಆಗಾಗ

ಆದರ ಪರಿಶೀಲನೆ ನಡೆಯುತ್ತಿರಬೇಕು. ಕಲಿಸುವ ಪದ್ಧತಿ ಆಮೂಲಾಗ್ರ ಬದಲಾವಣೆಯಾಗಬೇಕು. ಇದು ಸಾಧಿತವಾಗಲು ಅವರು ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್ ಮುಂತಾದ ಸಂಸ್ಥೆಗಳನ್ನು ಸ್ಥಾಪಿಸಿದರು. ಅವುಗಳಿಗೆ ಸರಕಾರಕ್ಕೆ ಯೋಗ್ಯ ಮಾರ್ಗದರ್ಶನ ಮಾಡುವಂತೆ ಸಲಹೆ ಮಾಡಿದರು.

ಅವರು ಉನ್ನತ ಶಿಕ್ಷಣ ಮತ್ತು ಸೆಕೆಂಡರಿ ಶಿಕ್ಷಣಕ್ಕಾಗಿ ನೀತಿ ನಿರೂಪಣೆ, ಸಲಹೆ ಮಾಡಲು ಆಯೋಗವನ್ನು ನೇಮಿಸಿದರು. ಉನ್ನತ ಶಿಕ್ಷಣಕ್ಕೆ ಸಲಹೆ ಮಾಡಲು ಡಾ।ರಾಧಾಕೃಷ್ಣನ್ ಅವರ ನೇತೃತ್ವದಲ್ಲಿ ಸಮಿತಿ ನೇಮಿಸಿ, ಆದರ ವರದಿಯನ್ನು ಬಹು ಆಸಕ್ತಿಯಿಂದ ಅಳವಡಿಸಲು ಪ್ರಯತ್ನಿಸಿದರು. ಅಂತೆಯೇ ಯುನಿವರ್ಸಿಟಿ ಗ್ರ್ಯಾಂಟ್‌ಕಮಿಷನ್ನು ಸಹಾ ನೇಮಿಸಿದರು. ಇವು ಭಾರತದ ಉನ್ನತ ಶಿಕ್ಷಣಕ್ಕೆ ಭದ್ರತಳಹದಿ ಒದಗಿಸಿದವು.

"It appears to me that increasing emphasis will have to be placed on providing higher education in the field of agriculture, Medicine, Engineering, technology and Science" (ಇನ್ನು ಮುಂದೆ ಕೃಷಿ, ಔಷಧಿ, ಇಂಜಿನಿಯರಿಂಗ್, ತಾಂತ್ರಿಕತೆ ಮತ್ತು ವಿಜ್ಞಾನ ಶಿಕ್ಷಣವು ಹೆಚ್ಚು ಸ್ಥಾನ ಪಡೆಯಬೇಕು ಎಂದು ನನಗನ್ನಿಸುತ್ತದೆ.) ಎಂದು ಸೆಂಟ್ರಲ್ ಎಡ್ವೈಸರಿ ಬೋರ್ಡ್ ಸಭೆಯಲ್ಲಿ ಹೇಳಿರುವುದು ಭಾರತದಲ್ಲಿ ಶಿಕ್ಷಣದಿಂದ ಸಾಧಿತವಾಗಬೇಕಾದ ಗುರಿಯನ್ನು ಆ ಕುರಿತು ಮೌಲಾನಾರ ಕಾರ್ಯಕ್ರಮದ ದಿಕ್ಕನ್ನು ಸೂಚಿಸುತ್ತದೆ.

ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಅವರಿಗೆ ಹೆಚ್ಚಿನ ಆಸಕ್ತಿಯಿತ್ತು "Educated mothers will mean children who can be easily made literate" (ತಾಯಿ ಸುಶಿಕ್ಷಿತಳಾಗುವಂತೆ ಮಾಡಿ, ಮಕ್ಕಳು ಸುಲಭವಾಗಿ ವಿದ್ಯಾವಂತರಾಗುತ್ತಾರೆ) ಹುಡುಗರಿಗೆ ಸಿಕ್ಕುವ ಎಲ್ಲ ಶಿಕ್ಷಣ ಸೌಲಭ್ಯವೂ ಹುಡುಗಿಯರಿಗೆ ಸಿಕ್ಕಬೇಕು ಎಂಬುದು ಅವರ ಅಭಿಮತ.

ಅವರ ಪಾಲಿಗೆ ಶಿಕ್ಷಣ ಎಂದರೆ ಕೇವಲ ಶಿಕ್ಷಣಕ್ಕಾಗಿ ಶಿಕ್ಷಣ ಅಲ್ಲ. ಶಿಕ್ಷಣ ಸಾಮಾಜಿಕ ಬದಲಾವಣೆಗೆ ವಾಹಕವಾಗಬೇಕು. ಆರ್ಥಿಕಾಭಿವೃದ್ಧಿಯ ಸಾಧನವಾಗಬೇಕು. ಸಚ್ಚಾರಿತ್ರ್ಯವನ್ನೂ, ವ್ಯಕ್ತಿತ್ವವನ್ನೂ ಬೆಳೆಸುವಂತಿರಬೇಕು.

ಹಾಗೆಯೇ ವೈಜ್ಞಾನಿಕ ಶಿಕ್ಷಣದಂತೆ ಕಲಾ ಶಿಕ್ಷಣದ ಬೆಳವಣಿಗೆ ಸಹ ಅತೀ ಮುಖ್ಯವಾದುದು. ಆ ಕಾರಣ ಅವರು ಸಾಹಿತ್ಯ ಅಕಾಡಮಿ, ಸಂಗೀತ ಅಕಾಡಮಿ, ಕಲಾ ಅಕಾಡಮಿ ಮುಂತಾದ ವ್ಯವಸ್ಥೆ ಮಾಡಿದರು. ಎಲ್ಲ ಭಾಷೆಗಳಲ್ಲಿ ಕಲೆಗಳನ್ನು ಬೆಳೆಸುವುದು ಅಂದರೆ ಅದಕ್ಕೆ ಪ್ರೋತ್ಸಾಹ ಕೊಡುವುದು ಸರಕಾರದ ಕರ್ತವ್ಯ ಎಂಬುದನ್ನು

ಪ್ರಾಯೋಗಿಕವಾಗಿ ಸಾಕ್ಷಾತ್ಕರಿಸಿದರು. ಕಲೆ ಕಲೆಗಾಗಿ ಅಲ್ಲ, ಅದು ಸಮಾಜೋಪಯೋಗಕ್ಕಾಗಿ ಎಂದು ಕಲಾವಿದರನ್ನು ಎಚ್ಚರಿಸಿದರು. ಕಲೆಯೂ ಶಿಕ್ಷಣದ ಒಂದು ಭಾಗವೆ.

ವಿದ್ಯಾರ್ಥಿಗಳ ಗೊಂದಲ (unrest) ಅವರನ್ನು ನೋವು ಪಡಿಸಿತ್ತು. ಯುವಕರ ಸೃಜನ ಶೀಲ ಶಕ್ತಿಗೆ ಅವಕಾಶ ಒದಗಿಸಲು ಬೇರೆ ಬೇರೆ ಚಟುವಟಿಕೆಗಳು ಇರಬೇಕು ಎಂದರು. ಅದರಂತೆ ಅವರು ವಿದ್ಯಾರ್ಥಿಗಳಿಗೆ ದೇಶದ ತೊಡಕುಗಳನ್ನು ಅಳಿಸಿ ಹಾಕುವಂತೆಯೂ ಅವರ ಯುವಶಕ್ತಿಯನ್ನು ಅನುತ್ಪಾದಕ, ನಿರುಪಯೋಗಿ ಮತ್ತು ಹಿಂಸಾತ್ಮಕ ಕೆಲಸಗಳಿಂದ ದೂರ ಇರಿಸುವಂತೆಯೂ ಕರೆ ನೀಡಿದರು.

ಮೌಲಾನಾರ ಎದುರು ಕೇವಲ ಶೈಕ್ಷಣಿಕ ವಿಚಾರವನ್ನು ಸಾದರ ಪಡಿಸುವುದು ಮಾತ್ರ ಇದ್ದಿರಲಿಲ್ಲ. ಅದನ್ನು ಅವರು ಒಬ್ಬ ಮಂತ್ರಿಯಾಗಿ ಜಾರಿಗೊಳಿಸಬೇಕಿತ್ತು. ಇದು ಅತ್ಯಂತ ಜವಾಬ್ದಾರಿಯ ಮತ್ತು ಕಠಿಣವಾದ ಕಾರ್ಯವಾಗಿತ್ತು. ಒಬ್ಬ ದೂರದರ್ಶಿ ಶಿಕ್ಷಣತಜ್ಞನಿಗೆ ಮಾತ್ರ ಸಾಧ್ಯವಾಗುವ ಕೆಲಸವಾಗಿತ್ತು. ಅದನ್ನು ಅವರು ಸಾಧಿಸಿಯೇ ತೋರಿಸಿದರು. ಅವರ ಕಾರ್ಯ ಪಟುತ್ವದ ಕುರಿತು ಡಾ। ರಾಜೇಂದ್ರ ಪ್ರಸಾದ್ ಹೇಳುವ ಮಾತು ಅವರ ಸಾಧನೆ ಮತ್ತು ಸಾಧನಾ ವಿಧಾನದ ಮೇಲೆ ಬೆಳಕು ಚೆಲ್ಲುತ್ತದೆ. ''ಪ್ರೋತ್ಸಾಹ ಮತ್ತು ಧೈರ್ಯ ಕೊಡುವಿಕೆಯಿಂದ ಅವರು ಕಲೆ, ಸಂಸ್ಕೃತಿ, ಸಾಹಿತ್ಯದ ಬೆಳವಣಿಗೆಯ ಕಾರ್ಯವನ್ನು ಸಾಧಿಸಿದರು. ಹಾಗೆಯೇ ವಿಜ್ಞಾನದ ಮುನ್ನಡೆಯನ್ನು ಸಾಧಿಸಿದರು. ಅನೇಕ ಅಕಾಡೆಮಿ, ಪ್ರಯೋಗಾಲಯ ಮತ್ತು ನಿಗಮಗಳನ್ನು, ಆಗಾಗ ಸಂಘಟಿಸುವ ವೈಜ್ಞಾನಿಕ ಅನ್ವೇಷಣೆ, ಕಲೆಗಳ ಬೆಳವಣಿಗೆಯನ್ನು ಸಾಧಿಸಿದರು.''

ಮೌಲಾನಾ ಹನ್ನೊಂದು ವರ್ಷಗಳ ಕಾಲ ಭಾರತದ ಶಿಕ್ಷಣದ ಮಂತ್ರಿಯಾಗಿದ್ದರು. ಒಂದು ದೇಶದ ಸಾಂಪತ್ತಿಕ, ಬೌದ್ಧಿಕ ಹಾಗೂ ಹೃದಯವಂತಿಕೆಯ ಬೆಳವಣಿಗೆ ಸರಿಯಾದ ಶಿಕ್ಷಣವನ್ನು ಅವಲಂಬಿಸಿದೆ. ಭಾರತ ಸ್ವತಂತ್ರವಾದಾಗ ವಿವಿಧ ಜನಾಂಗದ, ವಿವಿಧ ಭಾಷೆ, ಸಂಸ್ಕೃತಿಗಳಿಂದ ತುಂಬಿದ ದೇಶ ಒಂದು ಬಗೆಯ ಅನಾಥ ಸ್ಥಿತಿಯಲ್ಲಿತ್ತು. ಅಂಥ ಸಂದರ್ಭದಲ್ಲಿ ಭಾರತದ ಆಶೋತ್ತರಗಳನ್ನು ನನಸಾಗಿಸುವ ಧೀರ ಮೇಧಾವಿಯನ್ನು ಅದು ಬಯಸುತ್ತಿತ್ತು. ಅಂಥ ಸ್ಥಾನವನ್ನು ಮೌಲಾನಾ ಅಬುಲ್ ಕಲಾಮ್ ಆಝಾದ್ ತುಂಬಿದರು. ಅವರು ಸ್ವತಂತ್ರ ಭಾರತದ ಶಿಕ್ಷಣದ ರುವಾರಿಯಾದರು.

### ಸಾಂದರ್ಭಿಕ ಗ್ರಂಥ

1) Theory and principles of Education
By Kamal Bhatia M.A, M.Ed, Phd,
B.D.Bhatia M.A, M.Ed, Doaba House

Booksellers & Publishers, New Delhi 1945
2) ಶ್ರೇಷ್ಠ ಶಿಕ್ಷಣ ತಜ್ಞರು. ಪ್ರೊ। ಎಂ.ಕೆ. ವರಗಿರಿ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ. 1975
3) ಎಸ್. ರಾಧಾಕೃಷ್ಣನ್ - ಬಿ.ವಿ. ಶಿವಾನಂದ್, ಸೌಮ್ಯ ಪ್ರಕಾಶನ
ಬೆಂಗಳೂರು - 3- 1990.
4) ಪ್ರಾಚ್ಯ ಮತ್ತು ಪಾಶ್ಚಾತ್ಯ ಮೂಲ: ಡಾ। ಎಸ್. ರಾಧಾಕೃಷ್ಣನ್
ಕನ್ನಡ: ಪ್ರೊ। ಎನ್.ವಿ. ನಿಕಂ ಮತ್ತು ಎನ್.ಎಸ್.ಅನಂತರಂಗಾಚಾರ್
ಮೈಸೂರು ವಿ.ವಿ. 1961.
5) ಸತ್ಯ ಅಹಿಂಸೆ. ಮೋ. ಕ. ಗಾಂಧಿ ಸ್ಮಾರಕ 1958.
6) ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ - ಮೊ.ಕ. ಗಾಂಧಿ
ಕನ್ನಡ: ಎಸ್.ವಿ. ಕೃಷ್ಣ ಮೂರ್ತಿರಾವ್, ಗಾಂಧಿ ಸ್ಮಾರಕ ನಿಧಿ 1958
7) Dr. Ambedker - A Critical study by. W.N.Kuber
Peoples Publishing House, New Delhi - 1979.
8) History of the freedom movement Vol II.
by: Tarachand - Pub: Ministry of information
and broadcasting Govt. of India.
Patiale house New Delhi - 1. 1974.
9) Maulana Azad - A commemoration volume
by: Khaliq Ahmad Nizam. Pub:
Idarah-i-Adabiyat, Delhi - New Delhi - 6. 1990
10) The British paramountcry and Indian renaissance II
R.C. Mujumdar 1981. Bharatiya Vidya Bhavan Bombay
11) Sayyed Ahmad Khan
By: K.A.Nizam - series of builders of India
Publication Division Ministry of information
and Broad casting, Govt. of India - 1974
12) The lid off By: J.N. Sahani
Allied Publication, New Delhi - 1971.

------

● ಇಬ್ರಾಹೀಮ್ ಸಈದ್
ಸಂಪಾದಕರು,
'ಸನ್ಮಾರ್ಗ' ವಾರ ಪತ್ರಿಕೆ,
ಮಂಗಳೂರು.

# ಇಸ್ಲಾಮೀ ಶಿಕ್ಷಣ ವ್ಯವಸ್ಥೆಯ ಧ್ಯೇಯ ಮತ್ತು ವೈಶಿಷ್ಟ್ಯಗಳು

ಇಸ್ಲಾಮ್ ಒಂದು ಸಂಪೂರ್ಣ ಜೀವನ ವ್ಯವಸ್ಥೆ. ಅಲ್ಲಾಹನ ಬಳಿ ಜಗತ್ತಿನ ಎಲ್ಲ ಮನುಷ್ಯರಿಗಿರುವ ಏಕೈಕ ಅಧಿಕೃತ ಧರ್ಮ ಇಸ್ಲಾಮ್ ಆಗಿದೆ. ಅದರ ಅನುಸರಣೆಯ ಮೂಲಕ ಮಾತ್ರ ಮನುಷ್ಯನು ಇಹ-ಪರಗಳ ವಿಜಯ-ಸೌಭಾಗ್ಯಗಳನ್ನು ಗಳಿಸಬಲ್ಲನು. ಶಿಕ್ಷಣದ ಬಗ್ಗೆ ಇಸ್ಲಾಮಿನ ದೃಷ್ಟಿಕೋನವನ್ನು ಅರಿಯುವುದಕ್ಕೆ ಮೊದಲು ಇಸ್ಲಾಮೀ ಜೀವನ ವ್ಯವಸ್ಥೆಯ ಮೂಲಭೂತ ಸಿದ್ಧಾಂತಗಳನ್ನು ಸ್ಥೂಲವಾಗಿ ಅರಿತಿರಬೇಕಾದುದು ಅನಿವಾರ್ಯ. ಆದ್ದರಿಂದ ಅವುಗಳನ್ನು ಸಂಕ್ಷಿಪ್ತವಾಗಿ ಕೆಳಗೆ ಕೊಡಲಾಗಿದೆ:-

(1) ಅಲ್ಲಾಹನು ಸಂಪೂರ್ಣ ವಿಶ್ವದ ಸೃಷ್ಟಿಕರ್ತ, ಪರಿಪಾಲಕ, ಒಡೆಯ ಮತ್ತು ಅಧಿಪತಿಯಾಗಿರುವನು. ಮನುಷ್ಯರೆಲ್ಲಾ ಅವನ ಹುಟ್ಟು ದಾಸರು. ಆಧಿಪತ್ಯ ಅವನಿಗೆ ಮಾತ್ರ ಮೀಸಲಿದೆ. ಎಲ್ಲರೂ ಅವನನ್ನೇ ಅನುಸರಿಸಬೇಕು, ಆರಾಧಿಸಬೇಕು.

● ಆಜ್ಞಾಧಿಕಾರವು ಅಲ್ಲಾಹನ ಹೊರತು ಯಾರಿಗೂ ಇಲ್ಲ. ಅವನ ಹೊರತು ನೀವು ಯಾರ ದಾಸ್ಯಾರಾಧನೆಯನ್ನೂ ಮಾಡಬಾರದೆಂದು ಅವನ ಕಟ್ಟಪ್ಪಣೆ ಇದೆ. (ಪವಿತ್ರ ಕುರ್‌ಆನ್ 12:40)

(2) ಮನುಷ್ಯರ ಮಾರ್ಗದರ್ಶನಕ್ಕಾಗಿ ಅಲ್ಲಾಹನು ತನ್ನ ಸಂದೇಶವಾಹಕರನ್ನು ಕಳುಹಿಸಿದನು. ಅವರು ಅಲ್ಲಾಹನ ಆಜ್ಞೆಗಳನ್ನು ಜನರಿಗೆ ತಿಳಿಸಿದರು. ಪ್ರವಾದಿ ಮುಹಮ್ಮದ್ (ಸ) ಅಲ್ಲಾಹನ ಅಂತಿಮ ಸಂದೇಶವಾಹಕರಾಗಿರುವರು. ಅವರು ಅಲ್ಲಾಹನ ಅಂತಿಮ ಗ್ರಂಥವಾದ ಕುರ್‌ಆನನ್ನು ಜಗತ್ತಿಗೆ ನೀಡಿದರು. ಮತ್ತು ಅಲ್ಲಾಹನ ಅಭೀಷ್ಟಕ್ಕೆ ತಕ್ಕಂತೆ ಜೀವಿಸಿ ಮಾದರಿಯಾದರು. ಪವಿತ್ರ ಕುರ್‌ಆನ್ ಮತ್ತು ಪ್ರವಾದಿಯ ಆದರ್ಶದ ಅನುಸರಣೆಯಲ್ಲೇ ಮನುಕುಲದ ಮೋಕ್ಷ ಅಡಕವಾಗಿದೆ.

- ಮನುಷ್ಯರೇ ನಾನು ಭೂಮ್ಯಾಕಾಶಗಳ ಆಧಿಪತ್ಯದ ಒಡೆಯನಾದ ಅಲ್ಲಾಹನ ವತಿಯಿಂದ ನಿಮ್ಮೆಲ್ಲರ ಕಡೆಗೆ ನಿಯೋಗಿಸಲ್ಪಟ್ಟ ಸಂದೇಶವಾಹಕನಾಗಿರುವೆನು. (ಪವಿತ್ರ ಕುರ್‌ಆನ್)
- ಆದಮರ ಮಕ್ಕಳೇ! ನಮ್ಮ ವಚನಗಳನ್ನು ವಿವರಿಸುವ ಸಂದೇಶವಾಹಕರು ಸ್ವತ: ನಿಮ್ಮೊಳಗಿಂದಲೇ ನಿಮ್ಮ ಬಳಿ ಬಂದಾಗ ಅವರ ಆಜ್ಞೋಲ್ಲಂಘನೆ ಮಾಡದವನು ಮತ್ತು ತನ್ನನ್ನು ಸಂಸ್ಕರಿಸಿಕೊಳ್ಳುವವನಿಗೆ ಯಾವುದೇ ಭಯ ಮತ್ತು ವ್ಯಥೆಯ ಸಂಭವವಿಲ್ಲವೆಂದು ತಿಳಿಯಿರಿ. (ಪವಿತ್ರ ಕುರ್‌ಆನ್ 7:35)

(3) ಎಲ್ಲ ಮನುಷ್ಯರಿಗೂ ಒಂದು ದಿನ ಸಾಯಲೇಬೇಕು. ಒಂದು ದಿನ ಅವರೆಲ್ಲರೂ ಅಲ್ಲಾಹನ ಮುಂದೆ ಹಾಜರಾಗುವರು. ತಮ್ಮ ಸಂಪೂರ್ಣ ಜೀವನದ ಆಚಾರ-ವಿಚಾರಗಳ ಲೆಕ್ಕಾಚಾರ ಅವನ ಮುಂದೆ ಸಮರ್ಪಿಸಲಿರುವರು. ಅವನ ಹಿಡಿತದಿಂದ ಯಾರೂ ತಪ್ಪಿಸಿಕೊಳ್ಳಲಾರರು. ಪ್ರತಿಯೊಬ್ಬನೂ ತನ್ನ ಕರ್ಮಗಳ ಉತ್ತಮ ಅಥವಾ ಕೆಟ್ಟ ಪರಿಣಾಮ ಅನುಭವಿಸಿಯೇ ತೀರುವನು.

- ಅಣುವಿನಷ್ಟು ಒಳಿತು ಮಾಡಿದವನು ಅದರ ಪರಿಣಾಮವನ್ನು ಮತ್ತು ಅಣುವಿನಷ್ಟು ಕೆಡುಕು ಮಾಡಿದವನು ಅದರ ಪರಿಣಾಮವನ್ನು ಅನುಭವಿಸಿಯೇ ತೀರುವನು. (ಪವಿತ್ರ ಕುರ್‌ಆನ್)

(4) ನಾವು ವಾಸಿಸುವ ಈ ಭೂಮಿಯು ಅಲ್ಲಾಹನ ಅಗಾಧ ವಿಶ್ವದ ಒಂದು ಸಣ್ಣ ಭಾಗ. ಮನುಷ್ಯನು ಈ ಭೂಮುಖದಲ್ಲಿ ಅಲ್ಲಾಹನ ಪ್ರತಿನಿಧಿಯಾಗಿರುವನು. ಅಲ್ಲಾಹನ ಭೂಮಿಯಲ್ಲಿ ಆತನ ಇಚ್ಛೆಯಂತೆ ಬಾಳುವುದೇ ಅವರಿಗಿರುವ ಸರಿಯಾದ ಮಾರ್ಗ.

- ನಿಮ್ಮ ಪ್ರಭು ದೇವಚರರೊಡನೆ 'ನಾನು ಭೂಮಿಯಲ್ಲಿ ಒಬ್ಬ ಪ್ರತಿನಿಧಿಯನ್ನು ನೇಮಿಸಲಿದ್ದೇನೆ' ಎಂದು ಹೇಳಿದ ಸಂದರ್ಭವನ್ನು ಸ್ಮರಿಸಿರಿ. (ಪವಿತ್ರ ಕುರ್‌ಆನ್ 2:30)

(5) ಎಲ್ಲ ಮನುಷ್ಯರೂ ಒಂದೇ ಮಾತಾಪಿತರ ಸಂತಾನಗಳು. ಅವರು ಪರಸ್ಪರ ಸಮಾನರು ಮತ್ತು ಸೋದರರು. ವರ್ಣ, ವಂಶದ ಮೇಲ್ಮೈ, ಜಾತೀಯ ವರ್ಗೀಕರಣಗಳು ಅಸ್ಪೃಶ್ಯತೆ ಇತ್ಯಾದಿಗಳಿಗೆ ಯಾವುದೇ ಆಧಾರವಿಲ್ಲ. ಅರಬನಿಗೆ ಅರಬೇತರನ ಮೇಲೆ, ಬಿಳಿಯನಿಗೆ ಕರಿಯನ ಮೇಲೆ, ಬ್ರಾಹ್ಮಣನಿಗೆ ಶೂದ್ರನ ಮೇಲೆ ಯಾವುದೇ ಮೇಲ್ಮೆಯೂ ಇಲ್ಲ. ಮನುಷ್ಯನ ಚಾರಿತ್ರ್ಯವೇ ಆತನ ಶ್ರೇಷ್ಠತೆಯ ಮಾನದಂಡ.

● ಮನುಷ್ಯರೇ! ನಿಮ್ಮನ್ನು ನಾವು ಒಂದು ಗಂಡು ಮತ್ತು ಒಂದು ಹೆಣ್ಣಿನಿಂದ ಸೃಷ್ಟಿಸಿರುವೆವು. ನಿಮ್ಮನ್ನು ವಿವಿಧ ಜನಾಂಗಗಳಾಗಿಯೂ ವಂಶಗಳಾಗಿಯೂ ವಿಂಗಡಿಸಿರುವುದು ಪರಿಚಯಕ್ಕಾಗಿ ಮಾತ್ರ. ನಿಮ್ಮ ಪೈಕಿ ಅತ್ಯಧಿಕ ದೇವ ಭಯ-ಭಕ್ತಿ ಉಳ್ಳವನೇ ನಿಮ್ಮಲ್ಲಿ ಅತ್ಯುತ್ತಮನು.

(ಪವಿತ್ರ ಕುರ್‌ಆನ್ 49:13)

(6) ಹಿರಿಯ-ಕಿರಿಯ, ಧನಿಕ-ದರಿದ್ರ, ಒಡೆಯ-ಆಳು ಎಲ್ಲರೂ ಅಲ್ಲಾಹನ ದಾಸರು. ಸರ್ವತಂತ್ರ ಸ್ವತಂತ್ರ ಯಾರೂ ಇಲ್ಲ. ಮನುಷ್ಯರ ದಾಸ್ಯದಿಂದ ಮಾತ್ರ ಎಲ್ಲರೂ ಸ್ವತಂತ್ರರು. ಪ್ರತಿಯೊಬ್ಬನನ್ನೂ ಅಲ್ಲಾಹನು ಅವನ ತಾಯಿಯ ಒಡಲಿಂದ ಸ್ವತಂತ್ರನಾಗಿ ಸೃಷ್ಟಿಸಿರುವನು. ಇತರರ ಸ್ವಾತಂತ್ರ್ಯವನ್ನು ಕಸಿದು ಅವರನ್ನು ತನ್ನ ದಾಸರಾಗಿ ಮಾಡುವ ಮತ್ತು ಅವರನ್ನು ತನ್ನ ಇಚ್ಛೆಯಂತೆ ನಡೆಸುವ ಅಧಿಕಾರ ಯಾರಿಗೂ ಇಲ್ಲ.

ನಜ್ರಾನ್‌ನವರಿಗೆ ಬರೆದ ಒಂದು ಪತ್ರದಲ್ಲಿ ಪ್ರವಾದಿ ಮುಹಮ್ಮದ್ (ಸ)ರು ಈ ರೀತಿ ಉಲ್ಲೇಖಿಸಿದ್ದರು:

● ನಾನು ನಿಮ್ಮನ್ನು ದಾಸ (ರಾದ ಮನುಷ್ಯ)ರ ದಾಸ್ಯದಿಂದ ಅಲ್ಲಾಹನ ದಾಸ್ಯದೆಡೆಗೆ ಆಹ್ವಾನಿಸುತ್ತೇನೆ. ನಿಮ್ಮನ್ನು ದಾಸ (ರಾದ ಮನುಷ್ಯ)ರ ಆಧಿಪತ್ಯದಿಂದ ಅಲ್ಲಾಹನ ಆಧಿಪತ್ಯದೆಡೆಗೆ ಆಮಂತ್ರಿಸುತ್ತೇನೆ.

(ತಫ್ಸೀರ್ ಇಬ್ನು ಕಸೀರ್)

(7) ವಿಶ್ವಾಸ-ಶ್ರದ್ಧೆ, ಆತ್ಮಸಾಕ್ಷಿ ಮತ್ತು ಅಭಿಪ್ರಾಯದ ಬಗ್ಗೆ ಯಾವುದೇ ಬಲಾತ್ಕಾರವಿಲ್ಲ. ವಿವಿಧ ವಿಶ್ವಾಸ, ನಂಬಿಕೆ, ವಿಚಾರ ಮತ್ತು ಅಭಿಪ್ರಾಯಗಳಲ್ಲಿ ಯಾವುದನ್ನೂ ಮನುಷ್ಯನು ನೆಚ್ಚಿಕೊಳ್ಳಬಹುದು.

● ಧರ್ಮದ ವಿಷಯದಲ್ಲಿ ಯಾವುದೇ ಒತ್ತಾಯ ಬಲಾತ್ಕಾರಗಳಿಲ್ಲ.

(ಪವಿತ್ರ ಕುರ್‌ಆನ್ 2:256)

(8) ಸೃಷ್ಟಿ ಎಲ್ಲವೂ ಅಲ್ಲಾಹನ ಕುಟುಂಬ. ಎಲ್ಲರ ಮೂಲಭೂತ ಬೇಡಿಕೆಗಳು

ಪೂರೈಸಲ್ಪಡಬೇಕು. ಹಸಿದವನಿಗೆ ಆಹಾರ, ನಗ್ನನಿಗೆ ವಸ್ತ್ರ, ಮನೆಯಿಲ್ಲದವನಿಗೆ ಆಶ್ರಯ, ರೋಗಿಗೆ ಮದ್ದು ಮತ್ತು ಶುಶ್ರೂಷೆ ಸಿಗಬೇಕಾದುದು ಅವರ ಮೂಲಭೂತ ಹಕ್ಕು.

- ಸೃಷ್ಟಿಯು ಅಲ್ಲಾಹನ ಕುಟುಂಬವಾಗಿದೆ. (ಹದೀಸ್)

(9) ಪ್ರತಿಯೊಬ್ಬ ಮನುಷ್ಯನ ಜೀವ, ಸೊತ್ತು, ಮಾನ-ಮರ್ಯಾದೆಗಳು ಗೌರವಾರ್ಹವಾಗಿವೆ. ಅವುಗಳ ಮೇಲೆ ಆಕ್ರಮಣದ ಅಧಿಕಾರ ಯಾರಿಗೂ ಇಲ್ಲ.

- ಯಾವನು ಒಂದು ಜೀವವನ್ನು ಅನ್ಯಾಯವಾಗಿ ವಧಿಸುತ್ತಾನೋ ಅವನು ಸಂಪೂರ್ಣ ಮನುಕುಲವನ್ನು ಕೊಂದಂತೆ. ಯಾರು ಒಂದು ಜೀವವನ್ನು ಉಳಿಸುತ್ತಾನೋ ಅವನು ಇಡೀ ಮನುಕುಲದ ಜೀವ ಉಳಿಸಿದಂತೆ. (ಪವಿತ್ರ ಕುರ್ಆನ್ 5:32)

(10) ಒಳ್ಳೆಯ ಕಾರ್ಯಗಳಲ್ಲಿ ಎಲ್ಲರೊಂದಿಗೂ ಸಹಕರಿಸಬೇಕು. ಕೆಟ್ಟ ಕೆಲಸಗಳಲ್ಲಿ ಯಾರೊಂದಿಗೂ ಸಹಕರಿಸಬಾರದು.

- ಪುಣ್ಯ ಹಾಗೂ ದೇವಭಯದ ಕಾರ್ಯಗಳಲ್ಲಿ ಎಲ್ಲರ ಜೊತೆ ಸಹಕರಿಸಿರಿ ಮತ್ತು ಪಾಪ ಹಾಗೂ ಅತಿರೇಕ ಕಾರ್ಯಗಳಲ್ಲಿ ಯಾರೊಂದಿಗೂ ಸಹಕರಿಸಬೇಡಿರಿ. (ಪವಿತ್ರ ಕುರ್ಆನ್ 5:2)

(11) ಜೀವನದ ದೈವೀಕ ಸನ್ಮಾರ್ಗವನ್ನು ಅರಿತವರು ಅದನ್ನು ಅರಿಯದವರಿಗೆ ತಿಳಿಯಪಡಿಸಬೇಕು.

ಈ ಮೂಲಭೂತ ಸಿದ್ಧಾಂತಗಳಿಂದ ವ್ಯಕ್ತವಾಗುವಂತೆ ಇಸ್ಲಾಮಿನ ದೃಷ್ಟಿಯಲ್ಲಿ 'ಶಿಕ್ಷಣದ ಧ್ಯೇಯವು ಮನುಷ್ಯನನ್ನು ಅಲ್ಲಾಹನ ಉತ್ತಮ ದಾಸನನ್ನಾಗಿ ಮಾಡುವುದಾಗಿದೆ.' ಜಗತ್ತಿನ ಅನೇಕ ದಾರ್ಶನಿಕರು ಶಿಕ್ಷಣದ ಧ್ಯೇಯದ ಬಗ್ಗೆ ಹೇಳಿರುವ ಮಾತುಗಳು ಮೇಲಿನ ಅಂಶವನ್ನು ಇನ್ನಷ್ಟು ಪುಷ್ಟೀಕರಿಸುತ್ತವೆ:

- ನಿಸ್ವಾರ್ಥ ಒಳಿತುಗಳ ಮೂಲಕ ಸಂತೋಷವನ್ನು ಪಡೆಯುವುದೇ ಶಿಕ್ಷಣದ ಉದ್ದೇಶವಾಗಿದೆ. - ಅರಿಸ್ಟಾಟಲ್.
- ಮಾದರೀ ಮನುಷ್ಯನ ನಿರ್ಮಾಣವೇ ಶಿಕ್ಷಣದ ಉದ್ದೇಶ - ಪೇನ್.
- ಸಂಪೂರ್ಣ ಮನುಷ್ಯನ ತರಬೇತಿಯೇ ವಿದ್ಯೆಯ ಧ್ಯೇಯವಾಗಿದೆ. - ಕಾಮೆನೇಸ್.
- ಮನುಷ್ಯನ ಪ್ರಜ್ಞಾಪೂರ್ಣ ಉದ್ಧಾರವೇ ಶಿಕ್ಷಣದ ಧ್ಯೇಯ. - ಡೇವಿಡ್‌ಸನ್.

- ಸಾಮಾನ್ಯವಾಗಿ ಮನುಷ್ಯನ ಅತ್ಯುತ್ತಮ ಧ್ಯೇಯವು ಸಚ್ಚಾರಿತ್ರವೆಂಬುದು ಸರ್ವಸಮ್ಮತ ವಿಷಯ. ಆದುದರಿಂದ ಶಿಕ್ಷಣದ ಧ್ಯೇಯವೂ ಅದುವೇ ಆಗಿದೆ. -ಹರ್ಬರ್ಟ್.

ವಿದಾಯ ಹಜ್ಜ್‌ನ ಪ್ರವಚನದಲ್ಲಿ ಪ್ರವಾದಿ(ಸ) ಈ ರೀತಿ ಹೇಳಿರುವರು:

- ಇಲ್ಲಿ ಹಾಜರಿರುವವರು (ಈ ಸಂದೇಶವನ್ನು) ಹಾಜರಿಲ್ಲದವರಿಗೆ ತಲುಪಿಸಬೇಕು. (ಹದೀಸ್).

ಇಸ್ಲಾಮೀ ಶಿಕ್ಷಣ ವ್ಯವಸ್ಥೆಯ ವೈಶಿಷ್ಟ್ಯಗಳನ್ನು ಈ ಕೆಳಗಿನಂತೆ ಸಂಕ್ಷೇಪಿಸಬಹುದು:

(1) ಮೂಲಭೂತ ಧಾರ್ಮಿಕ ಶಿಕ್ಷಣವು ಎಲ್ಲ ಮುಸ್ಲಿಮ್ ಸ್ತ್ರೀ - ಪುರುಷರಿಗೆ ಕಡ್ಡಾಯ. ಅದಕ್ಕೆ ಬೇಕಾದ ಅನುಕೂಲಗಳನ್ನು ಮಾಡಿಕೊಡುವುದು ಮುಸ್ಲಿಮ್ ಸಮಾಜದ ಕರ್ತವ್ಯ.

- ವಿದ್ಯಾರ್ಜನೆಯು ಪ್ರತಿಯೊಬ್ಬ ಮುಸ್ಲಿಮ್ ಪುರುಷ ಮತ್ತು ಸ್ತ್ರೀಯ ಮೇಲೆ ಕಡ್ಡಾಯವಾಗಿದೆ. (ಇಬ್ನು ಮಾಜಃ)

(2) ಓದು - ಬರಹ ಮತ್ತು ಶಿಕ್ಷಣವನ್ನು ವ್ಯಾಪಕಗೊಳಿಸಲು ಪ್ರಯತ್ನಿಸಬೇಕು. ಯಾವನೂ ಅವಿದ್ಯಾವಂತನಾಗಿ ಉಳಿಯಬಾರದು.

- ವಿದ್ಯಾರ್ಜನೆ ಮಾಡಿರಿ ಮತ್ತು ಅದನ್ನು ಜನರಿಗೆ ಕಲಿಸಿರಿ. (ಬೈಹಕಿ)

(3) ಉಪಯುಕ್ತ ಮತ್ತು ಲಾಭದಾಯಕವಾದ ಎಲ್ಲ ವಿದ್ಯೆಗಳ ಗಳಿಕೆಯೂ ಪುಣ್ಯಕಾರ್ಯವೆಂದು ಪರಿಗಣಿಸಲ್ಪಡುತ್ತದೆ.

ಪ್ರವಾದಿ (ಸ) ಹೇಳಿದರು:

- ಅಧ್ಯಾಪಕ ಮತ್ತು ವಿದ್ಯಾರ್ಥಿಗಳಿಬ್ಬರೂ ಪುಣ್ಯದಲ್ಲಿ ಪಾಲುದಾರರಾಗಿದ್ದಾರೆ. (ಇಬ್ನು ಮಾಜಃ)
- ಯಾವುದಾದರೂ ಒಳಿತಿನ ಕಡೆಗೆ ಮಾರ್ಗದರ್ಶನ ಮಾಡುವವನಿಗೆ ಒಳಿತು ಮಾಡುವವನಷ್ಟೇ ಪುಣ್ಯವಿದೆ. (ಮುಸ್ಲಿಮ್)
- ವಿದ್ಯೆ ಗಳಿಸುವ ಮಾರ್ಗವನ್ನವಲಂಬಿಸುವವನಿಗೆ ಅಲ್ಲಾಹನು ಸ್ವರ್ಗದ ಹಾದಿಯನ್ನು ಸುಲಭ ಗೊಳಿಸುವನು. (ಮುಸ್ಲಿಮ್)
- ಉತ್ತಮ ವಿದ್ಯೆ ಕಲಿಸುವವನ ಪಾಪ ವಿಮೋಚನೆಗಾಗಿ ಎಲ್ಲ ವಸ್ತುಗಳೂ ಪ್ರಾರ್ಥಿಸುತ್ತವೆ. (ತಿರ್ಮಿದಿ)
- ವಿದ್ಯಾರ್ಜನೆಗಾಗಿ ಮನೆಯಿಂದ ಹೊರಟವನು ಹಿಂದಿರುಗುವ ತನಕ ಅಲ್ಲಾಹನ ಮಾರ್ಗ (ಜಿಹಾದ್)ದಲ್ಲಿರುವನು. (ತಿರ್ಮಿದಿ)

(4) ಅನುಪಯುಕ್ತ ಹಾಗೂ ಹಾನಿಕರ ವಿದ್ಯೆಯಿಂದ ಜನರನ್ನು ತಡೆಯಲಾಗುತ್ತದೆ. ಊಹೆ, ಗುಮಾನಿ ಮತ್ತು ಭ್ರಮೆಗಳಲ್ಲಿ ಆಧಾರಿತವಾದ ಯಾವ

ವಿಷಯವನ್ನೂ ಇಸ್ಲಾಮೀ ಶಿಕ್ಷಣ ಕ್ರಮದಲ್ಲಿ ಕಲಿಸಲಾಗದು.
ಪ್ರವಾದಿ(ಸ) ಹೀಗೆ ಆದೇಶಿಸಿರುವರುಃ

- ಉಪಯುಕ್ತವಲ್ಲದ ವಿದ್ಯೆಯಿಂದ ಅಲ್ಲಾಹನ ಅಭಯ ಯಾಚಿಸಿರಿ. (ಇಬ್ನು ಮಾಜಃ)

(5) ಪ್ರತಿಯೊಬ್ಬನಿಗೂ ಅಗತ್ಯವಿರುವಷ್ಟು ಶಿಕ್ಷಣವನ್ನು ಉಚಿತವಾಗಿ ನೀಡುವ ವ್ಯವಸ್ಥೆ ಮಾಡಲಾಗುವುದು. ಪ್ರತಿಯೊಬ್ಬ ಮುಸ್ಲಿಮ್ ಧನಿಕನು ತನ್ನ ದಾನ ಧರ್ಮಗಳಲ್ಲಿ ಮತ್ತು ಝಕಾತ್‌ನಲ್ಲಿ ಒಂದಂಶವನ್ನು ಇದಕ್ಕಾಗಿ ವಿನಿಯೋಗಿಸ ಬೇಕು.

(6) ಪಡೆದ ಶಿಕ್ಷಣವನ್ನು ಕೃತಿಗಿಳಿಸುವ ಮತ್ತು ಇತರರಿಗೂ ಅದನ್ನು ತಲುಪಿಸುವ ಹೊಣೆಯನ್ನು ವಿದ್ಯಾರ್ಜನೆ ಮಾಡುವವರ ಮೇಲೆ ಇಸ್ಲಾಮ್ ಹೇರುತ್ತದೆ.
ಪ್ರವಾದಿ (ಸ) ಈ ರೀತಿ ಹೇಳಿರುವರು:

- ವಿದ್ಯೆಯಲ್ಲಿ ಎರಡು ವಿಧ. ಒಂದು ನಾಲಗೆಯಿಂದ. ಹೊರಟು ಹೃದಯದಲ್ಲಿ ಮನೆ ಮಾಡುತ್ತದೆ. ಇದುವೇ ಉಪಯುಕ್ತ ವಿದ್ಯೆ. ಇನ್ನೊಂದು ನಾಲಗೆಯಲ್ಲೇ ಇರುತ್ತದೆ. ಇದು ಅಲ್ಲಾಹನ ನ್ಯಾಯಾಲಯದಲ್ಲಿ ಆದಮರ ಪುತ್ರನ ವಿರುದ್ಧ ಸಾಕ್ಷಿಯಾಗುವುದು. (ದಾರಮೀ)
- ನನ್ನ ಶಿಕ್ಷಣಗಳನ್ನು ಜನರಿಗೆ ತಲುಪಿಸಿರಿ. ಅದು ಒಂದು ಆಯತ್(ಕುರ್‌ಆನ್ ವಚನ) ಆದರೂ ಸರಿಯೆ. (ಬುಖಾರಿ)
- ಒಬ್ಬ ವ್ಯಕ್ತಿಯು ತಿಳಿದಿರುವ ವಿದ್ಯೆಯ ಕುರಿತು ಅವನಲ್ಲಿ ಏನಾದರೂ ಕೇಳಿದಾಗ ಅವನು ಅದನ್ನು ಅಡಗಿಸಿದರೆ ನಿರ್ಣಾಯಕ ದಿನದಂದು ಅವನ ಬಾಯಲ್ಲಿ ಅಗ್ನಿ ತುರುಕಿಸಲಾಗುವುದು. (ತಿರ್ಮಿದಿ, ಅಬೂದಾವೂದ್)
- ಜನರು ತಮ್ಮ ನೆರೆಯವರಿಗೆ ವಿದ್ಯೆ ಕಲಿಸಲೇ ಬೇಕು. ಅವರಿಗೆ ಉಪದೇಶ ಮಾಡುತ್ತಿರಬೇಕು. ಒಳಿತನ್ನು ಆಜ್ಞಾಪಿಸಬೇಕು ಮತ್ತು ಕೆಡುಕನ್ನು ವಿರೋಧಿಸ ಬೇಕು. ಇದೇ ರೀತಿ ಅವಿದ್ಯಾವಂತರಾದ ಜನರು ತಮ್ಮ ನೆರೆಯವರಿಂದ ವಿದ್ಯೆ ಕಲಿಯಲೇ ಬೇಕು. ಅವರ ಉಪದೇಶಗಳನ್ನು ಸ್ವೀಕರಿಸಬೇಕು. ತಮ್ಮೊಳಗೆ ತಿಳುವಳಿಕೆಯನ್ನು ಮೂಡಿಸಿಕೊಳ್ಳಬೇಕು. ಅನ್ಯತಃ ನಾನು ಬಹಳ ಬೇಗನೇ ಅವರಿಗೆ ಇಹಲೋಕದಲ್ಲೇ ಶಿಕ್ಷೆ ನೀಡುವೆನು.

(7) ಉಪಾಧ್ಯಾಯ ಮತ್ತು ವಿದ್ಯಾರ್ಥಿಗಳಿಬ್ಬರ ವ್ಯಕ್ತಿತ್ವದ ಆದರ ಮತ್ತು ಆತ್ಮ ಗೌರವದ ರಕ್ಷಣೆಯು ಶಿಕ್ಷಣದ ಒಂದು ಅವಿಭಾಜ್ಯ ಅಂಗವಾಗಿದೆ. ಅಧ್ಯಾಪಕರು

ಕರುಣಾಳುವಾದ ಸುಧಾರಕರು ಮತ್ತು ಆಧ್ಯಾತ್ಮಿಕ ತಂದೆ ಎನಿಸುವರು. ವಿದ್ಯಾರ್ಥಿಯು ಕರ್ತವ್ಯ ನಿಷ್ಠೆಯುಳ್ಳ ಅನುಸರಣಶೀಲ ಮಗ.

ಪ್ರವಾದಿ (ಸ) ಹೇಳಿದರು:

- ವಿದ್ಯೆ ಕಲಿಸಿರಿ ಅದನ್ನು ಒತ್ತಾಯ ಪೂರ್ವಕ (ವಿದ್ಯಾರ್ಥಿಗಳ ಮೇಲೆ) ಹೇರಬೇಡಿರಿ. ಬೋಧಕರು ಒತ್ತಾಯ ಪೂರ್ವಕ ಹೇರುವವರಿಗಿಂತ ಉತ್ತಮರು. (ಬೈಹಕಿ)

(8) ಶಿಕ್ಷಣ ಸಂಸ್ಥೆಗಳ ವಾತಾವರಣ ಪರಿಶುದ್ಧವಾಗಿರಬೇಕು. ಮನೆ, ವಠಾರ, ಪರಿಸರ, ಊರು ಎಲ್ಲವೂ ಅದಕ್ಕೆ ಸಹಕಾರಿಯಾಗಿರಬೇಕು.

(9) ವೈಯಕ್ತಿಕ, ಕೌಟುಂಬಿಕ ಮತ್ತು ಸಾಮೂಹಿಕ ಕರ್ತವ್ಯಗಳ ಸರಿಯಾದ ಜ್ಞಾನವನ್ನು ಒದಗಿಸುವ ವ್ಯವಸ್ಥೆ ಮಾಡಬೇಕು. ಈ ಎಲ್ಲ ಕರ್ತವ್ಯಗಳನ್ನೂ ಅಲ್ಲಾಹನ ಮತ್ತು ಪ್ರವಾದಿಯ ಆದೇಶಗಳ ಮೇರೆಗೆ ಪಾಲಿಸುವ ಶಿಕ್ಷಣವನ್ನು ಹಂತ ಹಂತವಾಗಿ ನೀಡಬೇಕು.

(10) ಒಂದು ಇಸ್ಲಾಮೀ ರಾಷ್ಟ್ರದಲ್ಲಿರುವ ಮುಸ್ಲಿಮೇತರ ಪ್ರಜೆಗಳಿಗೆ ಅವರದೇ ಆದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಹಕ್ಕಿದೆ. ಅಲ್ಲಿ ತಮ್ಮ ವಿಶ್ವಾಸ ಶ್ರದ್ಧೆ ಆಚಾರ-ವಿಚಾರಗಳಿಗೆ ಪೂರಕವಾದ ಶಿಕ್ಷಣ ನೀಡಲು ಬೇಕಾಗುವ ಸವಲತ್ತುಗಳನ್ನು ಮಾಡಿ ಕೊಡಲಾಗುವುದು. ಅವರ ಇಚ್ಛೆ ಮತ್ತು ಅವರ ವಿಚಾರ ಸಂಪ್ರದಾಯಗಳಿಗೆ ವಿರುದ್ಧವಾದ ಯಾವ ವಿಷಯವನ್ನೂ ಅಲ್ಲಿ ಅವರಿಗೆ ಕಲಿಸಲಾಗದು.

- ಧರ್ಮದ ವಿಷಯದಲ್ಲಿ ಯಾವುದೇ ಒತ್ತಾಯ ಬಲತ್ಕಾರಗಳಿಲ್ಲ. (ಪವಿತ್ರ ಕುರ್‌ಆನ್ - 2:256)

(11) ಧಾರ್ಮಿಕ ಮತ್ತು ನೈತಿಕ ಮೌಲ್ಯಗಳಿಗೆ ಅಸಾಮಾನ್ಯ ಪ್ರಾಮುಖ್ಯತೆ ಮತ್ತು ಶಾಶ್ವತ ಸ್ಥಾನಮಾನಗಳನ್ನು ನೀಡಬೇಕು.

ಪ್ರವಾದಿ (ಸ) ಹೇಳಿದರು:

- "ನನ್ನನ್ನು ನೈತಿಕ ಮೌಲ್ಯಗಳ ಪರಿಪೂರ್ಣತೆಗಾಗಿ ನಿಯೋಗಿಸಲಾಗಿದೆ." (ಮುಅತ್ತಾ ಇಮಾಮ್ ಮಾಲಿಕ್)
- ಭೂಮಿಯ ನಾನಾ ಭಾಗಗಳಿಂದ ಜನರು ಧರ್ಮದ ಜ್ಞಾನಾರ್ಜನೆಗಾಗಿ ಬರುವರು. ನೀವು ಅವರಿಗೆ ಒಳಿತನ್ನು ಬೋಧಿಸಿರಿ. (ತಿರ್ಮಿದಿ)

(12) ಶಿಕ್ಷಣವನ್ನು ವಿದ್ಯಾರ್ಥಿಯ ಪ್ರಾಯ, ಅಗತ್ಯ, ಒಲವು, ವೈಯಕ್ತಿಕ ವಿಶೇಷತೆಗಳು ಮತ್ತು ಮಾನಸಿಕ ಸ್ಥಿತಿ ಗತಿಗಳನ್ನು ಪರಿಗಣಿಸಿ ನೀಡಲಾಗುವುದು. ಶಿಕ್ಷಣ ತರಬೇತಿಗಳಲ್ಲಿ ಗರಿಷ್ಠ ಸಾಧ್ಯ ಸೌಲಭ್ಯಗಳನ್ನು ಒದಗಿಸಲಾಗುವುದು.

ಶಿಕ್ಷಣವನ್ನು ಅವರು ಒಂದು ಭಾರವೆಂದು ಪರಿಗಣಿಸಿ ಆದರಿಂದ ನಿರಾಶೆ ಮತ್ತು ಹತಾಶರಾಗುವ ಸಂದರ್ಭ ಬಾರದಂತೆ ಎಚ್ಚರಿಕೆ ವಹಿಸಬೇಕು.

ಪ್ರವಾದಿ (ಸ) ಹೇಳಿದರು:

- ಸರಳ ಗೊಳಿಸಿರಿ, ಕಠಿಣ ಗೊಳಿಸದಿರಿ, ಸುವಾರ್ತೆ ನೀಡಿರಿ, ದ್ವೇಷ ಹುಟ್ಟಿಸದಿರಿ.

ಹ. ಅಬ್ದುಲ್ಲಾ ಬಿನ್ ಮಸ್‌ಊದ್ (ರ) ಈ ರೀತಿ ಹೇಳಿರುವರು:

- ಪ್ರವಾದಿವರ್ಯರು (ಸ) ಸಮಯದ ಅಂತರ ನೀಡಿ ಉಪದೇಶಿಸಿದಂತೆ ನಾನೂ ಅಂತರ ನೀಡಿ ಪ್ರವಚನ - ಬೋಧನೆ ನೀಡುತ್ತೇನೆ. ನಾವು ಬೇಸತ್ತು ಹೋಗಬಾರದೆಂದೇ ಪ್ರವಾದಿ (ಸ) ಹಾಗೆ ಮಾಡುತ್ತಿದ್ದರು.

ಪವಿತ್ರ ಕುರ್‌ಆನ್‌ನಲ್ಲಿ ಹೀಗಿದೆ:

- ಅಲ್ಲಾಹನ ಕರುಣೆಯ ಬಗ್ಗೆ ನಿರಾಶರಾಗದಿರಿ. ಅವನ ಕರುಣೆಯ ಬಗ್ಗೆ ನಿರಾಶರಾಗುವವರು ಸತ್ಯ ನಿಷೇಧಿಗಳು ಮಾತ್ರ. (12:87)

ಹ. ಅಲೀ (ರ) ಈ ರೀತಿ ಹೇಳಿರುವರು:

- ಮನಸ್ಸಿನ ಕೆಲವು ಇಚ್ಛೆಗಳು ಮತ್ತು ಒಲವುಗಳಿರುತ್ತವೆ. ಕೆಲವೊಮ್ಮೆ ಅದು ಮಾತು ಕೇಳಲು ಸಿದ್ಧವಿರುತ್ತದೆ. ಕೆಲವೊಮ್ಮೆ ಸಿದ್ಧವಿರುವುದಿಲ್ಲ. ಆದ್ದರಿಂದ ನೀವು ಜನರ ಮನಸ್ಸಿಗೆ ಆ ಒಲವುಗಳ ಮೂಲಕ ಪ್ರವೇಶಿಸಬೇಕು. ಅವರು ಮಾತು ಕೇಳಲು ಸಿದ್ಧವಿರುವಾಗಲೇ ನಿಮ್ಮ ಮಾತನ್ನು ಹೇಳಬೇಕು. ಏಕೆಂದರೆ ಮನಸ್ಸಿಗೆ ಯಾವುದಾದರೂ ವಿಷಯವನ್ನು ಒತ್ತಾಯಪೂರ್ವಕ ಹೇರಿದರೆ ಅದು ಕುರುಡಾಗಿ ಆ ವಿಷಯವನ್ನೇ ನಿರಾಕರಿಸಿ ಬಿಡುತ್ತದೆ.

(13) ವಿದ್ಯಾರ್ಥಿಯ ವ್ಯಕ್ತಿತ್ವದ ಎಲ್ಲ ಮುಖಗಳನ್ನು ಸಮರಸಗೊಳಿಸಿ, ಸಂತುಲಿತವಾಗಿ ವಿಕಾಸಗೊಳಿಸಲು ಶ್ರಮಿಸಲಾಗುವುದು. ನೈಸರ್ಗಿಕ ಸಾಮರ್ಥ್ಯಗಳನ್ನು ಬೆಳೆಸಲು ಪ್ರಯತ್ನಿಸಲಾಗುವುದು ಮತ್ತು ಅವುಗಳನ್ನು ಕಾರ್ಯರೂಪಕ್ಕೆ ತರಲು ಅವಕಾಶಗಳನ್ನು ಕಲ್ಪಿಸಿಕೊಡಲಾಗುವುದು. ಮಕ್ಕಳನ್ನು ದೇವನ ವಿಶ್ವಸ್ತನಿಧಿ ಯೆಂದು ಪರಿಗಣಿಸಲಾಗುತ್ತದೆ. ಅವರ ಶಾರೀರಿಕ ಮತ್ತು ಬೌದ್ಧಿಕವಾದ ಎಲ್ಲ ಶಕ್ತಿ ಸಾಮಾರ್ಥ್ಯಗಳನ್ನೂ ಅಲ್ಲಾಹನ ಕೊಡುಗೆಯೆಂದು ಬಗೆಯಲಾಗುತ್ತದೆ. ಅವುಗಳು ಮನುಷ್ಯನಿಗೆ ಅತ್ಯುಪಯುಕ್ತವಾಗುವಂತೆ ಅವುಗಳಿಗೆ ಸರಿಯಾದ ದಿಕ್ಕು ನಿರ್ಧರಿಸಬೇಕು.

(14) ವಿದ್ಯಾರ್ಥಿಗಳನ್ನು ಸರಳ ಮತ್ತು ಶ್ರಮ ಜೀವನಕ್ಕೆ ಸಿದ್ಧಗೊಳಿಸಲು ಪ್ರಯತ್ನಿಸಲಾಗುವುದು. ತನ್ನ ಕೆಲಸಗಳನ್ನು ತಾನು ಮಾಡಿಕೊಳ್ಳುವ ಬಗ್ಗೆ, ಸಮಾಜದ ದೀನದಲಿತರ ಸೇವೆ ಮಾಡುವುದರ ಬಗ್ಗೆ ಅವನಲ್ಲಿ ಯಾವುದೇ

ರೀತಿಯ ಸಂಕೋಚ ಉಂಟಾಗದಂತೆ ಪ್ರಯತ್ನಿಸಲಾಗುವುದು. ಪ್ರವಾದಿವರ್ಯರು ತಮ್ಮ ವೈಯಕ್ತಿಕ ಕೆಲಸ ಕಾರ್ಯಗಳನ್ನು ತಮ್ಮ ಸ್ವಂತ ಹಸ್ತಗಳಿಂದ ಮಾಡಿಕೊಳ್ಳುತ್ತಿದ್ದರು. ಪ್ರವಾದಿಯ ಆಪ್ತರಾದ ನಾಲ್ವರು ಖಲೀಫರುಗಳು ಮತ್ತು ಸಹಾಬಿಗಳು ಕೂಡಾ ಅವರ ಆದರ್ಶವನ್ನೇ ಅನುಕರಿಸಿದರು.

(15) ದೇವನ ಸಂಪ್ರೀತಿಯನ್ನು ಗಳಿಸುವುದು ಮತ್ತು ದೇವರ ಸೃಷ್ಟಿಗಳಿಗೆ ನೆರವಾಗುವುದೇ ವಿದ್ಯಾರ್ಜನೆಯ ಉದ್ದೇಶವಾಗಿರಬೇಕೇ ಹೊರತು ಇಂದು ಸಾಮಾನ್ಯವಾಗಿರುವಂತೆ ಪದವೀಧರರೆಂಬ ಜಂಭಕೊಚ್ಚಿಕೊಳ್ಳಲು ಸ್ಥಾನ ಮಾನಗಳನ್ನು ಗಳಿಸಲು ಮತ್ತು ಲೌಕಿಕ ಸಂಪತ್ತುಗಳ ಹಿಂದೆ ಬೀಳುವುದು ಆಗಿರಬಾರದು.

ಪ್ರವಾದಿ (ಸ) ಹೇಳಿರುವರು:

- ಒಬ್ಬ ವ್ಯಕ್ತಿಯು ದೇವಸಂಪ್ರೀತಿಗೆ ಹೇತುವಾದ ವಿದ್ಯೆಯನ್ನು ಲೌಕಿಕ ಸಂಪತ್ತನ್ನು ಗಳಿಸಲಿಕ್ಕಾಗಿ ಅರ್ಜಿಸಿದರೆ ನಿರ್ಣಾಯಕ ದಿನದಂದು ಅವನಿಗೆ ಸ್ವರ್ಗದ ಪರಿಮಳವೂ ಲಭಿಸದು.
(ಅಬೂದಾವೂದ್, ಇಬ್ನುಮಾಜ:, ಅಹ್ಮದ್)
- ಯಾರು ಪಂಡಿತರೊಂದಿಗೆ ವಾದ ವಿವಾದಕ್ಕಾಗಿ ಅಥವಾ ಪಾಮರರೊಂದಿಗೆ ಜಗಳಾಡಲಿಕ್ಕಾಗಿ ಅಥವಾ ಜನರನ್ನು ತನ್ನತ್ತ ಆಕರ್ಷಿಸಲಿಕ್ಕಾಗಿ ವಿದ್ಯೆಗಳಿಸುವನೋ ಅವನನ್ನು ಅಲ್ಲಾಹನು ನರಕಕ್ಕೆ ತಳ್ಳುವನು. (ತಿರ್ಮಿದಿ, ಇಬ್ನುಮಾಜ:)

(16) ಹಿರಿಯ-ಕಿರಿಯರು, ಸುಶಿಕ್ಷಿತರು-ಅಶಿಕ್ಷಿತರು ಎಲ್ಲರೂ ವಿದ್ಯೆಗಾಗಿ ಹಾತೊರೆಯುವಂತಹ ವಾತಾವರಣದ ಸೃಷ್ಟಿಗೆ ಪ್ರಯತ್ನಿಸಲಾಗುವುದು. ಲೈಬ್ರರಿ, ವಾಚನಾಲಯ, ಅಧ್ಯಯನ ವರ್ತುಲ ಇತ್ಯಾದಿಗಳ ಮುಖಾಂತರ ಮನುಷ್ಯನು ತಾಯಿಯ ಮಡಿಲಿಂದ ಮಣ್ಣಿನ ಒಡಲ ತನಕ ವಿದ್ಯಾರ್ಜನೆ ಮಾಡುತ್ತಿರಲು ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು. ಪ್ರವಾದಿ ಮುಹಮ್ಮದ್ (ಸ) ಹೀಗೆ ಹೇಳಿರುವರು:

- ಸತ್ಯ ವಿಶ್ವಾಸಿಯ ಹೊಟ್ಟೆಯು ಉತ್ತಮ ಬೋಧನೆಗಳಿಂದ ತುಂಬುವುದೆ ಇಲ್ಲ. ಆದ್ದರಿಂದ ಅವನು ಅದನ್ನು ಆರಿಸುತ್ತಲೇ ಇರುತ್ತಾನೆ. ಸ್ವರ್ಗವನ್ನು ಪ್ರವೇಶಿಸುವ ತನಕ. (ತಿರ್ಮಿದಿ)

ಇಸ್ಲಾಮೀ ಶಿಕ್ಷಣ ವ್ಯವಸ್ಥೆಯ ಮೂಲಭೂತ ವೈಶಿಷ್ಟ್ಯಗಳಿವು. ಮನುಷ್ಯನ ವ್ಯಕ್ತಿತ್ವದ ಎಲ್ಲ ಮುಖಗಳು ಅವನ ಎಲ್ಲ ಪ್ರಕೃತಿದತ್ತ ಶಕ್ತಿ-ಸಾಮರ್ಥ್ಯಗಳು ಮತ್ತು ಅವನ ಎಲ್ಲ ಬೇಡಿಕೆಗಳನ್ನು ಪರಿಗಣಿಸುವ ಸಮಗ್ರ ವ್ಯವಸ್ಥೆ ಇಸ್ಲಾಮೀ ಶಿಕ್ಷಣ ವ್ಯವಸ್ಥೆ

ಮಾತ್ರವೆಂಬುದು ಇದರಿಂದ ವ್ಯಕ್ತವಾಗುತ್ತದೆ. ಎಲ್ಲ ರೀತಿಯಲ್ಲೂ ಸಂಪೂರ್ಣ ಉಪಯುಕ್ತ ಮತ್ತು ಅಲ್ಲಾಹನ ದೃಷ್ಟಿಯಲ್ಲಿ ಅಧಿಕೃತವಾದ ವ್ಯವಸ್ಥೆಯೂ ಇದುವೆ. ಇನ್ನಿತರ ಎಲ್ಲ ಶಿಕ್ಷಣ ಪದ್ಧತಿಗಳು ಮಾನವ ನಿರ್ಮಿತವಾಗಿದ್ದು ಏಕಮುಖ, ದೋಷಪೂರ್ಣ, ಅಪೂರ್ಣ ಮತ್ತು ಒಟ್ಟಿನಲ್ಲಿ ಮಾನವತೆಗೆ ಮಾರಕವಾಗಿದೆ. ಮನುಷ್ಯನ ಯಶಸ್ಸು ಇಸ್ಲಾಮೀ ಶಿಕ್ಷಣ ಪದ್ಧತಿಯಲ್ಲೇ ಅಡಕವಾಗಿದೆ. ಪ್ರಸಕ್ತ ಶಿಕ್ಷಣ ಸಮಸ್ಯೆಗಳನ್ನು ಇದರ ಮೂಲಕ ಮಾತ್ರ ಪರಿಹರಿಸಬಹುದು. ಇದುವೇ ನಮ್ಮ ಮುಂದಿನ ತಲೆಮಾರುಗಳ ಭವಿಷ್ಯವನ್ನು ಬೆಳಗಿಸಬಲ್ಲುದು.

ಇಸ್ಲಾಮಿನ ದೃಷ್ಟಿಯಲ್ಲಿ ಶಿಕ್ಷಣವನ್ನು ಧಾರ್ಮಿಕ ಮತ್ತು ಲೌಕಿಕವೆಂದು ವಿಂಗಡಿಸುವುದು ಸೂಕ್ತವಲ್ಲ. ಅದರಿಂದ ಲೋಕ ಜ್ಞಾನವಿಲ್ಲದ ಧರ್ಮ ಪಂಡಿತರು ಮತ್ತು ಧರ್ಮದ ಗಂಧಗಾಳಿಯೂ ಸೋಂಕದ ಪದವೀಧರರು ಸೃಷ್ಟಿಯಾಗುತ್ತಾರೆ. ಈ ಎರಡೂ ವರ್ಗದ ವಿದ್ಯಾವಂತರು ಇಸ್ಲಾಮೀ ಸಮಾಜದ ಮಟ್ಟಿಗೆ ಅಪಾಯಕಾರಿಗಳಾಗಿರುವರು. ಆಧುನಿಕ ವಿಜ್ಞಾನ, ತಂತ್ರಜ್ಞಾನಗಳ ಮೂಲಭೂತ ವಿಷಯಗಳನ್ನು ಕಲಿಸದ ದಾರುಲ್ ಉಲೂಮ್‌ಗಳು ಮತ್ತು ಕುರ್‌ಆನ್ ಹದೀಸ್‌ಗಳ ಜ್ಞಾನ ನೀಡದ ಕಾಲೇಜು, ವಿಶ್ವವಿದ್ಯಾಲಯಗಳು ಇಸ್ಲಾಮಿನ ದೃಷ್ಟಿಯಲ್ಲಿ ಅರೆವೈದ್ಯರನ್ನು ಸೃಷ್ಟಿಸುವ ಕೇಂದ್ರಗಳೆನಿಸುತ್ತವೆ.

ಈಗ ಮುಸ್ಲಿಮ್ ಸಮಾಜ ನಡೆಸುತ್ತಿರುವಂತಹ ಶಾಲಾ ಕಾಲೇಜುಗಳಲ್ಲಿ ಕುರ್‌ಆನ್ ಹದೀಸ್‌ಗಳ ಅಧ್ಯಯನವನ್ನು ಮುಸ್ಲಿಮ್ ವಿದ್ಯಾರ್ಥಿಗಳಿಗೆ ಕಡ್ಡಾಯಗೊಳಿಸಬೇಕು. ಕೇವಲ ಫಿಕ್ಹ್(ಕರ್ಮಶಾಸ್ತ್ರ)ದ ಕಲಿಕೆಗೆ ಅತ್ಯಧಿಕ ಮಹತ್ವ ನೀಡುವ ಮದ್ರಸಾ, ದಾರುಲ್ ಉಲೂಮ್ ಮತ್ತು ಅರಬಿಕ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಕುರ್‌ಆನ್ ಮತ್ತು ಹದೀಸ್‌ನ ಅಧ್ಯಯನಕ್ಕೆ ಪ್ರಥಮ ಪ್ರಾಶಸ್ತ್ಯ ನೀಡುವುದರ ಜೊತೆಗೆ ಆಧುನಿಕ ವಿಜ್ಞಾನ ಮತ್ತಿತರ ವಿದ್ಯೆಗಳನ್ನು ಕಲಿಸುವ ಏರ್ಪಾಡು ಮಾಡಬೇಕು. ಆಗ ಮಾತ್ರ ಈ ಸಮುದಾಯ ಲೋಕ ಜ್ಞಾನವಿಲ್ಲದ ಮುಲ್ಲಾ ಮುಸ್ಲಿಯಾರ್‌ಗಳಿಂದ ಮತ್ತು ಧರ್ಮಜ್ಞಾನವಿಲ್ಲದ ಧನಿಕ ಮಿಸ್ಟರ್‌ಗಳಿಂದ ಮುಕ್ತಿ ಹೊಂದೀತು. ಸದ್ಯ ಸಮುದಾಯದ ನಾಯಕತ್ವವು ಧಾರ್ಮಿಕ ಮತ್ತು ಸೆಕ್ಯೂಲರ್ ಎಂದು ವಿಂಗಡಿಸಲ್ಪಟ್ಟು ಈ ಎರಡು ವರ್ಗಗಳಲ್ಲಿ ಕೇಂದ್ರೀಕೃತವಾಗಿದೆ. ಸಮುದಾಯವನ್ನು ಅವರಿಂದ ವಿಮೋಚಿಸಲು ಇಸ್ಲಾಮೀ ಶಿಕ್ಷಣ ಕ್ರಾಂತಿಯೇ ಏಕೈಕ ಮಾರ್ಗವಾಗಿದೆ.

------

● ಡಾ। ಪ. ನಾರಾಯಣ ರಾವ್
ಬಳಕೆದಾರರ ವೇದಿಕೆ,
ಉಡುಪಿ -576 101.

# ಪ್ರಜೆಗಳನ್ನು ಪ್ರಜಾತಂತ್ರಕ್ಕೆ ತಕ್ಕವರನ್ನಾಗಿಸುವ ಅನೌಪಚಾರಿಕ ಶಿಕ್ಷಣ

**ಪ್ರಸ್ತಾವನೆ :**

ಪ್ರಜಾತಂತ್ರದ ಅನುಷ್ಠಾನದಲ್ಲಿ ನಮ್ಮಲ್ಲಿ ಕೆಲವು ಲೋಪಗಳಾಗಿವೆ. ಹಾಗಾಗಿ ನಮಗೆ ಸ್ವಾತಂತ್ರ್ಯವು ಪ್ರಾಪ್ತವಾಗಿ ನಾಲ್ಕು ದಶಕಗಳಿಗಿಂತ ಹೆಚ್ಚು ಕಾಲ ಸಂದಿದ್ದರೂ ಬಹು ಮಂದಿ ಭಾರತೀಯರ ಮಟ್ಟಿಗೆ ಆ ಸ್ವಾತಂತ್ರ್ಯವು ಮಹತ್ತಾದದ್ದೇನನ್ನೂ ಇನ್ನೂ ತಂದು ಕೊಟ್ಟಿಲ್ಲ. ''ಸ್ವಾತಂತ್ರ್ಯೋತ್ಸವವೆಂದುಕೊಂಡು ಅಥವಾ ಗಣರಾಜ್ಯೋತ್ಸವವೆಂದು ಕೊಂಡು ಉಲ್ಲಸಿತರಾಗುವ ಪ್ರಮೇಯವೇನಿದೆ?'' - ಬಹು ಮಂದಿ ಭಾರತೀಯರು ಸಹಜವಾಗಿ ಕೇಳಬಹುದಾದ ಪ್ರಶ್ನೆಯಿದು.

ದಿನಾಂಕ 15-08-1947ರಂದು ನಾವು ಕಂಡಿದ್ದ ಹೊಂಗನಸು ಇಂತಿತ್ತು - ಬಹು ಭಾಷೆಗಳವರು ಮತ್ತು ಬಹು ಜಾತಿಮತಗಳವರು ನಮ್ಮಲ್ಲಿದ್ದರೂ ನಾವೆಲ್ಲ ಕ್ರಮೇಣ ಭಾವಾತ್ಮಕವಾಗಿ ಒಂದಾಗದಿರಲಿಕ್ಕಿಲ್ಲ; ಬಡತನವು ಕಡಿಮೆಯಾದೀತು; ಸಾಮಾಜಿಕ ಅನ್ಯಾಯವು ತೊಲಗೀತು; ಅನಕ್ಷರರೇ ಇಲ್ಲವೆಂದಾದೀತು. ಒಟ್ಟಿನಲ್ಲಿ ನಮ್ಮಲ್ಲಿ ಪ್ರಜಾತಂತ್ರವು ಆರೋಗ್ಯಯುತವಾಗಿ ಬೆಳೆದೀತು.

ಆದರೆ ಕಳೆದ ನಲ್ವತ್ತನಾಲ್ಕು ವರ್ಷಗಳಲ್ಲಿ ಈ ಕನಸು ನನಸಾಗಿಲ್ಲ. ಪುನಃ ಪುನಃ ವರದಿಯಾಗುತ್ತಲೇ ಇರುವ ಹತ್ಯಾಕಾಂಡಗಳಿಂದ ಸ್ಪಷ್ಟವಾಗುವಂತೆ, ಭಾವಾತ್ಮಕವಾದ ಏಕತೆಯಿಂದ ನಾವು ಇನ್ನೂ ಬಲು ದೂರವಿದ್ದೇವೆ. ಸಾಮಾಜಿಕ ಅನ್ಯಾಯವು ಇನ್ನೂ

ಧಾರಾಳವಾಗಿ ಉಳಿದುಕೊಂಡಿದೆ. ಆಳಿಕೆ ಆಡಳಿತಗಳಲ್ಲಿ ಭ್ರಷ್ಟಾಚಾರದ ತಾಂಡವಕ್ಕೆ ಆತಂಕಗಳೇ ಇಲ್ಲ. ಭ್ರಷ್ಟಾಚಾರಜನ್ಯ ಹಣವನ್ನು ಭಾರೀ ಪ್ರಮಾಣದಲ್ಲಿ ಸ್ವಿಟ್ಜರ್‌ಲ್ಯಾಂಡಿನ ಬ್ಯಾಂಕ್‌ಗಳಲ್ಲಿ ಇರಿಸುವುದು ಸುಗಮವಾಗಿದೆ. ಚುನಾವಣೆಗಳ ಸಂದರ್ಭಗಳಲ್ಲಿ ಈ ಹಣದ ಅನಿಷ್ಟ ವಿನಿಯೋಗವು ಭಾರಿ ಪ್ರಮಾಣದಲ್ಲಿ ಆಗುವುದು ಸ್ಪಷ್ಟವಿದೆ. ಯಾವೊಂದು ವೃತ್ತಿಯವರಲ್ಲಾಗಲಿ, ವರ್ಗದವರಲ್ಲಾಗಲಿ, ರಾಜಕೀಯ ಪಕ್ಷದವರಲ್ಲಾಗಲಿ ಸೊಬಗರು ಬಹಳಷ್ಟು ಮಂದಿ ಇಲ್ಲವೆಂಬ ದುರ್ದೆಶೆಯು ಈ ನಾಡಿಗೆ ಬಂದಿದೆ. ಊಳಿಗಮಾನ್ಯ ವ್ಯವಸ್ಥೆಯಿಂದ ಮೂಡಿಬಂದ ನಮ್ಮ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಗಣ್ಯರನ್ನು (ಅವರು ಗಣ್ಯರೆಂಬ ಕಾರಣಕ್ಕೆ) ವಿಮರ್ಶಾರಹಿತವಾಗಿ ಆರಾಧಿಸುವುದು ನಮ್ಮಲ್ಲಿ ಇನ್ನೂ ಸಾಮಾನ್ಯ; ಅವರುಗಳ ಅವ್ಯವಹಾರಗಳ ಬಗೆಗೆ ಅಸಮ್ಮತಿಯ ಅಭಿವ್ಯಕ್ತಿಯು ಇನ್ನೂ ಅಸಾಮಾನ್ಯ.

ನಮ್ಮನ್ನು ಆಳಿಕೊಂಡು ಬಂದಿರುವವರು ಆರ್ಥಿಕ ನಿರ್ವಹಣೆಯಲ್ಲಿ ಸೋತಿದ್ದಾರೆ. ಎಷ್ಟೋ ವರ್ಗಗಳವರಿಗೆ ಆರ್ಥಿಕ ಸ್ವಾತಂತ್ರ್ಯವು ಇನ್ನೂ ಪ್ರಾಪ್ತವಾಗಿಲ್ಲ. ನಿರೀಕ್ಷೆ ಅಪೇಕ್ಷೆಗಳಿಗೆ ತಕ್ಕಂತೆ ಬಡತನವು ಕಡಿಮೆಯಾಗಿಲ್ಲ. ಸಿರಿವಂತರು ಹೆಚ್ಚು ಹೆಚ್ಚು ಸಿರಿವಂತರಾಗುತ್ತ ಬಂದಿದ್ದಾರೆ; ಮಧ್ಯಮ ವರ್ಗಗಳವರು ಸುಸ್ತಾಗಿದ್ದಾರೆ; ಹಣದುಬ್ಬರವು ಅವರುಗಳ ವಸ್ತುತ: ಆದಾಯಗಳನ್ನು ಕುಗ್ಗಿಸಿದೆ.

ಹಣದುಬ್ಬರದ ಕಾರಣಗಳು ಹಲವು:-

(ಅ) ಅನುತ್ಪಾದಕ ವೆಚ್ಚದ ಭಾರಿ ಹೆಚ್ಚಳ. ಮಂತ್ರಿಗಳ ಮತ್ತು ಉನ್ನತ ಸ್ತರಗಳಲ್ಲಿಯ ಅಧಿಕಾರಿಗಳ ವಿದೇಶ ಪ್ರವಾಸಗಳು; ಭಾರತದಲ್ಲೇ ಏರ್ಪಡಿಸಲ್ಪಡುವ ದುಬಾರಿ ಮತ್ತು ಅನಗತ್ಯ ಅಂತಾರಾಷ್ಟ್ರೀಯ ಸಮ್ಮೇಳನಗಳು ('ನ್ಯಾಮ್', 'ಚೋಗ್ಮ್', 'ಏಷ್ಯಾಡ್', 'ಸಾರ್ಕ್' ಇಂಥವುಗಳು) ವಿದೇಶಗಳಲ್ಲಿ ಏರ್ಪಡಿಸಲ್ಪಡುವ ಅನಗತ್ಯ 'ಭಾರತ ಉತ್ಸವಗಳು'; ನಮ್ಮ ಅಣುಶಕ್ತಿ ಘಟಕಗಳು; ನಮ್ಮ ಬಾಹ್ಯಾಕಾಶ ಸಂಶೋಧನಾ ಕಾರ್ಯಕ್ರಮ; ಪ್ರಚಾರಕ್ಕೆ ಮಾತ್ರ ಲಾಯಕ್ಕಾಗಿದ್ದು, ರಾಷ್ಟ್ರದ ಕಲ್ಯಾಣಕ್ಕೆ ನಾಲಾಯಕ್ಕಾಗಿದ್ದ 'ಅಂಟಾರ್ಟಿಕಾ ಪ್ರವಾಸ' ದಂಥ ಕಾರ್ಯಕ್ರಮಗಳು; ಗಣ್ಯರು ಮೃತರಾದಾಗ ಅವರ ಅಂತ್ಯ ವಿಧಿಗಳನ್ನೋ, ಚಿತಾಭಸ್ಮದ ವಿಧಿಯನ್ನೋ ರಾಷ್ಟ್ರದ ವೆಚ್ಚದಲ್ಲಿ ಮಾಡುವುದು; ಕೆಲವೇ ಕೆಲವು ಅತಿ ಗಣ್ಯರ ರಕ್ಷಣೆಗಾಗಿ ಇರುವ ದುಬಾರಿ ಭದ್ರತಾ ಏರ್ಪಾಟುಗಳು - ಇವೆಲ್ಲವುಗಳಿಂದಾಗಿ ಆಗುತ್ತಿರುವ ಅನುತ್ಪಾದಕ ವ್ಯಯವು ಅಪಾರ.

(ಆ) ಪ್ರತಿ ವರ್ಷ ಭ್ರಷ್ಟಾಚಾರದಿಂದ ಉತ್ಪನ್ನವಾಗುವ 40,000 ಕೋಟಿ ರೂಪಾಯಿ ಯಷ್ಟು 'ಕಪ್ಪು ಹಣ'ವು 'ಬಿಳಿ ಹಣ' ದೊಂದಿಗೆ ಸಮಾನಾಂತರವಾಗಿ (ಆದರೆ ಗುಪ್ತಗಾಮಿನಿಯಾಗಿ) ಹರಿಯುತ್ತಿರುವುದು ಹಣದುಬ್ಬರಕ್ಕೆ ಮತ್ತೊಂದು ಕಾರಣ.

(ಇ) ಉತ್ಪಾದನೆಯ ಕೊರತೆಯು ಹಣದುಬ್ಬರಕ್ಕೆ ಮೂರನೆಯ ಕಾರಣ. ಈ ಕೊರತೆಗೆ

ಕಾರ್ಮಿಕರ ಅಶಿಸ್ತು ಮಾತ್ರ ಕಾರಣವಲ್ಲ; ಉದ್ದಿಮೆಗಳ ರಾಷ್ಟ್ರೀಕರಣವೇ 'ಸೋಷಿಯಲಿಸಂ' ಎಂಬ ಭ್ರಮೆಯಿಂದ ರಾಷ್ಟ್ರೀಕರಿಸಲ್ಪಟ್ಟಿದ್ದ ಬಹುತೇಕ ಉದ್ದಿಮೆಗಳು ಸೋಲುತ್ತ ಬರುವುದರಿಂದಲೂ ಉತ್ಪಾದನೆಯು ಕುಂಠಿತವಾಗಿದೆ.

ಹೆಂಡತಿಯ ಮೈಯ ಮೇಲಿನ ಆಭರಣಗಳನ್ನು ಒತ್ತೆಯಿಡುವ ಗಂಡನಂತೆ ಭಾರತವು 46.91 ಟನ್ ಚಿನ್ನವನ್ನು ಬ್ಯಾಂಕ್ ಆಫ್ ಇಂಗ್ಲೆಂಡಿನಲ್ಲಿ ಒತ್ತೆಯಿಡುವ ಪ್ರಮೇಯವನ್ನು ತಂದುಕೊಂಡಿದೆ; ಮತ್ತು 20 ಟನ್ ವಶೀಕೃತ ಚಿನ್ನವನ್ನು ಸ್ವಿಸ್ ಬ್ಯಾಂಕೊಂದಕ್ಕೆ ಮಾರುವ ಪ್ರಮೇಯವನ್ನೂ ತಂದುಕೊಂಡಿದೆ; ಚುಟುಕಾಗಿ ಹೇಳಬೇಕೆಂದರೆ, ಈ ದೇಶವು ದಿವಾಳಿಯಾಗುವ ಅಂಚಿಗೆ ಬಂದಿದೆ.

"ಅಯ್ಯೋ, ಹೀಗೇಕೆ ನಮ್ಮ ದೇಶ?" ಎಂದು ಕೇಳುವಿರಾ? ಪ್ರಜಾತಂತ್ರದ ಸ್ಪಷ್ಟ ಕಲ್ಪನೆಯು ನಮ್ಮಲ್ಲಿ ಬಹುಮಂದಿಗೆ ಇನ್ನೂ ಇರದಿರುವುದರಿಂದಲೇ ನಮ್ಮ ದೇಶದ ಅವಸ್ಥೆ ಹೀಗಾಗಿದೆ. ಪ್ರಜಾತಂತ್ರದ ಕುರಿತ ಶಿಕ್ಷಣವನ್ನು ನೇರವಾಗಿ ಶಾಲೆಗಳಲ್ಲಿ ನೀಡಬೇಕಾಗಿತ್ತೆಂಬುದು ಈ ಮಾತಿನ ಅರ್ಥವಲ್ಲ. ನಮ್ಮಲ್ಲಿ ಪ್ರಜಾತಂತ್ರದ ಅನುಷ್ಠಾನವೇ ಎಂತಿರಬೇಕಾಗಿತ್ತೆಂದರೆ, ತನ್ಮೂಲಕವೇ ಅನೌಪಚಾರಿಕವಾದ ರಾಜಕೀಯ ಶಿಕ್ಷಣವು ಶ್ರೀ ಸಾಮಾನ್ಯನಿಗೆ ಪ್ರಾಪ್ತವಾಗುವಂತಿರಬೇಕಾಗಿತ್ತು. ಆದರೆ ಹೀಗಾಗಬೇಕೆಂಬ ಛಲವು ನಮ್ಮ ನೇತಾರರುಗಳಿಗೆ 1947 ಲಾಗಾಯ್ತು ಇದ್ದುದೇ ಇಲ್ಲವೆನ್ನುವುದೇ ಈ ದೇಶದ ಮಹಾದುರಂತಗಳಲ್ಲೊಂದು.

**ಪ್ರಜಾತಂತ್ರದಲ್ಲಿ ಪ್ರಜೆಯ ಹೊಣೆ :**

ಪ್ರಜಾತಂತ್ರದಲ್ಲಿ ಪ್ರತಿ ಪ್ರಜೆಗೂ ಇರುವ ಪ್ರಾಧಾನ್ಯ ಇನ್ನು ಯಾವ ರಾಜಕೀಯ ಪದ್ಧತಿಯ ಮೇರೆಗೂ ಇಲ್ಲ. ಪ್ರಜಾಸತ್ತೆಯ ನಿಜ ವೈಶಿಷ್ಟ್ಯವನ್ನು ಗುರುತಿಸಿಕೊಂಡಿರದ ಮಂದಿ "ಅದು ಎಲ್ಲರನ್ನೂ ಸಮಾನರನ್ನಾಗಿ ಪರಿಗಣಿಸುವ ಪದ್ಧತಿ" ಎಂದು ವಿಶ್ಲೇಷಿಸಿ ಬಿಡುವುದುಂಟು. ಆದರೆ ಈ ವಿಶ್ಲೇಷಣೆಯು ಸಮರ್ಪಕವಾದುದಲ್ಲ. ದೇಹಾಕೃತಿಯಲ್ಲಾಗಲಿ, ದೈಹಿಕ ಶಕ್ತಿಯಲ್ಲಾಗಲಿ, ಬುದ್ಧಿಶಕ್ತಿಯಲ್ಲಾಗಲಿ, ಮನೋಧರ್ಮದಲ್ಲಾಗಲಿ, ಪ್ರವೃತ್ತಿಯಲ್ಲಾಗಲಿ, ಹೃದಯ ವೈಶಾಲ್ಯ ಕಲ್ಪನಾ ವೈಶಾಲ್ಯಗಳಲ್ಲಾಗಲಿ, ಶೀಲಸ್ವಭಾವಗಳಲ್ಲಾಗಲಿ ಎಲ್ಲರೂ ಸಮಾನರಲ್ಲವೆಂಬುದು ನಿತ್ಯ ಜೀವನದಲ್ಲಿ ಸರ್ವರಿಗೂ ವೇದ್ಯವಾಗಬಹುದಾದ ವಿಷಯವೇ.

ಹಾಗಾದರೆ ಪ್ರಜಾತಂತ್ರದಲ್ಲಿ ಸರ್ವರೂ ಸಮಾನರೆನ್ನುವುದು ಯಾವ ಅರ್ಥದಲ್ಲಿ ಸರಿಯಾದೀತು? ಆ ಅರ್ಥವು ಹೀಗಿದೆ :- ಮಾನವನೆಂದ ಮಾತ್ರಕ್ಕೆ ಪ್ರತಿಯೊಬ್ಬನೂ ಆತ್ಮವುಳ್ಳವನಾಗಿರುತ್ತಾನೆ. ವಿಶಿಷ್ಟವಾದ ವ್ಯಕ್ತಿತ್ವವುಳ್ಳವನಾಗಿರುತ್ತಾನೆ. ಈ ವ್ಯಕ್ತಿತ್ವವು ಪವಿತ್ರವಾದುದು, ಗೌರವಾರ್ಹವಾದುದು, ಅಲಂಘ್ಯವಾದುದು; ಅವನ ಸಾಮರ್ಥ್ಯವು ಹೆಚ್ಚಿರಲಿ, ಕಡಿಮೆಯಿರಲಿ, ಅವನು ಬುದ್ಧಿವಂತನಿರಲಿ ಹೆಡ್ಡನಿರಲಿ, ಬಲ್ಲಿದನಿರಲಿ

ಪಾಮರನಿರಲಿ, ಸಿರಿವಂತನಿರಲಿ, ದರಿದ್ರನಿರಲಿ ಅವನು ಮಾನವನೆಂಬ ಏಕಮಾತ್ರ ಕಾರಣದಿಂದ ಅವನಲ್ಲಿ ವಿಶ್ಲೇಷಿಸಲಸದಳವಾದ, ಗೌರವಾರ್ಹವಾದ ಮತ್ತು ಜತನದಿಂದ ಕಾಯ್ದು ಉಳಿಸಿಕೊಂಡು ಬರಲೇಬೇಕಾದ್ದು ಏನೋ ಒಂದು ಇದೆ. ಅದನ್ನು ಅಂತಃಸತ್ವವೆನ್ನಿ, ಆತ್ಮವೆನ್ನಿ, ಇನ್ನೇನಾದರೂ ಅನ್ನಿ. ಈ ಅರ್ಥದಲ್ಲಿ ಮಾತ್ರವೇ ಪ್ರಜಾತಂತ್ರದಲ್ಲಿ ಎಲ್ಲರೂ ಸಮಾನರು.

ಅರ್ಥಾತ್ ಶ್ರೀಸಾಮಾನ್ಯನಿಗೆ ಪ್ರಾಧಾನ್ಯವನ್ನು ನೀಡುವ ಪರಂಪರೆಯೇ ಪ್ರಜಾತಂತ್ರ. ಯಾರೂ ಇತರರಿಗಿಂತ ಮೇಲಲ್ಲ, ಕೀಳಲ್ಲ; ದೇವಾಂಶ ಸಂಭೂತರಂತು ಯಾರೂ ಅಲ್ಲ; ಯಾರದ್ದೋ ಮಗನೆಂದೋ, ಮಗಳೆಂದೋ, ಮೊಮ್ಮಗನೆಂದೋ ಯಾರೂ ಉಳಿದವರಿಗಿಂತ ಮೇಲಲ್ಲ; ಯಾರೊಬ್ಬರೂ 'ಗಣ್ಯ' (VIP) ಅಲ್ಲ; ಅಥವಾ ಎಲ್ಲರೂ ಗಣ್ಯರೇ; ಎಲ್ಲರೂ ಆಯಾ ದೇಶದ ಪುತ್ರರು, ಪುತ್ರಿಯರು.

ಪ್ರಜಾಸತ್ತೆಯ ಈ ವೈಶಿಷ್ಟ್ಯವನ್ನು ಪ್ರಸಿದ್ಧ ಆಂಗ್ಲ ಚಿಂತಕ ಬರ್ಟ್‌ರಂಡ್ ರಸೆಲ್ ಹೀಗೆ ವ್ಯಕ್ತಪಡಿಸಿದ್ದಿದೆ - ವ್ಯಕ್ತಿಯು ಮುಖ್ಯವಲ್ಲ, ಸಂಸ್ಥಾನವೇ ಮುಖ್ಯವೆಂದು ಕಮ್ಯೂನಿಸಮ್ ಬಗೆಯುತ್ತಿದ್ದರೆ, ಕೆಲ ಅಸಾಮಾನ್ಯ ವ್ಯಕ್ತಿಗಳು ಮಾತ್ರ ಮುಖ್ಯವೆಂದು ಫ್ಯಾಸಿಸಮ್ ಬಗೆಯುತ್ತಿದ್ದರೆ, ಶ್ರೀ ಸಾಮಾನ್ಯನು ಮುಖ್ಯವೆಂದು ಬಗೆಯುವುದು ಪ್ರಜಾಸತ್ತೆ ಮಾತ್ರ.

ಶ್ರೀ ಸಾಮಾನ್ಯನು ಮುಖ್ಯವೆಂಬ ನೆಲೆಯ ರಾಜಕೀಯ ವ್ಯವಸ್ಥೆಯು ಇದಾಗಿರುವುದರಿಂದ, ರಾಷ್ಟ್ರದ ಆಳಿಕೆಗೆ ಬೇಕಾಗುವ ಅಧಿಕಾರದ ಒಂದಂಶವು (ಅದೆಷ್ಟೇ ಅಲ್ಪಾಂಶವಿರಲಿ) ಪ್ರತಿ ಪ್ರಜೆಯ ಕೈಯಲ್ಲಿಯೂ ಇರುವುದು. ಅಂತೆಯೇ ರಾಷ್ಟ್ರದ ಆಳಿಕೆಯ ಬಗೆಗೆ ವೈಯಕ್ತಿಕವಾದ ಹೊಣೆಗಾರಿಕೆಯ ಒಂದಂಶವು ಪ್ರತಿ ಪ್ರಜೆಯ ಹೆಗಲ ಮೇಲೆ ಬಂದು ಕೂರುವುದು. ಆಳಿಕೆಯ ಬಗ್ಗೆ ತನಗಿರುವ ವೈಯಕ್ತಿಕವಾದ ಹೊಣೆಯ ಪ್ರಜ್ಞೆಯು ಪ್ರತಿ ಪ್ರಜೆಗೂ ಸದಾಕಾಲವೂ ಇರಲೇಬೇಕು. ಈ ಹೊಣೆಯನ್ನು ಅತಿ ಉಲ್ಲಾಸದಿಂದ, ನಿಷ್ಠೆಯಿಂದ, ಪೂರ್ಣ ಪ್ರಜ್ಞೆಯಿಂದ ಮತ್ತು ತನ್ನ ಕೈಲಾಗುವಷ್ಟು ಪರಿಣಾಮಕಾರಿಯಾಗಿ ಪ್ರತಿ ಪ್ರಜೆಯೂ ನಿರ್ವಹಿಸಿಕೊಂಡು ಬರಲೇಬೇಕು.

ಪ್ರತಿ ಪ್ರಜೆಗೆ ಆಳಿಕೆಯ ಬಗ್ಗೆ ತನ್ನ ವೈಯಕ್ತಿಕವಾದ ಹೊಣೆಯ ಪ್ರಜ್ಞೆಯಷ್ಟೇ ಇದ್ದರೆ ಸಾಲದು. ಹೆರವರು ತಂತಮ್ಮ ಕೈಗೆ ಬಂದಿರುವ ಆಂಶಿಕವಾದ ಅಧಿಕಾರದ ಸದುಪಯೋಗವನ್ನೋ ದುರುಪಯೋಗವನ್ನೋ ಮಾಡಿಕೊಂಡು ಬರುತ್ತಿರುವ ಬಗೆ, ತಂತಮ್ಮ ಹೆಗಲ ಮೇಲೆ ಬಂದು ಕೂತಿರುವ ಆಂಶಿಕವಾದ ಹೊಣೆಯನ್ನು ನಿರ್ವಹಿಸುತ್ತಿರುವ ಅಥವಾ ನಿರ್ವಹಿಸದಿರುವ ಬಗೆ ಮತ್ತು ಇವುಗಳ ಪರಿಣಾಮಗಳು - ಇಷ್ಟೆಲ್ಲದರ ಪ್ರಜ್ಞೆಯೂ ಬೇಕು. ಅರ್ಥಾತ್ ದೇಶದ ರಾಜಕೀಯದಲ್ಲಿಯ ಸಮಸ್ತ ಆಗುಹೋಗುಗಳ

ತಿಳುವಳಿಕೆ ಮತ್ತು ನಿರಂತರ ಅಧ್ಯಯನ ಬೇಕು; ಎಲ್ಲ ಆಗುಹೋಗುಗಳಿಗೆ ತಕ್ಕಂತೆ ಸ್ಪಂದಿಸುತ್ತ ತನ್ನ ಪ್ರಕ್ರಿಯೆಯನ್ನು ವ್ಯಕ್ತಪಡಿಸುವುದು ಬೇಕು. ಇಂಥ ಸ್ಪಂದನದಿಂದ ಮತ್ತು ಪ್ರಕ್ರಿಯೆಯಿಂದ ಆಳಿಕೆಯ ಮೇಲೆ, ಆಡಳಿತದ ಮೇಲೆ ಪರಿಣಾಮವು ಆಗುತ್ತಿರಲೂ ಬೇಕು. ಆಗುತ್ತಿರುವುದು ಸರ್ವಗೋಚರವಾಗುತ್ತಿರಲೂ ಬೇಕು. ಸರ್ವವಿಧಿತವಾಗುತ್ತಿರಲೂ ಬೇಕು.

ಪ್ರಜೆಯು ಆಳಿಕೆ, ಆಡಳಿತಗಳ ಬಗ್ಗೆ ತನ್ನ ಸಮ್ಮತಿಯನ್ನು ಮತ್ತು (ಅದಕ್ಕಿಂತಲೂ ಮುಖ್ಯವಾಗಿ) ತನ್ನ ಅಸಮ್ಮತಿಯನ್ನು ಸ್ಪಷ್ಟಪಡಿಸಬೇಕು; ತನ್ನ ಅಸಮ್ಮತಿಯನ್ನಂತು ಮರೆಸಲೇಬಾರದು; ಅಸಮ್ಮತಿಯನ್ನು ರಾಜಾರೋಷವಾಗಿ ಕೆಚ್ಚೆದೆಯಿಂದ, ಬಿಚ್ಚು ಮನಸ್ಸಿನಿಂದ, ಮುಕ್ತಕಂಠದಿಂದ, ಕೆಲವೊಮ್ಮೆ ನಿಷ್ಠುರವಚನಗಳಿಂದ, ಕೆಲವೊಮ್ಮೆ ಆವೇಶ ಆಕ್ರೋಶಗಳಿಂದ ಸಹ (ಆದರೆ ಎಂದೂ ಹಿಂಸಾತ್ಮಕವಾಗಿ ಅಲ್ಲ) ವ್ಯಕ್ತಪಡಿಸುತ್ತಿರಲೇಬೇಕು. "ನಿರಂತರ ಎಚ್ಚರಿಕೆಯೇ ಸ್ವಾತಂತ್ರ್ಯಕ್ಕೆ ತೆರಬೇಕಾದ ಬೆಲೆ" ಎಂಬ ಅರ್ಥದ ಮಾತನ್ನು ಆಂಗ್ಲ ಕವಿ ಮಿಲ್ಟನ್ ಮೂರು ಶತಮಾನಗಳಷ್ಟು ಹಿಂದೆಯೇ ಹೇಳಿದ್ದು ತುಂಬ ಮನನಾರ್ಹ. ಪ್ರಜಾತಂತ್ರದ ಆರೋಗ್ಯಕ್ಕೆ ಮುಖ್ಯವಾದ ಜನಶಕ್ತಿಯು ಮೂಡುವುದು ಜನಾಭಿಪ್ರಾಯ ಮೂಡಿದಾಗ ಮಾತ್ರವೇ. ಕಮ್ಯೂನಿಸ್ಟ್ ಅಥವಾ ಫ್ಯಾಸಿಸ್ಟ್ ರಾಷ್ಟ್ರದಲ್ಲಿಯ ಸಾಮಾನ್ಯನಿಗಿಂತ ಹೆಚ್ಚಾಗಿ ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿಯ ಸಾಮಾನ್ಯನು ಆಳಿಕೆ, ಆಡಳಿತಗಳ ಬಗ್ಗೆ ವೈಯಕ್ತಿಕ ಹೊಣೆಯನ್ನು ಹೊಂದಿರುವುದರಿಂದಲೇ ಮತ್ತು ಪ್ರಜಾತಂತ್ರದಲ್ಲಿ ಜನಾಭಿಪ್ರಾಯವು ಮೂಡಿರುವುದು ಮುಖ್ಯವಾಗಿರುವುದರಿಂದಲೇ. ಪ್ರಜಾಸತ್ತೆಯಲ್ಲಿ ಶಿಕ್ಷಣದ ಪಾತ್ರವು ಬಹಳ ಮಹತ್ವವುಳ್ಳದ್ದು. ಆಳಿಕೆ ಆಡಳಿತಗಳ ಬಗ್ಗೆ ಪ್ರಜೆಯ ವೈಯಕ್ತಿಕ ಹೊಣೆಯ ಪ್ರಜ್ಞೆಯನ್ನು ಅವನಲ್ಲಿ ಕೆರಳಿಸಿ, ಅರಳಿಸಿ, ಬೆಳೆಯಿಸಿ ಅವನು ಪ್ರಜಾಪ್ರಭುತ್ವಕ್ಕೆ ತಕ್ಕವಂತವನಾಗುವಂತೆ ಮಾಡಬೇಕು.

ಜನಾಭಿಪ್ರಾಯವು ಮೂಡದಿದ್ದಾಗ...

ಯಾವ ರಾಷ್ಟ್ರದಲ್ಲಿ ಹತ್ತು ಸಮಸ್ತರು ಆಳಿಕೆ, ಆಡಳಿತಗಳ ಬಗ್ಗೆ ಉದಾಸೀನರಾಗಿರುತ್ತಾರೋ; ರಾಜಕೀಯದಲ್ಲಿಯ ಆಗುಹೋಗುಗಳ ಅಧ್ಯಯನಗೆಯ್ಯಲೊಲ್ಲರೋ, ಅವುಗಳ ಬಗ್ಗೆ ತಿಳುವಳಿಕೆಯನ್ನೂ ಪಡೆದುಕೊಳ್ಳಲೊಲ್ಲರೋ; ಪ್ರಚಲಿತ ವಿದ್ಯಮಾನಗಳಿಗೆ ಅಸಮ್ಮತಿಯನ್ನು ವ್ಯಕ್ತಪಡಿಸಲೇ ಬೇಕಾದಾಗಲೂ ಮೌನರಾಗಿರುವರೋ; "ರಾಜಕೀಯವು ಬರೇ ಹೊಲಸು, ನಮಗೆ ಹೇಳಿಸಿದ್ದಲ್ಲ, ನಾವು ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸುವುದಿಲ್ಲ ಮಾತ್ರವಲ್ಲ, ಅದರ ಕುರಿತು ಚರ್ಚಿಸುವುದೂ ಇಲ್ಲ" ಎಂಬ ನಿಲುವಿನವರಾಗಿರುತ್ತಾರೋ; "ರಾಜಕೀಯಕ್ಕೂ ನಮ್ಮ ನಿತ್ಯ ಜೀವನಕ್ಕೂ ಸಂಬಂಧವಿಲ್ಲ, ರಾಜಕೀಯದಲ್ಲಿ ಏನೇ ಆಗಲಿ, ಅದನ್ನು ರಾಜಕಾರಣಿಗಳಿಗೇನೇ ಬಿಟ್ಟು ಬಿಡೋಣ"

ಎಂದು ಬಗೆಯುತ್ತಾರೋ; ಆ ರಾಷ್ಟ್ರಕ್ಕೆ ಮಹದಾಪತ್ತು ಕಾದಿರುತ್ತದೆ. ಎಂಥ ಆಪತ್ತು ಎಂದು ಕೇಳುವಿರಾ? ಭ್ರಷ್ಟಾಚಾರ ಮತ್ತು ದುರಾಡಳಿತ ಪೌರರ ಔದಾಸೀನ್ಯದ ಬೆನ್ನ ಹಿಂದೆಯೇ ಬರುವುದು ನಿಶ್ಚಯ. ಫ್ರಾನ್ಸಿನಲ್ಲಿ ಈ ಶತಮಾನದ ಎರಡು ಜಾಗತಿಕ ಯುದ್ಧಗಳ ಮಧ್ಯಂತರದಲ್ಲಿ ಇಂಥ ಪರಿಸ್ಥಿತಿಯಿತ್ತು. ಬಹು ಮಂದಿ 'ಬುದ್ಧಿಜೀವಿಗಳು' ರಾಜಕೀಯದ ಬಗೆಗೆ ಜಿಗುಪ್ಸೆಯನ್ನು ಹೊಂದಿದ್ದರು, ರಾಜಕೀಯವು ಧೂರ್ತರಿಗೆ ಹೇಳಿಸಿದ ದುರ್ವ್ಯಸನವೆಂದು ಅಂದುಕೊಂಡು ರಾಜಕೀಯಕ್ಕೆ ಬೆನ್ನುಹಾಕಿ ಕೂತಿದ್ದರು. ''ಸಮಸ್ತ ಆಳಿಕೆಯೇ ಭ್ರಷ್ಟಾಚಾರಕ್ಕೊಳಗಾಗಿರುವಾಗ ನಾನೊಬ್ಬನೇ ಏನು ಮಾಡಬಹುದು?'' ಎಂದು ಬಹುತೇಕ ಬುದ್ಧಿಜೀವಿಗಳು ಅಂದುಕೊಂಡುದಿತ್ತು. ಹಾಗಾಗಿ ಎರಡನೆಯ ಜಾಗತಿಕ ಯುದ್ಧವು ಸಂಭವಿಸಿದಾಗ ಆ ಆಪತ್ತನ್ನು ಎದುರಿಸುವ ಶಕ್ತಿಯು ಬ್ರಿಟನಿಗಿದ್ದಂತೆ ಫ್ರಾನ್ಸಿಗಿರಲಿಲ್ಲ. 1975-1977ರ ಅವಧಿಯಲ್ಲಿ ನಮ್ಮ ದೇಶಕ್ಕೆ ''ತುರ್ತು ಪರಿಸ್ಥಿತಿ'' ಎಂಬ ಮಹದಾಪತ್ತು ಬಂದುದು ಸಹ ಅದೇ ಕಾರಣದಿಂದ, ಅಂದರೆ ಜನಾಭಿಪ್ರಾಯವು ವರ್ಷಗಟ್ಟಲೆ ಮೂಡಿಬಾರದೆ ಇದ್ದುದರಿಂದ.

ಕಾಲಕಾಲಕ್ಕೆ (ಸಾಮಾನ್ಯವಾಗಿ ಐದೈದು ವರ್ಷಗಳಿಗೊಮ್ಮೆ) ಚುನಾವಣೆಗಳಲ್ಲಿ ವೋಟು ಮಾಡಿದ ಮಾತ್ರಕ್ಕೆ ಪೌರರು ಆಳಿಕೆ, ಆಡಳಿತಗಳ ಬಗ್ಗೆ ತಮ್ಮ ವೈಯಕ್ತಿಕ ಹೊಣೆಯನ್ನು ಸಂಪೂರ್ಣವಾಗಿ ನಿರ್ವಹಿಸಿದಂತಾಗುವುದಿಲ್ಲ. ಕಾಲಕಾಲಕ್ಕೆ ಚುನಾವಣೆಗಳು ಆಗತಕ್ಕದ್ದೆಂಬ ವಿಧಿಯಿರುವುದು ಹೇಳುವವರು, ಕೇಳುವವರು ಇದ್ದಾರೆಂಬ ಪ್ರಜ್ಞೆಯು ಮಂತ್ರಿಗಳಲ್ಲಿ ಮತ್ತು ಶಾಸಕರಲ್ಲಿ ನಶಿಸದಂತೆ. ನಿಜ, ಆದರೆ ಇದಿಷ್ಟೇ ಸಾಲದು. ಚುನಾವಣೆಗಳ ಮಧ್ಯಂತರ ಅವಧಿಗಳಲ್ಲಿ ಪೌರರ ಪಾರಮ್ಯವನ್ನು ಕಾಯ್ದುಕೊಳ್ಳುವುದಕ್ಕಾಗಿ ಅಭಿಪ್ರಾಯ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಬರವಣಿಗೆಯ ಸ್ವಾತಂತ್ರ್ಯ, ಸಂಘಟನೆಯ ಸ್ವಾತಂತ್ರ್ಯ, ಸಭೆಗಳನ್ನು ಏರ್ಪಡಿಸುವ ಸ್ವಾತಂತ್ರ್ಯ - ಇವುಗಳನ್ನೆಲ್ಲ ಪೌರರು ಪರಿಣಾಮಕಾರಿಯಾಗಿ ಬಳಸುತ್ತಿರಬೇಕು.

ಆಳಿಕೆ, ಆಡಳಿತಗಳ ಬಗೆಗೆ ಅಸಮ್ಮತಿಯನ್ನು ವ್ಯಕ್ತಪಡಿಸಲು ಈ ಬಹು ಬಗೆಯ ಸ್ವಾತಂತ್ರ್ಯವನ್ನು ಉಪಯೋಗಿಸದೆ, ದೀರ್ಘಕಾಲ ನಿಷ್ಕ್ರಿಯರಾಗಿದ್ದು, ಮತ್ತೆ ಎಂದೋ ಒಮ್ಮೆ 'ಬಂದ್'ಗಳಿಗೆ ಕರೆಕೊಡುವವರು ನಮ್ಮಲ್ಲಿದ್ದಾರೆ. ಪ್ರಜಾತಂತ್ರದಲ್ಲಿ 'ಬಂದ್'ಗಳು ಅಗತ್ಯವೂ ಅಲ್ಲ, ಅಪೇಕ್ಷಣೀಯವೂ ಅಲ್ಲ. 'ಬಂದ್'ಗಳಿಗೆ ಕರೆಕೊಡುವವರು ಅವುಗಳು ''ಶಾಂತಿಯುತವಾಗಿರಲಿ'' ಎಂದು ವಿನಂತಿಸುವುದಿದೆ, ನಿಜ; ಆದರೆ ಮತ್ತೆ ''ಬಂದ್''ಗಳನ್ನು ಬಲವಂತದಿಂದ ಮಾಡಿಸುವುದೂ ಇದೆ. 'ಬಂದ್'ಗಳನ್ನು ಸ್ವಂತ ಇಷ್ಟದಿಂದ ಆಚರಿಸುವವರು ವಿರಳ. ಆದ್ದರಿಂದ ಅಂಗಡಿಗಳೂ, ಹೋಟೆಲ್‌ಗಳೂ ಬಂದಾಗಿರಬೇಕೆಂದು ಮತ್ತು ವಾಹನಗಳು ಚಲಿಸುತ್ತಿರಬಾರದೆಂದು ದುರಾಗ್ರಹ ಆಗುವುದಿದೆ; ಲೂಟಿಯಾಗುವುದಿದೆ; ಸೊತ್ತುಗಳ

ನಾಶವಾಗುವುದಿದೆ; ಅಂಗಡಿಗಳಿಗೆ ಅಥವಾ ವಾಹನಗಳಿಗೆ ಬೆಂಕಿ ಹಚ್ಚುವುದಿದೆ; ಚಾಕುಚೂರಿಗಳ, ಕಬ್ಬಿಣದ ಸರಳುಗಳ, 'ಸೈಕಲ್ ಚೈನ್'ಗಳ ಬಳಕೆಯಾಗುವುದಿದೆ. ಹೋಟೆಲುಗಳ ಬಂದಿನಿಂದ ಪ್ರವಾಸಿಗರಿಗೆ ಭಾರೀ ತೊಂದರೆ; ಸಾರಿಗೆಯ ಬಂದಿನಿಂದ ಅನೇಕರಿಗೆ ಬಹಳಷ್ಟು ಬವಣೆ; ರುಗ್ಣರನ್ನು ಚಿಕಿತ್ಸೆಗಾಗಿ, ಗರ್ಭಿಣಿಯರನ್ನು ಪ್ರಸವಕ್ಕಾಗಿ ಆಸ್ಪತ್ರೆಗಳಿಗೆ ಸಾಗಿಸಲಿಕ್ಕಿರುವಾಗ ಸಾರಿಗೆಯ 'ಬಂದ್' ಅಕ್ಷಮ್ಯ ಆತಂಕ; ಅಷ್ಟೇ ಅಲ್ಲ, ಮಹಾ ಕ್ರೌರ್ಯ.

'ಬಂದ್'ಗಳಿಂದ ಏನನ್ನೂ ಸಾಧಿಸಲಿಕ್ಕಾಗದು. ಶಾಂತಿಭಂಗವಾಗಿದೆಯೆಂಬ ನೆಪ ಪೊಲೀಸರಿಗೆ ಮಾತ್ರ ಲಾಯಕ್ಕೆಂದು ಅನ್ನಿಸಲಿಕ್ಕಿದೆ, ಅಷ್ಟೆ.

ಸಂವಿಧಾನದತ್ತವಾದ ಬಹುಬಗೆಯ ಸ್ವಾತಂತ್ರ್ಯವನ್ನು ಉಪಯೋಗಿಸುತ್ತಿರದೆ ನಾವೆಲ್ಲ ವರ್ಷಗಟ್ಟಲೆ ನಿಷ್ಕ್ರಿಯರಾಗಿದ್ದುದರಿಂದಲೇ 1975 ರಲ್ಲಿ 'ತುರ್ತು ಪರಿಸ್ಥಿತಿ' ಯನ್ನು ಹೇರುವುದು ಸಾಧ್ಯವಾಯಿತು. ನಮ್ಮ ಬಹುಬಗೆಯ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣವಾದುದು ಆಗ. 'ಬಂದ್'ಗಳ ಅಗತ್ಯವಿದ್ದುದು ಆಗ.

ಸ್ವಾತಂತ್ರ್ಯೋತ್ತರ ಅವಧಿಯ ವೈಶಿಷ್ಟ್ಯವಾದ 'ಬಂದ್'ನ 'ಪೂರ್ವಜ' ಗಾಂಧೀಜಿಯ ಹರತಾಳವಲ್ಲವೇ ಎಂದು ವಾದಿಸಿ, 'ಬಂದ್'ಗಳನ್ನು ಸಮರ್ಥಿಸುವವರಿದ್ದಾರೆ. ಆದರೆ ಗಾಂಧೀಜಿ ಹರತಾಳವನ್ನು ಬಳಸುತ್ತಿದ್ದುದು ಸಮರಕಾಲಕ್ಕೆ ತಕ್ಕುದಾದ ಆಯುಧವನ್ನಾಗಿ ಹೊರತು ದಿನಬಳಕೆಯ ಉಪಕರಣವನ್ನಾಗಿ ಅಲ್ಲ; ಸಕಲ ಬಗೆಯ ಅಭಿವ್ಯಕ್ತಿಸ್ವಾತಂತ್ರ್ಯದ ಹರಣಗೆಯ್ಯುತ್ತಿದ್ದ ಪರಕೀಯ ಸರಕಾರವೊಂದರ ವಿರುದ್ಧ ಸ್ವಾತಂತ್ರ್ಯ ಸಮರವಾಗುತ್ತಿದ್ದ ಕಾಲವು ಅದಾಗಿತ್ತು. ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ ಮಾಡದಿರುವ, ಸ್ವಕೀಯವೇ ಆಗಿರುವ ಸರಕಾರದ ವಿರುದ್ಧ ಸ್ವಾತಂತ್ರ್ಯಸಮರದ ಪ್ರಮೇಯವೆಲ್ಲಿದೆ? ಹರತಾಳ (ಬಂದ್) ಎಂಬ ಆಯುಧದ ಬಳಕೆಯ ಅಗತ್ಯವೇನಿದೆ?

ಖ್ಯಾತ ಆಂಗ್ಲ ವಾಗ್ಮಿ, ಚಿಂತಕ ಮತ್ತು ಸಾಹಿತಿ ಎಡ್ಮಂಡ್ ಬರ್ಕ್ ಕ್ರಾಂತಿಯ ಕುರಿತು 18ನೆಯ ಶತಮಾನದಲ್ಲಿ ಹೇಳಿದ್ದ ಮಾತು ಇಲ್ಲಿ ಸ್ಮರಣಾರ್ಹ :-

''ಕ್ರಾಂತಿಯು ಮರಣಾಂತಿಕ ಕಾಯಿಲೆಗೆ ತಕ್ಕುದಾದ ಔಷಧ. ದಿನವಹಿ ಸೇವಿಸಲಿಕ್ಕಿರುವ ಆಹಾರವಲ್ಲ. ಸಂವಿಧಾನಕ್ಕೆ ಧಕ್ಕೆಯಾಗಲಿಕ್ಕಿರುವಾಗ ಮಾತ್ರ ಅದು ತಕ್ಕ ಔಷಧ''. ಒಟ್ಟಿನಲ್ಲಿ ಆಳಿಕೆ, ಆಡಳಿತಗಳ ಬಗ್ಗೆ ಅಸಮ್ಮತಿಯ ಅಭಿವ್ಯಕ್ತಿಯು ಶಾಂತಿಯುತವಾದುದಾಗಿರ ಬೇಕು. ನಿರ್ಮಲವಾದುದಾಗಿರಬೇಕು.

ಜನಾಭಿಪ್ರಾಯ ಮೂಡುತ್ತಿಲ್ಲವೇಕೆ?

ಇಂಗ್ಲೆಂಡಿನಲ್ಲಿ ಜನಾಭಿಪ್ರಾಯ ನಿರ್ಮಾಣಕ್ಕೆ ಅನುಕೂಲವಾಗಿರುವಂತಹ ವೇದಿಕೆಗಳು

ಮತ್ತು ಮಾಧ್ಯಮಗಳು ಇರುವಂತೆ ನಮ್ಮ ದೇಶದಲ್ಲಿಲ್ಲ. ಅಲ್ಲಿ ಪ್ರತಿ ಊರಲ್ಲಿ 'ಡಿಬೇಟಿಂಗ್ ಸೊಸೈಟಿ' (ಚರ್ಚಾ ಸಂಸ್ಥೆ) ಇರುವುದಿದೆ. ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ಕುರಿತು ಇಂಥ ಸಂಸ್ಥೆಗಳು ಕಾಲಕಾಲಕ್ಕೆ ಚರ್ಚಿಸುವುದಿದೆ. ಅಂತೆಯೇ ಪ್ರತಿ ಊರಲ್ಲಿ 'ರಿಫಾರ್ಮ್ ಸೊಸೈಟಿ' (ಅಪೇಕ್ಷಣೀಯವೆನಿಸಿದ ಸುಧಾರಣೆಗಳ ಕುರಿತು ಚರ್ಚಿಸಲಿಕ್ಕಿರುವ ಸಂಸ್ಥೆ) ಇರುವುದಿದೆ; ಮತ್ತು 'ಕಾನ್ಸ್‌ಟಿಟ್ಯೂಷನಲ್ ಕ್ಲಬ್' (ಸಂವಿಧಾನದ ಕುರಿತು ಚರ್ಚಿಸಲಿಕ್ಕಿರುವ ಮತ್ತು ಅಧ್ಯಯನಗೆಯ್ಯಲಿಕ್ಕಿರುವ ಸಂಸ್ಥೆ) ಇರುವುದಿದೆ. ಇವುಗಳು ಕಾಲಕಾಲಕ್ಕೆ ಸಭೆಗಳನ್ನೇರ್ಪಡಿಸಿ ವಿಚಾರ ಮಂಥನಕ್ಕೆ ಅವಕಾಶಗಳನ್ನು ಕಲ್ಪಿಸುವುದಿದೆ. ಈ ಸಮಸ್ತ ಸಂಸ್ಥೆಗಳ ಕಾರ್ಯಕಲಾಪಗಳು ಸ್ಥಳೀಯ ಪತ್ರಿಕೆಗಳಲ್ಲಿ ವರದಿಯಾಗಿ ಜನಾಭಿಪ್ರಾಯ ನಿರ್ಮಾಣಕ್ಕೆ ಅನುಕೂಲವಾಗುವುವು.

ಆಳಿಕೆ, ಆಡಳಿತಗಳ ಕುರಿತ ಟೀಕೆಯಿರುವ ಪತ್ರಗಳನ್ನು ಪತ್ರಿಕೆಗಳಿಗೆ ಬರೆಯುವ ರೂಢಿ, ಅಂಥ ಪತ್ರಗಳನ್ನು ಓದುವ ರೂಢಿ, ಅವುಗಳಿಗೆ ತಕ್ಕಂತೆ ಸ್ಪಂದಿಸಿ ಮರುಪತ್ರಗಳನ್ನು ಬರೆಯುವ ರೂಢಿ - ಇವೆಲ್ಲ ಇಂಗ್ಲೆಂಡಿನಲ್ಲಿ ವ್ಯಾಪಕ.

ಅಲ್ಲಿ ಆಳಿಕೆ, ಆಡಳಿತಗಳ ಕುರಿತು ಪತ್ರಿಕೆಗಳಿಗೆ ಪತ್ರ ಬರೆದು ಟೀಕಿಸುವಂತೆ, ಬಾನುಲಿ ಸಂಸ್ಥೆಗೂ ಪತ್ರ ಬರೆದು ಟೀಕಿಸುವುದಿದೆ. ಸರಕಾರದ ಸೆರೆಯಲ್ಲಿರದ ಅಲ್ಲಿಯ ಬಾನುಲಿ ಸಂಸ್ಥೆಯು ಆಳಿಕೆ, ಆಡಳಿತಗಳ ಕುರಿತ ಟೀಕೆಯಿರುವ ಅಂಥ ಪತ್ರಗಳ ಪೂರ್ತಿ ಪಾಠವನ್ನು ಬಿತ್ತರಿಸುವುದಿದೆ.

ಒಟ್ಟಿನಲ್ಲಿ ವಿವಿಧ ವೇದಿಕೆಗಳಿಂದ, ಪತ್ರಿಕೆಗಳಿಂದ ಮತ್ತು ಬಾನುಲಿ ಸಂಸ್ಥೆಯಿಂದ ಹೊಮ್ಮುವ ವಿವಿಧ ವಾದಗಳ ಪರಸ್ಪರ ಕ್ರಿಯೆಯಿಂದ ವಾದಸಮನ್ವಯವೊಂದು ಹುಟ್ಟಿಕೊಳ್ಳುವುದಿದೆ, ಜನಾಭಿಪ್ರಾಯವು ಸ್ಪಷ್ಟವಾಗಿ ಮೂಡಿಬರುವುದಿದೆ, ಶ್ರೀಸಾಮಾನ್ಯನಿಗೆ ಅನೌಪಚಾರಿಕವಾದ ರಾಜಕೀಯ ಶಿಕ್ಷಣವು ಒದಗುವುದಿದೆ.

ನಮ್ಮಲ್ಲಿ 'ರಿಫಾರ್ಮ್ಸ್ ಸೊಸ್ಯಾಟೀಸ್' ಇಲ್ಲ. 'ಕಾನ್ಸ್‌ಟಿಟ್ಯೂಷನಲ್ ಕ್ಲಬ್ಸ್' ಇಲ್ಲ, ಚರ್ಚಾಸಂಸ್ಥೆಗಳಿಲ್ಲ. ಶಾಲೆಗಳಲ್ಲಿ ಮಾತ್ರ ಚರ್ಚೆಗಳನ್ನು ಏರ್ಪಡಿಸುವುದಿದೆ; "ಹಣ ಮೇಲೋ? ಗುಣ ಮೇಲೋ?" "ಗ್ರಾಮ ವಾಸ ಮೇಲೋ? ಪಟ್ಟಣ ವಾಸ ಮೇಲೋ?" ಎಂಬ 'ನಿರಪಾಯ'ದ ವಸ್ತುಗಳನ್ನೇ ಚರ್ಚೆಗೆ ಆರಿಸಿಕೊಳ್ಳುವುದಿದೆ. ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಚರ್ಚೆಗಳ ಪರಂಪರೆಯು ಸ್ವಾತಂತ್ರ್ಯಪೂರ್ವದ ಅವಧಿಯಲ್ಲಿ ಇದ್ದುದು ಸ್ವಾತಂತ್ರ್ಯೋತ್ತರದಲ್ಲಿ ಅದೇಕೋ ನಶಿಸುತ್ತ ಬಂದಿದೆ. ವಿದ್ಯಾರ್ಥಿಗಳಿಗೆ ಚರ್ಚೆಯ ಅಭ್ಯಾಸವಾಗಲೆಂದುಕೊಂಡು ಕಾಲೇಜೊಂದರ ಪ್ರಾಂಶುಪಾಲರು "ಇಂದಿರಾ ಗಾಂಧಿಯವರ ನಾಯಕತ್ವದಲ್ಲಿ ಈ ಸದನವು ವಿಶ್ವಾಸವನ್ನು ಕಳೆದುಕೊಂಡಿದೆ" ಎಂಬ ವಿಷಯವನ್ನು ಚರ್ಚೆಗೆ ಆರಿಸಿಕೊಂಡಾಗ (1969ರಲ್ಲಿ) ಆ ಕಾಲೇಜಿನ ವ್ಯವಸ್ಥಾಪಕ

ವೃಂದದವರು ಕೆಲವರು ಕ್ರುದ್ಧರಾಗಿದ್ದರು, ಪ್ರಾಂಶುಪಾಲರನ್ನು ತರಾಟೆಗೆ ತೆಗೆದುಕೊಂಡಿದ್ದರು. ಆದರೆ ಲಂಡನ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಸಂಘವು 1966ರಲ್ಲಿ "ವಿಲ್ಸನ್ ಅವರ ನಾಯಕತ್ವದಲ್ಲಿ ಈ ಸದನವು ವಿಶ್ವಾಸವನ್ನು ಕಳೆದುಕೊಂಡಿದೆ" ಎಂಬ ವಿಷಯವನ್ನು ಚರ್ಚೆಗೆ ಇಟ್ಟುಕೊಂಡಾಗ ಆ ವಿಶ್ವವಿದ್ಯಾಲಯದ ಉಪಕುಲಪತಿಯನ್ನು ಯಾರೂ ತರಾಟೆಗೆ ತೆಗೆದುಕೊಂಡಿರಲಿಲ್ಲ. "ರಾಷ್ಟ್ರದ ಒಟ್ಟು ಉತ್ಪನ್ನಕ್ಕೆ ನಮ್ಮ ರಾಣಿಯ ಕೊಡುಗೆ ಶೂನ್ಯವಾಗಿರುವಾಗ ಅವರು ಇನ್ನೊಂದು ಮಗುವನ್ನು ಹೆತ್ತು ರಾಷ್ಟ್ರದ ಆರ್ಥಿಕತೆಯ ಮೇಲೆ ಮತ್ತೊಂದು ಹೊರೆಯನ್ನು ಹೇರಬಾರದಿತ್ತು" ಎಂಬ ವಿಷಯದ ಚರ್ಚೆಯು ಲಂಡನ್ ವಿಶ್ವವಿದ್ಯಾಲಯದ 'ಇನ್‌ಸ್ಟಿಟ್ಯೂಟ್ ಆಫ್ ಎಜ್ಯುಕೇಶನ್' ನಲ್ಲಿ ಆದಾಗಲೂ ಆ ಸಂಸ್ಥೆಯವರನ್ನು ಯಾರೂ ತರಾಟೆಗೆ ತೆಗೆದುಕೊಂಡಿರಲಿಲ್ಲ. ಪ್ರಬುದ್ಧ ಪ್ರಜಾಸತ್ತೆಗಳಲ್ಲಿ ಆಳುವವರು ಟೀಕೆಯ ಬಗ್ಗೆ ಬಹಳ ಸೈರಣೆಯುಳ್ಳವರಾಗಿರುತ್ತಾರೆ. ವ್ಯಾಸಂಗದ ಕಾಲ ಕಳೆದ ಮೇಲೆ ಚರ್ಚಾ ಸಂಘಗಳನ್ನು ರೂಪಿಸಿಕೊಂಡು ಚರ್ಚೆಗಳನ್ನು ಏರ್ಪಡಿಸುತ್ತಿರುವ ಪ್ರಬುದ್ಧರು ಆದೇಕೋ ನಮ್ಮ ಊರುಗಳಲ್ಲಿ ಇಲ್ಲವೇ ಇಲ್ಲ.

ನಮ್ಮಲ್ಲಿ ಪತ್ರಿಕೆಗಳಿಗೆ ಪತ್ರ ಬರೆಯುವವರಲ್ಲಿ "ಸ್ವಯಂವರದ ಸಂದರ್ಭದಲ್ಲಿ ಸೀತೆಯ ವಯಸ್ಸೆಷ್ಟಾಗಿತ್ತು"? ಅಥವಾ "ಕವಿ ಮುದ್ದಣ್ಣ ಸ್ಮಾರ್ತ ಬ್ರಾಹ್ಮಣನಾಗಿದ್ದನೆ"? ಅಥವಾ "ಮಧ್ವಾಚಾರ್ಯರಿಗೆ ಸೋದರಿಯಿದ್ದರೆ"? ಎಂಬಂಥ ವಿಷಯಗಳ ಕುರಿತು ಬರೆಯುವವರು ಇರುವಷ್ಟು ಆಳಿಕೆ, ಆಡಳಿತಗಳ ಕುರಿತು ಬರೆಯುವವರು ಇರುವುದಿಲ್ಲ.

ನಮ್ಮಲ್ಲಿ ಆಕಾಶವಾಣಿಯು ಸರಕಾರದ ಸೆರೆಯಲ್ಲಿದೆ. ಆದ್ದರಿಂದ ಆಳಿಕೆ ಆಡಳಿತಗಳ ಕುರಿತು ಆಕಾಶವಾಣಿಗೆ ಪತ್ರ ಬರೆಯುವ ರೂಢಿ ಇಲ್ಲಿಲ್ಲ. "ಭಾನುವಾರದ ಯಕ್ಷಗಾನ ಕಾರ್ಯಕ್ರಮ ಚೆನ್ನಾಗಿತ್ತು. ಮಂಗಳವಾರದ ನಾಟಕ ಬರೇ ಕಳಪೆ" ಎಂದನ್ನುವಂಥ 'ನಿರಪಾಯ'ದ ಪತ್ರಗಳನ್ನು ಮಾತ್ರ ಆಕಾಶವಾಣಿಗೆ ಬರೆಯಬಹುದಾಗಿದೆ. ದೂರದರ್ಶನವೂ ಸರಕಾರದ ಸೆರೆಯಲ್ಲೇ ಇದೆ.

ನಮ್ಮಲ್ಲಿ ಜನಾಭಿಪ್ರಾಯದ ಕೊರತೆಗೆ ಇನ್ನೊಂದು ಕಾರಣವೆಂದರೆ ಬುದ್ಧಿಜೀವಿಗಳು, ವಿದ್ಯಾವಂತರು ಎಂದು ಕರೆಯಲ್ಪಡುವ ಮಂದಿ ಜನಾಭಿಪ್ರಾಯವು (ನಿರಕ್ಷರರ ಮತ್ತು ಸಾಕಷ್ಟು ವಿದ್ಯಾವಂತರಲ್ಲದವರ ಬಾಹುಳ್ಯದಿಂದಾಗಿ) ಮೂಡಿಬಾರದ ನಾಡಿನಲ್ಲಿ ಅದರ ನಿರ್ಮಾಣವಾಗಬೇಕು. ಈ ನಿರ್ಮಾಣವನ್ನು 'ಬುದ್ಧಿಜೀವಿ'ಗಳೆಂದೋ 'ವಿದ್ಯಾವಂತ'ರೆಂದೋ ಕರೆಯಲ್ಪಡುವ ಮಂದಿ ಮಾಡಬೇಕು. ಆದರೆ ದುರ್ದೈವವಶಾತ್ ಈ ಮಂದಿಯಲ್ಲಿ ಹಲವರು ರಾಜಕೀಯಕ್ಕೆ ಬೆನ್ನು ಹಾಕಿರುವವರು, ಉಳಿದವರು ಗಣ್ಯರನ್ನು ವಿಮರ್ಶಾರಹಿತವಾಗಿ ಹೊಗಳುವವರು ಮತ್ತು ಪೂಜಿಸುವವರು. ಮಂತ್ರಿಗಳು, ಸಂಸತ್ ಸದಸ್ಯರು ಮತ್ತು ಶಾಸಕರು ಸ್ಥಾನನಿಮಿತ್ತವಾಗಿ ಪೂಜಾರ್ಹರೆಂಬಂತೆ ನಡಕೊಳ್ಳುವ ಈ ಎರಡನೆಯ ಬಗೆಯ

'ಬುದ್ಧಿಜೀವಿ'ಗಳು ಏರ್ಪಡಿಸುವ ಸನ್ಮಾನ ಸಮಾರಂಭಗಳ ಬಾಹುಳ್ಯವೆಷ್ಟು? ಊರೂರುಗಳಲ್ಲಿಯ ಸಮಸ್ತ ಸಮಾರಂಭಗಳಿಗೂ ರಾಜಕಾರಣಿಗಳೇ ಅಧ್ಯಕ್ಷರುಗಳಾಗಿ, ಉದ್ಘಾಟಕರಾಗಿ, ಮುಖ್ಯ ಅತಿಥಿಗಳಾಗಿ, ತೈಲಚಿತ್ರಗಳನ್ನು ಅನಾವರಣ ಮಾಡುವವರಾಗಿ, ಸ್ಮರಣ ಸಂಚಿಕೆಗಳನ್ನು ಬಿಡುಗಡೆ ಮಾಡುವವರಾಗಿ ಬಂದೊದಗಬೇಕೆಂದು ಒದ್ದಾಡುವ 'ಬುದ್ಧಿಜೀವಿ'ಗಳು ಎಷ್ಟಿಲ್ಲ? ಈ ಎಲ್ಲ ಸಂದರ್ಭಗಳಲ್ಲಿಯೂ ರಾಜಕಾರಣಿಗಳನ್ನು ಬಾಯ್ತುಂಬ ಹೊಗಳುವುದಿದೆಯಲ್ಲ? ಇಷ್ಟೆಲ್ಲವನ್ನೂ ಮಾಡುವುದು ಕೆಲ 'ಸರ್ಕಾರಿ ಸುಕುರುಂಡೆ'ಗಳಿಗಾಗಿ!

ಜನಾಭಿಪ್ರಾಯವು ಮೂಡುವುದಕ್ಕಾಗಲಿ, ಅದರ ನಿರ್ಮಾಣಕ್ಕಾಗಲಿ ಈ ವಿಮರ್ಶಾರಹಿತ ವ್ಯಕ್ತಿಪೂಜಾ ಪರಂಪರೆಯು ನಿಜಕ್ಕೂ ಮಾರಕ. ಕಳೆದ ನಲ್ವತ್ತನಾಲ್ಕು ವರ್ಷಗಳ ಉದ್ದಕ್ಕೂ ಈ ಬಗೆಯ 'ಬುದ್ಧಿಜೀವಿ'ಗಳು ವಿಮರ್ಶಾರಾಹಿತ್ಯವನ್ನೇ (ಅವೈಚಾರಿಕತೆಯನ್ನೇ) ಸಾಮಾನ್ಯರಿಗೆ ಮೇಲ್ಪಂಕ್ತಿಯನ್ನಾಗಿ ಹಾಕಿಕೊಡುತ್ತಾ ಬಂದಿರುವುದರಿಂದ, ನಮ್ಮಲ್ಲಿಯ ಸಾಮಾನ್ಯರು ಪೀಠಸ್ಥರ ಹಿತ್ತಾಳಿಯ ಬಗ್ಗೆ ಕುರುಡರಂತೆಯೂ, ಮೂಕರಂತೆಯೂ ಆಗಿರುವುದು ಸಹಜ. ಪ್ರಯೋಜನಕ್ಕೆ ಬರುವಂಥ ಜನಾಭಿಪ್ರಾಯವು ಇಂಥ ಪರಿಸ್ಥಿತಿಯಲ್ಲಿ ಮೂಡಿಬರಲಿಕ್ಕುಂಟೆ?

''ಪೀಠವು ಪೀಠಸ್ಥನನ್ನು ಪಾವನಗೊಳಿಸುವುದೆಂಬ ಅಭಿಪ್ರಾಯಕ್ಕಿಂತಲೂ ಕೆಟ್ಟದಾದ್ದು ಯಾವುದೂ ಇಲ್ಲ'' ಎಂದು ಲಾರ್ಡ್ ಆ್ಯಕ್ಟನ್ (19ನೆಯ ಶತಮಾನದ ಪ್ರಸಿದ್ಧ ಆಂಗ್ಲ ಇತಿಹಾಸಕಾರ) ಹೇಳಿದ್ದು ನಮ್ಮಲ್ಲಿ ವ್ಯಕ್ತಿಪೂಜೆಗೆಯ್ಯುವ 'ಬುದ್ಧಿಜೀವಿ'ಗಳಿಗೆ ತಿಳಿದಂತಿಲ್ಲ. ''ಅಧಿಕಾರಸ್ಥರನ್ನು ಅವರ ಅಧಿಕಾರದ ನಿಮಿತ್ತವಾಗಿಯೇ ಭಯಭಕ್ತಿಗಳಿಂದ ಕಾಣತಕ್ಕದ್ದೆಂಬ ಅಭಿಪ್ರಾಯಕ್ಕಿಂತ ಹೆಚ್ಚು ಬುಡಮೇಲಾಗಿಸುವ ಅಭಿಪ್ರಾಯವು ಪ್ರಜಾಸತ್ತಾತ್ಮಕ ಸಮಾಜ ಇಲ್ಲ'' ಎಂದು ಆರ್ಥರ್ ಶ್ಲೆಸಿಂಗರ್ (ಇನ್ನೊಬ್ಬ ಇತಿಹಾಸಕಾರ) ಹೇಳಿದ್ದು ಸಹ ನಮ್ಮಲ್ಲಿ ವ್ಯಕ್ತಿಪೂಜೆಗೆಯ್ಯುವ ಮಂದಿಗೆ ತಿಳಿದಂತಿಲ್ಲ.

ಜನಾಭಿಪ್ರಾಯವು ಮೂಡಿ ಬರುವುದಕ್ಕೆ ಇನ್ನೊಂದು ಆತಂಕವೆಂದರೆ 'ಕ್ಯಾರಿಸ್ಮ' ಎನ್ನುವುದು. 'ಕ್ಯಾರಿಸ್ಮ' ಎಂಬ ಪದವು ಪ್ರಾಚೀನ ಗ್ರೀಸಿನಲ್ಲಿ ಹುಟ್ಟಿಕೊಂಡುದು. ಪವಾಡಗಳಿಂದ ರೋಗಗಳನ್ನು ವಾಸಿಮಾಡುವ ಶಕ್ತಿಯನ್ನು ಪ್ರಾಚೀನ ಗ್ರೀಕರು 'ಕ್ಯಾರಿಸ್ಮ' ಎಂದು ಕರೆಯುತ್ತಿದ್ದರು. ಯಾರಿಗಾದರೂ ಅಂಥ ಶಕ್ತಿಯಿರುವ ಕುರಿತು ಏನೂ ಸಾಕ್ಷ್ಯಾಧಾರವಿರದಿದ್ದರೂ, ಕೆಲವರ ಬಗ್ಗೆ ಪ್ರಾಚೀನ ಗ್ರೀಕರಿಗೆ ಇರುತ್ತಿದ್ದ ಅಂಧಶ್ರದ್ಧೆಯೇ 'ಕ್ಯಾರಿಸ್ಮ'ದ ಕುರಿತ ನಂಬಿಕೆಗೆ ಕಾರಣವಾಗಿತ್ತು. ಈಗ 'ಕ್ಯಾರಿಸ್ಮ' ಎಂಬ ಪದಕ್ಕೆ ಬೇರೆ ಅರ್ಥವಿದೆ. ಜನರನ್ನು ಆಕರ್ಷಿಸುವ ಮತ್ತು ಅವರ ಮೇಲೆ ಪ್ರಭಾವ ಬೀರುವ ಅಸಾಧಾರಣ ಶಕ್ತಿ ಎಂಬ ಅರ್ಥವಿದೆ. ಯಾರಾದರೂ ರಾಜಕಾರಣಿಯು ತನ್ನ ದೇಶಕ್ಕೆ ಎದುರಾಗುವ ಎಂತೆಂಥ ಗಂಭೀರ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನಾದರೂ

ಪವಾಡಗಳಿಂದ ಎಂಬಂತೆ ಬಗೆಹರಿಸಬಲ್ಲನೆಂಬ ಭ್ರಮೆಯು ಅವನ ದೇಶದಲ್ಲಿಯ ಬಹುಮಂದಿಗಿದ್ದ ಮಾತ್ರಕ್ಕೆ ಅವನನ್ನು 'ಕ್ಯಾರಿಸ್ಮ' ಉಳ್ಳವನೆಂದು ಅನ್ನುವುದಿದೆ. ಇಂದಿರಾ ಗಾಂಧಿಯವರು 'ಕ್ಯಾರಿಸ್ಮ' ಉಳ್ಳವರೆಂಬ ಭಾರಿ ಭ್ರಮೆಯಿತ್ತು. ಸಾಮಾನ್ಯರ ಈ ಭ್ರಮೆಗೆ ಕಾರಣ ವ್ಯಕ್ತಿಪೂಜೆಗೆಯ್ಯುವ 'ಬುದ್ಧಿಜೀವಿ'ಗಳು ಹಾಕಿಕೊಟ್ಟ ಮೇಲ್ಪಂಕ್ತಿ. ಈ ಮಂದಿ ಇಂದಿರಾ ಗಾಂಧಿಯಿಂದ 'ಸರ್ಕಾರಿ ಸುಕುರುಂಡೆ' ಗಳನ್ನು ದಕ್ಕಿಸಿಕೊಳ್ಳಲಿಕ್ಕಾಗಿಯೋ, ಆಕೆಯ ಬಗ್ಗೆ ಅಳುಕಿನಿಂದಲೋ ಆಕೆಯನ್ನು ಪೂಜಿಸುತ್ತಿದ್ದರು. ಆಕೆಯ ಅಪರಾಧಗಳ ಕುರಿತು ಪಿಟ್ಟೆನ್ನಲೂ ಅಳುಕುತ್ತಿದ್ದ ಈ ಮಂದಿಯನ್ನು ಶ್ರೀ ನಾನೀ ಪಾಲ್ಕಿವಾಲಾ 'ಎಲುಬಿರದ ಅಚ್ಚರಿಗಳು' ಎಂದು ಕರೆದಿರುವುದು ಸ್ಮರಣಾರ್ಹ. ಅದೇನೇ ಇರಲಿ, ಈ ಮಂದಿ ಹಾಕಿಕೊಟ್ಟ ಮೇಲ್ಪಂಕ್ತಿಯೇ ಇಂದಿರಾ ಗಾಂಧಿಯ 'ಕ್ಯಾರಿಸ್ಮ'ದ ಕುರಿತು ಸಾಮಾನ್ಯರ ಭ್ರಮೆಗೆ ಕಾರಣವಾಗಿತ್ತು.

ಅಸಮ್ಮತಿಯ ಅಭಿವ್ಯಕ್ತಿಯ ಬಗ್ಗೆ ಇತ್ತ 'ನಮಗೆ' (ಪೌರರಿಗೆ) ಅಳುಕು ಇರುವಂತೆ ಅತ್ತ 'ಅವರಿಗೆ' (ಆಳಿಕೆ ಆಡಳಿತಗಳ ಸೂತ್ರಗಳನ್ನು ವಹಿಸಿರುವವರಿಗೆ) ಅಸಹನೆ ಇರುವುದಿದೆ. ಆದರೆ ಇದು ಆರೋಗ್ಯಯುತ ಪ್ರಜಾಸತ್ತೆಯ ಲಕ್ಷಣವಲ್ಲ. ಕಾಲಕಾಲಕ್ಕೆ ಆಗುವ ಚುನಾವಣೆಗಳ ಮಧ್ಯಂತರ ಅವಧಿಗಳಲ್ಲಿ ಪೌರರ ಪಾರಮ್ಯವನ್ನು ಪ್ರತಿಪಾದಿಸಲು ಮತ್ತು ಕಾಯ್ದುಕೊಳ್ಳಲು (ಅರ್ಥಾತ್, ಹೇಳುವವರು ಕೇಳುವವರು ಇದ್ದಾರೆಂಬ ಪ್ರಜ್ಞೆಯು ಮಂತ್ರಿಗಳಿಗೆ, ಶಾಸಕರಿಗೆ ಮತ್ತು ಅಧಿಕಾರಿಗಳಿಗೆ ಇರುವಂತಾಗಿಸಲು) ಪೌರರು ಅಳುಕಿಲ್ಲದೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉಪಯೋಗಿಸುತ್ತಿರುವುದು ಸಾಧ್ಯವಾಗಿರ ಬೇಕು.

ಆದರೆ ನಮ್ಮ ದೇಶದಲ್ಲಿ ಆಳಿಕೆ ಆಡಳಿತಗಳಲ್ಲಿಯ ಭ್ರಷ್ಟಾಚಾರದ ಟೀಕೆಯು ಮೂಡಿ ಬಂದಾಗ "ಇದು ಚಾರಿತ್ರ್ಯಹನನ" ಎಂದು ಸರಕಾರಗಳು ರೇಗುವುದು ನೆಹರೂ ಅವರ ಕಾಲದ ಲಾಗಾಯ್ತು ಬೆಳೆದು ಬಂದಿರುವ ಪರಂಪರೆ. ಟೀಕೆಯನ್ನು ಮೆಚ್ಚದ ಅವರ ಮಗಳಂತು 'ತುರ್ತು ಪರಿಸ್ಥಿತಿ'ಯನ್ನು ಘೋಷಿಸಿ, ಪೌರರ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣಗೆಯ್ಯಲೂ ಹೇಸಿರಲಿಲ್ಲ. ಬೋಫೋರ್ಸ್ ಹಗರಣದ ಕುರಿತ ಟೀಕೆಯಿಂದ ಕ್ರುದ್ಧರಾದ ರಾಜೀವ್ ಗಾಂಧಿ ಪತ್ರಿಕೆಗಳ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಪ್ರಯತ್ನ ಮಾಡಿದ್ದರು. ಇಂಥ ಅಸಹನೆಯು ಪ್ರಜಾಸತ್ತೆಯ ಆರೋಗ್ಯಕ್ಕೆ ಮಾರಕ.

ನಮ್ಮ ಸ್ಥಳೀಯ ಸ್ವತಂತ್ರ ಆಳಿಕೆಯ ಏರ್ಪಾಟುಗಳಲ್ಲಿಯೂ (ಪುರಸಭೆಯಂಥವುಗಳಲ್ಲಿಯೂ) ಇಂಥ ಅಸಹನೆಯು ಕಾಣಿಸಿಕೊಳ್ಳುವುದಿದೆ. ಉಡುಪಿಯ ಮೂಡನಿಡಂಬೂರು ಪ್ರದೇಶದಲ್ಲಿಯ ಪರಿಸರಮಾಲಿನ್ಯದ ಕುರಿತು ಪತ್ರಗಳು ಪತ್ರಿಕೆಗಳಲ್ಲಿ ಕಾಣಿಸಿಕೊಂಡಾಗ ಕೆಲವು ಪುರಪಿತರು ಕ್ರುದ್ಧರಾದುದಿದೆ, ಪತ್ರಿಕೆಗಳಿಗೆ ಬರೆಯುವುದು ತರವಲ್ಲವೆಂದು

ಗುಡುಗಿದ್ದಿದೆ, ಪತ್ರಿಕೆಗಳಿಗೆ ಬರೆಯುವುದು ಭಾರಿ ಕೀಳು ಕೆಲಸವೆಂಬಂತೆ ಮಾತಾಡಿದ್ದಿದೆ.

ಅಸಮ್ಮತಿಯ ಶಾಂತಿಯುತ ಅಭಿವ್ಯಕ್ತಿಗೆ ತಡೆಗಳಿದ್ದಾಗ ಅನ್ಯ ರೀತಿಯಲ್ಲಿ ಅಸಮ್ಮತಿಯ ಅಭಿಯಕ್ತಿಯಾಗುವ ಸಾಧ್ಯತೆಯಿದೆ; ಅನಿವಾರ್ಯತೆಯೇ ಇದೆಯೆಂದು ಎನ್ನಲೂಬಹುದು. ಇಂದಿರಾ ಗಾಂಧಿ ಈ ದೇಶದ ಮೇಲೆ ಹೇರಿದ್ದ 'ತುರ್ತುಪರಿಸ್ಥಿತಿ'ಯ ಕಾಲದಲ್ಲಿ ಜಾರ್ಜ್ ಫೆರ್ನಾಂಡಿಸರು 'ಭೂಗತ' ರಾಗಿದ್ದುಕೊಂಡು ಸೇತುವೆಯೊಂದನ್ನು ಧ್ವಂಸಮಾಡುವ ಪ್ರಯತ್ನ ಮಾಡಿದ್ದರೆ, ಅದಕ್ಕೆ ಕಾರಣ ಶಾಂತಿಯುತವಾದ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣವೇ.

ಪ್ರಬುದ್ಧ ಪ್ರಜಾಸತ್ತೆಗಳಲ್ಲಿ ಜನಾಭಿಪ್ರಾಯವು ಹೊಗಳಿಕೆ ತೆಗಳಿಕೆಗಳನ್ನು ನಿಷ್ಪಕ್ಷಪಾತವಾಗಿ ಹಂಚುವುದು; ಅಲ್ಲಿ ಪೀಠಸ್ಥರಿಗೆ ತೆಗಳಿಕೆಯಿಂದ ವಿನಾಯ್ತಿಯಿಲ್ಲ. ಅಮೇರಿಕೆಯಲ್ಲಿ ಪ್ರೆಸಿಡೆಂಟ್ ನಿಕ್ಸನರ ಪದಚ್ಯುತಿಯಾದುದು 'ರಾಸ್ತಾ ರೋಕೋ', 'ರೈಲ್ ರೋಕೋ', 'ಘೆರಾವೋ', 'ಬಂದ್' ಇತ್ಯಾದಿಗಳಿಂದಾಗಿ ಅಲ್ಲ; ಬದಲಾಗಿ ಅವರ ಪದಚ್ಯುತಿಯಾದುದು ಕೇವಲ ಜನಾಭಿಪ್ರಾಯದ ಒತ್ತಡದಿಂದಾಗಿ, ಸಮೂಹ ಮಾಧ್ಯಮಗಳಲ್ಲಿ ಮೂಡಿಬಂದ ಉಗ್ರ ಟೀಕೆಯಿಂಧಾಗಿ.

ಇಂಗ್ಲೆಂಡಿನ ಸಾರ್ವಜನಿಕ ರಂಗದಲ್ಲಿಯೂ ಜನಾಭಿಪ್ರಾಯವು ಹೊಗಳಿಕೆ ತೆಗಳಿಕೆಗಳನ್ನು ನಿಷ್ಪಕ್ಷಪಾತವಾಗಿ ಹಂಚುವುದು. ಅಲ್ಲಿಯ ಖ್ಯಾತ ರಾಜಕಾರಣಿ ಹಾಗೂ ತತ್ವಜ್ಞಾನಿ ವೈಕೌಂಟ್ ಸ್ಯಾಮ್ಯುವೆಲ್ (1870-1963) ಒಮ್ಮೆ ಜಿಜ್ಞಾಸುಗಳ ಮುಂದೆ ಮಂಡಿಸಿದ್ದ ಪ್ರಶ್ನೆಯು ಇದಾಗಿತ್ತು:- "ನಾವೇಕೆ ನಿತ್ಯ ಜೀವನದಲ್ಲಿ ನೈತಿಕ ಮೌಲ್ಯಗಳನ್ನು ಅನುಷ್ಠಾನಿಸಬೇಕು?" ಈ ಪ್ರಶ್ನೆಗೆ ಅವರೇ ನೀಡಿದ್ದ ಉತ್ತರವು ಹೀಗಿತ್ತು:- "ಸ್ವರ್ಗನರಕಗಳು ಇವೆಯೆಂದು ಬಹು ಮಂದಿ ನಂಬುತ್ತಿದ್ದ ಕಾಲದಲ್ಲಿ ನನ್ನ ಉತ್ತರವು ಪ್ರಾಯಶಃ ಹೀಗಿರುತ್ತಿತ್ತು:- 'ಸ್ವರ್ಗವು ಎಲ್ಲರಿಗೂ ಬೇಕಾಗಿರುವುದರಿಂದ, ನರಕವು ಯಾರಿಗೂ ಬೇಡವಾಗಿರುವುದರಿಂದ.' ಈಗ ಸ್ವರ್ಗ ನರಕಗಳಿವೆಯೆಂಬ ನಂಬಿಕೆಯೇ ನಶಿಸುತ್ತಿರುವುದರಿಂದ ನನ್ನ ಉತ್ತರವು ಹೀಗಿರಬೇಕಾಗಿದೆ:- "ಜನಾಭಿಪ್ರಾಯವು ಅನುಕೂಲವಾಗಿರಲಿ, ಪ್ರತಿಕೂಲವಾಗಿರದಿರಲಿ ಎಂಬ ಕಾರಣದಿಂದ". ಖಾಸಗಿ ಜೀವನದಲ್ಲಿ ಅಲ್ಲದಿದ್ದರೂ, ಸಾರ್ವಜನಿಕ ಜೀವನದಲ್ಲಾದರೂ ನಾವು ಉನ್ನತ ಮೌಲ್ಯಗಳನ್ನು ಇನ್ನೂ ಅನುಷ್ಠಾನಿಸುತ್ತಿರುವುದಕ್ಕೆ ಕಾರಣವೇ ಇದು, ಜನಾಭಿಪ್ರಾಯವು ಹೊಗಳಿಕೆ ತೆಗಳಿಕೆಗಳನ್ನು ನಿಷ್ಪಕ್ಷಪಾತವಾಗಿ ಹಂಚುವುದೆನ್ನುವುದು.

ಆದರೆ ನಮ್ಮಲ್ಲಿ ಪೀಠಸ್ಥರಿಗೆ ಹೊಗಳಿಕೆಯನ್ನೇ ಸಲ್ಲಿಸುತ್ತಿರುವುದು, ತೆಗಳಿಕೆಯನ್ನು ಸಲ್ಲಿಸದಿರುವುದು ರೂಢಿಯಾಗಿಬಿಟ್ಟಿದೆ. ಕೆಲವು ಕಾಲ ಹರ್ಯಾನಾ ರಾಜ್ಯದ ಮುಖ್ಯಮಂತ್ರಿಯಾಗಿದ್ದವರೋರ್ವರು ಆ ಸ್ಥಾನಕ್ಕೆ ಬರುವ ಮುನ್ನ (ಅತ್ಯಾಚಾರದ ಆರೋಪವೂ ಸೇರಿದಂತೆ)

ಹದಿನಾಲ್ಕು ಅಪಾದನೆಗಳ ಸಂಬಂಧದಲ್ಲಿ ಮೊಕ್ಕದ್ದಮೆಗಳಲ್ಲಿ ಸಿಲುಕಿಕೊಂಡವರಾಗಿದ್ದವರು; ಕರ್ನಾಟಕದಲ್ಲಿಯೂ ಮುಖ್ಯಮಂತ್ರಿಯಾಗಿದ್ದವರೋರ್ವರು ಸಹಕಾರಿ ಸಂಘವೊಂದನ್ನು ವಂಚಿಸಿದ್ದ ಪ್ರಯುಕ್ತ ಮೊಕದ್ದಮೆಯೊಂದರ ಕೇಂದ್ರಬಿಂದುವಾಗಿದ್ದವರು; ಆದರೂ ಅವರೀರ್ವರೂ ಮುಖ್ಯಮಂತ್ರಿಗಳಾದ್ದೇ ತಡ, ಅದೆಷ್ಟು ಮಂದಿ 'ಬುದ್ಧಿಜೀವಿ'ಗಳು ಆ ಮುಖ್ಯಮಂತ್ರಿಗಳ 'ವರದ ಹಸ್ತ'ಗಳಿಂದಲೇ ಶಾಲಾ ಮಕ್ಕಳಿಗೆ ಬಹುಮಾನ ವಿತರಣೆ ಆಗತಕ್ಕದ್ದೆಂದು, ಅವರುಗಳ 'ದಿವ್ಯ ಉಪಸ್ಥಿತಿ'ಯಲ್ಲಿಯೇ ವಿದ್ಯಾಪೀಠಗಳ ಬೆಳ್ಳಿ-ಚಿನ್ನ-ವಜ್ರ ಮಹೋತ್ಸವಗಳು ಆಗತಕ್ಕದ್ದೆಂದು ಹಂಬಲಿಸಿದ್ದಿಲ್ಲ?

ಮೋಜೆಂದರೆ ನಮ್ಮಲ್ಲಿ 'ಯತಿ'ಗಳಿಗೂ ರಾಜಕಾರಣಿಗಳನ್ನು ಓಲೈಸುವ ಚಪಲ! ರಾಜರುಗಳು ಯತಿಗಳ ಆಶ್ರಯವನ್ನು ಪಡೆಯುತ್ತಿದ್ದ ಕಾಲವೊಂದಿತ್ತು. ರಾಜಾಶ್ರಯಕ್ಕೆ ಇಷ್ಟಪಡದ ಮಹರ್ಷಿ ದಯಾನಂದ ಸರಸ್ವತಿಯು ವಿಷಯಲಂಪಟ ಅರಸನೋರ್ವನನ್ನು ಬಹಿರಂಗವಾಗಿ (ಅರಮನೆಯ ಎದುರಿಗೇನೇ ಭಾಷಣಗೈದು) ಟೀಕಿಸಿದ್ದು ಸ್ಮರಣಾರ್ಹ. ಈಗ 'ಯತಿ'ಗಳಿಗೇನೇ ರಾಜಾಶ್ರಯವು ಬೇಕೆನ್ನಿಸುವುದಿದೆ. ''ದೇವಸ್ಥಾನದಲ್ಲಿ ದೇವರ ದರ್ಶನವಾಯಿತು'' ಎಂದು ಮಂತ್ರಿಗಿಂತ್ರಿಗಳು ಪುಳಕಿತರಾಗುವ ಬದಲಿಗೆ, ಮಂತ್ರಿಗಳು ದೇವಸ್ಥಾನಕ್ಕೆ ಬಂದರೆಂದು ಧರ್ಮದರ್ಶಿಗಳು (ಯತಿಗಳು) ಪುಳಕಿತರಾಗುವುದು ಈ ಕಾಲದ ವೈಶಿಷ್ಟ್ಯವಾಗಿದೆ. 'ಸರ್ಕಾರಿ ಸುಕುರುಂಡೆ'ಗಳು 'ಯತಿ'ಗಳಿಗೂ ಬೇಕೆನ್ನಿಸುವುದಿದೆ. ನೈತಿಕ ಮೌಲ್ಯಗಳನ್ನು ಬೋಧಿಸುತ್ತಿರುವವರೇ ಭ್ರಷ್ಟ ರಾಜಕಾರಣಿಗಳನ್ನು (ಮಂತ್ರಿಗಳನ್ನು) ಹೊಗಳುತ್ತಿರುವ ಈ 'ಪುಣ್ಯಭೂಮಿ'ಯಲ್ಲಿ ಜನಾಭಿಪ್ರಾಯವು ಹೊಗಳಿಕೆ ತೆಗಳಿಕೆಗಳನ್ನು ನಿಷ್ಪಕ್ಷಪಾತವಾಗಿ ಪಂಚಲಿಕ್ಕುಂಟೆ?

ಪ್ರಜಾತಂತ್ರದ ಇತರ ಮುಖ್ಯ ಲಕ್ಷಣಗಳು:

ವಾದದ ಬಲವಂತಕ್ಕೆ ('ಫೋರ್ಸ್ ಆಫ್ ಆರ್ಗ್ಯುಮೆಂಟ್' ಎನ್ನುವುದಕ್ಕೆ) ಇರುವ ಪ್ರಾಶಸ್ತ್ಯವು ಪ್ರಜಾಸತ್ತೆಯ ಮುಖ್ಯ ಲಕ್ಷಣಗಳಲ್ಲೊಂದು. ಆದರೆ 'ಫ್ಯಾಸಿಸಂ' ನಲ್ಲಿ ಪ್ರಾಶಸ್ತ್ಯವಿರುವುದು ಬಲವಂತವೇ ವಾದವಾಗಿರುವುದಕ್ಕೆ ('ಆರ್ಗ್ಯುಮೆಂಟ್ ಆಫ್ ಫೋರ್ಸ್' ಎನ್ನುವುದಕ್ಕೆ). ಪ್ರಜಾತಂತ್ರದಲ್ಲಿ ವಾದವನ್ನು ವಾದದಿಂದಲೇ ಜಯಿಸುವ ಪ್ರಯತ್ನ ಬೇಕೇ ಹೊರತು, ವಾದವನ್ನು ಬಲವಂತದಿಂದ ದಮನಿಸುವುದಲ್ಲ. ಆದ್ದರಿಂದ ಪ್ರಜಾಸತ್ತಾತ್ಮಕವಾದ ದೇಶದಲ್ಲಿ 'ಫ್ಯಾಸಿಸ್ಟ್' ಮನೋಧರ್ಮದ ರಾಜಕೀಯ ಪಕ್ಷಗಳಿರುವುದು ಮಹಾ ಗಂಡಾಂತರ.

ಕೆಲವು ಅಸಾಮಾನ್ಯ ವ್ಯಕ್ತಿಗಳು ಮಾತ್ರ ಮುಖ್ಯ ಎಂದು 'ಫ್ಯಾಸಿಸಂ' ಬಗೆಯುವುದೆಂದು ಈಗಾಗಲೇ ಹೇಳಿದ್ದೇನೆ. ಇಂಥ ರಾಜಕೀಯ ಪಕ್ಷದಲ್ಲಿಯ ಕಾರ್ಯಕರ್ತರಲ್ಲಿ ಬಹು ಮಂದಿ ತೆರೆದ ಮನವಿದ್ದವರಾಗಿರುವುದಿಲ್ಲ; ಬದಲಾಗಿ 'ಮಿದುಳಿನ ತೊಳೆಯುವಿಕೆ'ಗೆ

ಒಳಗಾದವರಾಗಿರುತ್ತಾರೆ. ಇವರುಗಳ ಮಟ್ಟಿಗೆ ಸಚ್ಚಾರಿತ್ರ್ಯ, ಪ್ರಾಮಾಣಿಕತನ ಇತ್ಯಾದಿಗಳೆಲ್ಲವೂ ಪಕ್ಷನಿಮಿತ್ತ, ಅದಕ್ಕಿಂತಲೂ ಹೆಚ್ಚಾಗಿ ಸ್ಥಾನನಿಮಿತ್ತ! ತಮ್ಮ ಪಕ್ಷದಲ್ಲಿಯ ಪದಾಧಿಕಾರಿಗಳು ಮತ್ತು ತಮ್ಮ ಪಕ್ಷದವರಾಗಿದ್ದು ಆಳಿಕೆ ಆಡಳಿತಗಳ ಸೂತ್ರಗಳನ್ನು ವಹಿಸಿಕೊಂಡಿರುವವರು (ಅಸಾಮಾನ್ಯರೆಂದು ಬಾಲಬಡುಕರಿಂದ ಬಗೆಯಲ್ಪಟ್ಟವರು) ವಿಮರ್ಶಾತೀತರೆನ್ನುವುದು ಇಂಥ ಕಾರ್ಯಕರ್ತರುಗಳ ನಂಬಿಕೆ; ತಮ್ಮ ಪಕ್ಷದ ಗಣ್ಯರ ಧೋರಣೆಗಳನ್ನಾಗಲಿ, ಕಾರ್ಯಾಚರಣೆಯನ್ನಾಗಲಿ ಈ ಬಗೆಯ ಕಾರ್ಯಕರ್ತರುಗಳು ವಿಮರ್ಶೆಗೆ ಒಳಪಡಿಸಲೊಲ್ಲರು, ಮತ್ತು ಅನ್ಯರು ವಿಮರ್ಶೆಗೆ ಒಳಪಡಿಸುವುದನ್ನೂ ಸಹಿಸಲೊಲ್ಲರು. ಏಕೆಂದರೆ, ತೆರೆದ ಮನವಿರದ ಇವರುಗಳ ಮಟ್ಟಿಗೆ ಪಕ್ಷದ ಗಣ್ಯರು ತಪ್ಪು ಮಾಡಲಿಕ್ಕಿಲ್ಲ ಎನ್ನುವುದು ಶತಸಿದ್ಧ. ಪಕ್ಷದ ಗಣ್ಯರನ್ನು ಟೀಕಿಸುವ ಹಲವರಿಗೆ "ನಿಮ್ಮನ್ನು ನೋಡಿಕೊಳ್ಳುವೆವು" ಎಂದು ಬೆದರಿಸಲು ಈ ಮಂದಿ ಸಂಕೋಚಪಡುವುದಿಲ್ಲ. ಇಂಥ 'ಫ್ಯಾಸಿಸ್ಟ್' ಮನೋಧರ್ಮದವರ ದೃಷ್ಟಿಯಲ್ಲಿ ಹಿಂಸೆಯು ವರ್ಜ್ಯವಲ್ಲ; ಇವರುಗಳ ಒಲವು ವಾದದ ಬಲವಂತಕ್ಕಲ್ಲ, ಬದಲಾಗಿ ಬಲವಂತವೇ ವಾದವಾಗಿರುವುದಕ್ಕೆ; ಇವರುಗಳಿಂದ ಪ್ರಜಾಸತ್ತೆಗೆ ಗಂಡಾಂತರವುಂಟಾಗುವುದು ಶಕ್ಯವಿದೆ.

'ರೂಲ್ ಆಫ್ ಲಾ' ಎನ್ನುವುದು ಪ್ರಜಾಸತ್ತೆಯ ಇನ್ನೊಂದು ಲಕ್ಷಣ. ಇದು ಪ್ರಜಾಸತ್ತೆಯ ಆರೋಗ್ಯದ ಪ್ರಥಮ ಲಕ್ಷಣವೂ ಹೌದು, ಪ್ರಜಾಸತ್ತೆಯ ಆರೋಗ್ಯವನ್ನು ಕಾಯ್ದುಕೊಳ್ಳಲು ಮುಖ್ಯ ಉಪಾಯವೂ ಹೌದು.

ಯಾವುದೇ ರಾಷ್ಟ್ರದಲ್ಲಿ 'ರೂಲ್ ಆಫ್ ಲಾ' ಇದೆಯೇ ಎನ್ನುವುದನ್ನು ಗೊತ್ತು ಹಚ್ಚಿಕೊಳ್ಳಲು ಕೇಳಬೇಕಾದ ಪ್ರಶ್ನೆಗಳಿವು:- ಅಲ್ಲಿ ಆಳುವುದು ('ರೂಲ್'ಮಾಡುವುದು) ಯಾವುದು? ಕಾನೂನೇ? ('ಲಾ'ವೇ?) ಅಥವಾ ಯಾರದ್ದಾದರೂ ವೈಯಕ್ತಿಕ ಖಯಾಲಿಯೇ?

ಕಾನೂನೇ ಆಳುತ್ತಿದೆ ಎಂದನ್ನಬಹುದಾದಂಥ ಪರಿಸ್ಥಿತಿಯಿರುವಲ್ಲಿ 'ರೂಲ್ ಆಫ್ ಲಾ' ಇದೆಯೆಂದನ್ನಬಹುದು. ಎಲ್ಲಿ ಪಾಮರರು ಮತ್ತು ಪಂಡಿತರು, ಬಡವರು ಮತ್ತು ಸಿರಿವಂತರು, ಸಾಮಾನ್ಯರು ಮತ್ತು ಅಸಾಮಾನ್ಯರು, ಪ್ರಭಾವವಿಹೀನರು ಮತ್ತು ಪ್ರಭಾವಶಾಲಿಗಳು, ಪ್ರಬಲರ ಕುಮ್ಮಕ್ಕು ಇರದವರು ಮತ್ತು ಪ್ರಬಲರ ಕುಮ್ಮಕ್ಕು ಇರುವವರು, ವಿರೋಧಿ ಪಕ್ಷಗಳವರು ಮತ್ತು ಆಳುವ ಪಕ್ಷದವರು, ಪರಕೀಯರು ಮತ್ತು ಸ್ವಕೀಯರು ಎಂಬಿತ್ಯಾದಿಯಾಗಿ ಭೇದಮಾಡದೆ ಕಾನೂನನ್ನು ಎಲ್ಲರಿಗೂ ಸಮಾನವಾಗಿ ಅನ್ವಯಿಸುವುದು ಇದೆಯೋ, ಅಲ್ಲಿದೆ 'ರೂಲ್ ಆಫ್ ಲಾ', ಅಲ್ಲಿದೆ ಕಾನೂನಿನ ಎದುರಿಗೆ ಎಲ್ಲರ ಸಮಾನತೆ ಎನ್ನುವ ಪರಿಸ್ಥಿತಿ, ಅಲ್ಲಿದೆ ಆರೋಗ್ಯಯುತ ಪ್ರಜಾತಂತ್ರ, ಅಲ್ಲಿದೆ ಜನರಿಗೆ ನೆಮ್ಮದಿ.

ನಮ್ಮ ದೇಶದಲ್ಲಿ ಕಳೆದ ನಲ್ವತ್ತನಾಲ್ಕು ವರ್ಷಗಳಲ್ಲಿ ಈ ಮಹಾ ಮೌಲ್ಯದ ಅವಗಣನೆಯು ಸಾಮಾನ್ಯವಾಗಿಬಿಟ್ಟಿದೆ. ಆಳುವ ಪಕ್ಷದ ರಾಜಕಾರಣಿಗಳಲ್ಲಿ ವರದಾನ ಮಾಡುವ ಚಪಲದವರು ಇರುವುದರಿಂದ, ಮತ್ತು ಯಾರು ಪಾತ್ರರು ಯಾರು ಅಪಾತ್ರರು ಎಂದು ಗುರುತಿಸಿಕೊಳ್ಳುವ ತಂಟೆಗೆ ಇವರು ಹೋಗದಿರುವುದರಿಂದ, ನೀವು ಇವರುಗಳನ್ನು ಹೇಗಾದರೂ ಒಲಿಸಿಕೊಂಡುಬಿಟ್ಟರೆ, ಇವರುಗಳು ಕಾನೂನು ಪ್ರಕಾರ ನಿಮಗೆ ಪ್ರಾಪ್ತವಾಗಬಾರದಂತಹುದನ್ನೂ ಮಂಜೂರು ಮಾಡಿಸುವರು; ಇದಕ್ಕಾಗಿ ಇವರುಗಳು ಸಂಬಂಧಪಟ್ಟ ಅಧಿಕಾರಗಳ ಮೇಲೆ ಒತ್ತಡವನ್ನು ಹೇರುವರು. ಇಂಥ ಎಲ್ಲ ಸಂದರ್ಭಗಳಲ್ಲಿಯೂ ಆಗುವುದು 'ರೂಲ್ ಆಫ್ ಲಾ'ವಿನ ಉಲ್ಲಂಘನೆ, ಪ್ರಜಾತಂತ್ರದ ಆರೋಗ್ಯಕ್ಕೆ ಹಾನಿ, ಜನರ ನೆಮ್ಮದಿಗೆ ಧಕ್ಕೆ.

ಇತ್ತ ಸ್ವಜನಪಕ್ಷಪಾತವನ್ನು ಮೆಟ್ಟಿ ನಿಲ್ಲಲಾರದಂಥ ರಾಜಕಾರಣಿಗಳು ಸ್ವಜನ ಹಿತಾರ್ಥವಾಗಿ 'ರೂಲ್ ಆಫ್ ಲಾ' ವಿನ ಉಲ್ಲಂಘನೆಯೂ ಆಗತಕ್ಕದ್ದೆಂದು ಸರಕಾರಿ ಅಧಿಕಾರಿಗಳನ್ನು ಒತ್ತಾಯಿಸುವುದು; ಅತ್ತ ಸರಕಾರಿ ಅಧಿಕಾರಿಗಳು ಕಾನೂನುಬಾಹಿರವಾದ ಇಂಥ ಹಸ್ತಕ್ಷೇಪದ ವಿರುದ್ಧ ಸೆಟೆದು ನಿಲ್ಲಲಾರದಂಥವರಾದರೆ (ಬೆನ್ನೆಲುಬೇ ಇರದಂಥವರಾದರೆ) ರಾಜಕಾರಣಿಗಳ ಮುನಿಸಿಗೆ ಬಲಿಯಾಗಲು ಇಷ್ಟಪಡದೆ, 'ರೂಲ್ ಆಫ್ ಲಾ' ವನ್ನು ತಿಳಿದು ತಿಳಿದು ಉಲ್ಲಂಘಿಸುವುದು- ಇದು 1947ರ ಲಾಗಾಯ್ತು ಈ ದೇಶದಲ್ಲಿ ಅವ್ಯಾಹತವಾಗಿ ಬೆಳೆದು ಬಂದಿರುವ ಅನಿಷ್ಟ ಪರಂಪರೆ.

ಸಂಸತ್ಸದಸ್ಯರ ಶಿಫಾರಸ್ಸಿನ ಮೇರೆಗೆ ದೂರವಾಣಿ 'ಕನೆಕ್ಷನ್'ಗಳನ್ನು ಮತ್ತು ಅಡುಗೆ ಅನಿಲದ 'ಕನೆಕ್ಷನ್'ಗಳನ್ನು ಸರದಿತಪ್ಪಿ ಪಡೆಯುವುದಿದೆ ಎನ್ನುವುದು ಈಚೆಗೆ ಸುದ್ದಿಯಾಗಿತ್ತಷ್ಟೆ? ''ಸರದಿತಪ್ಪಿ ನಮಗೆ ದೂರವಾಣಿ 'ಕನೆಕ್ಷನ್'ಗಳನ್ನು ಪಡೆಯಬೇಕಾಗಿದೆ; ಸರದಿತಪ್ಪಿ ಅಡುಗೆ ಅನಿಲದ 'ಕನೆಕ್ಷನ್'ಗಳನ್ನು ಪಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ನಮಗೆ ನಿಮ್ಮ ಶಿಫಾರಸುಬೇಕು'' ಎಂಬುದಾಗಿ ಸಂಸತ್ಸದಸ್ಯರ ಬೆನ್ನುಹತ್ತುವ ಮಂದಿ ('ರೂಲ್ ಆಫ್ ಲಾ'ವಿನ ಹಗೆಗಳು)ನಮ್ಮಲ್ಲಿ ಇದ್ದಾರೆನ್ನುವುದು ಸ್ಪಷ್ಟವಾದಂತಾಯಿತು. ಹೀಗೆ ದುಂಬಾಲು ಬೀಳುವ 'ತಮ್ಮವ'ರನ್ನು ತಮ್ಮ ಶಿಫಾರಸಿನ ನೆಲೆಯಲ್ಲಿ ಅನುಗ್ರಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಕಾಡುವ ಸಂಸತ್ಸದಸ್ಯರೂ ಇದ್ದಾರೆನ್ನುವುದು ಸ್ಪಷ್ಟವಾದಂತಾಯಿತು.

ದುಂಬಾಲು ಬೀಳುವವರು ಇತ್ತ, ದುಂಬಾಲು ಬೀಳುವವರನ್ನು ಅನುಗ್ರಹಿಸುವ ಚಪಲವಿರುವ ಮಂದಿ ಅತ್ತ - ಈ ಎರಡು ವರ್ಗಗಳಿಂದಾಗಿ ಮೂಡಿಬಂದಿರುವ ಪರಿಸ್ಥಿತಿಯೆಂದರೆ, ಎಲ್ಲಾ ಪೌರರೂ ಸಮಾನರು, ಆದರೆ ಕೆಲವರು (ಅಂದರೆ, ಸಂಸತ್ಸದಸ್ಯರ ಒಲವು ಉಳ್ಳವರು) 'ಹೆಚ್ಚು ಸಮಾನರು' ಎಂಬಂಥ ಪರಿಸ್ಥಿತಿ.

ಶಾಸಕರ ಒಲವುಳ್ಳವರಿಗೆ 'ಕೆ.ಎಸ್.ಆರ್.ಟಿ.ಸಿ.'ಯ ಸೂಪರ್ ಡೀಲಕ್ಸ್ (ಸುಖ ವಿಹಾರಿ) ಬಸ್‌ಗಳಲ್ಲಿ ಸೀಟುಗಳನ್ನು ಕಾದಿರಿಸಲಾಗುವ ಅನಿಷ್ಟ ಪರಂಪರೆಯೂ 'ರೂಲ್ ಆಫ್ ಲಾ' ವಿನ ಉಲ್ಲಂಘನೆಯೇ. ''ಮಂತ್ರಿಗಳ ಶಿಫಾರಸಿನ ಮಾತು ಬಿಡಿ, ಮಂತ್ರಿಗಳ ಕುಮಾರಕಂಠೀರವರುಗಳ ಶಿಫಾರಸ್ಸೂ ಸಾಕು ಮೆಡಿಕಲ್ ಕಾಲೇಜಿನಲ್ಲಿ ಸೀಟುಗಿಟ್ಟಿಸಿಕೊಳ್ಳಲು'' ಎಂಬಂತೆ ಆಗಿರುವುದು ಸಹ 'ರೂಲ್ ಆಫ್ ಲಾ' ವಿಗೆ ತಕ್ಕುದಾದ್ದಲ್ಲ.

ಇನ್ನು ಆಳುವ ಪಕ್ಷದ ರಾಜಕಾರಣಿಗಳಲ್ಲಿ ಅಭಯಹಸ್ತವನ್ನು ಚಾಚಲು ಅವಸರಿಸುವವರು ಇದ್ದರೆ, ನೀವು ಅವರನ್ನು ಒಲಿಸಿಕೊಂಡರೆ, ನೀವು ಗೈದಿರುವ ಅಪರಾಧಗಳಿಗಾಗಿ ತಕ್ಕ ಕ್ರಮ ತೆಗೆದುಕೊಳ್ಳದಂತೆ ಅವರು ಪೊಲೀಸರಿಗೆ ಹೇಳುವರು. ಕೆಲವು ರಾಜಕಾರಣಿಗಳಿಗೆ ಫೋನುಗಳಿರುವುದೇ ''ಅವರನ್ನು ಬಿಡ್ರೀ'', ''ಇವರನ್ನು ಹಿಡ್ರೀ'' ಎಂದು ಪೊಲೀಸರಿಗೆ ಅನ್ನಲಿಕ್ಕಾಗಿ ಎಂದನ್ನಿಸುವುದಿದೆ. ಗುಜರಾತಿನ ಸಂಸತ್ಸದಸ್ಯರೊಬ್ಬರು ಕೆಲವು ವರ್ಷಗಳ ಹಿಂದೆ ಬನಸ್ಕಾಂತದ ಜಿಲ್ಲಾಧಿಕಾರಿಯ ಮೇಲೆ ಒತ್ತಡ ಹೇರಿದ್ದರು, ಕಲಬೆರಕೆಗೈದಿದ್ದ ಪೆಟ್ರೋಲ್ ವ್ಯಾಪಾರಿಯ ವಿರುದ್ಧ ಕಾನೂನು ಕ್ರಮ ಜರುಗಿಸಬಾರದೆಂದು ಸೂಚಿಸಿದ್ದರು; ಈ ಸೂಚನೆಯನ್ನು ತಿರಸ್ಕರಿಸಿದ್ದಕ್ಕಾಗಿ ಜಿಲ್ಲಾಧಿಕಾರಿಯ ವರ್ಗಾವಣೆಯಾಗುವಂತೆ ಮಾಡಿ, ಹೊಸ ಜಿಲ್ಲಾಧಿಕಾರಿಯಿಂದ ಕಲಬೆರಕೆಕಾರನನ್ನು 'ಬಚಾವ್' ಮಾಡಿಸಿದ್ದರು. ಇಂಥ ಎಲ್ಲ ಸನ್ನಿವೇಶಗಳಲ್ಲಿಯೂ ಆಗುವುದು 'ರೂಲ್ ಆಫ್ ಲಾ' ವಿನ ಉಲ್ಲಂಘನೆ, ಪ್ರಜಾತಂತ್ರದ ಆರೋಗ್ಯಕ್ಕೆ ಹಾನಿ, ಜನರ ನೆಮ್ಮದಿಗೆ ಧಕ್ಕೆ.

ಹೀಗೆ ರಾಜಕಾರಣಿಗಳ ಸಹಯೋಗದಿಂದ 'ರೂಲ್ ಆಫ್ ಲಾ'ವಿನ ಅವಗಣನೆಗೈದ ಅಧಿಕಾರಿಗಳು ಮತ್ತೆ ಅವರುಗಳ ಸಹಯೋಗವಿಲ್ಲದೆಯೂ 'ರೂಲ್ ಆಫ್ ಲಾ'ವಿನ ಅವಗಣನೆಗೆಯ್ಯುತ್ತಿದ್ದರೆ ಅಚ್ಚರಿಯೇನು? ರಾಜಕಾರಣಿಗಳಿಗೆ ಶರಣಾಗತರಾಗಿ ಶಿಕ್ಷೆಯಿಂದ ಪಾರಾಗಲು ಸಾಧ್ಯವಿದೆಯೆಂದು ಇವರುಗಳಿಗೆ ಗೊತ್ತಾಗಿದೆಯಲ್ಲ? 'ಡಿಡಿಪಿಐ' ಓರ್ವರು ಭ್ರಷ್ಟಾಚಾರದ ಕಾರಣದಿಂದ ಅಮಾನತಿನಲ್ಲಿ ಇರಿಸಲ್ಪಟ್ಟಾಗ ಅವರನ್ನು 'ಬಚಾವ್' ಮಾಡಲು ಆಳುವ ಪಕ್ಷದ ರಾಜಕಾರಣಿಗಳೇ ಅವಸರಿಸಿದ್ದಿದೆ.

ಎಂದಿನವರೆಗೆ 'ರೂಲ್ ಆಫ್ ಲಾ'ವಿಗೆ ಈ ದೇಶದಲ್ಲಿ ಗೌರವವಿರದೋ ಅಂದಿನ ವರೆಗೆ ಇಲ್ಲಿಯ ಪರಿಸ್ಥಿತಿಯು ಕೆಡುತ್ತಲೇ ಇರುವುದು. ಕೂತದ್ದಕ್ಕೆ ಲಂಚ, ನಿಂತದ್ದಕ್ಕೆ ಲಂಚ, ಪ್ರತಿಯೊಂದಕ್ಕೂ ಲಂಚ ಎಂಬಂತೆ ಆಗಿ ಬಾಳು ಅಸಹ್ಯವಾಗಲಿಕ್ಕಿದೆ.

ಆಡಳಿತದಲ್ಲಿ ಶಾಸಕರ ಹಸ್ತಕ್ಷೇಪ ಎನ್ನುವುದು ಈ ದೇಶದಲ್ಲಿ ಹೊಸ ರೋಗವಲ್ಲ. ಈ ದೇಶಕ್ಕೆ ಸ್ವಾತಂತ್ರ್ಯವು ಪ್ರಾಪ್ತವಾಗುವ ಮುನ್ನ, ಸೀಮಿತವಾದ ಸ್ವಾಯತ್ತೆಯು ಪ್ರಾಂತಗಳಿಗೆ ಪ್ರಾಪ್ತವಾಗಿತ್ತು. 1937-1938ರಲ್ಲೇ ಆಳುವ ಪಕ್ಷದ ಶಾಸಕರು ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದರ ರುಚಿಯನ್ನು ಕಂಡುಕೊಂಡಿದ್ದರು. ಆ ಕುರಿತು ಆಂಧ್ರದ

ಮಡಿವಂತ ಕಾಂಗ್ರೆಸಿಗರೊಬ್ಬರು (ಕೊಂಡ ವೆಂಕಟಪ್ಪಯ್ಯ ಎಂಬವರು) ಗಾಂಧೀಜಿಗೆ ದೂರಿಕೊಂಡಿದ್ದರು; ಅವರ ದೂರನ್ನು ಗಾಂಧೀಜಿ 'ಹರಿಜನ' ಪತ್ರಿಕೆಯಲ್ಲಿ ಬಯಲಾಗಿಸಿದ್ದರು.

ಸ್ವಾತಂತ್ರ್ಯೋತ್ತರದಲ್ಲಿ 'ಕೇಂದ್ರದಲ್ಲಿ', ವಿವಿಧ ರಾಜ್ಯಗಳಲ್ಲಿ, ಪುರಸಭೆಗಳಲ್ಲಿ ಸಹ ಆಳುವ ಪಕ್ಷಗಳು ಬದಲಾದುದು ಇದೆ. ಆದರೆ 'ರೂಲ್ ಆಫ್ ಲಾ' ವಿನ ಅವಗಣನೆ ಎಂಬುದು ಬದಲಾದುದಿಲ್ಲ. ಒಂದು ಪಕ್ಷದವರಿಂದ ಈ ಅವಗಣನೆ ಆಗುತ್ತಿದ್ದಾಗ, ಇತರ ಪಕ್ಷಗಳವರು "ನಮಗೆ ಅಧಿಕಾರ ಪ್ರಾಪ್ತವಾದರೆ ನಾವು ಹೀಗೆ ಮಾಡಬಾರದು" ಎಂದು ಸಂಕಲ್ಪಿಸಿದ್ದಂತೆ ಕಂಡುಬಂದುದಿಲ್ಲ; ಬದಲಾಗಿ, "ಹೀಗೆ ಮಾಡುವ ಅವಕಾಶವು ನಮಗೆ ಎಂದಿಗಾಗುವುದೋ? ಎಂದು ತವಕಪಟ್ಟುದಿತ್ತೆಂದು ಮತ್ತೆ ಅವರ ಆಳಿಕೆಯ ವೈಖರಿಯಿಂದ ಅನ್ನಿಸಿದ್ದಿದೆ. ನಮ್ಮ ರಾಜಕೀಯ ಪಕ್ಷಗಳ ವಿವಿಧತೆಯಲ್ಲಿಯ ಏಕತೆಯೆಂದರೆ 'ರೂಲ್ ಆಫ್ ಲಾ' ವಿನ ಅವಗಣನೆ.

ನಡುಹಗಲ ಬೆಳಕಿನಲ್ಲಿಯೂ, ಎಥೆನ್ಸ್ ನಗರದ ಮಾರುಕಟ್ಟೆಯ ಜನನಿಬಿಡತೆಯಲ್ಲಿಯೂ, ಲಾಟೀನೊಂದನ್ನು ಎತ್ತಿಹಿಡಿದುಕೊಂಡು, ಒಬ್ಬನಾದರೂ ಪ್ರಾಮಾಣಿಕನು ಕಾಣಲು ಸಿಕ್ಕಿಯಾನೇ ಎಂದು ಹುಡುಕುತ್ತಿದ್ದ ಪ್ರಾಚೀನ ಸಿನಿಕ ಡಾಯೊಜಿನಿಸ್‌ನಂತೆ, ನಿಜ ದೇಶಾಭಿಮಾನವಿರುವ (ಅರ್ಥಾತ್ 'ರೂಲ್ ಆಫ್ ಲಾ'ವಿನ ಬಗ್ಗೆ ಗೌರವವಿರುವ) ರಾಜಕೀಯ ಪಕ್ಷವು ಕಾಣಸಿಕ್ಕೀತೇ ಎಂದು ಹುಡುಕುತ್ತಿರುವ ಪ್ರಮೇಯ ಭಾರತಕ್ಕೆ ಬಂದಿದೆ. ನಿಜವಾದ ದೇಶಾಭಿಮಾನವಿದ್ದವರ್‍ಯಾರೂ 'ರೂಲ್ ಆಫ್ ಲಾ' ವಿನ ಅವಗಣನೆ ಮಾಡಲಿಕ್ಕಿಲ್ಲ.

"ಕ್ಷೇತ್ರದ ಆರೈಕೆ" ಎನ್ನುವುದನ್ನು ತಪ್ಪಾಗಿ ಅರ್ಥೈಸಿಕೊಂಡಿರುವುದು :

ಬ್ರಿಟನಿನಲ್ಲಿ 'ಮತದಾರ ಕ್ಷೇತ್ರದ ಆರೈಕೆ' ('ನರ್ಸಿಂಗ್ ದ ಕಾನ್‌ಸ್ಟಿಟ್ಯೂವೆನ್ಸಿ') ಎಂಬ ಕಲ್ಪನೆಯಿದೆ. ಸಂಸತ್ಸದಸ್ಯನು ತನ್ನ ಮತದಾರಕ್ಷೇತ್ರದ ಹಿತವನ್ನು ಸಾಧಿಸಲು ಪ್ರಯತ್ನಿಸುತ್ತಿರಬೇಕು ಎನ್ನುವುದು ಈ ಕಲ್ಪನೆಯ ಮರ್ಮ. ಮತದಾರಕ್ಷೇತ್ರದ ಒಟ್ಟು ಹಿತವನ್ನು ಲಕ್ಷದಲ್ಲಿಟ್ಟುಕೊಳ್ಳಬೇಕೆಂಬುದೇ ಇದರ ಮರ್ಮವೇ ವಿನಃ ಒಬ್ಬೊಬ್ಬ ಮತದಾರನ ಹಿತವನ್ನೂ ಲಕ್ಷ್ಯದಲ್ಲಿಟ್ಟುಕೊಳ್ಳಬೇಕೆಂಬುದು ಇದರ ಮರ್ಮವಲ್ಲ. ನಮ್ಮ ದೇಶದಲ್ಲಿ ಈ ತಪ್ಪು ಅರ್ಥದ ನೆಲೆಯಲ್ಲಿ ಒಬ್ಬೊಬ್ಬ ಮತದಾರನ ('ಸ್ವಜನ'ದ )ಹಿತವನ್ನು ಲಕ್ಷ್ಯದಲ್ಲಿರಿಸಿ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದು. 'ರೂಲ್ ಆಫ್ ಲಾ' ವಿನ ಅವಗಣನೆಗೆಯ್ಯುವುದು ರೂಢಿಯಾಗಿ ಬಿಟ್ಟಿದೆ.

'ಮತದಾರ ಕ್ಷೇತ್ರದ ಆರೈಕೆ' ಎನ್ನುವುದರ ಇನ್ನೊಂದು ತಪ್ಪು ಅರ್ಥವನ್ನೂ ನಾವು ಮಾಡಿ ಕೊಂಡಂತಿದೆ. ಉಕ್ಕು ತಯಾರಿಸುವ ಉದ್ದಿಮೆಯು ಎಲ್ಲಿರಬೇಕೆಂದರೆ

ಅದಕ್ಕೆ ತಕ್ಕ ಪರಿಸರ, ತಕ್ಕ ಪ್ರಾಕೃತಿಕ ಸಂಪನ್ಮೂಲಗಳು ಇರುವಲ್ಲಿ; ಇವುಗಳಿಲ್ಲದ ತನ್ನ ಮತದಾರ ಕ್ಷೇತ್ರದಲ್ಲಿಯೇ ಉಕ್ಕು ತಯಾರಿಸುವ ಉದ್ದಿಮೆಯನ್ನು ಸ್ಥಾಪಿಸತಕ್ಕದೆಂದು ಯಾವ ಸಂಸತ್ಸದಸ್ಯನೂ ಆಗ್ರಹಿಸಬಾರದು; ಇವುಗಳಿರುವ ಬೇರೆ ಕಡೆಯಲ್ಲಿಯೇ ಆ ಉದ್ದಿಮೆಯ ಸ್ಥಾಪನೆಯಾಗುವುದು. ದೇಶದ ಒಟ್ಟು ಹಿತಕ್ಕೆ ಅಗತ್ಯವೆನ್ನುವುದನ್ನು ಮರೆಯಲಿಕ್ಕಾಗದು.

ಎಡ್ಮಂಡ್ ಬರ್ಕ್ (18ನೆಯ ಶತಮಾನದ ಬ್ರಿಟನಿನ ಖ್ಯಾತ ಸಂಸತ್ಸದಸ್ಯ, ವಾಗ್ಮಿ ಮತ್ತು ಚಿಂತಕ) ತನ್ನ ಮತದಾರ ಕ್ಷೇತ್ರವಾದ ಬ್ರಿಸ್ಟಲಿನ ಹಿತವು ಸಮಸ್ತ ಬ್ರಿಟನಿನ ಹಿತಕ್ಕಿಂತ ಮೇಲು ಎಂಬಂತೆ ನಡೆದುಕೊಳ್ಳಲು ಒಪ್ಪದಿದ್ದು, ತನ್ನ ನಿಲುವನ್ನು ಬ್ರಿಸ್ಟಲಿನ ಮತದಾರರನ್ನು ಉದ್ದೇಶಿಸಿ ಮಾಡಿದ ಭಾಷಣವೊಂದರಲ್ಲಿ ಹೀಗೆ ಹೇಳಿದ್ದಿದೆ :-

"ಸಂಸತ್ತೆಂದರೆ ಅನೇಕ ವಿಭಿನ್ನ, ಮತ್ತು ಒಂದಕ್ಕೊಂದು ವಿರುದ್ಧವಾದ, ಹಿತಾಸಕ್ತಿಗಳವರ ರಾಯಭಾರಿಗಳ ಸಭೆಯಲ್ಲ: ತಾವು ಪ್ರತಿನಿಧೀಕರಿಸುತ್ತಿರುವವರ ಹಿತಾಸಕ್ತಿಗಳನ್ನೇ (ವಕೀಲರಂತೆ ) ಪ್ರತಿಪಾದಿಸಲಿಕ್ಕಿರುವ ಮತ್ತು ಅನ್ಯ ಹಿತಾಸಕ್ತಿಗಳನ್ನು (ವಕೀಲರಂತೆ ) ವಿರೋಧಿಸಲಿಕ್ಕಿರುವ ರಾಯಭಾರಿಗಳ ಸಭೆಯಲ್ಲ. ಬದಲಾಗಿ ಸಂಸತ್ತೆಂದರೆ ಒಂದೇ ದೇಶದ ಸಭೆ, ವಿಚಾರ ಮಾಡಲಿಕ್ಕಿರುವ ಸಭೆ, ಒಂದೇ ಹಿತಾಸಕ್ತಿಯುಳ್ಳ ಸಭೆ, ಅದ್ಯಾವ ಹಿತವೆಂದರೆ ಸಮಸ್ತ ದೇಶದ ಹಿತ. ಸಂಸತ್ತಿನಲ್ಲಿ ದಾರಿ ತೋರಬೇಕು ಸಮಷ್ಟಿಯ ಹಿತದ ಪ್ರಜ್ಞೆಯೇ ವಿನಃ ಕೇವಲ ಸ್ಥಳೀಯ ಬಯಕೆಗಳಲ್ಲ. ಸ್ಥಳೀಯ ಪೂರ್ವಾಗ್ರಹಗಳಲ್ಲ. ಸಂಸತ್ತಿನಲ್ಲಿ ನಿಮ್ಮನ್ನು ಪ್ರತಿನಿಧೀಕರಿಸಬೇಕಾದವನನ್ನು ಆರಿಸುವವರು ನೀವು, ಬ್ರಿಸ್ಟಲಿನವರು, ನಿಜ. ಆದರೆ ನೀವು ಅವನನ್ನು ಆರಿಸಿಯಾದ ಮೇಲೆ ಅವನು ಬ್ರಿಸ್ಟಲಿನ ಸದಸ್ಯನೆನ್ನಿಸುವುದಿಲ್ಲ, ಬದಲಾಗಿ ಸಂಸತ್ತಿನ ಸದಸ್ಯನೆನ್ನಿಸುತ್ತಾನೆ ('ನಾಟ್ ಮೆಂಬರ್ ಆಫ್ ಬ್ರಿಸ್ಟಲ್, ಬಟ್ ಮೆಂಬರ್ ಆಫ್ ಪಾರ್ಲಿಮೆಂಟ್')

ಈ ಜಿಲ್ಲೆಯ ಪ್ರಮುಖ ಬಂದರನ್ನಾಗಿ ಮಂಗಳೂರಿನ ಬಂದರನ್ನು ಅಭಿವೃದ್ಧಿಪಡಿಸಬೇಕೇ ಮಲ್ಪೆಯ ಬಂದರನ್ನು ಅಭಿವೃದ್ಧಿಪಡಿಸಬೇಕೇ ಎಂಬ ಪ್ರಶ್ನೆಯು ಮೂಡಿದ್ದ ಕಾಲದಲ್ಲಿ ಮಂಗಳೂರು ಮತದಾರ ಕ್ಷೇತ್ರದಿಂದ ಸಂಸತ್ಸದಸ್ಯರಾಗಿ ಆರಿಸಲ್ಪಟ್ಟಿದ್ದ ಶ್ರೀನಿವಾಸ ಮಲ್ಯರು ತುಂಬ ಪ್ರಭಾವಶಾಲಿಯಾಗಿದ್ದುದರಿಂದ, ಮಂಗಳೂರಿನ ಬಂದರೇ 'ಈ ಜಿಲ್ಲೆಯ ಪ್ರಮುಖ ಬಂದರಾಗಿ ಅಭಿವೃದ್ಧಿಪಡಿಸಲ್ಪಡಬೇಕೆಂದು ಅವರು ಆಗ್ರಹಿಸಿದ್ದು ಫಲಕಾರಿಯಾಯಿತು. ಅಂದರೆ, ವಸ್ತುತಃ ಮಲ್ಪೆಯಲ್ಲಿಯ ಬಂದರನ್ನೇ ಪ್ರಮುಖ ಬಂದರನ್ನಾಗಿ ಅಭಿವೃದ್ಧಿಪಡಿಸಲು ತಕ್ಕ ಪ್ರಾಕೃತಿಕ ಕಾರಣಗಳಿದ್ದುದನ್ನು ಅಲಕ್ಷಿಸಲಾಯಿತು; ಮಂಗಳೂರಿನ ಹಿತವು ಭಾರತದ ಒಟ್ಟು ಹಿತಕ್ಕಿಂತ ಮೇಲು ಎಂಬಂತಾದ ತಪ್ಪಿಗೆ ಕಾರಣವಿಷ್ಟೆ: - 'ಮತದಾರ ಕ್ಷೇತ್ರದ ಅರೈಕೆ' ಎನ್ನುವುದನ್ನು ಶ್ರೀನಿವಾಸ ಮಲ್ಯರು ಎಡ್ಮಂಡ್ ಬರ್ಕನಂತೆ

ಅರ್ಥೈಸಿಕೊಳ್ಳಲಿಲ್ಲ. ಇದರ ದುಷ್ಪರಿಣಾಮವನ್ನು ಭಾರತವು ಚಿರಕಾಲ ಅನುಭವಿಸಬೇಕಾಗುವುದು; ಹೂಳೆತ್ತುವ ಕಾಮಗಾರಿಗಾಗಿ ನವಮಂಗಳೂರು ಬಂದರಿನಲ್ಲಿ ಪುನಃ ಪುನಃ ಅಪಾರ ವೆಚ್ಚವಾಗುತ್ತಲೇ ಇರಬೇಕಾಗುವುದು.

ಒಟ್ಟಿನಲ್ಲಿ, ಹೀಗೆನ್ನದೆ ನಿರ್ವಾಹವಿಲ್ಲ - ಪ್ರಜಾಸತ್ತೆಯ ಆರೋಗ್ಯಕ್ಕೆ 'ರೂಲ್ ಆಫ್ ಲಾ' ವಿನ ಅವಗಣನೆಯಾಗದಿರುವುದು; 'ಮತದಾರ ಕ್ಷೇತ್ರದ ಅರೈಕೆ ' ಎನ್ನುವುದನ್ನು 'ಒಬ್ಬೊಬ್ಬ ಮತದಾರನ ಹಿತದ್ದೂ ಆರೈಕೆ' ಯೆಂದಾಗಲಿ, ಒಂದೊಂದು ಮತದಾರ ಕ್ಷೇತ್ರದ ಹಿತವು ಸಮಷ್ಟಿ ಹಿತಕ್ಕಿಂತ ಮೇಲು ಎಂದಾಗಲಿ ಅರ್ಥೈಸಿಕೊಳ್ಳದಿರುವುದು. ಇವೆರಡು ಬಲು ಮುಖ್ಯ. ನಿಜವಾದ ದೇಶಾಭಿಮಾನ ಇರುವವರ್‍ಯಾರೂ ಈ ತಪ್ಪುಗಳನ್ನು ಮಾಡಲಾರರು. ನಿಜ ದೇಶಾಭಿಮಾನಿಗಳ ಕೊರತೆಯೇ ಭಾರತದ ಮಹಾ ದುರಂತ.

ನಮ್ಮಲ್ಲಿ ಪ್ರಜಾತಂತ್ರವು ನಲ್ವತ್ತನಾಲ್ಕು ವರ್ಷಗಳ ಉದ್ದಕ್ಕೆ ನಡೆದು ಬಂದ ದಾರಿಯಿಂದಲೇ ಈ ಬಗೆಯ ಅನೌಪಚಾರಿಕ ಶಿಕ್ಷಣವು ಸಾಮಾನ್ಯರಿಗೆ ಪ್ರಾಪ್ತವಾಗಬೇಕಿತ್ತು; ಬದಲಾಗಿ ಅವರಿಗೆ ಪ್ರಾಪ್ತವಾಗಿರುವ ಅನೌಪಚಾರಿಕ ಶಿಕ್ಷಣದಂತೆ ವ್ಯಕ್ತಿಪೂಜೆಯು ಸರಿಯಾದ್ದು, ಅಸಮ್ಮತಿಯ ಅಭಿವ್ಯಕ್ತಿಯು ಸರಿಯಾದ್ದಲ್ಲ. 'ರೂಲ್ ಆಫ್ ಲಾ' ವಿನ ಉಲ್ಲಂಘನೆಯನ್ನು ಬಯಸುವುದಾಗಲಿ, ಮಾಡುವುದಾಗಲಿ, ಮಾಡಿಸುವುದಾಗಲಿ ತಪ್ಪಲ್ಲ.

ಅಲ್ಲಲ್ಲ; ನಮ್ಮಲ್ಲಿ ಬಹುಮಂದಿಗೆ 'ರೂಲ್ ಆಫ್ ಲಾ' ಎನ್ನುವ ಮಹಾ ಮೌಲ್ಯವಿದೆ ಎನ್ನುವುದೇ ಗೊತ್ತಿಲ್ಲ. ''ಅಯ್ಯೋ, ಹೀಗೇಕೆ ನಮ್ಮ ದೇಶ'' ಎಂಬ ಪ್ರಶ್ನೆಗೆ ಬೇರೆ ಉತ್ತರ ಬೇಕೆ?

---

ಮುಸ್ಲಿಮ್ ಲೇಖಕರ ಸಂಘದ ಆಶ್ರಯದಲ್ಲಿ ಪ್ರಕಾಶನಗೊಳ್ಳುತ್ತಿರುವ ''ಶಿಕ್ಷಣ ಮತ್ತು ಮುಸ್ಲಿಮರು'' ಎಂಬ ಈ ಸಂಕಲನವು ಮುಸ್ಲಿಮ್ ಸಮಾಜದ ಬಹುಮುಖ ಸಮಸ್ಯೆಗಳನ್ನೂ ಆ ಸಮಸ್ಯೆಗಳ ಕಾರಣವನ್ನೂ ಅವುಗಳ ನಿವಾರಣೋಪಾಯಗಳನ್ನೂ ಕುರಿತಂತೆ ಬಹುವಿಧ-ಕಾರ್ಯಕ್ರಮಗಳ ಪ್ರಕಟನೆಗೆ ಅನುವು ಮಾಡಿಕೊಟ್ಟಿದೆ. ಈ ಕುರಿತು ಖ್ಯಾತನಾಮ ಲೇಖಕರ ವಿವಿಧ ಲೇಖನಗಳನ್ನು ಒಳಗೊಂಡಿರುವ ಈ ಕೃತಿಯು ಉಪಯುಕ್ತವೆನಿಸಿದೆ.

ಪ್ರೊ। ಎಂ.ಆರ್.ಗಜೇಂದ್ರಗಡ್
ಉಪಕುಲಪತಿ
ಕುವೆಂಪು ವಿಶ್ವವಿದ್ಯಾನಿಲಯ
ಶಿವಮೊಗ್ಗ